
ವೇಮನ ಗ್ರಂಥಮಾಲಾ, ಹುಲಕೋಟಿ - **582 205** ಇವರಿಂದ ಪ್ರಕಟಿತವಾದ, ಇದೇ ಲೇಖಕರ ಈ ಕೆಳಗಿನ ಗ್ರಂಥಗಳು ೧ ರಿಂದ ೭ ನಮ್ಮಲ್ಲಿ ಲಭ್ಯವಿವೆ.

## ಗ್ರಂಥಗಳು

| | | |
|---|---|---|
| 1. | ವೇಮನ<br>(ಮೂರನೆಯ ಆವೃತ್ತಿ) | 240 ಪದ್ಯಗಳ ಸಂಕಲನ |
| 2. | ವೇಮನ (ವಿದ್ಯಾರ್ಥಿಗಳಿಗಾಗಿ)<br>(ಮೂರನೆಯ ಆವೃತ್ತಿ) | 108 ಪದ್ಯಗಳ ಸಂಕಲನ |
| 3. | ಮಹಾಯೋಗಿ ವೇಮನ | 344 ಪುಟಗಳು. (ಜೀವನ, ಸಾಧನೆ ಮತ್ತು ಬೋಧನೆ) |
| 4. | ಅವರಿವರು ಕಂಡಂತೆ : ವೇಮನ<br>(ಸಂಶೋಧನಾತ್ಮಕ ವಿವರಗಳೊಂದಿಗೆ) | 422 ಪುಟಗಳು |
| 5. | ಯುಗಪುರುಷ : ಪಿ. ಆರ್. ಸರಕಾರ<br>(ಅಪೂರ್ವ ಕೃತಿ) | 437 ಪುಟಗಳು |
| 6. | ವೇಮನ-ಜೀವನ ಚರಿತ್ರೆ | 208 ಪುಟಗಳು |
| 7. | ವೇಮನ ಮತ್ತು ಒಮ್ಮನದ ಹಕ್ಕಿಗಳು | 198 ಪುಟಗಳು |
| 8. | ರಾಜಯೋಗಿ ವೇಮನ | (ಅಚ್ಚಿನಲ್ಲಿದೆ) |
| 9. | ಮುತ್ತಿನಹಾರ<br>(ವೇಮನರ ಆಯ್ದ ಪದ್ಯಗಳ ಸಂಕಲನ) | (ಅಚ್ಚಿನಲ್ಲಿದೆ) |
| | ಇದೇ ಲೇಖಕರ ಉದ್ಗ್ರಂಥ : | |
| 10. | ವೇಮನ ವಿಶ್ವಗೀತೆ<br>(ಪ್ರಕಾಶಕರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.) | 870 ಪುಟಗಳು |

VGM ವೇಮನ ಗ್ರಂಥ ಮಾಲಾ, ಹುಲಕೋಟಿ - **582 205**

# ವೇಮನ ಮತ್ತು ಒಮ್ಮನದ ಹಕ್ಕಿಗಳು



ORIGIN, GDG.

ವೇಮನ ಗ್ರಂಥ ಮಾಲಾ ಹುಲಕೋಟಿ-೫೮೨ ೨೦೫

# ವೇಮನ ಮತ್ತು ಒಮ್ಮನದ ಹಕ್ಕಿಗಳು

ಶ್ರೀ ಎಸ್. ಆರ್. ಪಾಟೀಲ

VGM

ವೇಮನ ಗ್ರಂಥ ಮಾಲಾ
ಹಲಕೋಟಿ - ೫೮೨ ೨೦೫

" Vemah Mattu Ommanada Hakkigalu " by S. R. Patil$_{BE}$ Hulkoti - 582 205
Published by : R.R.Sawkar, Secretary: Veman Grantha Mala, Hulkoti - 582 205
Printed by : Veman Printers,Pvt. Ltd., Hulkoti - 582 205

ಪ್ರಕಾಶಕರು :
ಆರ್. ಆರ್. ಸಾವಕಾರ. ಕಾರ್ಯದರ್ಶಿಗಳು
ವೇಮನ ಗ್ರಂಥ ಮಾಲಾ,ಹುಲಕೋಟಿ - ೫೮೨ ೨೦೫
( ಗದಗ ಜಿಲ್ಲೆ )

ಪ್ರಥಮ ಮುದ್ರಣ : ೧೦೦೦ ಪ್ರತಿಗಳು
ಜನೆವರಿ, ೨೦೦೦
ಕ್ರಯ : ರೂ. ೭೫ /-

ಲೇಖಕರು : ಎಸ್. ಆರ್. ಪಾಟೀಲ ಬಿ.ಈ
ಹುಲಕೋಟಿ - ೫೮೨ ೨೦೫

( ಗ್ರಂಥದ ಎಲ್ಲ ಹಕ್ಕುಗಳು ಪ್ರಕಾಶಕರ ಸ್ವಾಧೀನದಲ್ಲಿವೆ. )

ಮುದ್ರಕರು : ವೇಮನ ಪ್ರಿಂಟರ್ಸ್ ಪ್ರೈ. ಲಿ.,
ಹುಲಕೋಟಿ - ೫೮೨ ೨೦೫

V. V. S College of Business Administration
Vidyanagar
Unkal Cross
HUBLI-31

# ಪರಿವಿಡಿ


| ಅ. ಸಂ. | ವಿಷಯ | ಪುಟ | |
|---|---|---|---|
| | | ಇಂದ | ವರಗೆ |
| | ಪ್ರಕಾಶಕರ ಮಾತು | iv | |
| | ಮುನ್ನುಡಿ | v | viii |
| ೧. | ಮಹಾಯೋಗಿ ವೇಮನ | ೧ | ೧೦೨ |
| ೨. | ಮಾಹಾ ಪುರುಷ ತಿರುವಳ್ಳುವರ | ೧೦೩ | ೧೨೫ |
| ೩. | ಮಹಾತ್ಮ ಕಬೀರ | ೧೨೬ | ೧೫೨ |
| ೪. | ಮಹಾಕವಿ ಸರ್ವಜ್ಞ | ೧೫೩ | ೧೭೪ |
| ೫. | ಸಂತ ತುಕಾರಾಮ | ೧೭೫ | ೧೯೮ |

## ಪ್ರಕಾಶಕರ ಮಾತು

ಮಹಾಯೋಗಿ ವೇಮನ ಸಾಹಿತ್ಯವು ತೆಲುಗಿನಲ್ಲಿದೆ. ಅವರ ಪದ ಪದ್ಯಗಳು ಜನಮನದಲ್ಲಿ ಉಲಿಯುತ್ತಿವೆ. ಅವರ ಪದ್ಯಗಳನ್ನು ಕನ್ನಡಿಸಿ ನಮ್ಮ ನಾಡಿಗರಿಗೆ ಒದಗಿಸುವ ನಮ್ರ ಪ್ರಯತ್ನ ನಮ್ಮದಾಗಿದೆ, ಕಳೆದೈದು ವರ್ಷಗಳಲ್ಲಿ ನಾವು ಮಹಾಯೋಗಿ ವೇಮನರನ್ನು ಕುರಿತು ಐದು ಗ್ರಂಥಗಳನ್ನು ಪ್ರಕಟಿಸಿದ್ದೇವೆ. ಆ ಗ್ರಂಥ ಪ್ರಕಟಣೆಗಳು ಶೀಘ್ರ ಮರುಮುದ್ರಣಗೊಳ್ಳುತ್ತಿರುವುದು ಸಜ್ಜನ ಓದುಗರ ಆಸಕ್ತಿ-ಅಭಿಲಾಷೆಗಳನ್ನು ತೋರಿಸುತ್ತಿದೆ.

ನಮ್ಮ ಅಳಿಲು ಸೇವಗೆ-ಬೆಂಗಳೂರು, ಮೈಸೂರು ಮತ್ತು ಕೋಲಾರಗಳ ಪ್ರಕಾಶಕರ ಹೆಚ್ಚಿನ ಕೊಡುಗೆಯೂ ಇದೆ. ವಿಶ್ವವಿದ್ಯಾಲಯಗಳೂ ಸಹ ಇತ್ತೀಚೆಗೆ ಬೃಹತ್ ಗ್ರಂಥಗಳನ್ನು ಹೊರತಂದಿವೆ. ಹೀಗಾಗಿ ಕನ್ನಡದಲ್ಲಿ ವೇಮನ ಸಾಹಿತ್ಯವು ಸಾಕಷ್ಟು ಲಭ್ಯವಾಗಿದೆ.

ಈ ಹಂತದಲ್ಲಿ ವೇಮನ ಮಹಾಯೋಗಿಗಳ ಜೀವನಾದರ್ಶಗಳೊಂದಿಗೆ ಸಮನ್ವಯಿಸುವ ಕೆಲವು ಸಂತ ಕವಿಗಳನ್ನು ಗಮನಿಸಿ ಮಹಾಯೋಗಿ ವೇಮನರೊಂದಿಗೆ ಅವರ ಜೀವನಾದರ್ಶಗಳ ತೌಲನಿಕ ಅಭ್ಯಾಸವನ್ನು ಶ್ರೀ ಎಸ್.ಆರ್. ಪಾಟೀಲರು ಮಾಡಿದ್ದು ಸಕಾಲಿಕ ಅಗತ್ಯವಾಗಿದೆ, ಮಹಾಪುರುಷ ತಿರುವಳ್ಳುವರ, ಮಹಾತ್ಮ ಕಬೀರ, ಮಹಾಕವಿ ಸರ್ವಜ್ಞ, ಮತ್ತು ಸಂತ ತುಕಾರಾಮ ಇವರೇ ಆ ನಾಲ್ವರು ಸಂತ ಕವಿಗಳು.

ಪ್ರಸ್ತುತ "ವೇಮನ ಮತ್ತು ಒಮ್ಮನದ ಹಕ್ಕಿಗಳು" ಪುಸ್ತಿಕೆಯಲ್ಲಿ ಮಹಾಯೋಗಿ ವೇಮನರ ಸಂಕ್ಷಿಪ್ತ ಜೀವನ ಮತ್ತು ಅವರ ಸಾಹಿತ್ಯದ ವಿಹಂಗಮ ನೋಟವನ್ನು ನೀಡಿ, ಇತರ ನಾಲ್ವರು ಮಹಾ ಪುರುಷರು ಮಹಾಯೋಗಿ ವೇಮನರ ಜೀವನಾದರ್ಶದೊಂದಿಗೆ ಹೇಗೆ ಮೇಳವಿಸಿದ್ದಾರೆ ಎಂಬುದನ್ನು ಬಿಂಬಿಸಲಾಗಿದೆ. ವಿಚಾರಶೀಲ ಓದುಗರು ನಮ್ಮೀ ಪ್ರಕಟಣೆಯನ್ನು ಎಂದಿನಂತೆ ಪ್ರೋತ್ಸಾಹಿಸುವರಾಗಿ ನಂಬಿದ್ದೇವೆ.

ಆರ್.ಅರ್. ಸಾವಕಾರ
ಪ್ರಕಾಶಕರು



## ಮುನ್ನುಡಿ

S. COLLEGE OF BUSINESS ADMINISTRATION LIBRARY HUBLI.

ಒಂದೇ ಸತ್ಯವನ್ನು ವಿಪ್ರ ಜನರು ಬಹುವಿಧವಾಗಿ ಹೇಳುತ್ತಾರೆ. "ಏಕಂ ಸತ್ ವಿಪ್ರಾಃ ಬಹುಧಾ ವದಂತಿ" ಆ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಸದ್ಗುರುಗಳು ಬೇರೆ ಬೇರೆ ಕಾಲದಲ್ಲಿ ಜೀವಿಸಿದ್ದಾರೆ. ಬೇರೆ ಬೇರೆ ದೇಶಗಳಲ್ಲಿ ಬಾಳಿದ್ದಾರೆ. ಬೇರೆ ಬೇರೆ ಭಾಷೆಗಳಲ್ಲಿ ಉಲಿದಿದ್ದಾರೆ. ಸಂಸ್ಕೃತದಲ್ಲಿ 'ಘಟ' ಎಂಬುದನ್ನೇ ಕನ್ನಡದಲ್ಲಿ 'ಗಡಿಗೆ' ಎಂದೂ ಮತ್ತು ತೆಲುಗಿನಲ್ಲಿ 'ಕುಂಭ' ವೆಂದೂಕರೆಯುತ್ತಾರೆ. ಭಾಷೆ ಬೇರೆ; ಭಾವ ಒಂದೇ.

ಮಹಾಪುರುಷ ತಿರುವಳ್ಳುವರ ತಮಿಳುನಾಡಿನ ಮದ್ರಾಸಿನಲ್ಲಿ ಕ್ರಿ.ಶ. ಎರಡನೆಯ ಶತಮಾನದಲ್ಲಿ ಬಾಳಿದರು. ಮಹಾತ್ಮ ಕಬೀರರು ಕ್ರಿ.ಶ. ೧೪೪೦ ರಲ್ಲಿ ಉತ್ತರ ಪ್ರದೇಶದ ಮಗಹರದಲ್ಲಿ ಜನಿಸಿದರು. ಮಹಾಯೋಗಿ ವೇಮನರು ತೆಲುಗು ನಾಡಿನಲ್ಲಿ ಕ್ರಿ.ಶ ೧೪೧೨ ರಲ್ಲಿ ಜನಿಸಿದರು, ಮಹಾಕವಿ ಸರ್ವಜ್ಞರು ಕನ್ನಡ ನಾಡಿನಲ್ಲಿ ಕ್ರಿ.ಶ. ೧೫೦೦ ರ ಕೊನೆಯಲ್ಲಿ ಜನಸಿದರು, ಇನ್ನು ಸಂತ ತುಕಾರಾಮರು ಮಹಾರಾಷ್ಟ್ರದಲ್ಲಿ ಪುಣೆಯ ಬಳಿ ದೇಹು ಗ್ರಾಮದಲ್ಲಿ ಕ್ರಿ.ಶ. ೧೬೦೮ ರಲ್ಲಿ ಜನಸಿದರು. ಹೀಗೆ, ಈ ಐವರು ಮಹಾಪುರುಷರ ದೇಶಗಳು ಬೇರೆ, ಕಾಲಗಳು ಬೇರೆ. ದೇಶ, ಕಾಲ, ಪಾತ್ರಗಳು ಬೇರೆ ಬೇರೆ ಆದರೂ ಅವರು ಬೋಧಿಸುವ ತತ್ತ್ವ ಒಂದೇ.

ಉಂಟು ಉಂಟು ಜ್ಞಾನಿ ಯುಗಯುಗಾದಿ ಕಳೆಯೆ,
ಪ್ರಾಣ ಹಾನಿಯಿಲ್ಲ, ಪ್ರಳಯವಿರಲು,
ಪ್ರಳಯವಿರಲು ಮತ್ತೆ ಪರಮಾತ್ಮನ ಸೇರುವ.
ವಿಶ್ವದಾಭಿರಾಮ ಕೇಳು ವೇಮ.

ನಿಜವು ತಿಳಿದ ಬಳಿಕ ಸುಜನರಾ ನಿಜವನೆ
ಪೇಳುತಿರುವರಷ್ಟೆ ಪರರಿಗಾಗಿ.
ಬಚ್ಚಿಡುವುದು ಬೇಡ, ಬೇರೆ ಹೇಳ ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ,

ಆದ್ದರಿಂದ, ಸತ್ಯವು ದೇಶ, ಕಾಲ, ಪಾತ್ರಾತೀತವೆಂಬುದನ್ನು ನಮ್ಮ ತಿಳಿವಿನಂಗಳಕ್ಕೆ ತರುವ ಒಂದು ವಿನಮ್ರ ಅಭಿಲಾಷೆಯಿಂದ ನಾವು "ವೇಮನ ಮತ್ತು ಒಮ್ಮನದ ಹಕ್ಕಿಗಳು" ಗ್ರಂಥವನ್ನು ಹೊರತಂದಿದ್ದೇವೆ. ರಾಷ್ಟ್ರ ಕವಿ 'ಕುವೆಂಪು' ರವರು ಇರಿಸಿಕೊಂಡ ಅಂತಿಮ ಧ್ಯೇಯವನ್ನು ಸಪ್ತಸೂತ್ರಗಳಲ್ಲಿ ನಿವೇದಿಸಿದ್ದಾರೆ. ಮತ 'ಮನುಜ ಮತ' ವಾಗಬೇಕು. ಪಥ ವಿಶ್ವಪಥವಾಗಬೇಕು. ಮನುಷ್ಯ "ವಿಶ್ವಮಾನವನಾಗಬೇಕು" ಎಂಬ ಸೂತ್ರವು ಅವುಗಳಲ್ಲೊಂದು.

ಧ್ವಜವನೆತ್ತಿ ಸಾರು; ದೇವನೊಬ್ಬನೆಂದು,
ನಿಜವಿದಿಹುದು ಒಳಗೆ ನಿಂತಿರುವನು.
ಚೊಕ್ಕ ನೋಡಲವನ ಸಂತಸದಿ ಮುಳುಗುವೆ,
ವಿಶ್ವದಾಭಿರಾಮ ಕೇಳು ವೇಮ.

ಉರ್ವಿ ವಾಸಿಲ್ಲ ಒಂದೆ ತಾಟನಿಟ್ಟು,
ಅರಳಿಸಿ ಸ್ನೇಹವ ಅಳಿಸಿ ಕುಲವ,
ಶಿರದ ಮೇಲೆ ಕರವ, ಇರಿಸಿ ಉಣಲು ಹೇಳಿ.
ವಿಶ್ವದಾಭಿರಾಮ ಕೇಳು ವೇಮ.

ಮಾಹಾಯೋಗಿ ವೇಮನರ ಇಂಥ ನುಡಿಮುತ್ತುಗಳನ್ನು ಅಧ್ಯಯನ ಮಾಡಿದ ಸಜ್ಜನನು ವಿಶ್ವಮಾನವನಾಗದಿರನು. ಈ ಸದಿಚ್ಛೆಯಿಂದ ಪ್ರೇರಿತರಾಗಿ ನಾವು ಮಹಾಯೋಗಿ ವೇಮನರ ಧ್ಯೇಯಾದರ್ಶಗಳನ್ನು ತಿರುವಳ್ಳುವರ, ಕಬೀರ, ಸರ್ವಜ್ಞ ಮತ್ತು ತುಕಾರಾಮಾದಿ ಸಂತ ಕವಿಗಳ ಧ್ಯೇಯಾದರ್ಶಗಳೊಂದಿಗೆ ತೌಲನಿಕ ಅಭ್ಯಾಸಕ್ಕೆ ಇಳಿದೆವು.

ವೇಮನ ಭಾರತೀಯ ದಾರ್ಶನಿಕ ಪ್ರಪಂಚವನ್ನು ಶ್ರೀಮಂತಗೊಳಿಸಿದ ಓರ್ವ ಸಂತ ಕವಿ. ನಿಷ್ಕಾಮ ಕರ್ಮ ಮತ್ತು ಜ್ಞಾನಗಳ ಜಗಿತದ ಹಲಗೆಯನ್ನು ಮೀಟಿ, ಧ್ಯಾನಶಕ್ತಿಯಿಂದ ಪರಾ ಭಕ್ತಿಯ ಈಜುಗೊಳದಲ್ಲಿ ಪುಟಿದು ಈಜಾಡಿದ ವಿರಳ ಸಿದ್ಧಯೋಗಿಪುಂಗವ. ಇನ್ನು ಸರ್ವಜ್ಞ ಕವಿಯನ್ನು ಕನ್ನಡದ ವೇಮನ ಎಂದು ಕರೆದು ಕೆಲವರು ತೃಪ್ತಿಪಟ್ಟಿದ್ದಾರೆ. ವೇಮನರನ್ನು ತೆಲುಗಿನ ತಿರುವಳ್ಳುವರೆಂದು ಕೆಲವರು ಸಂತೋಷಿಸಿದ್ದಾರೆ ವೇಮನರನ್ನು ದಕ್ಷಿಣದ ಕಬೀರರೆಂದೂ ಕರೆಯಲಾಗಿದೆ. ಅನಂತರ ಕಾಲದ ಮಹಾರಾಷ್ಟ್ರದಲ್ಲಿ ಕ್ರಾಂತಿ ಕಿಡಿ ಹಾರಿಸಿದ ಮಹಾಸಂತ ತುಕಾರಾಮರು ವೇಮನರಿಗೆ ತೀರ ಹತ್ತಿರದವರೆಂದೂ ಹಲವರ ಅಭಿಪ್ರಾಯವಿದೆ.

ಈ ಮಹಾಪುರುಷರು ಚಾರಿತ್ರಿಕ ವ್ಯಕ್ತಿಗಳಾದರೂ ಅವರ ಜೀವನ ಕುರಿತ ದಾಖಲೆಗಳು ಸಿಗುವುದು ತೀರ ವಿರಳ. ಕ್ರಾಂತಿ ಕಹಳೆ ಊದಿದ ಈ ಸಮಾಜ ಸುಧಾರಕ ಕ್ರಾಂತಿವೀರ ದಾರ್ಶನಿಕರು ಶೋಷಿತ ವರ್ಗದಿಂದ ಬಂದವರಾದುದರಿಂದ ಆಯಾ ಕಾಲದ ಮೇಲುಜಾತಿ ವರ್ಗದವರ ತಿರಸ್ಕಾರ ಅಸಡ್ಡೆಗೊಳಗಾಗಿದ್ದಾರೆ. ಭಾರತದಲ್ಲಿ ಪಾಶ್ಚಾತ್ಯರ ಆಗಮನವಾಗುವ ವರೆಗೆ ಇವರ ಬಗೆಗೆ ಗಂಭೀರ ಅಧ್ಯಯನವೇ ನಡೆದಿರಲಿಲ್ಲ. ಜೊತೆಗೆ ಈ ಮಹಾಪುರುಷರ ಜೀವನ ಚರಿತ್ರೆಗಳು ವಿಕೃತಗೊಂಡಿದ್ದು ಕಂಡು ಬರುತ್ತದೆ. ಜ್ಞಾನವು ಒಂದು ಪ್ರಬಲವಾದ ಅಸ್ತ್ರ. ಈ ಅಸ್ತ್ರವು ಕೇವಲ ಮೇಲ್ವರ್ಗಕ್ಕೆ ಮಾತ್ರ ಲಭ್ಯವಾಗುವಂತಹ ವ್ಯವಸ್ಥೆಯಲ್ಲಿಯೂ ನೆಗೆದು ಅರಳಿದ ಮಹಾನ್ ವ್ಯಕ್ತಿಗಳಿವರು. ಸಮಾಜದ ಅಂಕು ಡೊಂಕುಗಳನ್ನು ತಿದ್ದಿ, ಭಾವ ಜಡತೆ, ಮೂಢ ನಂಬುಗೆಗಳನ್ನು ಒದ್ದೋಡಿಸಿದ ಧೀರರಿವರು. ಜನ ಸಾಮಾನ್ಯರಾಡುವ ಭಾಷೆಯಲ್ಲಿ ಅವರಿಗೆ ಅರ್ಥವಾಗುವ ಉಪಮೆ ರೂಪಕಗಳನ್ನು ನೀಡಿದವರಿವರು. ಈ ಮಹಾಪುರುಷರು ಹೊಸ ಮತ ಇಲ್ಲವೆ ಪಂಥ ಸ್ಥಾಪಿಸಲಿಲ್ಲ. ಅದು ಅವರ ಗುರಿಯೂ ಆಗಿರಲಿಲ್ಲ. ವ್ಯಕ್ತಿಯು ಡಾಂಭಿಕತೆಯಿಂದ ದೂರಾಗಿ, ಗೊಡ್ಡು ಆಚಾರಗಳನ್ನು ತಿರಸ್ಕರಿಸಿ, ಸರಳವಾದ ಜೀವನ ನಡೆಸಿ, ಸಾತ್ವಿಕತೆಯನ್ನು ಮೈಗೂಡಿಸಿಕೊಂಡು, ಪರಮಾರ್ಥವನ್ನು ಸಾಧಿಸುವ, ಸಹಜ ಮಾರ್ಗವನ್ನು ಕಂಡುಕೊಳ್ಳಲು ನೆರವಾದ ಈ ಪುಣ್ಯಪುರುಷರು ಪಟ್ಟಭದ್ರ ಹಿತಾಸಕ್ತಿಗಳ ಅವಹೇಳನಕ್ಕೆ ಗುರಿಯಾಗಿದ್ದರೆ ಆಶ್ಚರ್ಯವಿಲ್ಲ. ಜನರನ್ನು ಅಜ್ಞಾನದಲ್ಲಿ ಇರಿಸಿ, ಅವರನ್ನು ಶೋಷಿಸುತ್ತಿದ್ದ ಶೋಷಕ ವರ್ಗವು, ಶ್ರೀ ಸಾಮಾನ್ಯರಿಗೂ ಬೋಧೆ ನೀಡಿ ಅವರಲ್ಲಿ ಧಾರ್ಮಿಕ ಜಾಗೃತಿ ಮೂಡಿಸಿ, ಅವರಲ್ಲಿ ಅರ್ಹರಾದವರಿಗೆಲ್ಲ ಬ್ರಹ್ಮವಿದ್ಯೆ ಬೋಧಿಸಿದ ಈ ಅನುಭಾವಿಗಳ ಜೀವನ ಹಾಗೂ ಸಂದೇಶಗಳು, ಹೆಚ್ಚು ಪ್ರಚಾರಗೊಳ್ಳಲು ಅಡ್ಡಿಯಾದುದು, ಅಚ್ಚರಿಯೇನಲ್ಲ



ಈ ಎಲ್ಲ ಮಹಾಪುರುಷರು, ಜಾತಿಮತಗಳಿಂದ ದೂರವಾಗಿ, ಸತ್ಸಂಗದಲ್ಲಿ ಸಮಾನ ಮನಸ್ಕರನ್ನು ಆಕರ್ಷಿಸಿ, ಸಾಧನ ಪಥವನ್ನು ನಿರ್ದೇಶಿಸುತ್ತಿದ್ದರು, ಇವರ ಬಾಹ್ಯ ಆಚಾರವೆಂದರೆ, ಸಾಮಾನ್ಯ ನೀತಿಪಾಲನೆಯೇ ಆಗಿತ್ತು. ಹೀಗಾಗಿ, ಅವರ ಲೋಕ ಸಾಹಿತ್ಯವು ನೀತಿ ಬೋಧಾತ್ಮಕವಾಗಿದೆ. ಇನ್ನು ಅವರ ದಾರ್ಶನಿಕ ಸಾಹಿತ್ಯದಲ್ಲಿ ಅಲ್ಪ ಸ್ವಲ್ಪ ಭೇದವು ತೂರಿ ಕೊಂಡಿದೆ. ಸರ್ವಜ್ಞನು ದೇಹದ ಮೇಲೆ ಲಿಂಗ ಧಾರಣೆಯನ್ನು ಖಂಡಿಸಿದರೂ, ಲಿಂಗ ಪೂಜೆಯನ್ನೂ ಭಸ್ಮರುದ್ರಾಕ್ಷಿಧಾರಣೆಯನ್ನೂ ಪುರಸ್ಕರಿಸಿದ್ದಾನೆ. ತುಕಾರಾಮನು ಕ್ಷುದ್ರದೇವತೆಗಳ ಮೂರ್ತಿಪೂಜೆಯನ್ನು ಖಂಡಿಸಿದರೂ, ಹೆಚ್ಚಿನ ಹಿನ್ನೆಲೆಯಿರದ, ಪಂಢರಪುರದ ವಿಠ್ಠಲನನ್ನು ಒಪ್ಪಿಕೊಳ್ಳುವುದರೊಂದಿಗೆ ಸಂಧಿ ಮಾಡಿಕೊಂಡಿದ್ದಾನೆ. ಇತ್ತ ವೇಮನ ಕಬೀರರು ಯಾವುದೇ ಬಗೆಯ ಬಾಹ್ಯ ಪೂಜೆಯನ್ನೂ, ಬಾಹ್ಯ ಚಿಹ್ನೆಗಳನ್ನೂ, ಅಂಧಃ ಶ್ರದ್ಧೆ, ಕಂದಾಚಾರಗಳನ್ನೂ ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಮೂರ್ತಿಪೂಜೆಗಂತೂ ಅವರು ಎಳ್ಳಷ್ಟೂ ಇಂಬು ಕೊಟ್ಟಿಲ್ಲ. " ಕಾಷ್ಠ ಲೋಹೇಷು ಮೂರ್ಖಾಣಾಂ, ಹೃದಯೇಷು ಪಂಡಿತಾನಾಂ' ಎಂದು ವಿಷ್ಣು ಪುರಾಣದಲ್ಲಿಯೇ ಹೇಳಿದ ಮೇಲೆ, ಇಂಥ ಮಹಾಪುರುಷರು ಮೂರ್ತಿಪೂಜೆಯನ್ನು ಹೇಗೆ ಪುರಸ್ಕರಿಸಬಲ್ಲರು? ತೀರ್ಥಕ್ಷೇತ್ರ ಯಾತ್ರೆಗಳಿಗಾದರೂ ಎಲ್ಲಿ ಸ್ಥಾನವಿರಬಲ್ಲದು? ಇವರೆಲ್ಲರಿಗೂ ಪೂರ್ವದ, ಸುಮಾರು ಕ್ರಿ.ಶ ಒಂದು ಇಲ್ಲವೆ ಎರಡನೆಯ ಶತಮಾನದವರೆಂದು ಗುರುತಿಸಲಾದ, ತಿರುವಳ್ಳುವರ ಅಂತೂ ಯಾವುದೇ ಮೂರ್ತಿಯನ್ನಾಗಲಿ, ಅದೇಕೆ ಯಾವುದೊಂದು ವಿಶಿಷ್ಟ, ನಾಮವನ್ನಾಗಲಿ ಪ್ರಸ್ತಾಪಿಸದೆ, ಪುರುಷಾರ್ಥಗಳಲ್ಲಿ ಧರ್ಮ, ಅರ್ಥ ಮತ್ತು ಕಾಮ ಎಂಬ ತ್ರಿವರ್ಗಗಳನ್ನು ಮಾತ್ರ ವಿಶದೀಕರಿಸಿ ನಾಲ್ಕನೆಯ ಮೋಕ್ಷವೆಂಬ ಅಪವರ್ಗವನ್ನು ಕುರಿತು ಬರೆಯಹೋಗಿಲ್ಲ, ಭಾರತ ದೇಶದ, ಆಸೇತು ಹಿಮಾಚಲ ಪರ್ಯಂತ ಪ್ರಚಲಿತವಿರುವ ಯಾವುದೊಂದು ಮತಧರ್ಮಕ್ಕೆ ಸೇರದೆ, ನುಲಿ ಹರಿದ ಸ್ವಚ್ಛಂದ ಹಕ್ಕಿಗಳಂತೆ, ಆಧ್ಯಾತ್ಮಿಕ ದಿಗಂತದಲ್ಲಿ ಹಾರಾಡಿದ ಈ ಸಂತ ಕವಿಗಳು ಉಲಿದ ಭಾಷೆ, ನಡೆದಾಡಿದ ಪ್ರದೇಶ ಹಾಗೂ ಬಾಳಿದ ಕಾಲಗಳನ್ನು ಕುರಿತು, ಇದು ವರೆಗೆ ಸಂಶೋಧಿಸಲ್ಪಟ್ಟ ಸಂಗತಿಗಳನ್ನು ಈ ಕೆಳಗೆ ನೀಡಿದ್ದೇವೆ.

| ಕ್ರ.ಸಂ. | ಸಂತ ಕವಿಯ ಹೆಸರು | ಭಾಷೆ | ಪ್ರದೇಶ | ಕಾಲ. ಕ್ರಿ.ಶ |
|---|---|---|---|---|
| ೧ | ತಿರುವಳ್ಳುವರ್ | ತಮಿಳು | ತಮಿಳು ನಾಡು | ೧೦೦-೨೦೦ |
| ೨ | ಕಬೀರ | ಹಿಂದಿ (ಭೋಜಪುರಿ) | ಉತ್ತರ ಪ್ರದೇಶ | ೧೩೯೯-೧೫೨೦ |
| ೩ | ವೇಮನ | ತೆಲುಗು | ಆಂಧ್ರ ಪ್ರದೇಶ | ೧೪೧೨-೧೪೮೦ |
| ೪ | ಸರ್ವಜ್ಞ | ಕನ್ನಡ | ಕರ್ನಾಟಕ | ೧೫೦೦ |
| ೫ | ತುಕಾರಾಮ | ಮರಾಠಿ | ಮಹಾರಾಷ್ಟ್ರ | ೧೬೦೮-೧೬೫೦ |

ಇಂದಿನಿಂದ ಇಪ್ಪತ್ತೈದು ನೂರು ವರುಷಗಳಷ್ಟು ಹಿಂದೆ ಬುದ್ಧದೇವ ಬೋಧಿಸಿದ ತತ್ತ್ವಗಳು, ಎರಡು ಸಾವಿರ ವರುಷಗಳ ಹಿಂದೆ ಯೇಸು ಸ್ವಾಮಿ ಎತ್ತಿ ಹಿಡಿದ ಜೀವನಾದರ್ಶಗಳು, ಹದಿನಾಲ್ಕು ನೂರು ವರುಷಗಳಷ್ಟು ಹಿಂದೆ ಪ್ರವಾದಿ ಮೊಹಮ್ಮದರು ಸಮಾಜವನ್ನೆದುರಿಸಿದ ಬಗೆ, ಎಂಟು ನೂರು ವರುಷ ಮುನ್ನ ಅಲ್ಲಮ ಪ್ರಭುದೇವರು ಮಾಡಿದ ತತ್ತ್ವ ವಿವೇಚನೆ ಮತ್ತು ಆರು ನೂರು ವರ್ಷದ ಹಿಂದೆ ಗುರು ನಾನಕರು ಎತ್ತಿ ಹಿಡಿದ ಧರ್ಮ ಸಮನ್ವಯ ದೃಷ್ಟಿ ಇತ್ಯಾದಿಗಳು ಇಂದಿನ ಜನರ ತಲೆಯಲ್ಲಿ ಸುಳಿಯುತ್ತಿವೆ. ಪ್ರಚಲಿತ ಸಮಾಜದ ಸಂರಚನೆಯನ್ನು ರೂಪಿಸಿವೆ. ಅಂದ ಮೇಲೆ, ಈ ಮಹಾಪುರುಷರ ಜೀವನಾದರ್ಶಗಳೊಂದಿಗೆ ಮಹಾಯೋಗಿ ವೇಮನರ ಜೀವನಾದರ್ಶಗಳ ತೌಲನಿಕ ಅಭ್ಯಾಸ ಮಾಡಿ ಪ್ರಕಟಿಸಬೇಕಿದೆ. ಈ ದಿಸೆಯಲ್ಲಿ ಹಲವು ಸಂಶೋಧಕ ವಿಧ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಸಿದ್ಧಾಂತಗಳನ್ನು ಮಂಡಿಸಿ ಪಿ.ಎಚ್.ಡಿ. ಪಡೆದಿದ್ದಾರೆ. ಇಂದು ಕನ್ನಡಿಗರಿಗೂ ಅಂಥ ತೌಲನಿಕ ಅಭ್ಯಾಸದ ಅಗತ್ಯವಿದೆ.

ಪ್ರಸ್ತುತ ಗ್ರಂಥ ರಚನೆಗೆ ಆಧಾರ ಗ್ರಂಥಗಳಾಗಿ, ಇದೇ ಲೇಖಕರ 'ಮಹಾಯೋಗಿ ವೇಮನ' ಮತ್ತು " ಅವರಿವರು ಕಂಡಂತೆ ವೇಮನ" " ವೇಮನ ವಿಶ್ವಗೀತೆ" ಗ್ರಂಥಗಳಿಂದ ವೇಮನರ ಅನುವಾದಿತ ಪದ್ಯಗಳನ್ನು ಎತ್ತಿಕೊಳ್ಳಲಾಗಿದೆ. ಮಹಾಪುರುಷ ತಿರುವಳ್ಳುವರ ತತ್ತ್ವಗಳನ್ನು ಕಾಮರಾಜ ವಿಶ್ವವಿದ್ಯಾಲಯದ ಕನ್ನಡ ಅನುವಾದ ಗ್ರಂಥದಿಂದ ಉದ್ಧರಿ-ಸಲಾಗಿದೆ. ಕೆಲವು ಕನ್ನಡದಲ್ಲಿರುವ ಪದ್ಯಗಳನ್ನು ನಾವು ಅನುವಾದಿಸಿದ ಅಪ್ರಕಟಿತ ಗ್ರಂಥದಿಂದ ಆಯ್ದು ಕೊಳ್ಳಲಾಗಿದೆ. ಮಹಾತ್ಮಾ ಕಬೀರರ ಶಾಯರಿಗಳ ಕನ್ನಡಾನುವಾದವನ್ನು ಪ್ರೊ ವೀರಣ್ಣ ಇಟಗಿಯವರ ಗ್ರಂಥದಿಂದ ಎತ್ತಿಕೊಂಡಿದ್ದು ಅವರಿಗೆ ತುಂಬಾ ಉಪಕೃತರಾಗಿದ್ದೇವೆ. ಇನ್ನು ಸರ್ವಜ್ಞ ಮಹಾಕವಿಯ ಪದ್ಯಗಳನ್ನು ದಿ. ಉತ್ತಂಗಿ ಚೆನ್ನಪ್ಪನವರಿಂದ ಸಂಪಾದಿತವಾದ ಕರ್ನಾಟಕ ಸರಕಾರದ ಪ್ರಕಟಣೆಯಿಂದಲೂ ಮತ್ತು ಸಂತ ತುಕಾರಾಮರ ಅಭಂಗಗಳ ಕನ್ನಡಾನುವಾದವನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳಿಂದಲೂ ಮತ್ತಿತರ ಆಧಾರ ಗ್ರಂಥಗಳಿಂದಲೂ ಉದ್ಧರಿಸಿದ್ದೇವೆ.ಆ ಪಂಡಿತರೆಲ್ಲರಿಗೂ ನಾವು ತುಂಬಾ ಋಣಿಗಳಾಗಿದ್ದೇವೆ.

ಈ ಎಲ್ಲ ಮಹಾಪುರುಷರ ಜೀವನ, ತತ್ತ್ವಾದರ್ಶಗಳನ್ನು ಕುರಿತು ತೌಲನಿಕವಾಗಿ ನಿರೂಪಿಸಿದ್ದೇವೆ, ವಿಶೇಷವಾಗಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪುರುಷಾರ್ಥಗಳನ್ನು ಈ ಮಹಿಮರ ಉಕ್ತಿಗಳ ಮೂಲಕ ವಿವರಿಸಿದ್ದೇವೆ. ಮತ ವೈಷಮ್ಯದ ಕೂಗಿನಿಂದ ತತ್ತರಿಸುತ್ತಿರುವ ಇಂದಿನ ಪ್ರಕ್ಷುಬ್ಧ ಸಮಾಜಕ್ಕೆ ಸಾಂತ್ವನ ನೀಡುವಲ್ಲಿ ನಮ್ಮೀ ಗ್ರಂಥವು ಅಲ್ಪ ಕಾಣಿಕೆಯನ್ನು ಸಲ್ಲಿಸುವುದೆಂದು ಆಶಿಸುತ್ತೇವೆ.

ಅಲ್ಪ ಕಾಲದಲ್ಲಿ ಅಂದವಾಗಿ ಮುದ್ರಿಸಿದ ವೇಮನ ಪ್ರಿಂಟರ್ಸ ಪ್ರೈ.ಲಿ. ಹುಲಕೋಟಿ ಇವರಿಗೆ ತುಂಬಾ ಕೃತಜ್ಞರಾಗಿದ್ದೇವೆ.

೧೨-೧-೨೦೦೦ ಎಸ್.ಆರ್. ಪಾಟೀಲ





# ಮಹಾಯೋಗಿ ವೇಮನ

## ಜೀವನ :

ತೆಲುಗು ಭಾಷೆಯಲ್ಲಿ ಅಣ್ಣ ಶಬ್ದಕ್ಕೆ ಅನ್ನ ಎನ್ನುತ್ತಾರೆ. ವೇಮ+ಅನ್ನ= ವೇಮನ್ನ. ಇದರ ರೂಢ ಉಚ್ಚಾರವೇ ವೇಮನ. ಅವರ ಜೀವನವು ರಹಸ್ಯಮಯವಿತ್ತು. ರಹಸ್ಯಮಯವಾಗಿಯೇ ಉಳಿದಿದೆ. ರಹಸ್ಯಮಯವಾಗಿಯೇ ಉಳಿಯುವುದು.

ತಾಯಿಯೇ ಪಾರ್ವತಿಯು ತಂದೆಯೇ ವರಶಂಭುವು
ಪ್ರಮಥ ಗಣಗಳೆಲ್ಲ ಬಂಧು ಬಳಗ.
ತಾನು ಹುಟ್ಟಿದ ಮನೆ ತನಗೆ ಕೈಲಾಸವೈ.
ವಿಶ್ವದಾಭಿರಾಮ ಕೇಳು ವೇಮ.

ಎಂದು ತಮ್ಮ ಮನೆ ಮಾರು ತೊರೆದು ವಿರಕ್ತ ಪುರುಷರಾದ ವೇಮನರ ಖಾಸಗಿ ಜೀವನ ಕುರಿತು ಕಂಡು ಹಿಡಿಯುವುದು ಸುಲಭದ ಮಾತಲ್ಲ.

ತತ್ತ್ವಜ್ಞಾನ ಶಾಸ್ತ್ರದ ಮಹಾಮೇಧಾವಿ, ಮೈಸೂರು ವಿಶ್ವವಿದ್ಯಾಲಯದ ಪ್ರೊ. ಹಿರಿಯಣ್ಣನವರು ಆಧ್ಯಾತ್ಮಲೋಕದ ಪುಣ್ಯ ಜೀವಿಗಳ ಬಗೆಗೆ ಬರೆಯುತ್ತ ಹೀಗೆ ಬರೆದಿದ್ದಾರೆ.

"ಭಾರತೀಯ ಚಿಂತನೆಯ ಬೆಳವಣಿಗೆಗೆ ಕಾರಣರಾದ ಎಲ್ಲರಿಗೂ ಈ ವರ್ಣನೆ ಅನ್ವಯವಾಗುತ್ತದೆ. ಆದಿ ಶಂಕರರಂತಹ ಹಿರಿಯ ಆಚಾರ್ಯರು ಕೂಡ, ನಮಗೆ ಇಂದಿಗೆ ಬರಿ ಹೆಸರಲ್ಲದೆ ಮತ್ತೇನೂ ಅಲ್ಲ. ಉಳಿದ ವಿವರಗಳೆಲ್ಲ ಬರೀ ಊಹೆಯ ಮೇಲೆ ನಿಂತಿವೆ. ಭಾರತೀಯರು ತಮ್ಮ ಪುರುಷರ ಜೀವನ ಚರಿತ್ರೆಯ ಬಗ್ಗೆ ಉಪೇಕ್ಷೆ ತೋರಿದುದಕ್ಕೆ ಕಾರಣ-ವೆಂದರೆ, ವ್ಯಕ್ತಿಗಳು ತಮ್ಮ ಕಾಲದ ಶಿಶುಗಳಲ್ಲದೆ ಬೇರೇನೂ ಅಲ್ಲ ಎಂಬ ಅರಿವು. ಅವರಿಗಾಗಿ ಸಿದ್ಧವಾಗಿರುವ ನೆಲದಲ್ಲಿ ಅವರು ಬೆಳೆಯುತ್ತಾರೆ ಅವರು ಉಸಿರಾಡುವ ಬೌದ್ಧಿಕ ವಾತಾವರಣವನ್ನು ಸೃಷ್ಟಿಸಿದವರು ಅವರಲ್ಲ ಎಂಬ ಕುರಿತು ಅರಿವು ಭಾರತೀಯರಿಗಿತ್ತು. ಮೇಲಾಗಿ, ಮಹಾಪುರುಷರು ತಮ್ಮನ್ನು ಕುರಿತು ತಾವೇ ತಾಳಿದ ವಿನೀತ ಭಾವವೂ ಇದಕ್ಕೆ ಕಾರಣವಾಗಿದೆ"

ವೇಮನರ ದೇಶ ಕಾಲ ವಂಶಾದಿಗಳನ್ನು ಕುರಿತು ನಾವು ಈಗಾಗಲೇ ವಿವಿಧ ಚಾರಿತ್ರಿಕ, ಸಾಹಿತ್ತಿಕ ಆಧಾರದ ಮೇಲೆ 'ಅವರಿವರು ಕಂಡಂತೆ ವೇಮನ' (೧೯೯೬) ಗ್ರಂಥದಲ್ಲಿ ನಿರ್ಣಯಿಸಿದ್ದೇವೆ. ಆ ನಿರ್ಣಯಗಳನ್ನು ಗ್ರಹಿಸಿ ಕೆಲ ಪದ್ಯಗಳನ್ನು ಉಲ್ಲೇಖಿಸಿ ನಾವು ಮುಂದುವರಿಯ ಬೇಕಾಗಿದೆ, ವೇಮನರ ಜನನ ಕಾಲವನ್ನು ಸೂಚಿಸುವ ಅವರದೊಂದು ಪದ್ಯ ಹೀಗಿದೆ.

ನಂದನ ಸಂವತ್ಸರದಲಿ.
ಹೊಂದುವ ಕಾರ್ತಿಕ ಶುದ್ಧ ಪೂರ್ಣಿಮೆ ದಿನದೋಳ್
ವಿಂಧ್ಯಾದ್ರಿ ಸೇತು ಬಂಧನ
ಸಂದಿಯನೋರ್ವ ವೀರನಾಳ್ವ ಸಾರೆಲೊ ವೇಮೊ

ತಾತ್ಪರ್ಯವಿಶ್ಲೇಷಣೆ: ಪ್ರತಿ ೬೦ ವರ್ಷಕ್ಕೊಮ್ಮೆ ಸಂವತ್ಸರವು ಆವರ್ತವಾಗುತ್ತದೆ. ಅಂಥ ಸಂವತ್ಸರಗಳಲ್ಲಿ ನಂದನ ನಾಮ ಸಂವತ್ಸರವೂ ಒಂದು. ಕ್ರಿ. ಶ. ೧೪೧೨ ರಲ್ಲಿ ನಂದನ ನಾಮ ಸಂವತ್ಸರವಿತ್ತು. ಆ ವರ್ಷದ ಕಾರ್ತಿಕ ಶುದ್ಧ ಹುಣ್ಣಿಮೆಯ ದಿನದಂದು ವಿಂಧ್ಯಪರ್ವತ ಮತ್ತು ಸೇತು ಬಂಧನ (ರಾಮೇಶ್ವರ) ಗಳ ಮಧ್ಯೆ ಇರುವ ನಾಡನ್ನು ಓರ್ವವೀರನು ಆಳಿದನು. ಆಧ್ಯಾತ್ಮಿಕ ಸಾಮ್ರಾಜ್ಯವನ್ನು ಆಳಿದ ಮಹಾವೀರನು, ವೇಮನರ ಮಾತಿನಲ್ಲಿ ವೇಮನನಲ್ಲದೆ ಬೇರಾರೂ ಆಗರು.

ವೇಮನೆಂಬ ಯೋಗಿ ವಾಸಿಸಿದ ಲೋಕದಿ.
ಪೂಜೆ ಸಲಿಸಿರವಗೆ ಪುಣ್ಯಪುರುಷರೆ!
ಸಲಿಸಿದಷ್ಟು ಪೂಜೆ ಸೌಖ್ಯ ಭಾಗ್ಯ ಲಭ್ಯ.
ವಿಶ್ವದಾಭಿರಾಮ ಕೇಳು ವೇಮ.

ಎಂದೂ ಅವರೇ ಹೇಳಿಲ್ಲವೇ ?

ಇನ್ನು ಅವರ ಊರು ಕೇರಿಗಳನ್ನು ಕುರಿತು ಅವರ ಪದ್ಯವೇ ತಿಳಿಸುತ್ತದೆ.
ಊರು ಕೊಂಡವೀಡು ವಾಸ ಪಶ್ಚಿಮ ವೀಧಿ
ಮೂಗಚಿಂತ ಪಲ್ಲೆ ಮೊದಲ ಮನೆಯು.
ಮಡ್ಡ ರಡ್ಡಿ ಕುಲವು ಮೇಲೆ ಹೇಳಲೇನು ?
ವಿಶ್ವದಾಭಿ ರಾಮ ಕೇಳು ವೇಮ.

ಈ ಕೊಂಡವೀಡು (ಬೆಟ್ಟಗಳ ಪ್ರದೇಶವೆಂದು ಶಬ್ದಾರ್ಥ) ಗುಂಟೂರ ಜಿಲ್ಲೆಯ ನರಸರಾವು ಪೇಟೆಯ ದುರ್ಗಾರಣ್ಯ ಸ್ಥಲ. ಕ್ರಿ ಶ ೧೩೨೪ ರಿಂದ ಕ್ರಿ ಶ ೧೪೨೪ ರ ವರೆಗೆ ಆಳಿದ ರೆಡ್ಡಿ ವಂಶದ ರಾಜಧಾನಿ. ಈ ರೆಡ್ಡಿ ವಂಶದ ಒಂದು ಕುಡಿಯೇ ವೇಮನ.ಆಂಧ್ರದಲ್ಲಿ ಅದು ವರೆಗೆ ಆಳಿದ ಕಾಕತೀಯ ಸಾಮ್ರಾಜ್ಯವು ದಿಲ್ಲಿಯ ಸುಲ್ತಾನ ಅಲ್ಲಾಉದ್ದೀನ ಖಿಲ್ಜಿಯ ಸೇನಾಪತಿ ಮಲಿಕ ಕಾಫರನ ದಾಳಿಯಿಂದ ಕ್ರಿ.ಶ. ೧೩೨೩ ರಲ್ಲಿ ತತ್ತರಿಸಿ ಕುಸಿಯಿತು. ಅರಾಜಕವಾದ ರಾಜ್ಯದಲ್ಲಿ ಸರದಾರರು ತಮ್ಮ ತಮ್ಮಲ್ಲಿ ರಾಜ್ಯವನ್ನು ಹಂಚಿಕೊಂಡು ಆಳಹತ್ತಿದರು ಇಂಥವರಲ್ಲಿ ಪ್ರೋಲಯ ವೇಮಾರಡ್ಡಿ ೧೩೨೪ ರಲ್ಲಿ ಅದ್ದಂಕಿ ಎಂಬಲ್ಲಿ ಸ್ವತಂತ್ರ ರಾಜ್ಯ ಸ್ಥಾಪಿಸಿ ಜನ ಕಲ್ಯಾಣ ಮಾಡಿದನು. (೧೩೨೪-೧೩೫೦). ಇವನ ಹಿರಿಯ ಮಗ ಅನಪೋತ ರೆಡ್ಡಿಯು (೧೩೫೦-೧೩೬೨) ರಾಜ್ಯವಾಳಿ, ೧೩೬೨ ರಲ್ಲಿ ಮಡಿದನು. ಅವನ ಮರಣ ಕಾಲಕ್ಕೆ ಮಗ ಕುಮಾರ ಗಿರಿ ರೆಡ್ಡಿಯು ಅಲ್ಪವಯಿ ಇದ್ದುದರಿಂದ ಅವನ ಕಕ್ಕ ಅನವೇಮಾ ರೆಡ್ಡಿಯು (೧೩೬೨-೧೩೮೦) ಪಟ್ಟವೇರಿದನು. ಇವನು ತುಂಬಾ ಪರಾಕ್ರಮಿ. ರಾಜ್ಯವನ್ನು ಹೆಚ್ಚು ವಿಸ್ತರಿಸಿದನು. ರಾಜಧಾನಿಯನ್ನು ಅದ್ದಂಕಿ-ಯಿಂದ ಕೊಂಡವೀಡು ನಗರಕ್ಕೆ ಸ್ಥಳಾಂತರಿಸಿದನು. ಇವನಿಗೆ ಗಂಡು ಮಕ್ಕಳಿರಲಿಲ್ಲ. ವೇಮಾಂಬೆ ಎಂಬ ಮಗಳಿದ್ದಳು. ಹೀಗಾಗಿ ಕುಮಾರಗಿರಿ ರೆಡ್ಡಿಯು ಪಟ್ಟವೇರಿದನು (೧೩೮೦-೧೪೦೦) ಶಿಲ್ಪ ಕಲೆ, ಶಾರದೋತ್ಸವ, ಸಂಗೀತ ಪ್ರೋತ್ಸಾಹ ಇತ್ಯಾದಿಗಳಲ್ಲಿ ಮುಳುಗಿ ಹೋದ ಈತನು ಜನರ ಪ್ರೀತಿಗೆ ಎರವಾದನು. ಸಾಲದ್ದಕ್ಕೆ ೧೩೯೬ ರಲ್ಲಿ ಭೀಕರ ಬರಗಾಲ ಬಿದ್ದಿತ್ತು. ಈ ಸಂಧಿಯನ್ನು ಸಾಧಿಸಿ, ರಾಜ್ಯ ಸ್ಥಾಪಕ ಪ್ರೋಲಯ ವೇಮರಡ್ಡಿಯ





ತಮ್ಮನಾದ ಮಾಚರಡ್ಡಿಯ ಮೊಮ್ಮಗನಾದ ಕೊಮಟಿ ವೇಮಾರಡ್ಡಿಯು ಜನಕ್ರಾಂತಿ ಮೂಲಕ, ಕುಮಾರಗಿರಿ ರೆಡ್ಡಿಯ ಪಟ್ಟವನ್ನು ಆಕ್ರಮಿಸಿದನು. (೧೪೦೦-೧೪೨೦). ಇವನ ಮಗನಾದ ರಾಚವೇಮಾರೆಡ್ಡಿಯು ನಾಲ್ಕು ವರ್ಷ ಮಾತ್ರ ರಾಜ್ಯವಾಳಿದನು.

ಇತ್ತ ದೊರೆ ಕುಮಾರಗಿರಿ ರೆಡ್ಡಿಯ ಕಾಲದಲ್ಲಿ ಅವನ ತಂಗಿ ಕೂತುರು ಮಲ್ಲಾಂಬೆಯ ಗಂಡನಾದ ಕಾಟಯವೇಮಾರೆಡ್ಡಿಯು ಮಹಾಪ್ರಧಾನಿಯಾಗಿ ರಾಜ್ಯಭಾರದ ಹೊಣೆ ಹೊತ್ತಿದ್ದನ್ನು, ಮುಂದೆ ಇವನ ಮಹಾಸಾಹಸಗಳಿಗೆ ಮಾರು ಹೋದ ಕುಮಾರಗಿರಿ ರೆಡ್ಡಿಯು ಇವನಿಗೆ ರಾಜ ಮಹೇಂದ್ರ ಪ್ರದೇಶವನ್ನು ಬಳುವಳಿಯಾಗಿ ಇತ್ತನು. ಇವನು ೧೩೮೯ ರಿಂದ ೧೪೦೦ ರ ವರೆಗೆ ಆ ಪ್ರದೇಶವನ್ನು ಸ್ವತಂತ್ರವಾಗಿ ಆಳಿದನು. ಮುಂದೆ ಕೊಂಡವೀಡಿನ ದೊರೆಯಾದ ಕೊಮಟಿ ವೇಮಾರೆಡ್ಡಿಯು ಕಾಟಯ ವೇಮಾರೆಡ್ಡಿಗೆ ಕೊಟ್ಟ ಬಳುವಳಿಯನ್ನು ಮಾನ್ಯ ಮಾಡಲಿಲ್ಲ. ಕ್ರಿ.ಶ. ೧೪೦೩ ರಲ್ಲಿ ಯುದ್ಧ ನಡೆದು ಕಾಟಯ ವೇಮಾರಡ್ಡಿಯು ಸೋತನು. ಆದರೂ ಪೂರ್ಣ ಶರಣಾಗಲಿಲ್ಲ ಕೊನೆಗೆ ಕ್ರಿ.ಶ. ೧೪೧೪ ರಲ್ಲಿ ರಣದಲ್ಲಿ ಹೋರಾಡಿ ವೀರಸ್ವರ್ಗ ಸೇರಿದನು.

ಮುಂದೆ, ಕಾಟಯ ವೇಮಾರೆಡ್ಡಿಯ ಆಪ್ತಬಂಧುವಾದ ದುವ್ವೂರಿ ವಂಶದ ಅಲ್ಲಾಡರೆಡ್ಡಿಯು ರಾಜ್ಯಭಾರದ ಹೊಣೆ ಹೊತ್ತನು. ಏಕೆಂದರೆ ಕಾಟಯ ವೇಮನ ಮಗನಾದ ಕುಮಾರಗಿರಿಯು ಆಗಿನ್ನೂ ಬಾಲಕನಾಗಿದ್ದನು. ಅಲ್ಲಾಡರೆಡ್ಡಿಯು ಅಂದಿನ ದೊರೆ ಅನವೇಮಾ ರೆಡ್ಡಿಯ ಪುತ್ರಿ ವೇಮಾಂಬೆಯ ಗಂಡನಾದುದರಿಂದ ಕೊಂಡವೀಡು ವಂಶಕ್ಕೆ ಬೀಗನೂ ಆಗಿದ್ದನು. ಅಲ್ಲಾಡರೆಡ್ಡಿಯು ರಾಜಮಹೇಂದ್ರವರಂ ಮೇಲೆ ದಂಡೆತ್ತಿ ಬಂದ, ಕೊಂಡವೀಡುವಿನ ಕೊಮಟಿ ವೇಮಾ ರೆಡ್ಡಿಯನ್ನೂ, ಬಹಮನಿ ಸುಲ್ತಾನರನ್ನೂ. ಸೋಲಿಸಿ ರಾಜ್ಯದಿಂದ ಓಡಿಸಿದನು. ಇವನು ಕ್ರಿ.ಶ. ೧೪೨೦ ರಲ್ಲಿ ಕಾಲವಶನಾದನು. ಈತನ ಅಣ್ಣನ ಮಗನು ಮೂರು ವರ್ಷ ಮಾತ್ರ ರಾಜ್ಯವಾಳಿದನು. ನಂತರ ಕ್ರಿ.ಶ. ೧೪೨೩ ರಲ್ಲಿ ಅಲ್ಲಾಡರೆಡ್ಡಿಯ ಹಿರಿಯ ಮಗನಾದ ವೇಮಾರೆಡ್ಡಿಯು ತನ್ನ ದಾಯಾದಿಗಳನ್ನೆಲ್ಲ ಹೊರದಬ್ಬಿ ರಾಜ್ಯ ಸ್ಥಾಪಕ ಕಾಟಯ ವೇಮಾರೆಡ್ಡಿಯ ಅಳಿಯನಾದ ತನ್ನ ನೆಚ್ಚಿನ ತಮ್ಮ ವೀರಭದ್ರಾರೆಡ್ಡಿಗಾಗಿ ರಾಜಮಹೇಂದ್ರವರಂ ರಾಜ್ಯವನ್ನು ಮರಳಿ ಪಡೆದನು. ಕ್ರಿಶ. ೧೪೨೪ ರಲ್ಲಿ ಕೊಂಡವೀಡು ರಾಜ್ಯದ ಪತನಾನಂತರ ರಾಜಮಹೇಂದ್ರವರಂ ರಾಜ್ಯವು ವಿಜಯನಗರ ರಾಜ್ಯದ ಸಾಮಂತ ರಾಜ್ಯವಾಗಿ ಉಳಿಯಿತು. ಮುಂದೆ ಕ್ರಿ.ಶ. ೧೪೫೦ ರಲ್ಲಿ ಗಜಪತಿ ರಾಜನು ರಾಜಮಹೇಂದ್ರವರಂ ಮೇಲೆ ದಂಡೆತ್ತಿ ಬಂದು ಭೀಕರ ಯುದ್ಧ ಹೂಡಿದನು. ವೇಮಾರೆಡ್ಡಿ ಮತ್ತು ದೊರೆ ವೀರಭದ್ರಾರೆಡ್ಡಿಗಳು ಹೋರಾಡಿ ವೀರಸ್ವರ್ಗ ಸೇರಿದರು.

ಯೋಗಿ ವೇಮನರ ಚರಿತ್ರೆಯನ್ನು ಅರಿಯುವಲ್ಲಿ ಈ ರಾಜ ವಂಶದ ವಿಸ್ತೃತ ಚರಿತ್ರೆ ಏಕೆ ? ಎಂದು ನೀವು ಕೇಳಬಹುದು. ವೇಮನ ಜನಿಸಿದ ನಂದನ ನಾಮ ಸಂವತ್ಸರ (ಅಂದರೆ ಕ್ರಿ.ಶ. ೧೪೧೨ ರಲ್ಲಿ ) ಮತ್ತು ಅವರು ತಮ್ಮ ಕಿಶೋರಾವಸ್ಥೆಯನ್ನೂ ಮತ್ತು ಪ್ರಾಯದ ಆರಂಭದ ದಿನಗಳನ್ನೂ ಅರಿಯಲು ಆಗಿನ ಪರಿಸ್ಥಿತಿಯ ಅರಿವು ಮೂಡಿಸುವುದು ಅವಶ್ಯತಾನೇ ?

ಸತ್ತು ಬಿದ್ದ ಪಶುವ, ಕತ್ತು ಚರ್ಮ ಹಿಡಿದು,
ಮತ್ತೆ ಹರಿದು ತಿನುವುದು ರಣಹದ್ದು.
ಗೃದ್ಧ ಸಂಭವತಾ ಗಜಪತಿಯಲ್ಲವೇ ?
ವಿಶ್ವದಾಭಿರಾಮ ಕೇಳು ವೇಮ

ಅಧಿಕ ರಾಜನೊಬ್ಬ ಅಲ್ಪನ ಕೈ ಹಿಡಿಯೆ,
ಅವನಿ ಸೈಗುಡುವುದು ಅವನ ನುಡಿಗೆ.
ಗಜಪತಿ ಸೈಯೆನಲು ಕವಡಿ ನಾಣ್ಯವಹುದು.
ವಿಶ್ವದಾಭಿರಾಮ ಕೇಳು ವೇಮ

ವೇಮನ ಜೀವಿತ ಕಾಲದಲ್ಲೆಲ್ಲ (೧೪೧೨-೧೪೮೦) ಕೊಂಡವೀಡು ಪ್ರದೇಶವನ್ನು ಗಜಪತಿ ರಾಜರೇ ಆಳುತ್ತಿದ್ದರು. ಓಡಿಸಾ ಮೂಲದ ಈ ರಾಜರು ಕವಡಿಗಳನ್ನೇ ನಾಣ್ಯವಾಗಿ. ಸಾರಿದ್ದರು.

ಅಧಮನಿರಲಿ ಮನುಜ ಅರ್ಥವಂತನಿರಲಿ.
ಅವನ ಮಾತು ನಡೆವುದವನಿಯಲ್ಲಿ.
ಗಜಪತಿ ಸೈಯೆನಲು ಕವಡಿ ನಾಣ್ಯವೆನಿಸದೆ ?
ವಿಶ್ವದಾಭಿರಾಮ ಕೇಳು ವೇಮ

ವೇಮನ ಕವಿಗಳ ಪದ್ಯಗಳಲ್ಲಿ ಪ್ರಸ್ತಾಪಿತವಾದ ಮತ್ತೊಂದು ಊರಿನ ಹೆಸರು ಗಂಡಿಕೋಟೆ. ಕೆಲವು ಕಾಲ ವೇಮನರು ಇಲ್ಲಿ ವಾಸಿಸಿದ್ದರೆಂದು ತಿಳಿಯುತ್ತಿದೆ. ಅಲ್ಲಿಯ ರಾಜ್ಯಭಾರ ಮಾಡುತ್ತಿದ್ದ ಸುಬೇದಾರನು ಆಡಳಿತದ ಕುದುರೆಯನ್ನು ಸರಿಯಾಗಿ ಸವಾರಿ ಮಾಡದೆ ಮುಗ್ಗರಿಸುತ್ತಿದ್ದನಂತೆ.

ಗಂಡಿಕೋಟೆಯಲ್ಲಿ ಕತ್ತಿ ಹಿಡಿದರೂನು,
ರಾಜ ದೊಡ್ಡ ಅಶ್ವಾರೋಹಿಯಲ್ಲ.
ಯೂಪನಿದ್ದರೇನು ? ಎತ್ತಿ ಬೀಳಿಸುವುದು.
ವಿಶ್ವದಾಭಿರಾಮ ಕೇಳು ವೇಮ.

ವೇಮನ ಕವಿಗಳು ರೆಡ್ಡಿ ಜಾತಿಯವರೆಂದೂ, ಕಾಪು (ರೈತ) ಕುಲದವರೆಂದೂ ಅವರ ಪದ್ಯಗಳ ಆಧಾರದಿಂದ ತರ್ಕಿಸಬಹುದು.

ಪಾಕನಾಟ ರೆಡ್ಡಿ ಪೊಳೆವ ಮೋಟಾರೆಡ್ಡಿ
ಖ್ಯಾತ ತೋಟ ಹಿರಿಯ ಕೆಂಪು ರೆಡ್ಡಿ
ಮೂಢರೆಲ್ಲ ಜಗದಿ ಮಿನ್ನ ಜೀವಿಸಿಪ್ಪ
ಪ್ರತಿಭೆಗೇರಿದಂತೆ ಪೊಳೆಯೊ ವೇಮ.

ವೇಮನ ಕವಿಗಳು ತಾವು ರೆಡ್ಡಿ ಎಂದು ಒಂದು ಕೂಟ ಪದ್ಯದ ಮೂಲಕವ್ವ ಸೂಚಿಸಿದ್ದಾರೆ.

ಮನವೇಷವು ಮೇಣ್ಗಮಟಿನ ಜಿಡ್ಡಿ
ಬಾಗಿದ ಐದಾಕಳುಗಳ ದೊಡ್ಡಿ
ಅನುವಿನಲೆಸಗಿದನೆಲ್ಲವನೊಡ್ಡಿ
ವಿಖ್ಯಾತನು ಕಾಣಾ ವೇಮನ ರೆಡ್ಡಿ.





COLLEGE OF BUSINESS ADMINISTRATION LIBRARY HUBLI

ಈ ಕೂಟ ಪದ್ಯಾರ್ಥವನ್ನು ಹೀಗೆ ಮಾಡಬಹುದು. ವಿಷಯ ವಾಸನೆಗಳು ಮನಸ್ಸಿಗೆ ಮೇಣಗಮಟಿನ ಜಿಡ್ಡಿನಂತೆ ಅಂಟಿವೆ. ಈ ಜಿಡ್ಡನ್ನು ದೂರ ಮಾಡಲು ಐದು ಇಂದ್ರಿಯಗಳೆಂಬ ಹಸುಗಳನ್ನು ದೊಡ್ಡಿಯಲ್ಲಿ ಕಟ್ಟಿಹಾಕಬೇಕು. ಹೀಗೆ ಅನುವಿನಿಂದ ಇಂದ್ರಿಯಗಳನ್ನು ನಿಗ್ರಹಿಸಿ ವಿಖ್ಯಾತನಾದವನು ವೇಮನ ರೆಡ್ಡಿ. ಹಸುವನ್ನು ಸಾಕಿ ಹೈನು ಉದ್ಯೋಗ ಮಾಡುವ ಹಳ್ಳಿಯ ಮಹಿಳೆಗೆ ಈ ಜಿಡ್ಡಿನ ಅಂಟು, ಅದನ್ನು ದೂರಗೊಳಿಸುವ ಬಗೆಗಳು ಚೆನ್ನಾಗಿ ಗೊತ್ತು . ಇದೇ ರೀತಿಯ ಇನ್ನೊಂದು ಕೂಟ ಪದ್ಯವೂ ಇದೆ.

ಲೋಹದಿ ಮಾಡಿದ ಮೇಣದ ಕಡ್ಡಿ
ಮನೆ ಹಿಂದಿನ ಹಾಯುವಾಕಳ ದೊಡ್ಡಿ
ಅವುಗಳು ಮೇಯ್ದಿಹ ಹುಲ್ಲಿನ ಗಡ್ಡಿ
ಬಿಚ್ಚಿ ಹೇಳೆಲೋ ವೇಮಾ ರೆಡ್ಡಿ

ಈ ಒಗಟಿನ ಪದ್ಯವನ್ನು ಹೀಗೆ ಅರ್ಥೈಸಬಹದು. ಮನಸ್ಸು ಒಂದು ಹಸುವಿನಂತೆ. ಹುಲ್ಲಿನ ಗಡ್ಡೆಯನ್ನು ಉಣಬಡಿಸಿದರೂ ಅವು ಹಾಯಲು ಮುಂದಾಗುತ್ತವೆ. ಅಂದರೆ, ಬುದ್ಧಿ ಹೇಳಿದವರನ್ನೇ ಗುದ್ದುವಂತೆ. ಮನಸ್ಸನ್ನು "ಕಠೋರಾನಿ ಪಾಷಾಣಾದಪಿ, ಮೃದೂನಿ ಕುಸುಮಾದಪಿ" ' ಎನ್ನುವಂತೆ. ಇಲ್ಲಿ ಲೋಹದಷ್ಟು ಕಠಿಣ, ಆದರೆ ಮೇಣದಷ್ಟು ಮೆತ್ತಗೆ ಎಂದು ಉಪಮಿಸಲಾಗಿದೆ.

ಜಾತಿ ಕುಲ ಸೂಚಕವಾದ ಇನ್ನೆರಡು ಪದ್ಯಗಳೂ ಇವೆ, ಕಾಪು ಎಂದರೆ ಲಾವಣೆದಾರ, ರೈತ, ಸಾಗುವಳಿದಾರ, ಹಳ್ಳಿಗ, ಪ್ರಜೆ......." ಇತ್ಯಾದಿ ಅರ್ಥಗಳಿವೆ. (ಸಿ. ಪಿ. ಬ್ರೌನರ ತೆಲುಗು ಇಂಗ್ಲೀಷ ನಿಘಂಟನ್ನು ನೋಡಬಹುದು.)

ಕಲಿಯುಗದಲ್ಲಿ ಇಪ್ಪ ಕಾಪು ಕುಲಜ ಜನರೆ,
ವೇಮನ ತನ ಕೀರ್ತಿ ವಿಕ್ರಯಿಸಿದ.
ಉಳ್ಳ ಧರ್ಮವೆಲ್ಲ ಉರ್ವಿಜನರ ಮಧ್ಯೆ
ಹಂಚಿ ಪರವ ಸೇರಿ ಹೋದ ವೇಮ.

ಕಾಪು ಕುಲಜರೆಷ್ಟೊ, ಕರ್ಮಿಗಳಾಗಿರಲಿ,
ಕೊಂಚ ಪಾಪ ರಾಶಿ ಕಡಿಮೆಯಾಯ್ತು.
ವಿವರವರಿಯದಂಥ ವಿಚಿತ್ರ ಜನರಲ್ತೆ ?
ವಿಶ್ವದಾಭಿರಾಮ ಕೇಳು ವೇಮ

ತೀರ ಇತ್ತೀಚಿನ ವರೆಗೆ 'ಕಾಪು' ಮತ್ತು ರೆಡ್ಡಿ ಪದಗಳು ಕೇವಲ ಪರ್ಯಾಯ ಪದಗಳಾಗಿದ್ದವು. ಎಡ್ಗರ ಥರ್ಸ್ಟನ್ನರ "castes and tribes of south India" (ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳು) ಎಂಬ ಗ್ರಂಥದಲ್ಲಿ ರೆಡ್ಡಿ ಎಂಬುದನ್ನು ಪತ್ಯೇಕ ಸತ್ತೆಯಾಗಿ ಪರಿಗಣಿಸದೆ, ಕಾಪು ಶಬ್ದದಡಿಯಲ್ಲಿಯೇ ರೆಡ್ಡಿಗಳ ರೂಢಿ-ಸಂಪ್ರದಾಯಗಳನ್ನು ಕುರಿತು ಸುದೀರ್ಘ ವಿವರಗಳನ್ನು ನೀಡಲಾಗಿದೆ. ಸಿ.ಪಿ. ಬ್ರೌನರ ತೆಲುಗು-ಇಂಗ್ಲಿಷ ಅರ್ಥಕೋಶದಲ್ಲಿ ಕಾಪು ಎಂದರೆ 'ಲಾವಣೆದಾರ, ರೈತ, ಸಾಗುವಳಿದಾರ........' ಎಂದು ಅರ್ಥವಿದೆ. ಆದ್ದರಿಂದ ವ್ಹಿ. ಆರ್. ನಾರ್ಲಾರು ವೇಮನರನ್ನು ಕಾಪುರೆಡ್ಡಿ ಎಂದು ಕರೆಯಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ.

## ವಿದ್ಯಾಭ್ಯಾಸ :-

ಬಾಲಕ ವೇಮನರ ವಿಧ್ಯಾಭ್ಯಾಸವು ಇವ್ವಟೂರಿ ಸೋಮಶೇಖರ ಗುರುಪೀಠದಲ್ಲಿ ನಡೆಯಿತು. ತೆಲುಗುಭಾರತದ ಕರ್ತೃ ಪೋತನ ಊರ್ಫ್ ಪೋತರಾಜರು ಇಲ್ಲಿಯೇ ವಿಧ್ಯಾಭ್ಯಾಸ ಮಾಡಿದರು. "ವೀರಭದ್ರ ವಿಜಯ" ಎಂಬ ಕಾವ್ಯದಲ್ಲಿ ಅವರು ತಮ್ಮ ಗುರುಗಳನ್ನು ಸ್ಮರಿಸಿದ್ದಾರೆ.

"ಪರಮ ಭದ್ರಾಸನ ಪ್ರಮುಖ ಮಾರ್ಗಗಳ
ಯೋಗೀಂದ್ರರಿವರಾದಿ ಯೋಗಿಯೆನಲು,
ಅನಘರಿವ್ವಟೂರಿ ಆರಾಧ್ಯಚಂದ್ರನ್ನೈ,
ಸೋಮನಾಥ ಸಮರು ಸೋಮ ವಿಭುವು.

ಮಹಾಕವಿ ಪೊತೆನರ ಗದ್ಯಪದ್ಯಗಳೆರಡರಲ್ಲೂ ಸೋಮನಾಥ ಮತ್ತು ಸೋಮಸೇಖರ ಎರಡೂ ಹೆಸರುಗಳ ಉಲ್ಲೇಖವಿದೆಯೆಂದು ಕಂಡು ಬಂದಿದೆ. ಕವಿ ವೇಮನರೂ ಸಹ ತಮ್ಮ ವಿದ್ಯಾಭ್ಯಾಸದ ಗುರು ಸೋಮಶೇಖರರನ್ನು ಸ್ತುತಿಸಿದ್ದಾರೆ.

ಭವದೂರನು, ಶರಭಾಂಕನು,
ಶಿವಶೀಲನು, ಸಹಸ್ರ ಕೋಟಿ ಸಿದ್ಧೇಶ್ವರನ್ನೆ
ಶಿವ ಭೃತ್ಯುನು, ವಟ ಮೂಲನು,
ಶಿವಮಯ ಚಿನ್ಮಯನು, ಸೋಮಶೇಖರ ಗುರುವ್ವೆ.

ಸೋಮಶೇಖರ ಗುರುಗಳ ಗುರುಪೀಠದಲ್ಲಿ ಛಾತ್ರನಾಗಿ ಇದ್ದುಕೊಂಡು ಲೌಕಿಕ ಪಾರಮಾರ್ಥಿಕ ವಿದ್ಯೆಯನ್ನು ಅಭ್ಯಾಸ ಮಾಡಿದ ಬಗೆಗೆ ತಿಳಿದು ಬರುತ್ತದೆ.

ಛಾತ್ರ ಧರ್ಮವರಿತು, ಚೊಕ್ಕ ಭಕ್ತಿಯಿಂದ,
ಗುರುವ ಸೇವೆ ಗೆಯ್ದು ಕುದುರಿದೊಡನೆ
ಎಲ್ಲ ಮರ್ಮಗಳನು ಎಸೆದು ಹೋಗುತಿರುವ.
ವಿಶ್ವದಾಭಿರಾಮ ಕೇಳು ವೇಮ.

ಕೆಡುಕು ಗುಣಗಳೆಲ್ಲ ಕೈ ಹಿಡಿದು ಶಿಕ್ಷಿಸಿ
ಪರಮ ಪದವಿಯನ್ನು ಪ್ರತ್ಯಕ್ಷಿಸುವ.
ಅಂಥ ಗುರುವ ಬೇಡಿ, ಅರಿತು ಬಾಳು ಜಾಣ
ವಿಶ್ವದಾಭಿರಾಮ ಕೇಳು ವೇಮ.

ಗುರುವಿನ ಸತ್ಸಂಗದಲ್ಲಿ ಕವಿ ವೇಮನರು ಧರ್ಮದ ತಿರುಳನ್ನು ಅರಗಿಸಿಕೊಂಡು ಮಹಾ ಜಾಣರಾದರು.

ಹಾಲುಗೂಡಿ ನೀರು ಹಾಲಾಗಿ ಬೆಳಗಿತು.
ಮಹಾ ಗುರುವಿನಿಂದ ಮಹಾ ಜಾಣ
ಸಾಧು ಸಜ್ಜನಾದಿ ಸಂಗವಿಂತಿಪ್ಪುದು.
ವಿಶ್ವದಾಭಿರಾಮ ಕೇಳು ವೇಮ





## ವಿರಕ್ತಿ :

ವೇಮನರು ರಾಜ ವಂಶೀಯರಾದರೂ ಅವರು ಪಟ್ಟಾಧಿಕಾರಕ್ಕೆ ಉತ್ತರಾಧಿಕಾರಿಯಾಗಿರಲಿಲ್ಲ. ಏಕೆಂದರೆ ಇವರು ಜನಿಸುವ ಪೂರ್ವದಲ್ಲಿಯೇ ಇವರ ತಂದೆ ಕುಮಾರಗಿರಿ ರೆಡ್ಡಿಯು ಕ್ರಿ.ಶ. ೧೪೦೦ ರಲ್ಲಿಯೇ ದಾಯಾದಿ ಕೊಮಟ ವೇಮಾ ರೆಡ್ಡಿಗೆ ಸೋತು ರಾಜ್ಯ ಪರಿತ್ಯಕ್ತರಾಗಿದ್ದರು. ದೊರೆ ಕುಮಾರಗಿರಿ ರೆಡ್ಡಿಯು ತುಂಬಾ ರಸಿಕ, ಕಲೋಪಾಸಕ. ಸಾಹಿತ್ಯ ಸಂಗೀತಗಳಲ್ಲಿ ತೀವ್ರ ಆಸಕ್ತಿ ಉಳ್ಳವನು. ಓರ್ವ ಉಪಪತ್ನಿಯನ್ನೂ ಹೊಂದಿದ್ದ . ಈ ಹಿನ್ನೆಲೆಯಲ್ಲಿ ಬೆಳೆಯುತ್ತಿದ್ದ ಕಿಶೋರ ವೇಮನರಲ್ಲಿ ಭೋಗಾಸಕ್ತಿ ಬೆಳೆದುದು ಸ್ವಾಭಾವಿಕವಾಗಿತ್ತು. ಅವರಿಗೆ ಸಂಗೀತದಲ್ಲಿ ವಿಶೇಷ ಆಸಕ್ತಿಯು ಬಾಲ್ಯದಿಂದಲೂ ಇತ್ತು.

ಊಟವುಂಡು ಮತ್ತೆ ವಿರಾಮದಿಂದಿರಲು,
ಮಾಟಗಾತಿ ಕಂಡು ಮನಸು ನೆಡದೆ ?
ಅನ್ನರಸವು ಆಯ್ತು ಅವನಿಗತಿ ಮುದಕರ.
ವಿಶ್ವದಾಭಿರಾಮ ಕೇಳು ವೇಮ.

ನಾರಿಯನ್ನು ಆರು ಪಾರು ನೋಡಿದಾಗ
ಯಾರೆ ಆದರೇನು ಅಂಟಿ ಭ್ರಾಂತಿ,
ಏರಿ ನಿಂತ ಕಾಮ ಮೀರಿ ಮೆಟ್ಟಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಇಂಥ ಮನಸ್ಥಿತಿಯ ವೇಮನ ಒಮ್ಮೆ ಜೊತೆಗಾರ ಅಭಿರಾಮಯ್ಯನೊಡನೆ ಓರ್ವ ದೇವದಾಸಿಯ ನೃತ್ಯ ಕಾರ್ಯಕ್ರಮಕ್ಕೆ ಹೋಗಿದ್ದರು. ಆ ನರ್ತಕಿ ವಿಶ್ವದಾಳ ನೃತ್ಯಕ್ಕೆ ಸಂಗೀತ ನೀಡಬೇಕಾದ ಕಲಾವಿದ ಬಂದಿರಲಿಲ್ಲವಂತೆ. ಆಗ ಶ್ರೋತೃಗಳೆಲ್ಲ ಉತ್ಸುಕರಾದರು. ಇದನ್ನು ಕಂಡು ಜೊತೆಗಾರ ಅಭಿರಾಮಯ್ಯನ ಪ್ರೇರಣೆಯಿಂದ ಯುವಕ ವೇಮನರೇ ಅಟ್ಟಹತ್ತಿದರು. ದಿವ್ಯ ಕಂಠಸಿರಿಯ ವೇಮನರು ಅಮೋಘ ರಾಗಾಲಾಪನೆಗಿಳಿದರು ನೃತ್ಯಗಾತಿ ವಿಶ್ವದಾ ತಾಳಕ್ಕೆ ತಕ್ಕಂತೆ ನರ್ತಿಸಿದಳು. ಈ ಸಂಗೀತ ಕಾರ್ಯಕ್ರಮ ಎಲ್ಲಿಯವರೆಗೆ ಹೋಯಿತೆಂದರೆ, ಪರಿಣಿತ ನೃತ್ಯತಾರೆ ಸೋತು ಶರಣಾದಳು. ಅವಳು ವೇಮನರ ಕಾಲಿಗೆರಗಿ ಅವರ ಶಿಷ್ಯಳೇ ಆದಳು. ಮುಂದೆ ಈ ಸರಸಾಟ ನಿತ್ಯ ದಿನಚರಿಯಾಯಿತು.

ತೊಡೆಯ ಮೆರುಗು ಕಂಡು ತೂಗುವ ಮೊಲೆ ಕಂಡು
ಕಡೆ ಸರಿದ ಮುಡಿಯನು ಕಂಡು ವನಿತೆ
ಬಿಡದೆ ವಿರಹಾಗ್ನಿಗೆ ಬೀಳದಿರುವನೆಂತು?
ವಿಶ್ವದಾಭಿರಾಮ ಕೇಳು ವೇಮ.

ತೊಡೆ ಕುಂಡಿಯ ಕಂಡು ತುಂಬಿದೆದೆಯ ಕಂಡು
ಶಬ್ದ ಬಳಸದಂಥ ಸ್ಥಳವ ಕಂಡು,
ಮೋಹ ಮುಕುರುತಿಹುದು ಮುನಿಯೆ ಆದರೂನು.
ವಿಶ್ವದಾಭಿರಾಮ ಕೇಳು ವೇಮ

ಕಡು ವಿಚಿತ್ರ ಅರಿಯೆ ಕಾಮ ಗೆಯ್ದ ಯಂತ್ರ
ಚೆಲುವ ನಾರಿ ಹಣೆಯ ಚುಕ್ಕಿ ಕಂಡು
ಗಾಡಿ ಮೋಡಿ ನೋಡಿ ಕಡು ಮೋಹ ಮೂಡದೆ ?
ವಿಶ್ವದಾಭಿರಾಮ ಕೇಳು ವೇಮ.

ಹೀಗೆ, ದೇವದಾಸಿಯೊಡನೆ ಸರಸಾಟ ನಲಿದಾಟಗಳು ಸಾಗಿದ್ದವು.. ಒಮ್ಮೆ ಆ ದೇವದಾಸಿಯ ತಾಯಿಯ ಅತ್ಯಾಸೆಯ ಪರಿಣಾಮವಾಗಿ ಆ ಗಣಿಕೆ ವಿಶ್ವದಾ ಯುವಕ ವೇಮನರಿಂದ ಮೊದಲೇ ಮಾತು ಪಡೆದು ಅವರ ಅತ್ತಿಗೆಯ ರತ್ನಖಚಿತ ಮೂಗುತಿಗೂ ಆಸೆ ಪಟ್ಟಳು. ಅದು ವರೆಗೆ ಕೊರಳ ಸರ. ಕಿವಿಯ ಬೆಂಡೋಲಿಗಳನ್ನು ಕೇಳಿ ಪಡೆದಿದ್ದಳು, ತೊಟ್ಟು ಆನಂದಿಸಿದ್ದಳು. ಆದರೆ ಈಗ ಮುತ್ತೈದೆತನದ. ಕುರುಹಾದ ಮೂಗುತಿಯನ್ನೇ ಆಸೆ ಪಟ್ಟಿದ್ದಳು ದೇವದಾಸಿ. ಯುವಕ ವೇಮನ ಇಕ್ಕಟ್ಟಿಗೊಳಗಾದ. ಪ್ರೇಯಸಿಗೆ ಇಷ್ಟ ಪೂರ್ತಿಗೊಳಿಸುವ ಬಗ್ಗೆ ವಚನ ಕೊಟ್ಟಾಗಿತ್ತು. ಅತ್ತ ಮಾತೃರೂಪಿ, ಮಹಾಸಾಧ್ವಿ ಅತ್ತಿಗೆಯನ್ನು ಎದುರಿಸುವ ದುರ್ಧರ ಸ್ಥಿತಿ ಬಂದಿತ್ತು. ಇತ್ತದರಿ, ಅತ್ತಹುಲಿ ಎಂಬಂತಾಯಿತು. ವೇಮನರ ಮನದಲ್ಲಿ ತುಮುಲ ಉಂಟಾಯಿತು. ಸಾಧ್ವಿ ಅತ್ತಿಗೆಯ ಸಚ್ಚೀಲದ ಪ್ರಭಾವದೆದುರು ವಿಷಯೂಸಕ್ತ ವೇಶ್ಯೆಯ ಕೋರಿಕೆಯ ಜೋರು ಕುಣಿಯಿತು. ದಿಙ್ಮೂಢರಾದ ವೇಮನರ ವಿವೇಕ ಬುದ್ಧಿ ತೂಗುಯ್ಯಾಲೆಯಾಡುತ್ತಿತ್ತು. ಈ ಸಂದಿಗ್ಧ ಸ್ಥಿತಿಯಲ್ಲಿ ಯುವಕ ವೇಮನ ಅತ್ತಿಗೆಯ ಬಳಿ ಸಾರಿದರೂ, ಮಾತು ಆಡಲಾರದೆ ಮೂಕನಾದ. ಆಹಾರ ತೊರೆದು ಉಪವಾಸ ಕುಳಿತ. ಅತ್ತಿಗೆಯು ಇದನ್ನು ಕಂಡು ಮಮ್ಮಲನೆ ಮರುಗಿದಳು. ಒತ್ತಾಯಿಸಿ ಕೇಳಿ ಮೈದುನನ ಮನದಿಂಗಿತವನ್ನು ತಿಳಿದಳು. ದೀರ್ಘವಾಗಿ ಆಲೋಚಿಸಿದಳು. ತನ್ನ ಪತಿಯನ್ನು ಮನದಲ್ಲಿ ಸ್ಮರಿಸಿ, ಸಾಧ್ವಿ ವ್ಯಕ್ತಿಯ ಪ್ರಭಾವ ಪರೀಕ್ಷಾರ್ಥವಾಗಿ, ಮೂಗುತಿ ಕೊಡಲು ಮುಂದಾದರೂ, ದೇವದಾಸಿ, ವೇಮನರಿಂದ ಅದನ್ನು ಪಡೆಯುವುದಕ್ಕೆ ಕೆಲ ಶರ್ತ್ಯಾತ್ತುಗಳನ್ನು ವಿಧಿಸಿದಳು. ಅದಕ್ಕೆ ವೇಮನ ಒಪ್ಪಿ ಮೂಗುತಿಯೊಡನೆ ದೇವದಾಸಿಯ ಬಳಿಗೆ ಬಂದನು. ರತ್ನಖಚಿತ ಮೂಗುತಿಯನ್ನು ತನ್ನ ಪ್ರಿಯಕರನು ನಿಜವಾಗಿಯೂ ತಂದಿರುವುದನ್ನು ನೋಡಿ ದೇವದಾಸಿಯು ಆನಂದತುಂದಿಲಳಾದಳು. ಅದನ್ನು ಪಡೆಯಲು ಆತುರಬಟ್ಟು ಕೈ ಚಾಚಿದಳು. ಆಗ ಪ್ರಿಯಕರ ವೇಮನ, ಅದನ್ನು ಪಡೆಯುವ ಮುನ್ನ ದೇವದಾಸಿ ಪಾಲಿಸಬೇಕಾದ ಶರ್ಯತ್ತನ್ನು ವಿವರಿಸಿದನು. "ನೀನು ನಗ್ನಳಾಗಿ ಏಳು ಹೆಜ್ಜೆ ನಡೆದು ಬಂದು, ಹಿಂದಕ್ಕೆಬಾಗಿ, ನಿನ್ನ ಕಾಲುಗಳ ಸಂದಿಯಲ್ಲಿ ತಲೆ ತೂರಿ ಬಾಯಿಯಂದ, ಬಳಿಯಲ್ಲಿಯೇ ನಿಂತಿರುವ ನನ್ನ ಕೈಯಲ್ಲಿರುವ, ರತ್ನಖಚಿತ ಮೂಗುತಿಯನ್ನು ಎತ್ತಿಕೊಳ್ಳಬೇಕು." ದೇವದಾಸಿ ಅದಕ್ಕೊಪ್ಪಿದಳು. ಅನುಭವಿ ನರ್ತಕಿಯಾಗಿದ್ದ ಅವಳು ಇಂಥ ಅಂಗವಿನ್ಯಾಸಕ್ಕೆ ರೂಢವಾಗಿದ್ದಳು. ಕೂಡಲೇ ಬಟ್ಟೆ ಬಿಚ್ಚಿದಳು. ಏಳು ಹೆಜ್ಜೆ ನಡೆದು ಬಂದಳು. ಹಿಂಬಾಗಿ ನಿಂತು. ಕಾಲುಗಳ ಮಧ್ಯೆ ತಲೆ ತೂರಿ, ಪ್ರಿಯಕರನ ಹಸ್ತದಲ್ಲಿದ್ದ ಮೂಗುತಿಯನ್ನು ಕಚ್ಚಿ ಎತ್ತಿಕೊಂಡಳು. ಈ ವಿಪರೀತ ಅಂಗವಿನ್ಯಾಸವನ್ನು ಎದುರಿಗೆ ನಿಂತು ಕಂಡ ವೇಮನ ಹೆಣ್ಣಿನ ದೇಹದ ಅಸಡ್ಡಾಳತನವನ್ನು ನೋಡಿ, ಭ್ರಮನಿರಸನಾದ. ತನ್ನ ಕಾಮಾಸಕ್ತಿಗೆ ತಾನೇ ಛೀಥೂ ಎಂದುಕೊಂಡ. ಅವಳ ನಗ್ನದೇಹ ಮುಚ್ಚಲು, ತನ್ನ ರೇಶ್ಮೆ ಶಲ್ಯವನ್ನು ಬೀಸಿ ಒಗೆದು, ಅಲ್ಲಿಂದ ಹೊರಟ. ಅಚ್ಚರಿಯೆಂಬಂತೆ ಅವನಲ್ಲಿ ವಿರಕ್ತಿಯ ಜ್ಯೋತಿ ಬೆಳಗಿತು.





ಅಂಗ ಭಾವವೆಲ್ಲ ಅರಿತು ನೋಡಿದಾಗ
ಅಖಿಲ ಹೇಯಗಳಿಗೆ ಆಲಯವದು.
ಅನ್ಯ ಲಲನೆ ಸಂಗ ಅದು ಪ್ರತ್ಯಕ್ಷ ನರಕ.
ವಿಶ್ವದಾಭಿರಾಮ ಕೇಳು ವೇಮ

ತನ್ನ ಶಕ್ತಿಯಿಂದ ದಾಸಿ ಕೈಗೆ ಸಿಕ್ಕು,
ಮಿಕ್ಕಿ ಹೊರಗೆ ಬರದೆ ಮಿಡುಕು ತಿರುವ,
ನರನಿಗೆಲ್ಲಿ ಮುಕ್ತಿ ದೊರೆಯುವುದು ಹೇಳಿರಿ?
ವಿಶ್ವದಾಭಿರಾಮ ಕೇಳು ವೇಮ

ಇಂದ್ರ ಪದವಿ ಕೋರಿ, ಇಂದ್ರ ಯಜ್ಞ ಗೆಯ್ದು,
ಕನಕದ ಬಲದಿಂದ ಕಾಮಿಯಾದ.
ಪರಮ ಯೋಗದಿಂದ ಪಟ್ಟ, ದೊರೆಯದೇನು?
ವಿಶ್ವದಾಭಿರಾಮ ಕೇಳು ವೇಮ

ಆಹಾ! ಅಂಗನೆಯರ ಆ ಬ್ರಹ್ಮ ಸೃಜಿಸಿದನು!
ಪುರುಷ ಪಾಲಿಗೆ ಹಿರಿ ಭೂತದಂತೆ!
ಅವಳ ಬಲೆಗೆ ಸಿಗದ ಅವನ ನೋಡಬಹುದೆ ?
ವಿಶ್ವದಾಭಿರಾಮ ಕೇಳು ವೇಮ

ಹೀಗೆ, ಯುವಕ ವೇಮನರು ವಿಷಯೂಸಕ್ತಿಯ ಹಿಡಿತದಿಂದ ಬಿಡುಗಡೆಯಾಗಿ ವಿರಕ್ತರಾದರು. ಮುಂದೆ ಸಾಗಿ, ಪ್ರಪಂಚದ ಸುಖಭೋಗ ತ್ಯಜಿಸಿ, ಯೋಗ ಜೀವನಕ್ಕಿಳಿದರು. ಈ ಮಾರ್ಗದಲ್ಲಿ ಆಗಲೇ ಕಾಲಿರಿಸಿದ್ದ ಆಭಿರಾಮಯ್ಯ, ಕವಿ ವೇಮನರ ಸಂಗಾತಿಯಾಗಿದ್ದ. ಅವನು ಅರಮನೆಯ ಸೇವೆಯಲ್ಲಿಯೇ ಇದ್ದುದು, ಇನ್ನೂ ಅನುಕೂಲವೇ ಆಯಿತು. ಪೂರ್ವ ಜನ್ಮ ಪುಣ್ಯವಶಾತ್ ವೇಮನರಿಗೆ ಲಂಬಿಕಾ ಯೋಗಿ ಎಂಬ ಮೋಕ್ಷಗುರುವಿನ ದರ್ಶನವಾಯಿತು ವೇಮನರ ವಿರಕ್ತ ಮನಸ್ಸು ಹದಗೊಂಡು ಕಾಯ್ದ ಕಬ್ಬಿಣವಾಗಿತ್ತು. ಸಕಾಲದಲ್ಲಿ ಪ್ರಾಪ್ತವಾದ ಗುರುಬೋಧೆಯ ಕೊಡಲಿಯ ಏಟಿನಿಂದ ರೂಪುಗೊಂಡ ಮನಸ್ಸು ಅಧ್ಯಾತ್ಮ ಸಾಧನೆಯ ಮಾರ್ಗಕ್ಕಿಳಿದು, ವಾರಕಾಂತೆಯನ್ನು ತೊರೆದು ಮುಕ್ತಿಕಾಂತೆಯನ್ನು ಅಪ್ಪಿಕೊಂಡಿತು.

## ದಿವ್ಯ ಹುಚ್ಚು :

ವೇಮನ ಯೋಗಿಗಳು ಪ್ರೇಯಸಿಯಿಂದ ದೂರವಾದರಷ್ಟೇ ಅಲ್ಲದೆ ಅಂತರ್ಮುಖಿಗಳಾದರು. ಯಾವಾಗಲೂ ಮನಸ್ಸಿನ ವಿವಿಧ ಪ್ರಕ್ರಿಯೆಗಳನ್ನು ಅರಿಯುವಲ್ಲಿ ತಲ್ಲೀನರಾದರು, ಮನಸ್ಸಿನ ಉಗಮ, ಮನಸ್ಸಿನ ಕ್ರಿಯಾಲಾಪ ಮತ್ತು ಮನಸ್ಸಿನ ಲಯಗಳನ್ನು ಅರಿಯುವಲ್ಲಿ ಸದಾ ನಿರತರಾದರು. ಯಾವಾಗಲೂ ನಿರ್ಜನ ಪ್ರದೇಶಗಳಲ್ಲಿ ನೆಲೆಸಿ ಗಗನವನ್ನೂ ಪಕ್ಷಿಕುಲವನ್ನೂ ಪ್ರಾಣಿಕುಲವನ್ನೂ ಕುರಿತು ಚಿಂತಿಸಿದರು. ಮಾನವ ಪ್ರಪಂಚದ ವೈಪರೀತ್ಯಗಳನ್ನು ಅರಿತುಕೊಂಡರು. ಆಗೀಗ ಸಾಧನದಲ್ಲಿ ತೊಡಗಿದಾಗ ಮನಸ್ಸು ನಿಂತ ಅನುಭವವಾಗುತ್ತಿತ್ತು . ಆಗ ಅಮಿತಾನಂದದ ಅನುಭವವಾಗುತ್ತಿತ್ತು .

ಮನಸು ಚಲಿಸಬಿಟ್ಟು, ಮನವ ತಾ ತಿರುಗಿಸಿ,
ಮನಸಿನೊಳಗೆ ಇರುವ ಮರ್ಮವರಿತು,
ಮನವ ತಾನು ನಿಲಿಸೆ ತಾನೆ ಹೋಗು ಬ್ರಹ್ಮ
ವಿಶ್ವದಾಭಿರಾಮ ಕೇಳು ವೇಮ

ಎಂಬ ನಿರ್ಣಯವನ್ನು ತಲುಪಿದರು.

ಮನಸು ಗೆದ್ದುಕೊಂಡು ಮಾನ್ಯ ಸುಜ್ಞಾನಿಗಳು
ಕಡೆಗೆ ಮೋಕ್ಷಪದವ ಕಾಣತಿಹರು
ಸಸಿಯ ನೆಟ್ಟು ಫಲವ ಸಂಪಾದಿಸರೇನು ?
ವಿಶ್ವದಾಭಿರಾಮ ಕೇಳು ವೇಮ.

ಮನವನೊಂದು ತಾಣ ಮಾಣದೆ ನಿಲಿಸುತ,
ಬೋಧವುಡುಗುತಿರಲು ಹೊಂದಿಕೊಂಡು,
ನಿಶ್ಚಲತೆಯ ಚೊಕ್ಕ ನಿಲಿಸುವುದೆ ಸಮಾಧಿ.
ವಿಶ್ವದಾಭಿರಾಮ ಕೇಳು ವೇಮ

ಮನಸಿನಲ್ಲಿ ಮುಕ್ತಿ; ಮತ್ತೆ ಬೇರೆ ಕಡೆಗೆ
ಹುಡುಕ ಹೋಗುವವನು ಹುಚ್ಚನಷ್ಟೆ,
ಕುರಿಯ ಬಗಲೊಳಿಟ್ಟು ಕುರುಬ ಹುಡುಕಿದಂತೆ.
ವಿಶ್ವದಾಭಿರಾಮ ಕೇಳು ವೇಮ

ಹೀಗೆ ಸಾಧಕ ವೇಮನರು ಮುಕ್ತಿಕಾಂತೆಯ ತೀವ್ರಾಸಕ್ತಿಯಿಂದ ಊರ ಮುಂದಿನ ಕಟ್ಟೆ, ಬೆಟ್ಟಗುಡ್ಡಗಳ ಏಕಾಂತ ಸ್ಥಳ, ಇತ್ಯಾದಿ ಕಡೆ ಧ್ಯಾನಾಸಕ್ತರಾಗಿ ಕುಳಿತು ಬಿಡುತ್ತಿದ್ದರು . ಊಟ ನಿದ್ರೆಗಳ ಪರಿವೆ ಇರುತ್ತಿರಲಿಲ್ಲ ಅವರ ನಡೆ ನುಡಿಗಳು ವಿಪರೀತವಾದವು. ಲೌಕಿಕರ ದೃಷ್ಟಿಯಲ್ಲಿ ಅವರು ಹುಚ್ಚರೇ ಆದರು.

ಮಹಾಯೋಗಿ ವೇಮನರು, ಭುವಿಯಲ್ಲಿ ಅವತರಿಸಿದ ಮಹಾಪುರುಷರು. ಗುರುಕೃಪೆ ಸಂಪಾದಿಸಿ, ಯೋಗಸಿದ್ಧಿ ಪಡೆದು ಜೀವನ್ಮುಕ್ತರಾದ ವಿರಳ ಮಹಾತ್ಮರು. ಅವರ ಕಾಲದ ಸಂಪ್ರದಾಯಸ್ಥ ಪುಸ್ತಕ ಪಂಡಿತರು ಅವರನ್ನು 'ಹುಚ್ಚ' ಎಂದು ಕರೆದದ್ದುಂಟು. ಚೀನಾ ದೇಶದಲ್ಲಿ ಒಂದು ಗಾದೆ ಇದೆಯಂತೆ, ಜನರು ಯಾರನ್ನು ಹುಚ್ಚನೆಂದು ಹೇಳುವರೋ ಅಂಥ ಹುಚ್ಚುತನವೇ ಸಾಕ್ಷಾತ್ಕಾರವಾದುದರ ಲಕ್ಷಣವಂತೆ.

ಉರ್ವಿ ಜನರು ಪರಮ ಯೋಗೀಶ್ವರನ ಕಂಡು,
ಜರಿಯುತಿಹರು ಹೊರತು ಅರಿಯುತಿಲ್ಲ.
ಅಮೃತತಿರುವ ರುಚಿಯ ಅರಿಯಬಹುದೆ ಹಸ್ತ ?
ವಿಶ್ವದಾಭಿರಾಮ ಕೇಳು ವೇಮ.





COLLEGE OF BUSINESS ADMINISTRATION LIBRARY HUBLI.

ಕಡು ಜ್ಞಾನವಂತನ ಕರ್ಮ ಸಂಬದ್ಧರು
ಹುಚ್ಚನೆನ್ನುತಿಹರು ಪ್ರಕೃತಿ, ಬಿಡದೆ,
ಹುಚ್ಚಿರದೆ, ಪ್ರಕೃತಿ ಹುಡುಕಲು ಸಿಗುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಯೋಗ ಸಾಧನದಲ್ಲಿ ಮನವು ತೀವ್ರ ಪರಿವರ್ತನೆ ಹೊಂದುತ್ತ ಸಾಗಿರುತ್ತದೆ. ಜೀವ ಭಾವವು ಶಿವ ಭಾವ ತಳೆಯುವಾಗ ಸಾಧಕನು ಪಿಶಾಚವತ್, ಉನ್ಮತ್‌ವತ್ ಹಾಗೂ ಕೊನೆಗೆ ಬಾಲವತ್ ಅವಸ್ಥೆ ಹೊಂದುತ್ತಾನೆ. ಮನವು ವಿಸ್ತರಿಸುತ್ತ ಅಲ್ಪತ್ವದಿಂದ ಭೂಮತ್ವ ಹೊಂದುವಾಗ ಜೀವಿಯ ಆ ಮುಂಚಿನ ವ್ಯವಹಾರಗಳು ಉಡುಗುತ್ತವೆ. ನಿಯಮ ನಿಷ್ಠೆಗಳು ಹಿಂಗುತ್ತವೆ. ಕಲ್ಪನೆಗಳು ಬದಲಾಗುತ್ತವೆ. ಯಾವುದು ಮೊದಲು 'ಹೌದು' ಎನ್ನಿಸಿತ್ತೋ, ಅದು 'ಅಲ್ಲ' ವೆನಿಸುತ್ತದೆ. ಈ ಅವಸ್ಥೆಯಿಂದ ಮುಂದೆ ಕಾರ್ಯದ ಹಿಂದೆ ಹೇತುವೇ ಇರದು. ಆಗ ಕಾರ್ಯಗಳೆಲ್ಲ ಮುಕ್ತ ಮನದ ಕ್ರೀಡೆಗಳಾಗುತ್ತವೆ. ಲೋಕದ ದೃಷ್ಟಿಯಲ್ಲಿ ಪ್ರಯೋಜನ ದೃಷ್ಟಿ ಹೊಂದಿರದ ಕ್ರೀಡೆಯಂತಿರುವ ಇಂಥ ನಡೆನುಡಿ ಹೊಂದಿದ ಮುಕ್ತಾತ್ಮರನ್ನು ಜನರು 'ಹುಚ್ಚರು' ಎನ್ನುತ್ತಾರೆ. ಕನ್ನಡಿಗರು ಇಂಥವರನ್ನು 'ಹುಚ್ಚಪ್ಪಜ್ಜ' ಎಂದೇ ಕರೆದಿರುತ್ತಾರೆ. ತೆಲುಗರು ಅವರನ್ನು 'ವೆರ್ರಿ ತಾತ' ಇಲ್ಲವೆ ಯರ್ರಿ ತಾತಾ ಎಂದಿದ್ದಾರೆ. ಮಹಾಯೋಗಿ ವೇಮನರ ಇಂಥ ಉನ್ಮತ್ತವತ್ ಅವಸ್ಥೆಯಲ್ಲಿ ಜನರು ಅವರ ವಿಪರೀತ ಕ್ರೀಡೆಗಳನ್ನು ಕಂಡು' ಹುಚ್ಚು ವೇಮನ 'ಎಂದು ಕರೆದಿದ್ದರಲ್ಲಿ ಏನು ಅಚ್ಚರಿಯಿದೆ!

ನಾಚುಗೆ ಇರುವವರು, ನಾಡಿನೊಳಿರುವವರು,
ಹುಚ್ಚು ವೇಮನೆಂದು ಹೆದರುತಿಹರು.
ತನಗಿಷ್ಟ ನಾಚುಗೆ ದೃವಕ್ಕೆ ತಿಳಿವುದು.
ವಿಶ್ವದಾಭಿರಾಮ ಕೇಳು ವೇಮ

ರಾಮಕೃಷ್ಣ ಪರಮಹಂಸರಿಗೆ ಸತ್ಯಸಾಕ್ಷಾತ್ಕಾರದ ಇಂಥ ಹುಚ್ಚು ಹಿಡಿದಾಗ, ಯೋಗ್ಯ ಸಾಧಕನ ಶೋಧದಲ್ಲಿದ್ದ ತಂತ್ರ ಸಾಧನೆಯ ಬೋಧಕಳಾದ ವೈಷ್ಣವೀ ಬ್ರಾಹ್ಮಣಿಯು ಬಂದಳು. ಶ್ರೀ ರಾಮಕೃಷ್ಣರ ಮೊದಲ ಗುರುವೇ ಈ ಮಾಹಾತಾಂತ್ರಿಕ ಮಹಿಳೆ. ರಾಮಕೃಷ್ಣರನ್ನು ಸಾಂತ್ವನಗೊಳಿಸುತ್ತ ಆವಳು ಹೀಗೆ ನುಡಿದಳು:

"ಮಗು, ಯಾರ ಮೇಲೆ ಇಂಥ 'ಹುಚ್ಚು' ಬರುವುದೋ ಆತನೇ ಪುಣ್ಯಾತ್ಮ. ಹಾಗೆ ನೋಡಿದರೆ ಪ್ರಪಂಚದ ಜನರೇ ನಿಜವಾಗಿ ಹುಚ್ಚರು. ಕೆಲವರು ದ್ರವ್ಯಕ್ಕಾಗಿ, ಕೆಲವರು ಸುಖಕ್ಕಾಗಿ ಕೆಲವರು ಕೀರ್ತಿಗಾಗಿ ಮತ್ತೆ ಕೆಲವರು ನೂರಾರು ಪ್ರಾಪಂಚಿಕ ವಸ್ತುಗಳಿಗಾಗಿ. ಕೆಲವರು ಹೊನ್ನಿಗಾಗಿ ಹುಚ್ಚರು, ಗಂಡಿಗಾಗಿ ಹುಚ್ಚರು ಹೆಣ್ಣಿಗಾಗಿ ಹುಚ್ಚರು. ನಿಷ್ಪಯೋಜಕ ವಸ್ತುಗಳಿಗಾಗಿ ಹುಚ್ಚರು. ಇನ್ನೂ ಅದೆಷ್ಟೋ ಭ್ರಾಂತಿಗಳಿಗಾಗಿ. ಹುಚ್ಚರು. ದೇವರಿಗಾಗಿ ಮಾತ್ರ ಅಲ್ಲ. ದೇವರ ಹುಚ್ಚು ಹಿಡಿದಾಗ ಮಾತ್ರ ಅವರ ಹುಚ್ಚು ಅವರಿಗೆ ಗೊತ್ತಾಗುವದು. ಒಬ್ಬನು ಹೊನ್ನಿಗೋಸುಗ ಹುಚ್ಚನಾದರೆ, ಜನರು ಅವನ ಬಗೆಗೆ ಸಹಾನುಭೂತಿ ತೋರುವರು. ಮರುಗುವರು. ಅವನೇ ಸರಿ ಎನ್ನುವರು. ಏಕೆಂದರೆ ಹುಚ್ಚರು, ತಾವೇ ಸರಿ ಎಂದು ಭಾವಿಸುವರು. ದೇವರ ಮೇಲಿನ

ಅತಿ ಪ್ರೇಮದಿಂದ ಹುಚ್ಚನಾದರೆ, ವಿಷಯವಸ್ತುಗಳಿಗಾಗಿ ಹುಚ್ಚರಾದ ಲೋಗರಿಗೆ ಅದು ತಿಳಿಯುವುದೆಂತು? ಅವನು ಹುಚ್ಚನಾಗಿರುವನು. ಅವನೊಂದಿಗೆ ನಮ್ಮ ವ್ಯವಹಾರವೇನೂ ಇಲ್ಲ ಎನ್ನುವರು. ಆದ ಕಾರಣವೇ ಮಗು! ಜನರು ನಿನ್ನನ್ನು ಹುಚ್ಚ ಎನ್ನುವರು. ನಿನ್ನ ಹುಚ್ಚು ನ್ಯಾಯವಾದುದು. ದೇವರಿಗಾಗಿ ಹುಚ್ಚನಾದವನೇ ಧನ್ಯ . ಅಂಥವನು ಈ ಪ್ರಪಂಚದಲ್ಲಿ ವಿರಳ."

ಅವಳನ್ನೇ ರಾಮಕೃಷ್ಣರು , ಜ್ಞಾನ ಘನಳು, ಸಾಕಾರ ಜ್ಞಾನ ಸ್ವರೂಪಳು ಎಂದು ಭಾವಿಸುತ್ತಾರೆ. ಭಕ್ತಿತೋರುತ್ತಾರೆ.

ಈ ಲೋಕದ ಹುಚ್ಚರನ್ನು ವೇಮನ ಯೋಗಿ ಔದಾರ್ಯದಿಂದ ಕ್ಷಮಿಸುತ್ತಾರೆ.

ತನ್ನ ಹೊಡೆದು ಬಡಿದು, ತಲೆ ಮರೆಸಿ ನಿಲ್ಲಲು,
ದೂಷಣೆ ಗೆಯ್ಯುವುದು ದೊಡ್ಡ ಪಾಪ.
ಅಖಿಲರನು ದಂಡಿಸೆ, ಅಖಿಲೇಶನಿರನೇ ?
ವಿಶ್ವದಾಭಿರಾಮ ಕೇಳು ವೇಮ

ಬಯ್ದು ಹೊಡೆದರೆಂದು ಬಳಿಕ ಮಾತು ತೊರೆದು,
ಬಾಯಿ ಮುಚ್ಚಿ ಇರಲು ಭೂಮಿ ಮೇಲೆ
ಪರಮಾತ್ಮನಾಗುವ; ಬಣ್ಣಿಸಲು ಶಕ್ಯವೇ ?
ವಿಶ್ವಾದಾಭಿರಾಮ ಕೇಳು ವೇಮ.

ಚಿಂದಿ ಬಟ್ಟೆಯಲ್ಲ , ಚೀನ್ನಾಂಬರವೆ ಹೊರತು
ಮಲಿನ ದೇಹವಲ್ಲ, ಮುಕ್ತಿ ಹೊರತು,
ಪರಮ ಯೋಗಿ ಮಹಿಮೆ ಪರಿಕಿಸುವರೆ ಜನರು?
ವಿಶ್ವದಾಭಿರಾಮ ಕೇಳು ವೇಮ.

## ಗುರು :-

ವೇಮನರು ಆಧ್ಯಾತ್ಮಿಕ ಸಾಧನೆಯಲ್ಲಿ ನಿರತರಾದರು. ಅವರಿಗೆ ಬಾಹ್ಯ ಪ್ರಪಂಚದಲ್ಲಿ ಆಸಕ್ತಿಯೇ ಉಳಿಯಲಿಲ್ಲ. ಎಷ್ಟೋ ಸಲ ದೈಹಿಕ ಬೋಧವೂ ಉಡುಗುತ್ತಿತ್ತು. ಅವರು ಉನ್ಮನೀ ಅವಸ್ಥೆಯಲ್ಲಿಯೇ ಸದಾಕಾಲ ಇರುತ್ತಿದ್ದರು. ಅವರಿಗೆ ದಿವ್ಯ ಅನುಭವಗಳು ಆಗ ತೊಡಗಿದ್ದವು. ಅವರಿಗೆ ' ಸರ್ವಂ ಶಿವ ಮಯಮ್ ಜಗತ್' ಆಗಿ ಗೋಚರಿಸಿತು. ಇಂಥ ಉನ್ಮತ್ತ ಅವಸ್ಥೆಯಲ್ಲಿ ಶಿವನ ಶೋಧದಲ್ಲಿ ನಿರತರಾದ ವೇಮನರನ್ನು ಜನರು 'ಹುಚ್ಚ' ನೆಂದು ಘೂತ್ಕರಿಸಿದುದೂ ಉಂಟು. ನೀರಿನ ಮೇಲೆ ಇದ್ದರೂ ನೀರು ಅಂಟದಂತೆ ಇರುವ ಕಮಲದ ಎಲೆಯಂತೆ, ಪ್ರಪಂಚಕ್ಕೆ ಅಂಟದಂತೆ ಸಾಧಕ ವೇಮನರ ಜೀವನ ಸಾಗಿತ್ತು.

ತಾವರೆ ಎಲೆಯಡಿ ನೀರಿರೆ,
ವೇಮನ ಚರಿಸುತಲುಂಟು ಹುಡುಕುತ ಶಿವನಾ.
ಈ ಮಾಯೆ ನಂಬಕೂಡದು.
ಈ ಮಹಿಮೆ ತಿಳಿಯಲಾರ, ದೇವನು, ವೇಮಾ





ಕರೆದೊಡೆ ಮಾತನಾಡದೆ ಮರಳಿ ಕರೆಯೆ, ಮೌನವಿರುವಾ.
ಅರಿತೊಡೆ, ಯಾರೆ ಆಡಲೇನನು ಅಲ್ಲವೆಂದು ನಗುತಿದ್ದನ್.
ಪರ ತತ್ತ್ವನಾತ್ಮದೊಳು ವಿಚಾರಿಸಿ ನಿತ್ಯವು ತಾನೆ ಇಪ್ಪ ಸದಾ.
ಅರಿತಿಹ ಯೋಗಿ ವೇಮನ ಗತಿಯು ಶಿವರೂಪನೆ ಸರ್ವ ತಾಣದೊಳ್.

ಕಂಡು ಜ್ಞಾನವಂತನ ಕರ್ಮ ಸಂಬದ್ಧರು,
ಹುಚ್ಚನೆನ್ನುತಿಹರು ಪ್ರಕೃತಿ ಬಿಡದೆ.
ಹುಚ್ಚರದೆ ಪ್ರಕೃತಿ ಹುಡುಕಲು ಸಿಗುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಇಂಥ ಸ್ಥಿತಿಯಲ್ಲಿರುವ ವೇಮನರಿಗೆ ಏನಾದರೂ ತಿಳಿಸಿ ಹೇಳಿ ಶಾಸ್ತ್ರಪಾಠ ಮಾಡಿಸ ಬೇಕೆನ್ನುವ ಶುಷ್ಕ ಪಂಡಿತರಿಗೇನು ಕೊರತೆ ಇರಲಿಲ್ಲ.

ಜೊಳ್ಳು ಮಾತನಾಡಿ ಜಗದಿ ತಿರುಗುವವನು
ಕಳ್ಳ ಗುರು, ಕಟ್ಟುವನು ಕರ್ಮಗಳನೆಲ್ಲ.
ಹಲ್ಲೊಳು ಹುಳು ಸೇರಿ ಹೆಚ್ಚಿಸದೆ ನೋವನು?
ವಿಶ್ವದಾಭಿರಾಮ ಕೇಳು ವೇಮ

ಮಿಥ್ಯೆ ವಿದ್ಯೆಯಿಂದ ಮೋಕ್ಷ ದೊರಕಬಹುದೆ ?
ಕೂಡದ ಕರ್ಮಗಳ ಮಾಡಬಹುದೆ ?
ಗುರುವು ಅಲ್ಲ ಅವನು ಗುಣಹೀನನು ನೋಡು.
ವಿಶ್ವದಾಭಿರಾಮ ಕೇಳು ವೇಮ

ಕಾಗುಣಿತ ಬೋಧಿಪನು ಗುರುವು ಅಲ್ಲವಲ್ಲ,
ಶಾಸ್ತ್ರ ಪಾಠ ಓದಿಸುವನು ಅಲ್ಲ.
ಮುಕ್ತಿ ಮಾರ್ಗತೋರೆ ಮೂಲ ಗುರುವಾಗುವ.
ವಿಶ್ವದಾಭಿರಾಮ ಕೇಳು ವೇಮ.

ಇಂಥ ಉನ್ನತ ಸಾಧನ ಸ್ಥಿತಿಯಲ್ಲಿರುವ, ಶಿವನ್ನು ಸಾಕ್ಷಾತ್ಕರಿಸಿಕೊಳ್ಳುವ, ದಿವ್ಯ ಹುಚ್ಚು ಹಿಡಿದು ವೇಮನರಿಗೆ ಕೊನೆಗೊಮ್ಮೆ ಮೋಕ್ಷಗುರುವಿನ ದರ್ಶನವಾಯಿತು. ಅದು ಹೀಗೆ:

ಕೊಂಡವೀಡು ಪ್ರದೇಶದ ಬೆಟ್ಟ ಗವಿಯೊಂದರಲ್ಲಿ ಮಹಾ ಪುರುಷನೊಬ್ಬ ಬಂದು ವಾಸವಾಗಿದ್ದ. ವೇಮನ ಜೊತೆಗಾರನೂ, ಅಭಿಮಾನಿಯೂ ಆದ, ಅಭಿರಾಮಯ್ಯನವರು ಆ ಮಹಾಪುರುಷನ ಸಂಪರ್ಕ ಹೊಂದಿದ್ದರು. ಅವರಿಗೆ ಕಾಲ ಕಾಲಕ್ಕೆ ಭೆಟ್ಟಿಯಾಗಿ ಫಲ-ಪುಷ್ಪಗಳನ್ನು ಅರ್ಪಿಸುತ್ತಿದ್ದರು . ಊಟ ಉಪಹಾರವನ್ನು ಒದಗಿಸುತ್ತಿದ್ದರು. ಆ ಮಹಾ ಪುರುಷರು ಮಹಾ ಸಿದ್ಧಿ ಸಂಪನ್ನರು. ಅಂಥ ಇಂಥ ಜನರಿಂದ ದೂರವೇ ಇರುತ್ತಿದ್ದರು . ಅಭಿರಾಮಯ್ಯನವರಂಥ ಸಾಧಕರ ಜೊತೆಗೆ ಮಾತ್ರ ಸಂಪರ್ಕ ಹೊಂದುತ್ತಿದ್ದರು, ಅವರು ಇಲ್ಲಿಗೆ ಬಂದು ಹಲವು

ತಿಂಗಳುಗಳೇ ಆಗಿದ್ದರೂ ಅವರ ಹೆಸರು, ಊರು. ಕೇರಿ ಕುರಿತು ಯಾರಿಗೂ ತಿಳಿದಿರಲಿಲ್ಲ. ಅವರು ದಿನದ ಬಹುಕಾಲ ಧ್ಯಾನಾಸಕ್ತರಾಗಿ ಇರುತ್ತಿದ್ದರು. ರೂಪವೇನೂ ಇರದ, ನಿರಾಕಾರ, ನಿರ್ಗುಣ ಶಿವನನ್ನು ಧ್ಯಾನಿಸಲು ಶಿಷ್ಯರಿಗೆ ಹೇಳುತ್ತಿದ್ದರು. ಅವರು ಅಷ್ಟ ಸಿದ್ಧಿ ಸಂಪನ್ನರಾಗಿದ್ದರೂ ಮಹಿಮೆ ತೋರುತ್ತ ಜನರನ್ನು ಮರುಳು ಮಾಡುವ ಮಾಯಾವಿ- ಯಾಗಿರಲ್ಲ ಅವರು ಯಾರಿಗಾಗಿಯೋ ನಿರೀಕ್ಷಿಸುವಂತೆ ತೋರುತ್ತಿತ್ತು. ಈ ಮಹಾಪುರುಷನು ಬಹು ಕಠಿಣವಾದ ಲಂಬಿಕಾಯೋಗದಲ್ಲೂ ಪರಿಣತರಾಗಿದ್ದರು. ಅದರಿಂದಾಗಿ ಅವರಿಗೆ ಲಂಬಿಕಾ ಯೋಗಿ ಎಂಬ ನಾಮವೇ ರೂಢವಾಗಿತ್ತು. ಸಾಮಾನ್ಯ ಜನರು ಬಾಬಾ ಎಂದೂ ಅಜ್ಜ ಎಂದು ಸಂಬೋಧಿಸುತ್ತಿದ್ದರು. ಸಾಧನದ ತೀವ್ರತೆಯಿಂದ ಉನ್ಮತ್ತ ಅವಸ್ಥೆಗೇರಿದ್ದ ವೇಮನರನ್ನು ಅವರಿವರಲ್ಲಿ ಕರೆಯೊಯ್ದು ದೀಕ್ಷೆ ಕೊಡಿಸಬೇಕೆಂದು ಅವರ ಜೊತೆಗಾರ ಅಭಿರಾಮಯ್ಯ ಹಂಬಲಿಸುತ್ತಿದ್ದನಾದರೂ ವೇಮನರ, ದಿವ್ಯ ದೃಷ್ಟಿಗೆ ಆ ಯಾರೂ ಒಪ್ಪಿಗೆಯಾಗಿರಲಿಲ್ಲ. ಅವರಲ್ಲಿ ವೇಮನರು ಒಂದಿಲ್ಲೊಂದು ಕುಂದು ತೋರಿಸುತ್ತಿದ್ದರು. ಕೊನೆಗೆ, ಲಂಬಿಕಾ ಯೋಗಿಗಳ ಪ್ರಸ್ತಾಪ ಬಂದಾಗ ವೇಮನರೂ ಕೂಡಲೇ ಒಪ್ಪಿದರು.

ಕುರಿ ಹತ್ತು ಸಾವಿರ ಕೂಡಿರುವ ಸ್ಥಳದಿ
ಅದರ ಮರಿ ತಾಯಿಯ ಅರಸುತಿಹುದು.
ಪರಮ ಯೋಗಿಯರಿತು ಭಕ್ತ ತಾನೆ ಬರುವ.
ವಿಶ್ವದಾಭಿರಾಮ ಕೇಳು ವೇಮ

ಲಂಬಿಕಾ ಯೋಗಿಗಳೆಡೆಗೆ ವೇಮನರು ಬಂದರು. ಅವರು ಗವಿಯಲ್ಲಿ ಧ್ಯಾನಾಸಕ್ತರಾಗಿದ್ದರು. ವೇಮನ ಅವರೆದುರು ಮಂಡೆಯೂರಿ ನಮಸ್ಕರಿಸಿ ಕುಳಿತರು. ಹೀಗೆಯೇ ಕೆಲ ಸಮಯ ಉರುಳಿತು. ಎಲ್ಲವೂ ಶಾಂತವಾಗಿತ್ತು. ಮನದ ವಿಚಾರಗಳು ತಂತಾನೇ ಮಾಯವಾದವು . ಯೋಗಿ ಕಣ್ದೆರೆದರು.

"ಯಾರು ಮಗು ನೀನು ?" ಕೇಳಿದರು ಯೋಗಿ.

" ವೇಮನ" ಎಂದು ಉತ್ತರಿಸಿದರು ಯುವಕ.

" ಏನು ಬಂದೆ ?" ಕೇಳಿದರು ಯೋಗಿ.

" ತಮ್ಮ ಕೃಪಾಶೀರ್ವಾದ ಕೋರಿ ಬಂದಿರುವೆ " ಎಂದನು ಯುವಕ.

"............................" ಮೌನ ಗಾಢವಾಯಿತು. ಶಾಂತಿ ಘನೀಭೂತವಾಯಿತು. ಲಂಬಿಕಾ ಯೋಗಿಯು ವೇಮನರನ್ನು ಆರುಪಾರು ನೋಡಿದರು. ಅವರು ದೀಕ್ಷೆಗೆ ತಕ್ಕವರಾಗಿರುವರೆಂದು ಕಂಡುಕೊಂಡರು. ತಮ್ಮ ಮಂತ್ರ ದಂಡದಿಂದ ಅವರ ಭೃಕುಟಿಯನ್ನು ಸ್ಪರ್ಶಿಸಿದರು. ತಮ್ಮ ತೀಕ್ಷ್ಣ ದೃಷ್ಟಿಯಿಂದ ನಿರುಕಿಸಿದರು.

"ವೇಮನಾ ! ನೀನು ಉತ್ತಮ ಅಧಿಕಾರಿಯೇ ಆಗಿರುವೆ. ಈಗ ದೀಕ್ಷೆ ಪಡೆಯಲು ಸಿದ್ಧನಿರುವೆಯಾ? " ಎಂದರು.

" ಅಹುದು ತಂದೆ " ಎಂದನು ಯುವಕ.





"ಮಗೂ! ನಿನ್ನ ಮನವು ಪಕ್ವವಾಗಿದೆ. ನೀನಾವ ಭಾವ-ಜಡತೆಗಳಿಗೆ ಒಳಪಡುವ ಅಗತ್ಯವಿಲ್ಲ. ದೇಹವಾವುದು? ಆತ್ಮವಾವುದು ? ಎಂದು ವಿವೇಚಿಸಿ ತಿಳಿ. ಜ್ಞಾನವೇ ಗುರು. ಇಂಥ ಆತ್ಮಜ್ಞಾನವನ್ನು ಅರಿಯಲು ಅಹಂದಿಂದ ಕೂಡಿದ ಬುದ್ಧಿ ಅಡ್ಡವಾಗಿದೆ. ಧ್ಯಾನ ನಿಷ್ಠೆಯಿಂದ, ಅಗ್ರ್ಯ ಬುದ್ಧಿಯಿಂದ ಆತ್ಮನನ್ನು ಕಾಣು. ಜಡಶಿಲೆಯ ಪೂಜೆಯಲ್ಲಿ ಕಾಲ ಕಳೆಯ ಬೇಡ ಇನ್ನು. ತೀರ್ಥಯಾತ್ರೆಗಳಿಂದ ಏನು ಫಲ? ನೀನು ತೀರ್ಥರನ್ನು ಸಂಧಿಸಿರುವೆಯಷ್ಟೇ. ಗುರುವು ನಿನ್ನೊಳಗೇ ಇದ್ದಾನೆ. ನಿನ್ನ ಅರಿವೇ ನಿನ್ನ ಗುರು. ಆ ಗುರುವು ಬೇರೆಯಲ್ಲ ಪರಮಾತ್ಮನು ಬೇರೆಯಲ್ಲ : ಅಣುರೇಣು ತೃಣಕಾಷ್ಟದಲ್ಲೂ ಪರಮಾತ್ಮನಿದ್ದಾನೆ'' ಎಂದು ಸಾರ ರೂಪದಲ್ಲಿ ಉಪದೇಶ ನೀಡಿ ವೇಮನರ ಶಿರದ ಮೇಲೆ ಹಸ್ತವಿರಿಸಿ , ಅವರ ಕಿವಿಯಲ್ಲಿ ಪಂಚಾಕ್ಷರೀ ಮಂತ್ರೋಪದೇಶ ಮಾಡಿದರು.

ವೇಮನರಲ್ಲಿ ವಿದ್ಯುತ್ಸಂಚಾರವಾದಂತಾಯಿತು. ಅವರ ಎಲ್ಲ ಸಂಶಯಗಳೂ ನಿವಾರಣೆಯಾದವು.

ಅರಿವಿಗೆಟುಕದ ಪದ ಆ ಬ್ರಹ್ಮವೆಂದರು.
ಹೊಂದಲಾರರೆಂದು ಅಂದರಿಹದಿ.
ಗುರು ಕರುಣೆ ಹೊಂದಲು ಕೂಡಿ ಬಾರದೇನು ?
ವಿಶ್ವದಾಭಿರಾಮ ಕೇಳು ವೇಮ

ದೇಹವಾತ್ಮ ರೂಪ ತಿಳಿಸಿ ಬಿಚ್ಚಿಹೇಳಿ,
ಅವನಿ ನೋಟ ತೋರ್ಪ ಅವನೆ ಗುರುವು.
ಭ್ರಮರ ತನ್ನ ರೂಪ ಕೀಟಕಿತ್ತ ರೀತಿ.
ವಿಶ್ವದಾಭಿರಾಮ ಕೇಳು ವೇಮ

ಪರಮಾತ್ಮನ ವಿವರಿಸಲ್ಕೆ
ವಿರಳವು. ಅಣುರೇಣುವಿನಲಿ ಅತಿ ಸೂಕ್ಷ್ಮಗತಿಂ.
ಪರಿಕಿಸುವನೆಲ್ಲ ರೂಪವ
ಗುರುವೆ ತಾ ಬೆಳಗುತಿರುವ, ಗುರುತನು, ವೇಮಾ

ತೃಪ್ತಿ ತುಂಬಿ ಗುರುವ ಧ್ಯಾನಿಸಿ ಮನದೊಳಗೆ,
ತನುವ ಮರೆತು, ಗುರುವ ತಲುಪಿದಾಗ,
ತೋಳಗುತಿಹುದು ಬ್ರಹ್ಮ ತತ್ತ್ವವೆನುವರದನು.
ವಿಶ್ವದಾಭಿರಾಮ ಕೇಳು ವೇಮಾ

ಪರಮ ಗುರುವರ ಮಂತ್ರ ಸಿದ್ಧಿಯ ಪಾಲುಗೊಳ್ಳುತ ಅಪ್ಪರೈ.
ಉರದೊಳಗೆ ಗುರಿ-ಬಯಲು ತಾಕುತ, ಒಲಿದು, ಹತ್ತಿಹೊಂದುತಾ,
ಕರ ತರಾಮಲಕವದು ಬ್ರಹ್ಮವು, ತೂರಿ ಬಪ್ಪುದು ಪ್ರಜ್ಞೆಯೋಳ್.
ಸ್ಥಿರವು ವೇಮ ಸೇರು ಪದವಿಯ, ಸಾಹಸದಿ ಮನದಿರಿಸಿಕೊ.

ಯೋಗ ಭಾಷೆಯಲ್ಲಿ ಹೇಳುವುದಾದರೆ. ಮನನಾತ್ ತ್ರಾಯತೇ ಇತಿ ಮಂತ್ರಃ ಮನನ ಮಾಡುವುದರಿಂದ ರಕ್ಷಿಸುವುದೇ ಮಂತ್ರ. ಎಲ್ಲಿ ಲಕ್ಷ್ಯವಿರಿಸಿ ಧ್ಯಾನ ಮಾಡಬೇಕೋ ಅದುವೇ ನ್ಯಾಸ. ಗುರುಮಂತ್ರವನ್ನು ಸಹಸ್ರಾರ ಚಕ್ರದ ಕೆಳಭಾಗದಲ್ಲಿರುವ ಗುರುಚಕದಲ್ಲಿ ನ್ಯಾಥ ಮಾಡಿ ಧ್ಯಾನಿಸುವುದೇ ಗುರು ಭಕ್ತಿ.

ಗುಟ್ಟು, ಗುರು ಭಕ್ತಿಯೊಳು ಮುಟ್ಟಿ, ಗರ್ವ ಪಡದೆ,
ಜಟ್ಟಿಯಂತೆ ಹೋರಿ, ಒಳ ಮರ್ಮ ಶ್ರೇಷ್ಠವೆನುತ,
ತಟ್ಟನೆ ಕಂಡು, ಮೀರಿ ನಡೆ, ಆಣೆ ಮರೆಯೆ!
ಗಿಟ್ಟುವುದೇನು ಹರಟೆಯಿಂದ ಗಳಿಕೆ ? ವೇಮ.

ಉನ್ನತ ಸಾಧಕರಿಗೆ ನೀಡಿದ ಈ ಒಳಗುಟ್ಟಿನ ಮರ್ಮವನ್ನು ಅರಿತುಕೊಳ್ಳಬೇಕು. ಯೋಗ ಸಾಧನದಿಂದ ಆಜ್ಞಾ ಚಕ್ರವನ್ನು ತಲುಪಿದ ಅರಿವು ಮುಂದೆ ತನ್ಮಯತ್ವವನ್ನು ತಲುಪಿ, ಅಲ್ಲಿಂದ ಮೇಲಕ್ಕೆ ಹೋಗಬೇಕು. ಹೀಗೆ ಮಾಡದಿದ್ದರೇನು ಫಲ?

ಸೀಸ ॥ ಗುರ ಬೋಧೆ ತಿಳಿಯದ ಕುಟಿಲ ಶಾಸ್ತ್ರಂಗಳ,
ಪರಿಕಿಸಿದೊಡೆ ಏನು ಫಲವು ಉಂಟು?

ಆತ್ಮೈಕ್ಯವರಿಯದ ಅಖಿಲ ಯೋಗಗಳು ?
ಸಾಧಿಸುವ ಫಲವೇನು ಸತ್ಯವಾಗಿ ?

ತನ್ಮಯತ್ವವನು ತಾನರಿಯದೆ ನರನು
ಸೇವೆ ಗೆಯ್ದೊಡೆ ಏನು ಸಿದ್ಧಿ ಉಂಟೆ?

ತಮ್ಮ ಕುಂದನರಿಯದೆ, ತಾನೊಂದು ಬಹಳ
ಓದಿದ ಫಲವೇನು ಒಪ್ಪವಾಗಿ ?

ತೇಟ ॥ ನುಡಿವ ಸದ್ಗುರು ಬೋಧೆ ನಿತ್ಯವರಿತು,
ಮರೆಯದಿರುವಂಥವರು ಮಾಯವಾಗಿ,

ಅಂಟರೆನ್ನುತಿಹರು, ಅಂದವಾಗಿ.
ತಿಳಿಸಿ ಹೇಳಿದ ವೇಮನ ದೇಶಿಕಾರ್ಯ

ಸದ್ಗುರುವಿನಿಂದ ದೀಕ್ಷೆ ಪಡೆದು ದಿವ್ಯಾನುಭವವನ್ನು ಹೊಂದಿದ ಯೋಗಿ ವೇಮನರು ಗುರುವಿನ ಮಹಿಮೆಯನ್ನೂ, ಗುರು ಧ್ಯಾನದ ವಿಧಿಯನ್ನೂ , ಗುರು ಶ್ರೇಣಿಯನ್ನೂ ತಿಳಿಸುವ ಎರಡು ನೂರರಷ್ಟು ಪದ್ಯಗಳನ್ನು ರಚಿಸಿದ್ದಾರೆ.





ಗುರುವೆ ತಾನಾಗುವ ಹರನ ತೋರುವವನು.
ಬ್ರಹ್ಮಲೋಕವನ್ನೆ ಪ್ರತ್ಯಕ್ಷಿಸುವ.
ಕಿಂಕರನ, ಶೋಧಿಸಿ ಕತ್ತಲೆಯ ಕಳೆಯುವ.
ವಿಶ್ವದಾಭಿರಾಮ ಕೇಳು ವೇಮ.

ಗುರುವಿಲ್ಲದೆ ವಿದ್ಯೆ ಗುರುತಾಗಿ ದೊರೆಯದು
ದೊರೆಯಿಲ್ಲದೆ ಧರೆಯು ತೃಪ್ತಿಪಡದು.
ಗುರುತರ ದ್ವಿಜನೆಂತು ಗುರು ವಿದ್ಯೆಯ ಹೊರತು ?
ವಿಶ್ವದಾಭಿರಾಮ ಕೇಳು ವೇಮ.

ಗುರುವಿನ ಶಿಕ್ಷೆಯಿರದೆ ಗುರುತು ದೊರೆವುದೆಂತು ?
ಅಜನೆ ಇರಲಿ, ಅವನ ಅಪ್ಪನಿರಲಿ,
ಬೀಗದ ಕೈಯಿರದೆ ಬೀಗ ತೆರೆವುದೆಂತು ?
ವಿಶ್ವದಾಭಿರಾಮ ಕೇಳು ವೇವ

ಎಂಥವರನ್ನು ಗುರುವೆನ್ನಕೂಡದು? ಗುರುವಿಗೆ ಶರಣಾಗಿ ಗುರುವನ್ನೇ ಅಂತರ್ಯದಲ್ಲಿಯೂ, ಬಾಹ್ಯದಲ್ಲಿಯೂ, ಗುರುತಿಸಿಕೊಂಡು ಸರ್ವಾರ್ಪಿತ ಭಾವದಿಂದ ನಡೆಯ ಬೇಕಾದ ಶಿಷ್ಯನು ಜಾಗರೂಕನಾಗಿರಬೇಕು. ವಿವೇಕದ ಹಾದಿಯಲ್ಲಿ ಸಾಗಬೇಕು.

ಮಿಥ್ಯೆ ತಿಳಿವಿನಿಂದ ಮೋಕ್ಷ ದೊರಕಬಹುದೆ ?
ಕೈಲಾಗದ ಕೆಲಸ ಗೆಯ್ಯಬೇಡ.
ಗುರುವು ಎನ್ನಬೇಡ ಗುಣ ಹೀನನಾಗಿರೆ.
ವಿಶ್ವದಾಭಿರಾಮ ಕೇಳು ವೇಮ

ಅರಿಯೆ, ದೋಚುವವನು, ಗುರುವು ತಾನೆಂದು,
ತಿರುಗುವವನು, ತನ್ನ ತಿಳಿಯಲಾರ.
ಮಾತು ಬೊಗಳೆಯಷ್ಟೆ, ಮೂಳದಾಸನ ಮಗ,
ವಿಶ್ವದಾಭಿರಾಮ ಕೇಳು ವೇಮ,

ತಾಯಿ ತಂದೆ ತನಗೆ ಮೊದಲ ಗುರುವು.
ಪಾರ್ವತಿ ಅಭವರು ಪರಮ ಗುರುವು,
ಕೂಲಿ ಕೊಳ್ಳುವವನ ಗುರುವೆನಲು ದ್ರೋಹ.
ವಿಶ್ವದಾಭಿರಾಮ ಕೇಳು ವೇಮ

ಸದ್ಗುರುವಿನ ಗುರುತು ಹಿಡಿಯುವುದು ತುಂಬಾ ಕ್ಲಿಷ್ಟಕರ. ಆದ್ದರಿಂದಲೇ ಸತ್ಪುರುಷರು ನಿಜವನ್ನು ಅರಿತುಕೊಂಡು ಆ ನಿಜವನ್ನೇ ಪರರಿಗಾಗಿ ಹೆಳುತ್ತಾರೆ. ಅವರ ಬೋಧೆಯನ್ನೂ ಚಿತ್ತಗೊಟ್ಟು ಆಲಿಸಿ ಅದರಂತೆ ಆಚರಿಸಬೇಕು.

ಧರೆಯ ಜನರಿಗೆಲ್ಲ ಸರಿಯಾಗಿ ತಿಳಿಸುವೆ.
ಒಪ್ಪುವ, ಹರನ ನರಿವ ಉಪಾಯವನು.
ಮನಸು ಚದರದಂತೆ ಮಹಿಮೆಯಿಂದ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ನೋಡಲೇಕೆ ವೇದ ? ಮಾಡಲೇಕೆ ವಾದ?
ಅದುವೆ ತತ್ತ್ವ; ತಿರುಗೆ ಆತ್ಮದೊಳಗೆ
ಗೂಡು ಕಟ್ಟಿಯುಂಟು, ಗುರುವೊಬ್ಬನರಿವನು.
ವಿಶ್ವದಾಭಿರಾಮ ಕೇಳು ವೇಮ.

ಮುಕ್ತಿಗಾಣದಂಥ ಮೂರ್ಖ ಜನರಿಗೆಲ್ಲ
ಬಟ್ಟೆ ಬಯಲು ಮಾಡಿ ಪರಮ ತಾಣ.
ದಾರಿ ತೋರ್ಪ ಬುಧರು ದೈವ ತಾವೆನಿಸರೆ ?
ವಿಶ್ವದಾಭಿರಾಮ ಕೇಳು ವೇಮ.

ಪರಮ ತಾಣ ವಾವುದು? ಅಂದರೆ ಯೋಗ ಸಾಧನೆಯಲ್ಲಿ ಲಕ್ಷ್ಯವಿರಿಸಬೇಕಾದ ನ್ಯಾಸ ತಾನೇ? ಗುರುಧ್ಯಾನ ಮಾಡುವಾಗ ಗುರು ಚಕ್ರದಲ್ಲಿ ಲಕ್ಷ್ಯವಿರಿಸಿ ಸಾಗಬೇಕು. ಪ್ರಾರಂಭದ ನಾಸಾಗ್ರ ಕೋಟೆಯ ಮೇಲಿನ ಲಕ್ಷ್ಯವನ್ನು ಮೀರಿ ಹೋಗಬೇಕು.

ನಾಟುತ ಗುರುವರ ಮಂತ್ರವ
ನೀಟದಿ ಮನದಲ್ಲಿ ಸೇರಿಸಿ ಧೀರನೆನಿಸುತ್ತಾ,
ದಾಟು ಸ್ವರೂಪ ಧಾಮಕೆ
ಕೋಟೆಗೆ ಬೆಂಬತ್ತಲೇನು ಕುದುರದು ವೇಮಾ.

ಗುರು ಬೋಧಿಸಿದ ಮಂತ್ರ ಜಪವನ್ನು ವಾಚಿಕವಾಗಿ ಮಾಡಬಹುದು; ಉಪಾಂಶುವಾಗಿ ಮಾಡಬಹುದು; ಮಾನಸಿಕವಾಗಿಯೂ ಮಾಡಬಹುದು. ಕೊನೆಗೆ ಜಪ ಮಾಡದೆ ಮಾಡಿದಂತಾಗುವ ಅ ಜಪಾ ಜಪದ ಸ್ಥಿತಿಯನ್ನು ತಲುಪಬಹುದು. ಇದಾದ ಮುಂದಿನ ಕ್ರಮವೇನು ?

ನಿಜ ಗುರು ಲಕ್ಷ್ಯವನಿರಿಸುತ
ಅ ಜಪಾದಿ ಕ್ರಿಯೆಯ. ಮೀರಿ, ಅಳಲನು ಪಡದೇ,
ನಿಜ ನಿರ್ಮಲಾಂತ ಸಂದಿಲಿ,
ಸುಜನನೆಣಿಸೆ ತರವು, ಸರಳದಿ, ವೇಮಾ

ಈ ಅವಸ್ಥೆಯಲ್ಲಿ, ಪಂಚೇಂದ್ರಿಯಗಳಿಂದ ಸ್ವೀಕರಿಸಿದ ವಿಷಯಗಳಿಂದ ರೂಪುಗೊಂಡು ಚಿತ್ತವನ್ನು ಜ್ಞಾನಾಗ್ನಿಯಿಂದ ಭಸ್ಮ ಮಾಡಬೇಕು. ಆ ಮೇಲೆ ಗುರು ಶಕ್ತಿಯಿಂದ ಒಳಗಣ್ಣಿಗೆ-ಇಂಪಾಗಿರುವ ಹಂತದಲ್ಲಿ ಚಿದ್ಬಯಲು ಸೇರಬೇಕು. ಆಗ ದ್ವಂದ್ವಗಳನ್ನು ತೊಡೆಯ ಬೇಕು. ಅವನೇ ಘನನು.





ಚಿಮ್ಮಿ ನುಗಿಸಿ ಅರಿವ, ಚಿತ್ತವನು ಅಗ್ನಿಗಿಟ್ಟು
ಕಣ್ಣಿಗಿಂಪಾದ ಗುರುಶಕ್ತಿ ಗಗನ ಸೇರಿಸಿ,
ದ್ವಂದ್ವ ತೊಡೆಯಲು ಘನನು ತಾನು ಜಾಣ.
ಬಂಟತನ ಮನದಿ ಪರಮನಲಿ ಬಯಸು ವೇಮ.

ತಿಳಿಸುವವರು ಯಾರೊ? ತಿಳಿಯುವವರು ಯಾರೊ?
ಗುಟ್ಟು ಅರಿತ ಮೇಲೆ ಬಟ್ಟೆ ಬಯಲು.
ಜಲದ ಭಾಂಡೆಯಲ್ಲಿ ಸೂರ್ಯ ಬಿಂಬದಂತೆ.
ವಿಶ್ವದಾಭಿರಾಮ ಕೇಳು ವೇಮ.

ಗುರು ದೀಕ್ಷೆ ಪಡೆದು, ಸಾಧನೆಯಲ್ಲಿ ಮುನ್ನಡೆದ ಸಾಧಕನಿಗೆ ಮಂತ್ರ ಸಿದ್ಧಿಯಾಗಿ ತನ್ನ ಪ್ರಜ್ಞೆಯಲ್ಲಿ ಬ್ರಹ್ಮ ಸಾಕ್ಷಾತ್ಕಾರವಾಗುತ್ತದೆ.

ಪರಮ ಗುರುವರ ಮಂತ್ರ ಸಿದ್ಧಿಯ ಪಾಲುಗೊಳ್ಳುತ ಅಪ್ಪರೈ.
ಉರದೊಳಗೆ ಗುರಿ ಬಯಲು ತಾಕುತ, ಒಲಿದು ಹತ್ತಿ ಹೊಂದುತಾ
ಕರತಲಾಮಲಕವದು ಬ್ರಹ್ಮವು, ತೂರಿ ಬಪ್ಪದು ಪ್ರಜ್ಞೆಯೋಳ್.
ಸ್ಥಿರವು ವೇಮನ ಸೇರು, ಪದವಿಯು. ಸಾಹಸದಿ ಮನದಿರಿಸಿಕೊ.

## ಧರ್ಮೋಪದೇಶ :-

ವೇಮನರಲ್ಲಿ ಕಾವ್ಯ ಪ್ರತಿಭೆಯು ಬಾಲ್ಯದಿಂದಲೇ ಮೂಡಿತ್ತು. ಅವರು ತಮ್ಮ ಸುತ್ತುಮುತ್ತಿನ ಪರಿಸ್ಥಿತಿಯನ್ನು ಕುರಿತು ಆಳವಾಗಿ ಚಿಂತಿಸುತ್ತಿದ್ದರು. ತಮ್ಮ ಅನಿಸಿಕೆಗಳಿಗೆ ಕಾವ್ಯರೂಪ ನೀಡುತ್ತಿದ್ದರು. ಸಾಂದರ್ಭಿಕವಾಗಿ ಉಚಿತವೆನಿಸುವ ಪದ್ಯಗಳನ್ನು ಅವರು ಸಹಜವಾಗಿ ಸರಳ ಭಾಷೆಯಲ್ಲಿ ಹಾಡುತ್ತಿದ್ದರು. ಅವರು ಆಶು ಕವಿಗಳೇ ಆಗಿದ್ದರು. ಸಾಧನೆ, ಗುರೂಪದೇಶಗಳ ನಂತರ ಅವರ ಕಾವ್ಯವು ಹೆಚ್ಚು ಹೆಚ್ಚು ದಾರ್ಶನಿಕವಾಯಿತು. ಅವರ ಶಬ್ದ ಸಂಪತ್ತು ಅಪಾರವಿತ್ತು. ಅವರ ದರ್ಶನ ದೃಷ್ಟಿ ಆಳವಾದುದಾಗಿತ್ತು.

ಮಾತನಾಡ ಬಹುದು ಮರ್ಮ ತಿಳಿದ ಬಳಿಕ,
ಸಣ್ಣ ದೊಡ್ಡತನದ ಗಣನೆಯೇಕೆ?
ಬಾಲನ ಕೈದೀಪ ಬೆಳಗದೆ ಬೃಹದಾಗಿ?
ವಿಶ್ವದಾಭಿರಾಮ ಕೇಳು ವೇಮ

ಅಲ್ಪನಿರಲು ಏನು? ಅಧಿಕನಿರಲು ಏನು?
ಹೇಳುವಂಥ ರೀತಿ ಹೇಳುತಿಹನು.
ಬಾಲನ ಕೈದೀಪ ಬೆಳಗದೆ ಬೃಹದಾಗಿ.
ವಿಶ್ವದಾಭಿರಾಮ ಕೇಳು ವೇಮ.

ಧರೆಯ ಜನರಿಗೆಲ್ಲ ಸರಿಯಾಗಿ ತಿಳಿಸುವೆ.
ಒಪ್ಪುವ ಹರನರಿವ ಉಪಾಯವನು.
ಮನಸು ಚದರದಂತೆ ಮಹಿಮೆಯಿಂದ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ವೇಮನರು ಏನನ್ನು ಬೋಧಿಸಿದರು? ಈ ನಗ್ನ ಪುರುಷನು ತನ್ನಂತೆ ಮನೆ ತೊರೆದು ಕಾಡು ಮೇಡುಗಳಲ್ಲಿ ತಿರುಗಲು ಹೇಳಿದನೇ ? ಇಲ್ಲ. ಹಾಗೆ ಅಲ್ಲ.ವೆಂತಲೂ ಅಲ್ಲ. ಆಯಾ ಪರಿಸ್ಥಿತಿಯಲ್ಲಿ ಅವರವರ ಮನಸ್ಸಿನ ಅವಸ್ಥೆಗೆ ಸರಿ ಹೊಂದುವಂತೆ, ತಕ್ಕ ವಿಧಾನಗಳನ್ನು ಗುರುತಿಸಿಕೊಂಡು ಆಚರಿಸಬೇಕು. ಅದಕ್ಕಾಗಿಯೇ ಅವರ. ತಮ್ಮ ಬೋಧೆಯನ್ನು ಚತುರ್ವಿಧ ಪುರುಷಾರ್ಥಗಳ ಸಾಧನೆಗೆ ಹೊಂದಿಸಿ ತಿಳಿಹೇಳಿದರು,

ಧರ್ಮಾರ್ಥಕಾಮ ಮೋಕ್ಷವ
ಉರ್ವಿಯಲಿ ಮನದಿ ತಿಳಿದೊಡೆಯಾಮೋದಂ.ಆ
ನಿರ್ಮಲ ಮತಿ ಕಾಣಬೇಕು.
ಕರ್ಮಿಗಳಿಗಿರದು ಮುಕ್ತಿಯು ವೇಮಾ

ಧರ್ಮವರ್ಗದಲ್ಲಿ ಗೃಹಸ್ಥ ಧರ್ಮ ಮತ್ತು ಯೋಗಿಧರ್ಮ ಎಂದು ಎರಡು ವಿಭಾಗಗಳನ್ನು ಕಲ್ಪಿಸಬಹುದು. ಗೃಹಸ್ಥ ಧರ್ಮದಲ್ಲಿ ದೇವಕಲ್ಪನೆ, ಮೂರ್ತಿಪೂಜೆ, ತೀರ್ಥಯಾತ್ರೆ, ಜಾತಿಮತಗಳನ್ನು ವಿಶ್ಲೇಷಿಸಿ ಧರ್ಮದರ್ಶನ ಹೊಂದಬಹುದು, ಇದರ ಜೊತೆಗೇ ಗೃಹಸ್ಥನ ಬಾಳು, ಗೃಹಿಣಿಯ ಒಳಿತು, ಮಕ್ಕಳ ಪ್ರಾಪ್ತಿ ಇತ್ಯಾದಿ ಈಷಣ ತ್ರಯಗಳನ್ನು ಕುರಿತು ವಿವೇಚಿಸಬಹುದು ಮತ್ತು ಸಮಾಜದದೊಂದಿನ ಮಧುರ ಬಾಂಧವ್ಯಕ್ಕಾಗಿ ಕೃತಜ್ಞತೆ, ಸಮದರ್ಶಿತ್ವ ಮಧುರ ಮಾತು, ಸಂಯಮ, ಉಪಕಾರಸ್ಮರಣೆ, ನೀಚಕಾರ್ಯನಿಂದನೆಗಳಂಥ ಸಾಮಾಜಿಕ ಕೊಡುಕೊಳ್ಳುವಿಕೆಯನ್ನು ಅನುಲಕ್ಷಿಸಬಹುದು.

ಕಿವಿಯ ಗೂಡು ಗೆಯ್ದು ಕೂಗಿದನು ವೇಮನ.
ಬಟ್ಟಬಯಲೊಳುಂಟು ಬ್ರಹ್ಮವೆಂದು.
ಹೊಳೆಯೆ ಬುದ್ಧಿಗದನೆ ಹೊಂದಿ ಸುಖಿಸಬಹುದು.
ವಿಶ್ವದಾಭಿರಾಮ ಕೇಳು ವೇಮ.

ವಿಷಯ ವಾಸನೆಗಳಿಂದ ಉದಿಸಿದ ಚಿತ್ತವನ್ನು ದಾಟಿದ ಅವಸ್ಥೆಯೇ ಚಿದ್ಬಯಲು ಈ ಚಿದಾಕಾಶವನ್ನೂ ಮೀರಿದ ಸ್ಥಿತಿಯೇ ಬಟ್ಟಬಯಲು. ಈ ಬಟ್ಟ ಬಯಲಲ್ಲಿ ಅನುಭವ ವೇದ್ಯವಾಗುವದೇ ಬ್ರಹ್ಮ ಈ ಸತ್ಯಾನುಭವವನ್ನು ವೇಮನರು ಎಷ್ಟೊಂದು ತಿಳಿಯಾದ ಭಾಷೆಯಲ್ಲಿ ಹೇಳಿದ್ದಾರಲ್ಲವೇ?

"ಏಕಂ ಸತ್ ವಿಪ್ರಾಃ ಬಹುಧಾ ವದಂತಿ". ಅಂದರೆ ಬಹುವಾಗಿ ವರ್ಣಿಸಲ್ಪಟ್ಟಿರುವ 'ಸತ್' ಒಂದೇ ಆಗಿದೆ ಎಂದು ಉಪನಿಷತ್ಕಾರರು ಹೇಳಿಲ್ಲವೇ? ಆದರೂ ಕಾಗೆಯಂಥ ಜನರು ಇದನ್ನೇಕೆ ತಿಳಿಯರು ?





COLLEGE OF BUSINESS ADMINISTRATION
LIBRARY
HUBLI.

ಟೀಕೆ ಬರೆಯುವಂಥನೇಕ ಹಿರಿಯರೆಲ್ಲ
ಲೋಕಕೆ ಹೇಳಿದರು ಏಕ ದೇವ.
ಕಾಗೆಯಂಥ ಜನರು ಕಾಣರಿದರ ಭಾವ.
ವಿಶ್ವದಾಭಿರಾಮ ಕೇಳು ವೇಮ

ಧ್ವಜವನೆತ್ತಿ ಸಾರು ದೇವನೊಬ್ಬನೆಂದು.
ನಿಜವಿದಿಹುದು, ಒಳಗೆ ನಿಂತಿರುವನು.
ಚೊಕ್ಕ ನೋಡಲವನ ಸಂತಸದಿ ಮುಳುಗುವೆ.
ವ್ವಿಶದಾಭಿರಾಮ ಕೇಳು ವೇಮ.

ವಿಶ್ವೋತ್ಪತ್ತಿಗೆ ಅಜನೆನೆ,
ವಿಶ್ವವ ರಕ್ಷಿಪನು ಚೊಕ್ಕ ವಿಷ್ಣುವೆರೆ ಮತ್ತಾ
ವಿಶ್ವವ ಅಳಿಸುವ ಹರನೆನೆ
ವಿಶ್ವೇಶನಿಗಿಷ್ಟು ಹೆಸರು ವಿನುತವು ವೇಮಾ

## ಮೂರ್ತಿ ಪೂಜೆ :-

ಧರ್ಮದ ಮೂಲವು ರಹಸ್ಯದ ಗರ್ಭದಲ್ಲಿದೆಯೆಂಬುದು ನಿಜ. ಆದ್ದರಿಂದ ಸಾಕಷ್ಟು ಅಭಿಪ್ರಾಯ ಭೇದಗಳುಂಟಾಗಿವೆ. ನಿಸರ್ಗ ಶಕ್ತಿಗಳ ಪೂಜೆಯೇ ಅದರ ಅತ್ಯಂತ ಪ್ರಾಚೀನ ರೂಪ. ಆದ್ದರಿಂದ, ಬೆಂಕಿ ಮೋಡ ವರುಣ ಇತ್ಯಾದಿ ನಿಸರ್ಗದ ವಸ್ತುಗಳನ್ನು ಮಾನವನು ದೇವತೆಗಳೆಂದು ಸ್ತುತಿಸಿದ. ಮಾನವನ ಭೀತಿಯು ರಕ್ಷಣೆಗಾಗಿ ಕಾಲ ಕ್ರಮೇಣ ಇತರತ್ರ ಹೊರಳಿತು. ತನ್ನ ಹೊರಗಿನ ಯಾವುದೋ ಶಕ್ತಿ ತನಗೆ ರಕ್ಷಣೆ ನೀಡುವುದೆಂಬ ಬಲವಾದ ನಂಬುಗೆ ಅವನಲ್ಲಿ ಮೂಡಿತು. ಹುಲಿಗಳ ಭಯದಿಂದ ಹುಲಿಯನ್ನೂ, ಮೊಸಳೆಗಳ ಭಯದಿಂದ ಮೊಸಳೆಯನ್ನೂ, ದೇವತೆಗಳನ್ನಾಗಿ ಗ್ರಹಿಸಿದ.. ಅರಣ್ಯದ ಭೀಕರತೆಯು ಅರಣ್ಯದೇವತೆಯ ಕಲ್ಪನೆಗೆ ಇಂಬುಗೊಟ್ಟಿತು. ವೈದಿಕ ಸಾಮಾನ್ಯರ ಈ ಗ್ರಹಿಕೆಯನ್ನು ಉಪನಿಷತ್ತಿನ ಋಷಿ-ಮುನಿಗಳು ಖಂಡಿಸಿದರು. ಸತ್ಯವನ್ನು ತಿಳಿಸಿ ಹೇಳಿದರು, ಆತ್ಮ ತತ್ವವನ್ನು ಪರಮ ಸತ್ಯವೆಂದು ಬೋಧಿಸಿದರು. ಇದನ್ನೇ ವೇಮನ ಮಹಾಯೋಗಿ ಹೀಗೆ ಹೇಳಿದರು :

ಕಟ್ಟಿಗೆಯಲಿ ಬೆಂಕಿ ಕಾಣುವಂಥ ರೀತಿ,
ತನುವಿನಲ್ಲಿ ಆತ್ಮ ತಗಲಿ ಉಂಟು.
ಗುಟ್ಟು ತಿಳಿದು ಬಳಿಕ ಕಂಡುಕೊಳ್ಳಬಹುದು.
ವಿಶ್ವದಾಭಿರಾಮ ಕೇಳು ವೇಮ

ತಥ್ಯವಿಷ್ಟೆ ; ಪೂರ್ಣ ತತ್ತ್ವನಿನ್ನೊಳಿಹುದು.
ಮಿಥ್ಯವರಿಯಲಾಗ ಮಿತ್ರನಹುದು.
ಸತ್ಯನಿತ್ಯ ಕರ್ಮ ಸಾಕ್ಷಿಬ್ರಹ್ಮನೊಬ್ಬ.
ವಿಶ್ವದಾಭಿರಾಮ ಕೇಳು ವೇಮ

ಊರ್ಧ್ವಲೋಕದಲ್ಲಿ ಉಚಿತ ಕ್ರಮದಿಂದ
ರೂಪವೇನು ಇರದ ರೀತಿಯಲ್ಲಿ,
ಪರಮ ಯೋಗಿ ನೋಳ್ಪ ಪರಮಾತ್ಮ ನಿರವನು
ವಿಶ್ವದಾಭಿರಾಮ ಕೇಳು ವೇಮ.

ಹೀಗಾಗಿ ವೇಮನರು ಹೀಗೆ ಸಾರುತ್ತಾರೆ :
ಕಿವಿಯ ಗೂಡುಗೆಯ್ದು ಕೂಗಿದನು ವೇಮನ.
ಬಟ್ಟ ಬಯಲೊಳುಂಟು ಬ್ರಹ್ಮವೆಂದು.
ಹೊಳೆಯೆ ಬುದ್ಧಿಗದನೆ ಹೊಂದಿ ಸುಖಿಸಬಹುದು.
ವಿಶ್ವದಾಭಿರಾಮ ಕೇಳು ವೇಮ.

ಹೀಗೆ, ತಮ್ಮ ಅಂತರ್ಯ ಅನ್ವೇಷಣೆಯಿಂದ, ತಪೋಬಲದಿಂದ, ಋಷಿಗಳು ಮನಸ್ಸಿನಾಚೆಯ ಶೂನ್ಯಸಂಪಾದಿಸಿ, ಆ ಬಟ್ಟ ಬಯಲಿನಲ್ಲಿ ಬ್ರಹ್ಮವನ್ನು ಅನುಭವಿಸಿದರು. ಇದರ ಜಾಡನ್ನು ಅರಿಯದ ಜ್ಞಾನಮೂಢರು ಜನರೆದುರು ಈ ಅಮೂರ್ತ ಬ್ರಹ್ಮಕಲ್ಪನೆಗೆ ಬದಲಾಗಿ ಮೂರ್ತ ಭಾವನೆ ಮೂಡಿಸಿದರು. ಪ್ರತೀಕ ಪೂಜೆ ಹಾಗೂ ಮೂರ್ತಿಪೂಜೆಗೂ ಪ್ರಚೋದಿಸಿದರು.

ಮೃಚ್ಛಿಲಾ ಧಾತು ದಾರವಾದಿ ಮೂರ್ತಾನೀಶ್ವರೌ ಬದ್ಧಯೋ:
ಕ್ಲಿಶ್ಯಂತಪಸಾ ಜ್ಞಾನವಿನಾ ಮೋಕ್ಷಂ ನ ಯಾಂತಿ ತೇ.

ಅಂದರೆ ಮಣ್ಣು, ಕಲ್ಲು , ಲೋಹ, ಕಟ್ಟಿಗೆ ಮೊದಲಾವುಗಳಿಂದ ತಯ್ಯಾರಿಸಿದ ಮೂರ್ತಿಗಳಿಗೆ ಈಶ್ವರನನ್ನು ಬಧ್ಧಗೊಳಿಸಿದರು . ಆದರೆ, ನಿಜವೆಂದರೆ, ತಪಸ್ಸು ಮತ್ತು ಜ್ಞಾನದ ಹೊರತು ಆವರು ಮೋಕ್ಷ ಪಡೆಯರು.

ಮಣ್ಣು ಲೋಹಗಳಲಿ, ಮರ ಶಿಲಾದಿಗಳಲಿ,
ಪಟ ಗೋಡೆಗಳಲ್ಲಿ, ಪ್ರತಿಮೆಗಳಲಿ,
ತನ್ನ ನೆನಪು ಕೊಡಲು ತವಕಿಸನು ಪರಮಾತ್ಮ
ವಿಶ್ವದಾಭಿರಾಮ ಕೇಳು ವೇಮ

ಇದನ್ನೇ ವಿವರವಾಗಿ ತಿಳಿಸುತ್ತ ಹೀಗೆ ನುಡಿದರು

ಮೇಣ ಒತ್ತಿ ಬರೆದು, ಮತ್ತೆ ರೂಪ ಮಾಡಿ,
ತಾಮ್ರ ಕರಗಿಸಿಟ್ಟದನೇ ಸುರುವಿ,
ಮನುಜರೆಲ್ಲ ಕೂಡಿ ಮತ್ತೆ ದೇವನೆಂದ್ರು
ವಿಶ್ವದಾಭಿರಾಮ ಕೇಳು ವೇಮ

ಬಂಡೆ ಪೂಜೆ ಗೆಯ್ದು ಬಹಳ ದೇಶ ತಿರುಗಿ,
ಕಾಣಲಾರ ಮುಕ್ತಿ ಕಾಂತೆಯನ್ನು.
ತಾನು ಇರುವ ತಾಣ ದೈವವೇನಿಲ್ಲವೆ ?
ವಿಶ್ವಧಾಭಿರಾಮ ಕೇಳು ವೇಮ





ಕಲ್ಲು ಬೊಂಬೆಗೇಕೆ ಕೆಲ ಬಣ್ಣದ ವಸ್ತ್ರ?
ಗುಡಿ ಗೋಪುರವೆಲ್ಲ ಕುಂಭ ಮತ್ತೆ,
ಬಟ್ಟೆ ಅನ್ನ ತಾನು ಬಯಸುತಿಹನೆ ದೇವ ?
ವಿಶ್ವದಾಭಿರಾಮ ಕೇಳು ವೇಮ

ಹೃದಯದಲ್ಲಿ ಶಿವನು ಇರುವುದನು ತಿಳಿಯದೆ,
ಎರಗಲೇಕೆ ಶಿಲೆಗೆ ಎತ್ತಿ ಕೈಯ.
ಅಂಧ ಕನ್ನಡಿಯನು ಅರಸಿ ನೋಡಿದಂತೆ.
ವಿಶ್ವದಾಭಿರಾಮ ಕೇಳು ವೇಮ

ಶಿವನೆಂದು ಭ್ರಮಿಸಿ ಶಿಲೆಗೆ ಶರಣೆಂಬಿರಿ.
ಮೂರ್ಖ ಜೀವಿಗಳೇ ಮೋಹ ಬಿಡಿರಿ.
ಜೀವಿಯೊಳಿರುತಿಹುದು ಶಿಲೆಯೊಳಗೇನುಂಟು ?
ವಿಶ್ವದಾಭಿರಾಮ ಕೇಳು ವೇಮ

## ತೀರ್ಥ ಕ್ಷೇತ್ರ :-

ಅಲ್ಲಲ್ಲಿ ನಡೆದ ಪವಾಡ ಸದೃಶ ಘಟನೆಗಳು ಸ್ಥಳ-ಪುರಾಣಗಳಿಗೆ ಹೂರಣವಾದವು. ಜನರಿಗೆ ತಿಳಿಯದ ಸಂಸ್ಕೃತ ಭಾಷೆಯಲ್ಲಿ ಪುರಾಣ ಕೃತಿ ನಡೆಯಿತು. ಪೌರಾಣಿಕರು ಪಾರಾಯಣ ಮಾಡಿ ಮೂಢ ನಂಬುಗೆಗಳನ್ನು ಜನಮನದಲ್ಲಿ ತುರುಕಿದರು. ಭೀತ ಮನಸ್ಸು ಬಾಹ್ಯದ ಭೂತ ಪ್ರೇತಗಳ ಕಲ್ಪನೆಗೆ ಜೋತು ಬಿದ್ದಿತೇ ಹೊರತು, ಅಂತರ್ಯದ ಆತ್ಮಕ್ಕೆ ಆತುಗೊಳ್ಳಲು ಮುಂದಾಗಲಿಲ್ಲ. ಕಲಿ ಅರ್ಥಾತ್ ಪಾಪಿ ಯುಗವು ಪ್ರಗಾಢವಾಗುತ್ತಿರುವ ಕಾಲದಲ್ಲಿ (ಅಧಿ + ಆತ್ಮ) ಅಧ್ಯಾತ್ಮ ಅಂದರೆ ಆತ್ಮಮುಖೀ ಹಾದಿ ಬಿಟ್ಟು ಮಾನವ ಮನವು ಜಡವಾ-ಯಿತು. ಇಂಥ ಜಡ ಮನಸ್ಸಿಗೆ ತಿಳಿಹೇಳುವ ಜ್ಞಾನಿಗಳು ಆಗೀಗ ಅವತರಿಸುತ್ತಾರೆ.

ಉಂಟು ಉಂಟು ಜ್ಞಾನಿ ಯುಗ ಯುಗಾದಿ ಕಳೆಯೆ,
ಪ್ರಾಣ ಹಾನಿಯಿಲ್ಲ ಪ್ರಳಯವಿರಲು,
ಪ್ರಳಯವಿರಲು ಮತ್ತೆ ಪರಮಾತ್ಮನ ಸೇರುವ.
ವಿಶ್ವದಾಭಿರಾಮ ಕೇಳು ವೇಮ

ತೀರ್ಥ ಕ್ಷೇತ್ರ ಯಾತ್ರೆ ಕುರಿತು ಸಂತರು, ಶರಣರು, ಯೋಗ ಪುಂಗವರು ಕಾಲ ಕಾಲಕ್ಕೆ ತಿಳಿಸಿ ಹೇಳಿದ್ದಾರೆ. ಈ ಕುರಿತು ವೇಮನ ಯೋಗಿಗಳ ಬೋಧನೆಯನ್ನು ಅವರ ಮಾತುಗಳಲ್ಲೇ ತಿಳಿಯುವಾ :

ಕಾಶಿ. ಮದುರೆ, ಕಂಚಿ, ಗಯೆ, ಪ್ರಯಾಗ, ಸೇತು
ಅಲೆದು ಅಲೆದು ತನ್ನ ಆತ್ಮ ಕಾಣ.
ವಾಸನೆಯುಳಿದಿರೆ, ವ್ಯರ್ಥ ವಿಧಿಗಳಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಎಲ್ಲಿ ಅಲೆದರೇನು ? ವ್ಯರ್ಥ ಶ್ರಮ. ಹೃದಯ ಶುದ್ಧಗೊಳಿಸಿ ಆತ್ಮಜ್ಞಾನ ಪಡೆಯುವುದೊಂದೇ ದಾರಿ.

ಕಾಶಿ ಕಾಶಿ ಎಂದು ಕಾತರಿಸಿ ಹೋಹರು.
ಅಲ್ಲಿ ಇರುವ ದೇವ ಇಲ್ಲಿಲ್ಲವೆ ?
ಇರುವನಲ್ಲಿ ಇಲ್ಲಿ ಇರಲು ಶುದ್ಧ ಹೃದಯ.
ವಿಶ್ವದಾಭಿರಾಮ ಕೇಳು ವೇಮ,

ತಿರುಪತಿಗೆ ಹೋದೊಡೆ, ತುರುಕ ದಾಸನಲ್ಲ.
ಗಣಿಕೆ, ಕಾಶಿ ತಲುಪೆ, ಗರತಿಯಲ್ಲ.
ಶ್ವಾನ ಸಿಂಹವಲ್ಲ ಸೇರಲು ಗೋದಾವರಿ.
ವಿಶ್ವದಾಭಿರಾಮ ಕೇಳು ವೇಮ

ಕಾಶಿ ನೀರು ಹೊತ್ತು , ಕಾಲು ಮುಖವ ತೊಳೆದು,
ಕಾಣಲಿಲ್ಲ ಮುಕ್ತಿ ಕೊರಗಿ ಕೊರಗಿ,
ಸತ್ತ ಬಳಿಕ ಮುಕ್ತಿ ಸಾಧಿಸುವರೇನೂ?
ವಿಶ್ವದಾಭಿರಾಮ ಕೇಳು ವೇಮ

ಇನ್ನು ತೀರ್ಥಃ ಎಂದರೇನು ? ತೀರ+ಸ್ಥ+ರ= ತೀರ್ಥಃ. ತೀರ ಎಂದರೆ ದಡ. ಜಲ ಮತ್ತು. ನೆಲಗಳ ಸಂಪರ್ಕ ರೇಖೆಯೇ ತೀರ ( Beach ). ಇಲ್ಲಿ ಚಲಿಸುವ ಮಾನವನು ಒಂದು ಹೆಜ್ಜೆ ಈಚೆಗಿಟ್ಟರೆ ನೆಲ, ಆಚೆಗಿಟ್ಟರೆ ಜಲ; ಸಾಧಕನ ಮನಸ್ಸು ಇತ್ತ ಹೊರಳಿದರೆ ಲೋಕಮುಖಿ. ಅತ್ತ ಹೊರಳಿದರೆ ಈಶಮುಖಿ. ಹೀಗೆ ಜಗತ್ತು ಮತ್ತು ಅಧ್ಯಾತ್ಮಿಕತೆಯನ್ನು ಜೋಡಿಸುವ ಯೋಗ-ಸೂತ್ರ ಅರಿತವರೇ ತೀರ್ಥಸ್ವರೂಪರು. ತೀರಸ್ಥಂ ತೀರ್ಥಮಿತ್ಯಾಹುಃ

ಅಂದ ಮೇಲೆ ಜಲ-ಸ್ಥಲಗಳ ಅಲೆದಾಟವು ತೀರ್ಥಯಾತ್ರೆ ಹೇಗಾದೀತು? ಆತ್ಮಜ್ಞಾನ ಹೇಗಾದೀತು ?

ಜಲದಲ್ಲಿಯು ಇಲ್ಲ, ಜಗದಲ್ಲಿಯು ಇಲ್ಲ.
ನಿಗಮ ವೇದ್ಯವಾದ ನಿತ್ಯಪದವಿ,
ಸಗುಣ ನಿರ್ಗುಣದಲ್ಲಿ ಸಾಧಿಸಿ ಸರಿ ಕಾಣು.
ವಿಶ್ವದಾಭಿರಾಮ ಕೇಳು ವೇಮ

ದೇಶ ದೇಶಗಳನು ದಣಿವಿನಿಂದ ತಿರುಗೆ,
ಆತ್ಮದಲ್ಲಿ ಧ್ಯಾನ ಅಂಟಬಹುದೆ ?
ಕಾಸು ಬಯಸಿ ತಿರುಗೆ, ಕಾಣಲಾರ ಮೋಕ್ಷ.
ವಿಶ್ವದಾಭಿರಾಮ ಕೇಳು ವೇಮ





ನದಿ ತೀರವ ಕುರಿತು, ನಡು ಕಾನನ ಕುರಿತು,
ಗುಡ್ಡ ಕಲ್ಲು ಕುರಿತು, ಗೊಡವೆಯೇಕೆ ?
ಮನಸಿನಲ್ಲಿ ಶಿವನು ಮಡಗಿಹುದನರಿಯರು.
ವಿಶ್ವದಾಭಿರಾಮ ಕೇಳು ವೇಮ.

ಸಕಲ ತೀರ್ಥಗಳಲಿ, ಸಕಲ ಯಜ್ಞಗಳಲಿ,
ತಲೆಯ ಬೋಳಿಸಿದೊಡೆ ಫಲವು ಇರದು.
ಮಂತ್ರ ಜಲಕ್ಕಿಂತ ಮುಂಡನ ಜಲ ಹೆಚ್ಚೆ ?
ವಿಶ್ವದಾಭಿರಾಮ ಕೇಳು ವೇಮ

ಸುತ್ತಲು ಕೊಂಕಣವ ಸೊಣಗ ಸಿಂಹವಲ್ಲ
ಕಾಶಿ ಕಂಡ ಹಂದಿ ಕರಿಯು ಅಲ್ಲ.
ಭಿನ್ನ ಬುದ್ಧಿಯವನು ಬುಧನು ಅಲ್ಲವಲ್ಲ.
ವಿಶ್ವದಾಭಿರಾಮ ಕೇಳು ವೇಮ.

ತೀರ್ಥ ಕ್ಷೇತ್ರಗಳೆಂದು ಅಲೆಯುತ್ತಿರುವ ಕ್ಷುದ್ರ ಮಾನವನೊಬ್ಬನು ಮಹಾಪುರುಷನಾಗಲಾರ. ಓರ್ವ ಭಾವ ಜಡದ ಸಂಕುಚಿತ ಮನಸ್ಸಿನವನು ಉನ್ನತ ಮನಸ್ಸಿನವನಾಗನು. ಅಲ್ಲವೇ ? ಇಷ್ಟೆಲ್ಲ ಒಣ ಅಲೆದಾಟವೇಕೆ ? ಶುದ್ಧ ಮನಸ್ಸಿನ ಸಾಧು-ಸಜ್ಜನನನ್ನು ದರ್ಶಿಸಿ ಅವನ ಕೃಪೆಗೆ ಪಾತ್ರರಾಗಿ ಸಾಧನೆ ಕಲಿತು ಸಿದ್ಧಿಪಡೆಯಿರಿ.

ಪೊಡವಿ ತಿರುಗಿ ಪಡೆದ ಪುಣ್ಯ ಕರ್ಮವೆಲ್ಲ
ಸಾಧು ಜನರ ನೋಡೆ ಶೀಘ್ರ ಲಭ್ಯ.
ಬಿದ್ದ ನೀರಿಂಗಲು, ಶುದ್ಧ ನದಿಯ ತಳದಿ.
ವಿಶ್ವದಾಭಿರಾಮ ಕೇಳು ವೇಮ.

## ಅಂಧ ಶ್ರದ್ಧೆ-ಕಂದಾಚಾರ :-

ಮಾನವನ ಭೀತ ಮನಸ್ಸು ತಮಗೆ ತಿಳಿಯದ ವಿಷಯಗಳಲ್ಲಿ ತಾಳುವ ಶ್ರದ್ಧೆಯನ್ನೇ ಅಂಧ ಶ್ರದ್ಧೆ ಎನ್ನುತ್ತಾರೆ. ಎಲ್ಲಿ ಮಾನವನ ಸಾಧಾರಣ ಬುದ್ಧಿಯು ಸೋಲನ್ನಪ್ಪಿತೋ, ಅಲ್ಲಿ ವಿಪ್ರನು ಒಳ್ಳೇ ಕುಶಲತೆಯಿಂದ ಅತಿ ಲೌಕಿಕ ವಾದವನ್ನು ಮತ್ತು ಪವಾಡಗಳನ್ನು ಜನರ ಮನದಲ್ಲಿ ತುಂಬುವ ಹಂಚಿಕೆ ಮಾಡುತ್ತಾನೆ. ಜನರು ಮರಣಾನಂತರ ಎಲ್ಲಿಗೆ ಹೋಗುತ್ತಾರೆ ? ಆ ಪಿತೃ ಲೋಕದಲ್ಲಿ ಅವರ ಆಶೆ ಆಕಾಂಕ್ಷೆಗಳ ತೃಪ್ತಿಯೆಂದು ಮುಂತಾಗಿ ಹೇಳಿ ಏಕಾಕ್ಷಿಯಾದ ಕಾಗೆಯಲ್ಲಿ ಪಿತೃ ನೆಲೆಸಿದ್ದಾನೆ ಎಂದು ನಂಬಿಸಿದರು. ಮಾನವನ ವಿಚಾರ ಶಕ್ತಿಯು ಜಡವಾಯಿತು. ಭಾವ ಜಡತೆಯು. ಪರಿಣಮಿಸಿ, ಮೂಢ ನಂಬುಗೆಗಳು ದೃಢವಾದವು ಅದಕ್ಕಾಗಿಯೇ ವೇಮನ ಯೋಗೀಂದ್ರರು ಹೀಗೆ ನುಡಿಯುತ್ತಾರೆ :

ಪಿಂಡಗಳನು ಮಾಡಿ ಪಿತೃವೆಂದು ತಿಳಿದು,
ಕಾಗೆಗಳಿಗೆ ಇಡುವ ಕರ್ಮಿಗಳೇ !
ಶಗಣೆ ತಿನುವ ಕಾಗೆ ಸತ್ತ ಪಿತೃವು ಎಂತು ?
ವಿಶ್ವದಾಭಿರಾಮ ಕೇಳು ವೇಮ.

ಪಿತರಾನ್ನವೆಂದು ಪ್ರೀತಿಯಿಂದ ಕರೆದು,
ಕಾಗೆಗಳಿಗೆ ಇಡುವ ಕರ್ಮಿಗಳೇ !
ಕಾಗೆಗಿಡಲು ಏನು ? ಘನನಿಗೀಯ ಬೇಕು.
ವಿಶ್ವದಾಭಿರಾಮ ಕೇಳು ವೇಮ.

ಖೇಚರರು ಭುವಿಯಲಿ ಕಾಣದಿಹರೆನುವರು.
ಕಂಡು ಬಂದರೇನು ಗೌರವಿಪರೆ ?
ತಾಯಿ ತಂದೆ ಗುರುವು ತತ್ಸಮರಾಗರೆ ?
ವಿಶ್ವದಾಭಿರಾಮ ಕೇಳು ವೇಮ.

ಅಂಧ ಶ್ರದ್ಧೆ ಅರ್ಥಾತ್ ಮೂಢ ನಂಬುಗೆಗಳಲ್ಲಿ ನಾನಾ ಪ್ರಕಾರಗಳಿವೆ. ತನ್ನ ಒಳಿತು ಕೆಡುಕುಗಳಿಗೆ ತನ್ನ ಕರ್ಮಗಳೇ ಕಾರಣವೆಂದು ಅರಿತು ತನ್ನನ್ನು ತಾನು ಸುಧಾರಿಸಿಕೊಳ್ಳದ ಮಾನವ ಮನವು, ಗ್ರಹಗತಿಯನ್ನೋ ಇಲ್ಲವೆ ಹಲವಾರು ಅಪಶಕುನಗಳನ್ನೋ ನಂಬುತ್ತ, ತನ್ನನ್ನೇ ತಾನು ಹಾಳು ಮಾಡಿಕೊಳ್ಳುತ್ತಾನೆ. ಕಾಗೆ ಗೂಗೆಗಳು ಒಳಬಂದವೆಂದು ಆ ಮನೆಯನ್ನೇ ತೊರೆಯುತ್ತಾನೆ. ಹಕ್ಕಿ ಶಕುನ ಕೇಳಿ ಕರ್ಮಫಲ ನಿಶ್ಚಯಿಸುತ್ತಾನೆ. ಪಂಚಾಂಗ ಕೇಳಿ ಶುಭಾಶುಭ ಮುಹೂರ್ತ ನಿರ್ಣಯಿಸುತ್ತಾರೆ. ಬ್ರಹ್ಮವರಿಯದೆ ಶುಭಾಶುಭಗಳನ್ನು ತಿಳಿಯುವುದೆಂತು ಸಾಧ್ಯ?

ಪಾಡಲ್ಲವೋ ಜಗದಿ ಪಂಚಾಂಗ ಹೇಳಲು,
ಇನಿತಾದರೂ ಬುದ್ಧಿ ದಣಿಸದನಕ.
ಬ್ರಹ್ಮವರಿಯದನಕ ಪೌರೋಹಿತ್ಯ ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

" ಪುರಾಸಿ ಹಿತಂ ಕರೋತಿ ಇತಿ ಪುರೋಹಿತಃ " ಎಂದರೆ ಎದುರಿಗೇ ಸತ್ಯ ನುಡಿದು ಹಿತವನ್ನು ಕೋರುವವನೇ ಪುರೋಹಿತನು. ತರ್ಕ ಮಾಡಿ, ಮನದಲ್ಲಿ ಗುಣಗುಣಿಸಿ ಹೇಳುವವನಲ್ಲ.

ತನ್ನ ಮನಸಿನಿಂದ ತರ್ಕಿಸಿ ಜ್ಯೋತಿಷ.
ಎಷ್ಟು ಗೆಯ್ದೆನೆಂದು ಯೋಚಿಸುವನು.
ತನ್ನ ಅದೃಷ್ಟವನು ದೈವ ತಿಳಿಯದೇನು?
ವಿಶ್ವದಾಭಿರಾಮ ಕೇಳು ವೇಮ.

ಶುಭ ಶಕುನ ನಂಬಿ, ಶುಭ ಲಗ್ನವೆಂಬರು,
ಒಬ್ಬ ಅವರೊಳಿಲ್ಲ ಅಬ್ಬ ಜಗದಿ !
ಸಂತಸ ಹಬ್ಬವೆಲ್ಲ ಶಕುನದಲ್ಲಿ ಇಹವೆ ?
ವಿಶ್ವದಾಭಿರಾಮ ಕೇಳು ವೇಮ





ಹಾಲ ಹಕ್ಕಿ ಶಕುನ ಫಲವೀವುದೆನುವರು.
ಹಾಲ ಹಕ್ಕಿ ಎಷ್ಟು ಫಲವರಿವುದು ?
ತನ್ನ ಮೇಲು ಕೀಳು ತನ್ನಿಂದ ಇಪ್ಪದು.
ವಿಶ್ವದಾಭಿರಾಮ ಕೇಳು ವೇಮ.

ಹೊಗಲು ಮನೆಯ ಗೂಗೆ ಹಾಳುಗೆಡವಿ ಅದನೆ,
ಹೋಗುತಿಪ್ಪನೆಂಥ ಹಾಳು ಮೂಢ?
ಗೂಗೆ ಏನಾಗುವುದೊ ? ಗೃಹವು ಏನಾಗುವುದೊ ?
ವಿಶ್ವದಾಭಿರಾಮ ಕೇಳು ವೇಮ.

## ನಗ್ನತೆ :-

ಭಾರತೀಯ ಅಧ್ಯಾತ್ಮ ಸಾಧನೆಯಲ್ಲಿ ಬಹುಬಗೆಯ ಸನ್ಯಾಸ ಪದ್ಧತಿಗಳುಂಟು. ಇಂಥವುಗಳಲ್ಲಿ ಅವಧೂತ ಸಂಪ್ರದಾಯವೂ ಒಂದು. ಜೈನರಲ್ಲಿ ದಿಗಂಬರ ಸಂಪ್ರದಾಯವಿದ್ದು, ಗುರುಗಳು ವಸ್ತ್ರ ವಿಹೀನರು. ಅದೇಕೆ ? ವೀರಶೈವರಲ್ಲಿ ಶರಣೆ ಅಕ್ಕ ಮಹದೇವಿ ದಿಗಂಬರ ಕನ್ಯೆ. ತಾಯಿಯುದರದಿಂದ ತಾವು ಬಂದ ರೀತಿಯಲ್ಲಿಯೇ ಉಳಿದು ಬಾಲರಂತೆಯೇ ವ್ಯವಹರಿಸುತ್ತಾರೆ. ಅವರಿಗೆ ಜನ ಮನ ಒಳ ಹೊರಗು, ಸ್ತ್ರೀ-ಪುರುಷರ ದೇಹರಚನೆ ಮತ್ತು ಲೋಗರ ಅಂತರ್ ಬಾಹ್ಯಗಳು ಅಂಗೈಯಲ್ಲಿಯ ನೆಲ್ಲಿಯಂತೆ ಕಾಣುವವು. ಇಂಥವರು ತಮ್ಮ ಮನದಲ್ಲಿಯೇ ಲಜ್ಜಾ ಭಾವದ ಮರ್ಯಾದೆಯನ್ನು ಕಾಪಾಡಿಕೊಂಡು ವ್ಯವಹರಿಸುತ್ತಾರೆ. ಹೀಗಾಗಿ ವೇಮನರಂಥ ಮಹಾ ಯೋಗಿಗಳಿಗೆ ಬಟ್ಟೆ ಧರಿಸುವ ಪ್ರಸಂಗವೇ ಬರದು. ಈ ಕುರಿತು ಅವರ ಮಾತುಗಳನ್ನೇ ಮೆಲುಕು ಹಾಕುವಾ :

ತಾಯಿಯುದರದಿಂದ ತಾನು ಜನಿಸುವಾಗ,
ಆದಿಗಿಲ್ಲ ಬಟ್ಟೆ, ಅಂತ್ಯಕಿಲ್ಲ.
ನಡುವೆ ಬಟ್ಟೆಯುಡಲು ನಗು ಪಾಟಲಲ್ಲವೇ ?
ವಿಶ್ವದಾಭಿರಾಮ ಕೇಳು ವೇಮ.

ತರುಣಿಯಂಗವೆಲ್ಲ ಪುರುಷನರಿತಿರುವನು.
ಪುರುಷನಂಗದರಿವು ವನಿತೆಗುಂಟು.
ಲುಂಗಿ ಚಡ್ಡಿ ಬಿಡಲು ಲಜ್ಜೆಯೇನಡ್ಡಿಯೇ ?
ವಿಶ್ವದಾಭಿರಾಮ ಕೇಳು ವೇಮ.

ಲಜ್ಜೆ ಲಜ್ಜೆ ಎನುವ ; ಲಲನೆ ಮೇಲಾಶಿಸಿ,
ಲಜ್ಜೆಗೆಟ್ಟು ತಿರುಗಲೇನು ಮುದದಿ ?
ಲಜ್ಜೆ ತಿಳಿದೊಡೇನು ಲಲನೆಯ ಮುಟ್ಟುವನೆ ?
ವಿಶ್ವದಾಭಿರಾಮ ಕೇಳು ವೇಮ.

ಲಜ್ಜೆ ತೊರೆಯದನಕ ಲಭಿಸದು ಶಿವಸೌಖ್ಯ.
ಬಗ್ಗಿ ನಡೆಯದನಕ ಎಗ್ಗು ಬಿಡದು.
ಲಜ್ಜೆ ತೊರೆಯುವವನೆ ಲಯ ವಿಲ್ಲದ ಯೋಗಿ.
ವಿಶ್ವದಾಭಿರಾಮ ಕೇಳು ವೇಮ

ಪ್ರಾಣಿಗುಂಟು ಬಾಲ, ಪಕ್ಷಿಗುಂಟು ರೆಕ್ಕೆ,
ಉಡಿಗೆ ಅಂತೆ ಉಂಟು , ಉರ್ವಿ ಜನಕೆ.
ಮಾನ ರಕ್ಷಣೆಯೇ ಮರ್ಯಾದೆ ಎನಿಪುದು.
ವಿಶ್ವದಾಭಿರಾಮ ಕೇಳು ವೇಮ.

## ಗೃಹಸ್ಥನ ಬಾಳು :-

ಧರ್ಮ ವರ್ಗದ ವಿಷಯವನ್ನೇ ಮುಂದುವರೆಸುತ್ತ ನಾವು ಗೃಹಸ್ಥನ ಬಾಳು, ಗೃಹಿಣಿಯ ಒಳಿತು-ಕೆಡುಕು ಮತ್ತು ಸಂತಾನ ಪ್ರಾಪ್ತಿಯಂಥ ಅಂಶಗಳನ್ನೂ ಕುರಿತು ಪ್ರಸ್ತಾಪಿಸಬೇಕಷ್ಟೇ.

ಕುಟುಂಬವು ಸಮಾಜದ ಘಟಕ. ಸಮಾಜದ ನೆಮ್ಮದಿಗಾಗಿ ಕುಟುಂಬದಲ್ಲಿ ನೆಮ್ಮದಿ ನೆಲೆಸುವುದು ಅನಿವಾರ್ಯ. ತಾಯಿ ತಂದೆಯಂದಿರನ್ನು ದೇವರೆಂದು ಕಾಣಬೇಕು. 'ಮಾತೃದೇವೋ ಭವ, ಪಿತೃ ದೇವೋ ಭವ' ಎಂದು ಶ್ರುತಿ ವಚನವೂ ಇದೆ.

ತಾಯಿಯೇ ಪಾರ್ವತಿಯು; ತಂದೆಯೇ ಶಂಭುವು;
ಪ್ರಮಥ ಗಣವು ಅಖಿಲ ಬಂಧು ಬಳಗ.
ತಾನು ಹುಟ್ಟಿದ ಮನೆ ತನಗೆ ಕೈಲಾಸವು.
ವಿಶ್ವದಾಭಿರಾಮ ಕೇಳು ವೇಮ

ಮೊದಲಿಗಿಹ ಮಾತೃ ದೇವತೆ,
ತದನಂತರ ಜನಕನು ಇರುವ ಪರಿಕಿಸುತಿರಲ್.
ಕುದುರಿದ ಸದಮಲ ಗುರುವೇ
ತುದಿ ದೈವವು, ಪರರು ಬೇರೆ ತೋರರು ವೇಮಾ

ಒಂದಾದ ದಂಪತಿ, ಚೆಂದದ ಸಂಸಾರ,
ನಂದನನ ನಡೆನುಡಿ ನಂದಿನಿಯೊಳು.
ಸತಿಗಿತ್ತ ರಕ್ಷಣೆಯು ಸ್ವಂತಕ್ಕೆ ರಕ್ಷಣೆ.
ವಿಶ್ವದಾಭಿರಾಮ ಕೇಳು ವೇಮ

ಕಾಯುವಂಥ ಗಂಡ ಕಾಂತನೆನಿಸುತಿಪ್ಪ.
ಕಾಯಲಾರದಾತ ಸಾವ ರೀತಿ.
ಕಾಯದೆ ಬಿಟ್ಟವಳ ಕಷ್ಟ ಕೇಳಬಹುದೆ ?
ವಿಶ್ವದಾಭಿರಾಮ ಕೇಳು ವೇಮ.





ಸತಿಯ ನೋಡಿ ನೋಡಿ, ಸಂಸಾರಿಯಹ ಕೋರ್ಕೆ.
ಸುತರು ಹುಟ್ಟಿ ಹುಟ್ಟಿ ಸಂಕಟನುವ.
ಸತಿಯು ಕೆಟ್ಟು ಕೆಟ್ಟು ಕರ್ಮವೆಂದು ಅಳುವ.
ವಿಶ್ವದಾಭಿರಾಮ ಕೇಳು ವೇಮ.

## ಗೃಹಣಿಯ ಒಳಿತು ಕೆಡುಕು :-

" ಗೃಹಣೀ ಗೃಹಮುಚ್ಯತೇ " ಅಂದರೆ ಗೃಹಣಿ ಇದ್ದರೆ ಗೃಹಕ್ಕೆ ಶೋಭೆ ಎಂಬ ನಾಣ್ಣುಡಿಯೂ ಇದೆ. ಇಂಥ ಸತೀ ಮಣಿಯು ಸುಶೀಲೆಯಾಗಿ ಪತಿಭಕ್ತಿ ಪರಾಯಣೆಯಾಗಿ ವರ್ತಿಸಿದರೆ, ಅವಳ ಬಾಳು ಸೌಖ್ಯದ ಶಲೆಯಾಗುತ್ತದೆ.

ಗುಣವತಿಯಿರೆ ಯುವತಿ ಗೃಹವು ಚೊಕ್ಕಟಯ್ಯ.
ಬೀಳು ಮನೆಯ ದೀಪ ಬೆಳಗಿದಂತೆ.
ದೇವಿಯಿಪ್ಪ ಗೃಹವು ದೇವಾಲಯವಯ್ಯ.
ವಿಶ್ವದಾಭಿರಾಮ ಕೇಳು ವೇಮ

ಸುಗುಣವಂತೆ ಕಾಂತೆ ಸುದತಿಯಾಗಿರ್ದೊಡೆ,
ಮಿಗಿಲು ಬುದ್ಧಿವಂತ ಮಕ್ಕಳಿರಲು,
ಸಗ್ಗವೇತಕಯ್ಯ ? ಸಂಸಾರ ಸಾಲದೆ ?
ವಿಶ್ವದಾಭಿರಾಮ ಕೇಳು ವೇಮ.

ಪತಿಯ ಕಾಲದಲ್ಲಿ ಸತಿ ಕಷ್ಟ ಪಡುತಿರೆ,
ಸುತರ ಕಾಲ ಸುಖವ ಸವಿಯುತಿಹಳು.
'ಉಳ್ಳ' 'ಇಲ್ಲ' ವೆಂಬೆರಡು ತಪ್ಪದಾರಿಗು.
ವಿಶ್ವದಾಭಿರಾಮ ಕೇಳು ವೇಮ

ಗಂಡನು ಮಾಡುವ ಪುಣ್ಯ ಕರ್ಮಫಲದಲ್ಲಿ ಸತಿಗೆ ಅರ್ಧಪಾಲು ಸಿಕ್ಕುವುದೆಂದು ಧರ್ಮಶಾಸ್ತ್ರಗಳು ಹೇಳುತ್ತವೆ. ಹೀಗೆ ಹೇಳಿ ಸ್ತ್ರೀಯ ಧಾರ್ಮಿಕ ಸ್ವಾತಂತ್ರ್ಯವನ್ನು ಶಾಸ್ತ್ರಕಾರರು ನಿರಾಕರಿಸಿದ್ದಾರೆ. ಆದರೆ ಗಂಡ ಮಾಡುವ ಪಾಪದ ಪಾಲು ಹೆಂಡತಿಗೇಕೆ ಬಾರದು ? ಗಂಡನ ಸಡಿಲುಗಚ್ಚೆಯ ಜೀವನದಿಂದ ಹೆಂಡತಿಯ ಮೇಲೆ ಪರಿಣಾಮವಾಗದೇ ?

ಸತಿ-ಗೆಯ್ಯುವ ಕೆಡುಕು ಪತಿಗವಶ್ಯ ಬಪ್ಪುದು.
ಪತಿ ಗೆಯ್ಯುವ ಒಳಿತು ಸತಿಗರ್ಧವು.
ಪತಿ-ಗೆಯ್ಯುವ ಕೆಡುಕು ಸತಿಗೇಕೆ ಬಾರದು ?
ವಿಶ್ವದಾಬಿರಾಮ ಕೇಳು ವೇಮ.

ಪತಿಯ ನಿಂದೆ ಪರೀಕ್ಷಿಸಿ ಎಣಿಸದೆ,
ಸತಿಗೆ ಎಂತು ಮುಕ್ತಿ ಸಾಧ್ಯವಹುದು ?
ಎಂತು ಬಂತು ನಿಯತಿ ಎಣಿಸಲು ಶಕ್ಯವೇ ?
ವಿಶ್ವದಾಭಿರಾಮ ಕೇಳು ವೇಮ.

ತನ್ನಹೆತ್ತು ಹೊತ್ತ ತಾಯಿಯಂತೆ ಕಾಣು.
ಅನ್ಯರ ಸತಿಯ. ನ್ಯಾಯ ಅರಿತು ನೋಡಿ.
ತನ್ನ ತಾಯಿಯಂತೆ ತಿಳಿಯನೇಕೊ ನರನು.?
ವಿಶ್ವದಾಭಿರಾಮ ಕೇಳು ವೇಮ.

ಮಡದಿಯನು ಮಣಿಸದೆ ಮೊದಲು ಅಧಮನಾಗಿ,
ಮೀರೆ, ಹಣಿವೆನೆನಲು ಮಂಕುತನವು
ಮರವಾಗಿ ಬೆಳೆದುದು ಮತ್ತಳಿವುದೆ ಚಿವುಟಲು ?
ವಿಶ್ವದಾಭಿರಾಮ ಕೇಳು ವೇಮ.

ಸತಿಯ ಮಾತು ಕೇಳಿ, ಸೋದರರನೆ ತೊರೆದು,
ಬೇರೆಯಾಗುವವನು ಬುದ್ಧಿಗೇಡಿ.
ನಾಯಿ ಬಾಲ ಹಿಡಿದು ನದಿಯ ದಾಟಲಾರ.
ವಿಶ್ವದಾಭಿರಾಮ ಕೇಳು ವೇಮ

## ಸಂತಾನ ಪ್ರಾಪ್ತಿ :-

"ಅಪುತ್ರಸ್ಯ ಗತಿರ್ನಾಸ್ತಿ". ಅಂದರೆ ಪುತ್ರಹೀನನಿರಲು ಅವನಿಗೆ ಸತ್ತ ನಂತರ ಪಿಂಡದಾನವಿಲ್ಲ, ಪುಣ್ಯಲೋಕವಿಲ್ಲ, ಎಂದು ಮನು ಸ್ಮೃತಿ ಇತ್ಯಾದಿ ಪ್ರಾಚೀನ ಶಾಸ್ತ್ರಗಳಲ್ಲಿ ಬರೆದಿದ್ದಾರೆ. ಆದರೆ ಮಗನಿಂದ ತನಗೆಂತು ಪುಣ್ಯ ಬರಬಹುದು ? ಆದ್ದರಿಂದ "ಉದ್ಧರೇತ್ ಆತ್ಮಾನ್ ಆತ್ಮಾನಂ". ಅಂದರೆ, ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು. ಮಗನು ತನ್ನನ್ನು ಹೇಗೆ ಉದ್ಧಾರ ಮಾಡಬಲ್ಲನು?

ಪುತ್ರ ಭಾಗ್ಯವಿರದ ಪುರುಷ ತಾ ಜಗದೊಳು
ಪುಣ್ಯ ಲೋಕವೆಂತು ಪಡೆಯಬಲ್ಲ ?
ಪುಣ್ಯಹೀನನಿರಲು ಪುಣ್ಯವೆಂತು ಬಹುದು ?
ವಿಶ್ವದಾಭಿರಾಮ ಕೇಳು ವೇಮ.
ಪಡೆಯ ಬಹುದೆ ಸುಖವ ಪುಣ್ಯ ಪುತ್ರರಿಂದ. ?
ಮನುಜ ಕರ್ಮ ಮತದಿ ಮರಳಿ ಬದ್ಧ.
ಆನೆ ಬೀಳಲಾಗ ಎತ್ತಬಹುದೆ ಸೊಳ್ಳೆ ?
ವಿಶ್ವದಾಭಿರಾಮ ಕೇಳು ವೇಮ.





ಪೊಡವಿಯಲ್ಲಿ ನರನು ಪುತ್ರ ಪ್ರಾಪ್ತಿಕೋರಿ,
ಅತಿ ಶ್ರಮವ ಪಡುವ ಆಸೆಯಿಂದ,
ಪಡೆದ ಕುವರರೇನು ಕುಲವನುದ್ಧರಿಪರೆ ?
ವಿಶ್ವದಾಭಿರಾಮ ಕೇಳು ವೇಮ

ತಾನು ತಿನ್ನಲಿಲ್ಲ , ಧರ್ಮ ಮಾಡಲಿಲ್ಲ,
ಸುತರಿಗಾಗಿ ಸೊತ್ತು ಶೇಖರಿಸುತ,
ತಿಳಿಸಿ ಹೇಳದಂತೆ, ತೀರಿ ಹೋಹ ಮನುಜ.
ವಿಶ್ವದಾಭಿರಾಮ ಕೇಳು ವೇಮ.

ಸತಿಯು ಸುತರು ಮಾಯೆ; ಸುಖ ದುಃಖವು ಮಾಯೆ;
ಸಂಸಾರವು ಮಾಯೆ; ಸಾವು ಮಾಯೆ.
ಮಾಯೆ ಬದುಕು ಇಷ್ಟು, ಮಾಯೆ ಹುಟ್ಟಿಸಿತಲ !
ವಿಶ್ವದಾಭಿರಾಮ ಕೇಳು ವೇಮ.

ಗೃಹಸ್ಥ- ಧರ್ಮವರ್ಗದಲ್ಲಿ ಸಮಾವೇಶವಾಗುವ ಕೃತಜ್ಞತೆ ಸಮದರ್ಶಿತ್ವ ಪ್ರೀತಿ, ಮಧುರ ಮಾತು, ಸಂಯಮ, ಸನ್ನಡತೆ, ಉಪಕಾರ ಸ್ಮರಣೆ, ಕೊಡುಗೆ ಇತ್ಯಾದಿ ವಿಷಯಗಳನ್ನು ಕುರಿತು ತಿಳಿಯುವಾ.

## ಕೃತಜ್ಞತೆ :

ಮರೆವೆಂದು ತಿಳಿದು ಮನದಿ ಸುಜನರೆಲ್ಲ
ಯಾರೊ ಗೆಯ್ದ ಮೇಲ್ಮೆ ಎಂಥದಿರಲಿ,
ಮರಳಿ ಮೇಲ್ಮೆ ಬಗೆದು, ಮರ್ಯಾದೆ ಕಾಣುವರು.
ವಿಶ್ವದಾಭಿರಾಮ ಕೇಳು ವೇಮ,

ತನಗೆ ಗೆಯ್ದ ಮೇಲು ತಾನು ಅರಿಯೆ-ಕಲಿತು,
ಹರುಷದಿಂದ ಸೋಣಗ ಅರಿವುದಿಳೆಯ.
ತನಗೆ ಗೆಯ್ದ ಮೇಲು ತಾ ತಿಳಿಯದಿದ್ದರೆ,
ಮನುಜನೆಂಥ ಖಳನು ಮಹಿಲಿ ವೇಮ.

**ಸಮದರ್ಶಿತ್ವ :**

ಸುತ ಸತಿಪತಿಗಳಲಿ, ಸಕಲರಲ್ಲಿ, ಆತ್ಮ
ಮೇಲಾಗಿಯೇ ಇದ್ದು ಮೆರೆಯುತಿಹುದು.
ಬೇರೆ ಬೇರೆಯಾಗಿ ಬೆಳಗುವುದು ರೂಪದಿ.
ವಿಶ್ವದಾಭಿರಾಮ ಕೇಳು ವೇಮ.

ಸಮವು ಆದ ದೃಷ್ಟಿ ಸಮವಾಗಿಯೆ ನಿಲಿಸಿ,
ಬಾಹ್ಯರುಚಿಗಳ ತೊರೆದು ಭದ್ರವಾಗಿ
ಬೆಳಗೆ ನೋಡು ಬ್ರಹ್ಮ ಬಟ್ಟ ಬಯಲು ಆಯ್ತು.
ವಿಶ್ವದಾಭಿರಾಮ ಕೇಳು ವೇಮ

**ಪ್ರೀತಿ :**

ತಾಯಿ ತಂದೆಯೆನಲು ತಮ್ಮ ಆತ್ಮಸಖರು.
ನಲ್ಮೆ ಬಂಧು ಭೃತ್ಯರೆಲ್ಲ ಜನರು
ಕೂಡಿ ವರ್ಧಿಸುತಿರೆ ಘನತೆ ಹೆಚ್ಚುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಮಾನ ಧನವ ಬಿಡದೆ, ಮತ್ತೆ ಪುಣ್ಯವತಿಯಿರೆ,
ಹೆಣಗಿ ಪತಿಯ ಸೇವೆ ಹೆಚ್ಚು ಮಾಡಿ,
ಒಳಗೆ ಮೆಚ್ಚುತಿಹಳು , ಒಳಗುಟ್ಟನು ಕಾಣು.
ವಿಶ್ವದಾಭಿರಾಮ ಕೇಳು ವೇಮ

**ಮಧುರ ಮಾತು :**

ಕೋಗಿಲೆ ವನದಲ್ಲಿ 'ಕು. ಹೂ.' ಹಾಡುವಂತೆ
ನುರಿತ ಜನರ ಭಾವ ನಡೆಯು, ನುಡಿಯು.
ಕಾಗೆ ಕೂಗಿನಂತೆ ಕಲುಷಾತ್ಮನ ವಚನ.
ವಿಶ್ವದಾಭಿರಾಮ ಕೇಳು ವೇಮ.

ಅಲ್ಪನಾಡುತಿಪ್ಪ ಆಡಂಬರದ ನುಡಿ.
ಒಳ್ಳೆಯವನಾಡುವ ಮಧುರ ನುಡಿಯ.
ಮೊಳಗುವುದೇ ಹೊನ್ನು, ಕಂಚು ಧ್ವನಿಸುವಂತೆ ?
ವಿಶ್ವದಾಭಿರಾಮ ಕೇಳು ವೇಮ.





**ಸಂಯಮ :**

ಆಂಕೆಯರಿತು ಮಾತು ಆಡಲು ಅರಿತಾಗ.
ಸಣ್ಣ ದೊಡ್ಡತನದ ಗಣನೆಯೇಕೆ ?
ಬಾಲ ಹಿಡಿದ ದೀಪ ಬೆಳಗದೆ ಬೃಹದಾಗಿ?
ವಿಶ್ವದಾಭಿರಾಮ ಕೇಳು ವೇಮ.

ದ್ವಾರ ಚೌಕಟ್ಟಿಗೆ ಕದದ ಅಳತೆ ಗಡಿಯು,
ಬಾಯಿಗೊಪ್ಪ ನುಡಿಯೆ, ಇತಿಯು ಮಿತಿಯು.
ಧರ್ಮವರಿತು ತಿಳಿಸಿ ಧನ್ಯನಾಗು ಜಗದಿ.
ವಿಶ್ವದಾಭಿರಾಮ ಕೇಳು ವೇಮ

**ಕೀರ್ತಿ :**

ಗುಬ್ಬಿಗಾಗಿ ದೇಹ ಕೊಯ್ದನಾ ಶಿಬಿರಾಜ.
ವಾರ್ತೆ ಬಿಡದೆ ಬಂತು, ಕೀರ್ತಿ ಪಡೆದ.
ಎಣಿಸದಿರಲು ಕೇಳು, ಎನುವರು ಉಪಕಾರಿ.
ವಿಶ್ವದಾಭಿರಾಮ ಕೇಳು ವೇಮ.

ಇಹದ ಬಾಧೆಯೆಷ್ಟೊ ? ಇರಲುಬಹುದು ಬಾಳಿ.
ಯಮನ ಬಾಧೆ ಇರದೆ ಅಮರರಂತೆ.
ಪರದಿ ವ್ಯಥೆ ಇರದ ಬದುಕರಿಯಿರಿ ಜನರೆ!
ವಿಶ್ವದಾಭಿರಾಮ ಕೇಳು ವೇಮ

**ಸನ್ನಡತೆ :**

ಚಿತ್ತ ಶುದ್ಧಿ ಹೊಂದಿ ಗೆಯ್ದ ಪುಣ್ಯ ಕಾರ್ಯ.
ಕೊಂಚವಾದರೇನು ? ಕ್ಷುಲ್ಲಕಲ್ಲ.
ಆಲದ ಮರವೆಷ್ಟು ! ಅದರ ಬೀಜವೆಷ್ಟು ?
ವಿಶ್ವದಾಭಿರಾಮ ಕೇಳು ವೇಮ.

ಕುಲದೊಳೊಬ್ಬ ಮನುಜ ಗುಣವಂತನಾಗಲು,
ಕುಲಕೆ ಶೋಭೆಯವನ ಗುಣಗಳಿಂದ.
ಕಳೆಗಟ್ಟಿತು ವನವು ಗಂಧದ ಗಿಡದಿಂದ.
ವಿಶ್ವದಾಭಿರಾಮ ಕೇಳು ವೇಮ.

**ಪರಸತಿಗಮನ :**

ತನ್ನ ಹೆತ್ತು ಹೊತ್ತ ತಾಯಿಯಂತೆ ಕಾಣು.
ಅನ್ಯರ ಸತಿ. ನ್ಯಾಯ ಅರಿತು ನೋಡಿ.
ತನ್ನ ತಾಯಿಯಂತೆ ತಿಳಿಯಲಾರ ನರನು.
ವಿಶ್ವದಾಭಿರಾಮ ಕೇಳು ವೇಮ.

ಪರಸತಿಯ ಗಮನವು ಪ್ರತ್ಯಕ್ಷ ನರಕವು.
ಅರಿಯೆ ನಿಂದೆಗಳಿಗೆ ಆಲಯವ್ವೆ.
ಪುರುಷ ಕೇಳೆ ಕೊಲುವ, ಭೂಪತಿ ಕಾಡುವನು;
ವಿಶ್ವದಾಭಿರಾಮ ಕೇಳು ವೇಮ.

**ಸಹನಶೀಲತೆ :**

ಎಷ್ಟೆ ಇರಲಿ ಸಹನೆ; ಇಷ್ಟು ಮಾತ್ರ ಕೆಡಲು,
ಶುಭ್ರ ಕೀರ್ತಿ ಕೂಡ ಶೂನ್ಯವಹುದು.
ಗೆಯ್ದ ಪೂರ್ವ ಕೆಡುಕು ಗೇಲಿಯೊಡುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಗಂಗೆ ಹರಿಯುತಿಹುದು ಕದಲದ ತೆರದಲ್ಲಿ.
ರಾಡಿ ನಾಲೆ ನೀರಿಗುಂಟು ಶಬ್ದ.
ದಾನಿ ಸಹಿಸುವಂತೆ ಹೀನ ಸಹಿಸಲಾರ.
ವಿಶ್ವದಾಭಿರಾಮ ಕೇಳು ವೇಮ.

**ಅನಸೂಯೆ :**

ಪರರ ಕೆಡಿಸಲೆಂದು ಮನದಿ ಎಣಿಸುತಿಹರು.
ತಮಗೆ ಬರುವ ಕೇಡು ತಾವರಿಯದೆ,
ತಮ್ಮನೆ ಕೆಡಿಸುವುದು ದೈವವೊಂದಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಹೊಗಳಿಕೆ ಭುವಿಯೊಳಗವಶ್ಯ
ಜಗ ನಿಂದೆ ಕುತ್ಸಿತವಿರಲು, ಕೋವಿದನಿರಲುಂ;
ಲಗುಬಗೆ ಹಾನಿಯು ಬಪ್ಪುದು;
ಜಗದಲಿ ಮತ್ಸರವೆ ತನ್ನ ಕೆಡಿಪುದು ವೇಮಾ.

**ಲೋಭ :**

ತಾನು ಉಣ್ಣಲಾರ, ಸಂಪದಕಾಪ್ತರನು
ಕೂಡಿಸಿ ಕೊಳದಿಹನು ಕೇಳು ಪಶುವು.
ಬೆಳೆದ ಭೂಮಿಯಲ್ಲಿ ಬೆದರು ನಿಂತ ರೀತಿ.
ವಿಶ್ವದಾಭಿರಾಮ ಕೇಳು ವೇಮ

ಲೋಭಿ ನರನ ಕೊಲಲು ಲೋಕದೊಳಗೆ ಮತ್ತೆ
ಬೇಡ ಮದ್ದು, ವಿಧವು ಬೇರೆ ಇಹುದು.
ಹಣವ ಕೇಳೆ ಸಾಕು, ಹೊರಳಿ ಬಿದ್ದು ಸಾಯ್ವ.
ವಿಶ್ವದಾಭಿರಾಮ ಕೇಳು ವೇಮ





**ಕೀಳು ನಡತೆ :**

ತಾಯಿಗೆದುರಿಪ್ಪುದು, ತಂದೆಗೆದುರಿಪ್ಪುದು,
ಅನ್ನಕೆದುರಿಪ್ಪುದು, ತಿಳಿಯೆ ಮೂರು,
ಪಾತಕಗಳನರಿತು ವರ್ತಿಸಬೇಕಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಎಷ್ಟೊ ಓದನೋದಿ, ಎಷ್ಟು ಕೇಳಲೇನು ?
ಹೀನನಿಹನ ಗುಣವು ಹೋಗದಲ್ಲ !
ಹಾಲೆರೆಯಲಿದ್ದಲು ಹೋಹುದೆ ಮಲಿನವು ?
ವಿಶ್ವದಾಭಿರಾಮ ಕೇಳು ವೇಮ.

**ಭಂಡಮಾತು :**

ಅಲ್ಪನಾಡುತಿಪ್ಪ ಆಡಂಬರದ ನುಡಿ.
ಒಳ್ಳೆಯವನಾಡುವ ಮಧುರ ನುಡಿಯು.
ಮೊಳಗುವುದೇ ಹೊನ್ನು ಕಂಚು ಧ್ವನಿಸುವಂತೆ ?
ವಿಶ್ವದಾಭಿರಾಮ ಕೇಳು ವೇಮ.

ಬಾಯಿ ಬಡಿಯಲೊಬ್ಬ ಭಂಡ ಪಂಡಿತೆಂದು,
ಸಾಧು ಪಂಡಿತ ತಾ ಶಾಂತನಿಹನು.
ಬೊಗಳಲೇನು ನಾಯಿ, ಬೆದರದಲ್ಲ ಕುದುರೆ !
ವಿಶ್ವದಾಭಿರಾಮ ಕೇಳು ವೇಮ

**ನೀಚ ಕಾರ್ಯ ನಿಂದನೆ :**

ಮದ್ಯ ಕುಡಿದು ಮತ್ತೆ ದೊಡ್ಡ ಜನರ ಮಧ್ಯೆ
ಬಟ್ಟೆ ಕಳಚಿ ತಿರುಗುವಂಥ ದುಷ್ಟ,
ಹೋದ ಮೇಲೆ ಎಲ್ಲ, ಹೊದೆವ ಹರಕು ವಸ್ತ್ರ.
ವಿಶ್ವದಾಭಿರಾಮ ಕೇಳು ವೇಮ.

ಬಹಳ ಜನರ ಇರಿದು, ಬಡವರನ್ನು ವಧಿಸಿ,
ಹೊಡೆದು ಕೊಳ್ಳೆ ಸುಲಿದು, ಹೊಟ್ಟೆ ಹೊರೆದು,
ಎತ್ತ ಹೋದರೇನು ? ಯಮನು ಬಿಡನು ಕಡೆಗೆ.
ವಿಶ್ವದಾಭಿರಾಮ ಕೇಳು ವೇಮ,

**ಉಪಕಾರ ಸ್ಮರಣೆ :**

ಇರುವುದರಲಿ ಮನುಜ ಇರನು ಉಪಕಾರಿಯು,
ಕಣ್ಣು ಕಾಣದಲ್ಲ ಗರ್ವದಲ್ಲಿ.
ದೀನರಾದವರನು ದಯನೀಯದಿ ಕಂಡು,
ಪರಮ ಕಾಣ; ಬಾವಿ ಬೀಳ್ವ ವೇಮ.

ಪರರಿಗುಪಕರಿಸಲು, ಪರರ ಸೊತ್ತು, ಪರಗೆ
ಮರಳಿ ನೀಡಲಾಗ, ಪರಮ ಪ್ರಾಪ್ತಿ.
ಪರಮಗಿಂತ ಏನು ಪಾವನವೆ ಆ ಸೊತ್ತು ?
ವಿಶ್ವದಾಭಿರಾಮ ಕೇಳು ವೇಮ.

ಕೊಡುಗೆ :

ಉಣ್ಣುವ ಬಾನದೊಳು ಇನಿತು ದೈವಕಿಡಲು,
ಪುಣ್ಯ ಲೋಕಕವನು ಹೋಗುತಿಪ್ಪ.
ಅನ್ನದಾನಕಿಂತ ಮಿನ್ನದಾನವಿಲ್ಲ,
ವಿಶ್ವದಾಭಿರಾಮ ಕೇಳು ವೇಮ.

ಕೇಳ ದರ್ಥವೀವ ತಾನೆ ಬ್ರಹ್ಮಜ್ಞಾನಿ.
ಕೇಳಲರ್ಥವೀವ ತಾನೆ ತ್ಯಾಗಿ.
ಕೇಳಲೀಯದಾತ ಕಾಣು ಮಹಾಲೋಭಿ.
ವಿಶ್ವದಾಭಿರಾಮ ಕೇಳು ವೇಮ.

ಇದು ವರೆಗೆ ಧರ್ಮ ವರ್ಗ ಗೃಹಸ್ಥ ಭಾಗವನ್ನು ಕುರಿತು ಸಮೀಕ್ಷಿಸಿದೆವು. ಇನ್ನು ಧರ್ಮವರ್ಗ ಯೋಗ ಭಾಗವನ್ನು ಕುರಿತು ಸಮೀಕ್ಷಿಸೋಣ.

## ಧರ್ಮ ವರ್ಗ-ಯೋಗ :

ಭಾರತೀಯ ಜೀವನದಲ್ಲಿ ಚತುರಾಶ್ರಮ ಪದ್ಧತಿಯೂ ಇದೆ. ಬ್ರಹ್ಮಚರ್ಯೆ, ಗೃಹಸ್ಥ ವಾನಪ್ರಸ್ಥ, ಸನ್ಯಾಸ ಎಂಬ ಚತುರಾಶ್ರಮಗಳನ್ನೂ ಸ್ಮೃತಿಕಾರರು ಹೆಸರಿಸಿದ್ದಾರೆ. ಆದರೆ ನಾವು ಇದುವರೆಗೆ. ವಿವರಿಸಿದ್ದು ಗೃಹಸ್ಥಾಶ್ರಮ ವನ್ನಲ್ಲ. ಆದರೆ, ಧರ್ಮ, ಅರ್ಥ, ಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಧರ್ಮವರ್ಗದ ಭಾಗವನ್ನು. ಧರ್ಮವರ್ಗದಲ್ಲಿ ಇನ್ನೂ ಯೋಗ, ವಿಧಿ ಎಂಬೆರಡು ಉಪವಿಭಾಗಗಳೂ ಇವೆ.

ಈಗ 'ಧರ್ಮ ವರ್ಗ ಯೋಗ ' ಉಪವಿಭಾಗದಲ್ಲಿಯೇ ಮೂರುನೂರಾ ಐವತ್ತಕ್ಕಿಂತಲೂ ಹೆಚ್ಚು ಪದ್ಯಗಳು ಲಭ್ಯವಾಗಿವೆ. ಇವುಗಳನ್ನು ವಿವಿಧ ಶೀರ್ಷಿಕೆಗಳಲ್ಲಿ ವಿಭಜಿಸಲಾಗಿದೆ. ಸತ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯೆ ಎಂಬ ಐದನ್ನು ಯಮ ಸಾಧನೆಯೆನ್ನುತ್ತಾರೆ. ಇನ್ನು ಶೌಚ, ಸಂತೋಷ. ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನಗಳನ್ನು ನಿಯಮ ಸಾಧನೆಯೆಂದು ಕರೆಯುತ್ತಾರೆ. ಆಸೆ, ಲೋಭ, ಮೋಹ, ಮದ, ಮತ್ಸರ, ವಿವೇಕ, ವೈರಾಗ್ಯ ಮತ್ತು ತ್ಯಾಗಗಳೆಂದು ಗುಣಸ್ವಭಾವಗಳನ್ನು ಧರ್ಮ ವರ್ಗ-ಯೋಗ ವಿಭಾಗದಲ್ಲಿ ಸೇರಿಸಲಾಗಿದೆ. ಈ ಕುರಿತು ಸಾಕಷ್ಟು ಪದ್ಯಗಳು ಲಭ್ಯವಿದ್ದು ನಾವೀಗ ಪ್ರತಿಯೊಂದು ಶೀರ್ಷಿಕೆಯಡಿ ಎರಡೆರಡು ಪದ್ಯಗಳನ್ನು ನೀಡಿ ಸಂಕ್ಷೇಪಿಸಿಬೇಕಾಗಿದೆ.





COLLEGE OF BUSINESS ADMINISTRATION LIBRARY HUBLI

ಸತ್ಯ :

ಋತವನ್ನ ? ತವರಿಯಲು ಯಾರಿಗೇನು ಅಳವೆ
ಸ್ಥಿತಿಯ ಗತಿಯ ತಿಳಿಯೆ ಸ್ಫುಟವಾಯ್ತು.
ಕೇಳಿದಷ್ಟರಿಂದ ಹೇಳ ಹೋಗೆ ಸಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸತ್ಯ ಒಪ್ಪವಿರಲು, ಜ್ಞಾನ ಒಪ್ಪಉಂಟು.
ಜ್ಞಾನ ಒಪ್ಪವಿರಲು ಸತ್ಯ ಉಂಟು.
ಜ್ಞಾನ ಸತ್ಯಗಳನು ಸಮನಿರಿಸೆ ದ್ವಿಜನು.
ವಿಶ್ವದಾಭಿರಾಮ ಕೇಳು ವೇಮ.

ಅಹಿಂಸೆ :

ಜೀವಿ ಜೀವಿ ಕೊಂದು ಜೀವಿಗಾಗಿ ಇರಿಸಿ,
ಜೀವಿ ತಾನು ಬಲಿತು ಬೆಳಗುತಿರುವ.
ಜೀವ ಹಿಂಸಕರಿಗೆ ಸಿಕ್ಕುವುದೇ ಮೋಕ್ಷ ?
ವಿಶ್ವದಾಭಿರಾಮ ಕೇಳು ವೇಮ.

ಹಿಂಸೆ ಗೆಯ್ಯದಿಹುದೆ ಮುಖ್ಯ ಧರ್ಮವಯ್ಯ.
ಪ್ರಾಣಿ ಕೊಂದು ತಿನ್ನುವವನಿಗಿಂತ,
ಸತ್ತ ಪಶುವ ತಿಂಬ ಚಂಡಾಲನೆ ಮೇಲು.
ವಿಶ್ವದಾಭಿರಾಮ ಕೇಳು ವೇಮ

ಅಸ್ತೇಯ ( ಕಳವು ಮಾಡದಿರುವಿಕೆ ) :

ಪರರ ಆಸ್ತಿಯಲ್ಲಿ ಭ್ರಾಂತಿ ಇಲ್ಲದಂಥ,
ಪುರುಷನವನಿಯಲ್ಲಿ ಪುಣ್ಯ ಮೂರ್ತಿ.
ಪರರ ಆಸ್ತಿಯಾಸೆ ಪಾಪ ಚಿಂತೆಯಹುದು.
ವಿಶ್ವದಾಭಿರಾಮ ಕೇಳು ವೇಮ.

ಖಗಗಳಿರವು ಚಂದ ಕಾಣಲಂದವುಹುದು.
ಗುಂಪು ನೋಡಿದೊಡನೆ ಗುರುತಾಗದೆ ?
ದೇವ ಕೊಡದ ಸೊಗಸು ತಾನು ಬಯಸಲೇಕೆ ?
ವಿಶ್ವದಾಭಿರಾಮ ಕೇಳು ವೇಮ.

## ಅಪರಿಗ್ರಹ ( ಸಂಗ್ರಹ ಮಾಡದಿರುವಿಕೆ ) :-

"ದೇಹ ರಕ್ಷಾತಿರಿಕ್ತ ಭೋಗ ಸಾಧನ S ಸ್ವೀಕಾರೋ ಅಪರಿಗ್ರಹಂ"

ಅಂದರೆ ದೇಹ ರಕ್ಷಣೆಗೆ ಬೇಕಾದುದಕ್ಕಿಂತ ಹೆಚ್ಚಿನ ಸುಖ ಸೌಕರ್ಯಗಳನ್ನು ಭೋಗಿಸದಿರುವುದೇ ಅಪರಿಗ್ರಹವೆನಿಸುತ್ತದೆ.

ತೆರಳಿ ಮರಳುವಾಗ, ಮರಳಿ ತೆರಳುವಾಗ,
ಹೊರಳಿ ಬಂದು ಹಣವ ಹೊತ್ತು ಒಯ್ಯ.
ತಾನೆಲ್ಲಿ ಹೋಹನೋ ? ಧನವೆಲ್ಲಿ ಹೋಹುದೊ ?
ವಿಶ್ವದಾಭಿರಾಮ ಕೇಳು ವೇಮ.

ಕಣ್ಣು ಇಲ್ಲದವನು, ಕಾಲು ಇಲ್ಲದವನು,
ಉಭಯರು ಒಡಗೂಡಿ ಉಂಟು ಅಂತೆ.
ಬಡವ ಬಡವನೊಡನೆ ಬೆರೆತು ಇರುವ ನೋಡು.
ವಿಶ್ವದಾಭಿರಾಮ ಕೇಳು ವೇಮ.

## ಬ್ರಹ್ಮ ಚರ್ಯ :-

'ಬ್ರಹ್ಮಣಿ ವಿಚರಣಂ ಬ್ರಹ್ಮಚರ್ಯಂ'. ಅಂದರೆ ಸಂತತ ಬ್ರಹ್ಮ ವಿಚಾರದಲ್ಲಿ ಇರುವುದೇ ಬ್ರಹ್ಮಚರ್ಯವಾಗಿದೆ.

ಅದುಮಿ ಮನಸು ನಿಲಿಸಿ, ಆನಂದ ಕೇಳಿಯಲಿ,
ಬ್ರಹ್ಮಮಯದಿ ಮುಕ್ತಿ ಪಡೆಯೆ ಕೋರು,
ಜಿಹ್ವೆರುಚಿಗಳಿಂದ ಜೀವಿ ಕೆಡುವನಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಕಚ್ಚೆಗಳನು ಏಕೆ ಕಟ್ಟಬೇಕು ಬಿಗಿದು ?
ಬುದ್ಧಿ ಕುದುರದೆ ಇರೆ, ಬರಿಯ ಗೋಟೆ
ಏನು ಮಾಳ್ಪುದದುವೆ ಇರದೆ, ಬಿಗಿದೊಡೆಷ್ಟು?
ವಿಶ್ವದಾಭಿರಾಮ ಕೇಳು ವೇಮ





## ನಿಯಮ ಸಾಧನೆ :-

ಯಮ ಸಾಧನೆಯು ಸಾಮಾಜಿಕ ವಿಧಿಯಾದರೆ, ನಿಯಮ ಸಾಧನೆಯು ವೈಯಕ್ತಿಕ ವಿಧಿಯಾಗಿದೆ. ಶೌಚ, ಸಂತೋಷ, ತಪ, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನಗಳು ನಿಯಮ ಸಾಧನೆಯ ಪಂಚ ಅಂಗಗಳಾಗಿವೆ.

### ಶೌಚ :

ಶೌಚವು ಎರಡು ವಿಧವಾಗಿದೆ. ಅಂತಃ ಶೌಚ ಮತ್ತು ಬಾಹ್ಯ ಶೌಚ.

ಕಾಲ ಧರ್ಮವರಿತು ಕಪಟ ವೃತ್ತಿ ತೊರೆದು,
ಅಂಗನೆ ಮಕ್ಕಳಲಿ ಅಸೆ ಬಿಟ್ಟು,
ಮೇಲ್ಮೆಯುಳ್ಳ ಶಿವನ ಮೇಲೆದ್ದು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಅಂತರಂಗದಲ್ಲಿ ಅಪರಾಧವ ಗೆಯ್ದು,
ಒಳ್ಳೆಯವನ ರೀತಿ ಉಂಟು ಮನುಜ.
ಇತರರಿಯದಿರಲು ಈಶ್ವರನರಿಯನೇ ?
ವಿಶ್ವದಾಭಿರಾಮ ಕೇಳು ವೇಮ.

### ಸಂತೋಷ :

ಅತಿ ಹಿತವಾಗಿಯೇ ಆಡುತಿಪ್ಪ ನುಡಿಗೆ,
ಸಂತೋಷಿಪರೆಲ್ಲ ಸತ್ಪುರುಷರು.
ಅಧಿಕ ಭಾಷಣವಿರೆ, ಆಯಾಸವದೆಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸುಗುಣವಂತೆ ಕಾಂತೆ ಸುದತಿಯಾಗಿರ್ದೊಡೆ,
ಮಿಗಿಲು ಬುದ್ಧಿವಂತ ಮಕ್ಕಳಿರಲು,
ಸ್ವರ್ಗವೇತಕಯ್ಯ ? ಸಂಸಾರ ಸಾಲದೆ ?
ವಿಶ್ವದಾಭಿರಾಮ ಕೇಳು ವೇಮ

### ತಪ :

ತಪಸ್ ಎಂದರೆ ಗುರಿಯನ್ನು ತಲುಪಲು ಬರಮಾಡಿಕೊಳ್ಳುವ ಕಷ್ಟ ಸಹಿಷ್ಣುತೆ. ತಪಸ್ಸು ಕಾಯಿಕವಿರಬಹುದು, ವಾಙ್ಮಯವಿರಬಹುದು, ಮಾನಸಿಕವಿರಬಹುದು.

ಕಲಿಯುಗದೊಳು ಹುಟ್ಟಿ ಕಡೆಯ ಗುರಿ ತಲುಪದೆ,
ಒಡಲು ಬಡವ ಮಾಡಿ ಉಗ್ರ ತಪವ,
ತಾವು ಗೆಯ್ದರೆಷ್ಟು ? ತತ್ತ್ವವರಿಯ ಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಯಾರನ್ನೇ ಆಗಲಿ, ಕೀಳೆಂದು ಭಾವಿಸದೆ, ನಿಂದಿಸದೆ, ಅವಾಚ್ಯ ನುಡಿಯದಿರುವುದು ವಾಙ್ಮಯ ತಪಸ್ಸಾಗಿದೆ.

ಅತಿ ಹಿತವಾದಂಥ ಆಡಿದಾ ಮಾತಿಗೆ,
ಸಂತಸಿಸುವರೆಲ್ಲ ಸತ್ಪುರುಷರು.
ಅಧಿಕ ಭಾಷಣಾದಿ ಆಯಾಸಕರವಷ್ಟೆ ?
ವಿಶ್ವದಾಭಿರಾಮ ಕೇಳು ವೇಮ.

## ಸ್ವಾಧ್ಯಾಯ :

ಸ್ವಾಧ್ಯಾಯವೆಂದರೆ, ಆಧ್ಯಾತ್ಮಿಕ ವಿಷಯಗಳನ್ನು ಅರಿತುಕೊಳ್ಳುವುದು. ಪೂರ್ವಕಾಲದಲ್ಲಿ ವಿಧ್ಯಾರ್ಥಿಗಳು ತಮ್ಮ ಪ್ರತಿದಿನದ ಸ್ವಾಧ್ಯಾಯವನ್ನು ಋಷಿಗಳ ಛತ್ರಗಳಲ್ಲಿ ಇದ್ದು ನಡೆಸುತ್ತಿದ್ದರು ಸ್ವಾಧ್ಯಾಯವೆಂದರೆ ವಿಷಯ ಕುರಿತು ಓದುವುದು ಇಲ್ಲವೆ ಪಠಣ ಮಾಡುವುದು ಮಾತ್ರ ಅಲ್ಲ, ಓದಿನಾಚೆಯ ಅರ್ಥವನ್ನು ಗ್ರಹಿಸುವುದೂ ಆಗಿದೆ.

ಓದನೆಲ್ಲ ಓದಿ ಒಳ್ಳೆ ವಿವೇಕಿಯೆನೆ,
ಕಪಟವರಿಯದಿರಲು ಕಾಣ ಮುಕ್ತಿ.
ತಿಪ್ಪೆ ಗುಂಡಿ ನಾಯಿ ತಳೆದ ಧ್ಯಾನದಂತೆ.
ವಿಶ್ವದಾಭಿರಾಮ ಕೇಳು ವೇಮ.

ವೇದಗಳನು ಓದಿ, ಒಣ ಜಂಭ ಪಡುವರು.
ಅಧೋಗತಿಗಿಳಿದರು ಅಯ್ಯರೆಲ್ಲ.
ಬ್ರಹ್ಮ ಮಹಿಮೆಯರಿತು ಬದುಕುತಿಹುದೆ ಮೇಲು.
ವಿಶ್ವದಾಭಿರಾಮ ಕೇಳು ವೇಮ.

## ಈಶ್ವರ ಪ್ರಣಿಧಾನ :

ಈಶ್ವರ ಪದದ ಅರ್ಥವೆಂದರೆ ಪರಮ ನಿಯಂತ್ರಕ. ಪ್ರಣಿಧಾನ ಎಂದರೆ ಆಶ್ರಯ ಕೋರುವುದು. ಈಶ್ವರನು ಜೀವಿಗಳ ಸರ್ವ ನಿಯಂತ್ರಕನು. ಅವನೇ ಸೂತ್ರಧಾರ. ಜೀವಿಗಳೆಲ್ಲ ಅವನ ಕೈಯಲ್ಲಿಯ ಬೊಂಬೆಗಳಂತೆ.

ಬೊಂಬೆಯಾಟದವನು ಬೊಂಬೆಯಾಡಿಸುತಿಹನು.
ಧರಣಿ ಜನರ ನೋಟದೆಲ್ಲೆ ಮೀರಿ.
ತಾನು ಮರೆಯೊಳಿದ್ದು ದೈವವಾಡಿಸುವನು.
ವಿಶ್ವದಾಭಿರಾಮ ಕೇಳು ವೇಮ.

ಜೀವ ಭಾವಕಂಟಿ ಸತ್ತು ಹೋಹರಲ್ಲ !
ಬ್ರಹ್ಮಭಾವ ಹೊಂದಿ ಬಾಳಬಹುದು.
ನೀರು ಮುತ್ತಾದರು ನೀರಾಗಿ ಬದಲದು.
ವಿಶ್ವದಾಭಿರಾಮ ಕೇಳು ವೇಮ.





ಇನ್ನು ಸಾಧನೆಗೆ ಅನುಗುಣವಾದ ವೈಯಕ್ತಿಕ ಗುಣ ಸ್ವಭಾವಗಳನ್ನು ಕುರಿತು ತಿಳಿಯುವಾ :

### ಆಸೆ :

ಆಸೆಯಿಂದ ಮನುಜ ಆಯುವಿರುವ ಕಾಲ,
ತಿರುಗುತಿಪ್ಪ ಭ್ರಮೆಯ ತೊರೆಯದಿದ್ದು.
ಮುಸುರೆ ಪಾತ್ರೆಯಲ್ಲಿ ಮುಕುರುವ ನೊಣದಂತೆ.
ವಿಶ್ವದಾಭಿರಾಮ ಕೇಳು ವೇಮ.

ಇಲಿಯ ಹಿಡಿಯೆ ಬೆಕ್ಕು ಇಷ್ಟಸ್ಪೂರ್ತಿಯಹುದೆ ?
ಕೋಳಿ ಹಿಡಿಯೆ ಸಿದ್ಧ ಗೊಳ್ಳುತಿಹುದು.
ಮಮತೆ ತೊರೆಯದನಕ ಮೋಕ್ಷ ದೊರೆವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

### ಕೋಪ :

ಕೋಪದಿಂದ ಘನತೆ ಕೊಂಚತನಕಿಳಿವುದು.
ಕೋಪದಿಂದ ಮಿಗಿಲು ತಾಪವಿಹುದು.
ಕೋಪ ನಿಗ್ರಹಿಸಲು ಕೋರಿಕೆ ಫಲಿಸುವುದು.
ವಿಶ್ವದಾಭಿರಾಮ ಕೇಳು ವೇಮ.

ಅನವರತ ಘೃಣೆ ತೊರೆದು ಅನಲವನು ಆರಿಸಿ,
ಗೋಟೆ ಬಿಗಿದು ಕಟ್ಟಿ, ಕೋಪ ಮೆಟ್ಟಿ,
ಆಸೆ ಬಿಡುವ ಅವನು ಆಗುವನು ಯೋಗಿಯು.
ವಿಶ್ವವದಾಭಿರಾಮ ಕೇಳು ವೇಮ.

### ಲೋಭ :

ಲೋಭ ಮೋಹದಿಂದ ಲಾಭ ಪ್ರಾಪ್ತಿ ಇರದು.
ನೆನೆದ ಕಾರ್ಯವೆಲ್ಲ ನೆರವೇರವು.
ತಾವೊಂದು ಬಗೆದರೆ ದೈವದ ಬಗೆಯೊಂದು.
ವಿಶ್ವದಾಭಿರಾಮ ಕೇಳು ವೇಮ.

ಗೊಡ್ಡು ಹಸು ಹಿಂಡಲು ಗಡಿಗೆ ದೂರ ಬದ್ದು,
ಹಲ್ಲು ಮುರಿಯೆ ಒದೆತ, ಹಾಲು ಇಲ್ಲ.
ಲೋಭಿ ನರನ ಕೇಳೆ ಲಾಭವೇನು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

**ಮೋಹ :**

ಸತಿಯು ಸುತರು ಎನಲು ಅತಿ ಮೋಹವಿರುವುದು.
ಧನದ ಮೇಲಣಾಸೆ ತಗಲಿ ಇಹುದು.
ಇಂಥ ನರರಿಗೆಲ್ಲ ಇಹದಿ ಮುಕ್ತಿ ಸಿಗದು.
ವಿಶ್ವದಾಭಿರಾಮ ಕೇಳು ವೇಮ.

ಇನಿಯಳ ಕಂಡೊಡೆ ಅಷ್ಟು ಇಷ್ಟು ಏನು ?
ಅಗ್ನಿಗರಗು ಕರಗುವಂಥ ರೀತಿ.
ಬೆಳೆದ ಮೊಹವಿಂಥ ಬೆರಗುಗೊಳಿಸುತಿಹುದು.
ವಿಶ್ವದಾಭಿರಾಮ ಕೇಳು ವೇಮ.

**ಮದ ಮತ್ಸರಾದಿ :**

ಮದವು ಮತ್ಸರಾದಿ ಮಮಕಾರವೆನ್ನುವ,
ವ್ಯಸನಗಳ ದಹಿಸಿ, ವೇಗವಾಗಿ,
ಪರರಿಗುಪಕರಿಸಲು, ಪರ ನಂಬುವ ಯೋಗಿ.
ವಿಶ್ವದಾಭಿರಾಮ ಕೇಳು ವೇಮ

ಕಾನನವ ಹೊಕ್ಕು ತಿರುಗುತ, ಕೂಡಬೇಡ.
ಹೆಣಗಿ ಮದ ಮತ್ಸರಾದಿಯ ಹೂಳಿ ಬಿಟ್ಟು,
ಮೌನ ಕೇಳಿಯನು ಸೇರೆ, ಮಾನ್ಯನರಿಯೊ.
ಧ್ಯಾನ ಧಾರಣ ಯೋಗವನೆ ಬಾಳು ವೇಮ.

**ವಿವೇಕ :**

ವಿವೇಕವೆನಲು ಕೇಳು , ವಿಚಿತ್ರ ಕೊಡಲಿಯಿಂದ,
ಅವಿದ್ಯೆಯೆಂಬ ದೊಡ್ಡ ಅಡವಿ ಕಡಿದು,
ತಿಳಿವು ಎಂಬ ಚೊಕ್ಕ ದೀಪ ಕೈಲಿ ಹಿಡಿದು,
ಮುಕ್ತಿ ಕಾಣಬಹುದು, ಮುಂದೆ ವೇಮ.

ತನುವು ತನ್ನ ಮನೆಯು, ತತ್ರ ಶತ್ರು ಮಿತ್ರ,
ತಿಳಿಯಲಾರದವನ ತಿಳಿವದೇಕೆ ?
ತಿಳಿದು ಸರಿಗೊಳಿಪುದೆ ದಿವ್ಯಾಮೃತ ನೋಡು.
ವಿಶ್ವದಾಭಿರಾಮ ಕೇಳು ವೇಮ





**ವೈರಾಗ್ಯ :**

ಅತುಲ ವೈರಾಗ್ಯ ಬೋಧನೆಗೆ, ಅಂಟಿ ಅರಿತು,
ಸತಿಯ ಮಮತೆಗೆ ಸಿಗದೆ, ಸತ್ಯ ತಿಳಿದು.
ಮತಿಯು ಚೆದರದೆ ಅರಿಯುವ ಮಾನ್ಯ ರೀತಿ
ಇದುವೆ ಕುದುರಿದವ ಸಜ್ಜನನು ಇಳೆಯಲಿ ವೇಮ. ?

ಭವ ಸಾಗರದಂತೆ, ಭಾರ್ಯೆ ಮೊಸಳೆಯಂತೆ.
ಮೀನು ನೀರ ಜಂತು, ಮಕ್ಕಳೆಲ್ಲ,
ಭವ ಹರನ ನೆನೆಯದೆ ಪಾರುಗಾಣರಾರು.
ವಿಶ್ವದಾಭಿರಾಮ ಕೇಳು ವೇಮ.

**ತ್ಯಾಗ :**

ಇದು ನನಗೆ ಬೇಡವೆನ್ನುತ,
ಅದ ಬಿಡದೆ ಮನದೊಳಿಪ್ಪ ವಸ್ತುವ ಭ್ರಮಿಪನ್.
ಕದಲದದನೆ ಬಿಡದಿದ್ದರೆ,
ಅದುವೆ ಸಂಸಾರ ಬೀಜವೆಂಬರು ವೇಮಾ.

ಆಸೆಗಳನು ಕಡಿದು, ಅಗ್ನಿಯನು ಆರಿಸಿ,
ಕಟ್ಟಿ ಬಿಗಿದು ಚಡ್ಡಿ, ಕೋಪ ತಗ್ಗಿ,
ಆಸೆ ಬಿಟ್ಟು ಇರುವ ಅವನೆ ಯೋಗಿ ನಿಷ್ಠ.
ವಿಶ್ವದಾಭಿರಾಮ ಕೇಳು ವೇಮ.

ಇದು ವರೆಗೆ ಧರ್ಮ ವರ್ಗದ ಯೋಗ ವಿಭಾಗವನ್ನು ಕುರಿತು ಪಕ್ಷಿನೋಟ ಬೀರಿದೆವು . ಇನ್ನು ಧರ್ಮ ವರ್ಗದ ಕೊನೆಯ, ಆದರೆ ಅತ್ಯಂತ ಮುಖ್ಯವಾದ, ವಿಧಿ ವಿಭಾಗವನ್ನು ಕುರಿತು ಸ್ವಲ್ಪ ವಿವೇಚಿಸುವಾ :

## ಧರ್ಮ ವರ್ಗ- ವಿಧಿ :-

ಹುಟ್ಟಿದವನು ಸಾಯಲೇ ಬೇಕು ಮತ್ತು ಸತ್ತವನು ಹುಟ್ಟಲೇ ಬೇಕು. ಇಲ್ಲವೆ ಮೂಲ ಸೇರಬೇಕು, ಅರ್ಥಾತ್ ಮೋಕ್ಷ ಪಡೆಯಬೇಕು. ಇದುವೇ ವಿಧಿನಿಯಮ. ಇದನ್ನು ಕರ್ಮ, ಕರ್ಮಫಲ, ವಿಧಿಯ ಕೈವಾಡ ಮತ್ತು ದೃಷ್ಟಾಂತಗಳು ಎಂಬ ಶೀರ್ಷಿಕೆಗಳಡಿ ನೀಡಲಾಗಿದೆ..

### ಕರ್ಮ :-

"ಹರನ ಕರುಣೆ ಇರದೆ ಮರದೆಲೆಯೂ ಅಲುಗದು' 'ಎಂದಿದ್ದಾರೆ ವೇಮನ. ವಿಧಿ ನಿಯೂಮಕನು ಪರಮೇಶ್ವರನು. ಬ್ರಹ್ಮನ ನಿಯಮವೊಂದಿದೆ. ಏನು ಮಾಡಿದರೆ ಅದರ ಫಲವು ಏನಾಗಬೇಕು? ಎಂದು. ಘಟನೆಗಳು ಈ ಪ್ರಕಾರವೇ ಘಟಿಸುತ್ತವೆ. ಇತ್ತ ಮಾನವನಿಗೆ ತನ್ನ ಸ್ವಂತ ಇಚ್ಛಾ ಶಕ್ತಿಯೂ ದತ್ತವಾಗಿದೆ. ಈ ಸ್ವ-ಇಚ್ಛೆಯು ದೈವೇಚ್ಛೆಯೊಂದಿಗೆ ಮೇಳವಿಸಿದರೆ, ಕಾರ್ಯದ

ಫಲವು ಸ್ವ–ಇಚ್ಛೆಯಂತಾಗುತ್ತದೆ. ಇಲ್ಲವಾದರೆ ಇಲ್ಲ. 'ವಿಧಿಯು ಬೆನ್ನಿಗಿರಲು ವರವೀವುದು ದೈವ. ಬ್ರಹ್ಮ ವಿಧಿಗೆ ಕರ್ತ, ಕರ್ಮಕೆ ತಾ ಕರ್ತ.'

ಜನ್ಮ ಕಳೆದು ಬೇರೆ ಜನ್ಮವೆತ್ತಿ ಬರಲು,
ಕರ್ಮಧರ್ಮಗಳದು ಗಣನೆಯುಂಟು.
ಕರ್ಮ ಧರ್ಮಗಳನು ಕಡೆಗಣಿಸ ಬಹುದೇ ?
ವಿಶ್ವಧಾಬಿರಾಮ ಕೇಳು ವೇಮ.

ಆಗುತಿಪ್ಪ ಕಾರ್ಯ ಆಗದೆಂತು. ಇಹವು ?
ಆಗದಂಥ ಕಾರ್ಯ ಆಗವೆಂದು.
ಮಹಿಮೆ ಬೇರೆಯುಂಟು, ಮನುಜರಲ್ಲಿ ಉಂಟೆ?
ವಿಶ್ವದಾಭಿರಾಮ ಕೇಳು ವೇಮ.

ವಿಧಿಯು ಬೆನ್ನಿಗಿರಲು ವರವೀವುದು ಧೈವ.
ಅದುವೆ ಕರ್ಮದಿಂದ. ಅಲ್ಲ ವಿಧಿಯು.
ಕರ್ತ ಅಜನು ವಿಧಿಗೆ ಕರ್ಮಕೆ ತಾ ಕರ್ತ.
ವಿಶ್ವದಾಭಿರಾಮ ಕೇಳು ವೇಮ.

ಕರ್ಮವು ಜ್ಞಾನಿಗೆ ದೂರವು.
ಕರ್ಮಗಳಿಗೆ ಜ್ಞಾನಿ ದೂರನಿಹ, ನಿಜವಿದು. ತಾ
ಕರ್ಮ ಜ್ಞಾನಗಳುಡುಗಿದ,
ನಿರ್ಮಲನಿಗೆ ಉಂಟು ಮುಕ್ತಿ, ನಿಜವಿದು, ವೇಮಾ.

## ಕರ್ಮ ಫಲ :–

ಕರ್ಮಕ್ಕೆ ಸಮನಾಗಿ ಮತ್ತು ವಿರುದ್ಧ ದಿಕ್ಕಿನಲ್ಲಿ ಪ್ರತಿಕರ್ಮವಿರುತ್ತದೆ. ಇದು ನಿಸರ್ಗ ನಿಯಮ. ಮಾನಸಿಕ ಕ್ಷೇತ್ರದಲ್ಲಂತೂ ಇದು ಜನ್ಮಾಂತರಕ್ಕೂ ವಿಸ್ತರಿಸುತ್ತದೆ. ಇದೇ ವಿಧಿ ನಿಯಮ.

ಬೇಕು ಎನಲು ಬರದು; ಬೇಡವೆನಲು ಬಿಡದು.
ಪೂರ್ವ ಕರ್ಮಕಂಟಿ ಫಲವು ಉಂಟು.
ಹೃದಯದಲ್ಲಿ ದುಃಖ ಪಡದಿರುವುದೆ ಧರ್ಮ.
ವಿಶ್ವದಾಭಿರಾಮ ಕೇಳು ವೇಮ.

ಭವವು ಪೂರ್ವ ಕರ್ಮ ಫಲವು ; ಅನುಭವಿಸಲು.
ಬಂದಿತೆಂದು, ಮನವ ಭದ್ರಗೊಳಿಸು,
ಕಷ್ಟ ಸುಖಗಳೆಷ್ಟೊ ? ಕಂಡು ತೊಲಗಬೇಡ.
ವಿಶ್ವದಾಭಿರಾಮ ಕೇಳು ವೇಮ.





ಗೂಬೆ ಹೊಕ್ಕ ಮನೆಯ ಗಡನೆ ಹಾಳು ಗೆಡವಿ,
ಹೊರಟು ಹೋಹರೆಷ್ಟು ಹುಚ್ಚರಿಹರು ?
ಗೂಬೆ ಗೃಹಗಳಲ್ಲ , ಕೂಡಿ ಬಿದ್ದ ಕರ್ಮ!
ವಿಶ್ವದಾಭಿರಾಮ ಕೇಳು ವೇಮ.

ಮಗುವಾಗಿರುವಾಗ ಮಾಡಿದ ಕರ್ಮಗಳು,
ಬಾಲ ಮುದಿಯರನ್ನು ಬಾಧಿಸುವವು.
ಮಹಿಯಾಗಸ ನಡುವೆ ಮತಿಯ ನಿಲಿಸಿ ನೋಡು.
ವಿಶ್ವದಾಭಿರಾಮ ಕೇಳು ವೇಮ,

## ವಿಧಿಯ ಕೈವಾಡ :–

ತನ್ನ ಪೂರ್ವಕರ್ಮದಿಂದಾಗಿ ತನಗೆ ಭಾಗ್ಯ ಪ್ರಾಪ್ತಿ ಇದ್ದರೆ ಮಾತ್ರ ಕಾರ್ಯವು ಸಫಲವಾಗುತ್ತದೆ. ಇಲ್ಲವಾದರೆ ಇಲ್ಲ. ಭಾಗ್ಯ ಹೀನನಿಗೆ ಪರುಸವೇದಿ ದೊರೆತರೂ ಅದು ನಿಲ್ಲದು. ಈ ಭಾಗ್ಯ ಇಲ್ಲವೆ ವಿಧಿಯನ್ನು ಹಣೆ ಬರೆಹವೆನ್ನುತ್ತೇವೆ. ಇದನ್ನು ಅಳಿಸಲು ಶಕ್ಯವೇ ?

ವಿಧಿಯ ನಿಯಮ ತಿಳಿಯದೆ, ತನ್ನ ಕರ್ಮದ ಪೂರ್ವಾಪರ ತಿಳಿಯದೆ, ಶಕುನ ಮತ್ತಿತರ ಮೂಢ ನಂಬುಗೆಗಳನ್ನು ಬೆಳೆಸಿಕೊಳ್ಳುವುದು ವ್ಯರ್ಥವಷ್ಟೇ?

ಭಾಗ್ಯ ಹೀನನಿಹಗೆ ಪರುಸವೇದಿ ದೊರೆಯೆ,
ಅದುವೆ ನಿಲ್ಲದಾಗ ಕದಲದಂತೆ.
ಮಳೆಯ ಜೊತೆಗೆ ಬರುವ ಆಲಿಕಲ್ಲು ನಿಲುವು.
ವಿಶ್ವದಾಭಿರಾಮ ಕೇಳು ವೇಮ.

ಶುಭದ ಶಕುನ ನಂಬಿ ಶುಭ ಲಗ್ನವೆಂಬರು.
ಒಬ್ಬರವರೊಳಿಲ್ಲ ಅಬ್ಬ ಜಗದಿ!
ಸೌಖ್ಯ ಹಬ್ಬ ಜಗದಿ ಶಕುನದಲ್ಲಿ ಇಹವೆ ?
ವಿಶ್ವದಾಭಿರಾಮ ಕೇಳು ವೇಮ.

ಚಿಪ್ಪಿನಲ್ಲಿ ಬಿದ್ದ ಚಿಮುಕು ಮುತ್ತೆ ಆಯ್ತು.
ನೀರಿನಲ್ಲಿ ಚಿಮುಕು ನೀರೆ ಆಯ್ತು.
ಪ್ರಾಪ್ತಿಯಿರುವ ತಾಣ ಫಲವು ದೊರೆಯದೆಂತು ?
ವಿಶ್ವದಾಭಿರಾಮ ಕೇಳು ವೇಮ.

ತನಗೆ ಪ್ರಾಪ್ತಿ ಇಲ್ಲ , ದಾತರು ಕೊಡರೆಂದು,
ದೋಷ ಬುದ್ಧಿಯಿಂದ ದೂರಲೇನು ?
ಮೂಗು ಡೊಂಕು ನೋಡಿ ಮೂಗುತಿ ದೂರುವುದೆ ?
ವಿಶ್ವದಾಭಿರಾಮ ಕೇಳು ವೇಮ.

## ದೃಷ್ಟಾಂತಗಳು :-

ವಿಧಿಯ ಕೈವಾಡವನ್ನು ಇತಿಹಾಸಕಾರರು, ಪುರಾಣ ಕರ್ತರು ಸಾಕಷ್ಟು ಕಥೆಗಳಿಂದ ತಿಳಿಸಿದ್ದಾರೆ. ಅವನ್ನು ನೆನೆಪಿಸಿಕೊಳ್ಳುವುದು ಲೇಸಲ್ಲವೇ ?

ಕನಕ ಗಿರಿಯು ತನ್ನ ಕೈಯೊಳಿಪ್ಪ ಅವನು,  
ಬೆಳ್ಳಿ ಬೆಟ್ಟದಲ್ಲಿ ಬಾಳುತಿಹನು.  
ಎತ್ತುತಿಹನು ಭಿಕ್ಷೆ ಏನೆನ್ನಬಹುದಿದನು ?  
ವಿಶ್ವದಾಭಿರಾಮ ಕೇಳು ವೇಮ.

ಮಡದಿ ಅಡವಿ ಹೊಗಿಸಿ. ಮೃಗದ ಹಿಂದೆ ನಡೆದ.  
ರಾಮಚಂದ್ರಗಿಂತ ರಸಿಕನಾರು ?  
ಕೆಡುಕು ಕಾಲ ಬರಲು ಕೇಡು ಬುದ್ಧಿ ಬಹುದು.  
ವಿಶ್ವದಾಭಿರಾಮ ಕೇಳು ವೇಮ.

ಲಂಕೆ ಹೋಗುವಾಗ ಲಂಕಾಧಿಪ ರಾಜ್ಯ.  
ಎಂಥದೊ ಕಪಿ ಸೇನೆ ಆಕ್ರಮಿಸಿತು.  
ಕೇಡುಗಾಲ ಬರಲು ಕೆಡಿಸಲಲ್ಪ ಸಾಕು  
ವಿಶ್ವದಾಭಿರಾಮ ಕೇಳು ವೇಮ.

ಹರಿಗೆ ದೊರಕಿತಲ್ಲ ಸಿರಿಯು; ಆಗಲಷ್ಟೆ  
ದೊರಕಿತಲ್ಲ ವಿಷವು ಹರಗೆ ? ಅರಿಯೊ  
ಯಾರಿಗೆಂತೊ ಏನೊ ಯಾರು ಅರಿಯಬಹುದು ?  
ವಿಶ್ವದಾಭಿರಾಮ ಕೇಳು ವೇಮ.

ಇದು ವರೆಗೆ ಧರ್ಮವರ್ಗದ ಗೃಹಸ್ಥ, ಯೋಗ, ವಿಧಿ ವಿಭಾಗಗಳನ್ನು ಕುರಿತು ವಿಹಂಗಮ ದೃಷ್ಟಿ ಹರಿಸಿದೆವು, ಇನ್ನು ಅರ್ಥವರ್ಗವನ್ನು ಕುರಿತು, ಸ್ವಲ್ಪ ತಿಳಿಯೋಣ.

## ಅರ್ಥ ವರ್ಗ–ರಾಜನೀತಿ :-

ಮಾನವ ಜೀವನದ ನಾಲ್ಕು ಪುರುಷಾರ್ಥಗಳಲ್ಲಿ ಇದು ವರೆಗೆ ಧರ್ಮ ವರ್ಗದ ಪದ್ಯಗಳನ್ನು ಸಂಕ್ಷೇಪವಾಗಿ ಪರಾಂಬರಿಸಿದೆವು. ಈಗ ಅರ್ಥವರ್ಗದಲ್ಲಿಯ ಎಂಟುನೂರಕ್ಕಿಂತ ಹೆಚ್ಚು ಪದ್ಯಗಳ ವಿಹಂಗಮ ದೃಷ್ಟಿ ಹರಿಸಬೇಕಲ್ಲವೇ? ಅರ್ಥ ವರ್ಗವನ್ನು ರಾಜನೀತಿ ಆಪ್ತಾಲೋಚನೆ, ರಾಜ್ಯವಿಭಾಗ ಮತ್ತು ಅನುಬಂಧ ಎಂದು ವಿಭಜಿಸಲಾಗಿದೆ,

'ಅರ್ಥವರ್ಗ-ರಾಜನೀತಿಯಲ್ಲಿ' ರಾಜನ ಗುಣ, ಕೇಳುವಿಕೆ, ತಿಳಿಯುವಿಕೆ, ಸಜ್ಜನ ಸಂಗ, ಬಲದ ಅರಿವು, ಸ್ಥಲ ಪರಿಜ್ಞಾನ, ನ್ಯಾಯಾಡಳಿತ, ಚಾಡಿಖೋರ, ಕ್ರೂರಾಡಳಿತ, ಕರುಣೆಯ ದೃಷ್ಟಿ, ಸಾಮರ್ಥ್ಯ, ಆಪತ್ತಿನಲ್ಲಿ ಸ್ಥೈರ್ಯಎಂಬ ಶೀರ್ಷಿಕೆಗಳಡಿ ಲಭ್ಯವಿರುವ ೧೮೦





ಪದ್ಯಗಳನ್ನು ಜೋಡಿಸಲಾಗಿದೆ. ಪ್ರತಿಯೊಂದು ಶೀರ್ಷಿಕೆಯಡಿ ಎರಡೆರಡು ಪದ್ಯಗಳನ್ನು ಮಾತ್ರ ಇಲ್ಲಿ ನೀಡಬಯಸಿದ್ದೇವೆ.

### ರಾಜನ ಗುಣ :

ಅಧಿಕ ರಾಜನೊಬ್ಬ ಅಲ್ಪನ ಕೈ ಹಿಡಿಯೆ,  
ಅವನ ನುಡಿಗೆ ಅವನಿ ಸೈಗುಡುವುದು.  
ಹರದನೊಪ್ಪಿದೊಡನೆ ಕವಡೆ ನಾಣ್ಯವಹುದು  
ವಿಶ್ವದಾಭಿರಾಮ ಕೇಳು ವೇಮ

ಪ್ರಭುವು ಕೋತಿ ಎನಿಸೆ, ಮಂತ್ರಿ ಹಂದಿ ಎನಿಪ.  
ಯೋಧರೆಲ್ಲ ಪಕ್ಷಿ, ಸೇನೆ ಪಶುವು.  
ಆನೆ ಕುದುರೆ ತಾವು ಬೆಕ್ಕು ಇಲಿಗಳಂತೆ.  
ವಿಶ್ವದಾಭಿರಾಮ ಕೇಳು ವೇಮ

### ಕೇಳುವಿಕೆ :

ನೀ ಕೇಳು, ಹೇಳಲು ; ಅದನೆ  
ಪ್ರಾಕಟವಾಗಿಯೆ ಲೋಕದಿ ಪಾಲಿಸುತಿರಲಾ  
ಪಾಕವು ಮನದೊಳಬಯಲಲಿ,  
ಏಕಾಕೃತಿಯವಿರತವಾಗಿ, ಕಂಡರಿ, ವೇಮಾ.

ಕೇಳಿ ಬಂದ ಸುದ್ದಿ ಕೆಲವು, ಕೇಳದಿದ್ದ  
ಸುದ್ದಿ ಕೆಲವು ಇಹವು. ಏನೋ ಕೇಳ್ವ;  
ಭೋ ಕೇಳಿ ಪೇಳಿದೆ, ಎನ್ನುತಿಹ ಡಾಂಭಿಕ.  
ವಿಶ್ವದಾಭಿರಾಮ ಕೇಳು ವೇಮ.

### ಹಿರಿಯರ ಆಶ್ರಯ :

ನೆರವು ತಪ್ಪದ ನರನತಿ ಧಾರ್ಮಿಕನ ಮನೆ.  
ಸೇರಬೇಕು, ಬದುಕೆ ಶರಣನೀವ.  
ಆ ವಿಭೀಷಣನಿಗೆ ಅಧಿಕಾರ ನೀಡನೆ ?  
ಮಹಿತಲದಲಿ ರಾಮ ಮೂರ್ತಿ ವೇಮ.

ಸಾಧು ಜನರ ಸಂಗ ಸಾಕೆನಿಸದಿರಬೇಕು.  
ಪ್ರಕೃತಿ ಬಿಡುವ ತನಕ ಫಲವು ಇಲ್ಲ,  
ಬರಿದೆ ಹೀಚು ಕೊಯ್ಯೆ, ಬಿಜವಿರಲಪ್ಪುದೆ ?  
ವಿಶ್ವದಾಭಿರಾಮ ಕೇಳು ವೇಮ.

ದುರ್ಜನ ಸಂಗ ತ್ಯಾಗ :

ಸಲ್ಲದವನ ಜೊತೆಗೆ ಸೇರಿ ಕೆಲಸ ಮಾಡೆ,
ಹಾನಿ ತಪ್ಪದಯ್ಯ , ಯಾರಿಗೇನು ?
ಹೆಂಡ ಮರದ ಕೆಳಗೆ ಹಾಲು ಕುಡಿದ ಚೆಂದ.
ವಿಶ್ವದಾಭಿರಾಮ ಕೇಳು ವೇಮ.

ಬೇರು ಹುಳುವು ಹತ್ತಿ, ವೃಕ್ಷ ಕೆಡಿಸುತಿಹುದು.
ಕೀಡೆ ಹುಳುವು ಹತ್ತಿ ಗಿಡವೆ ಹಾಳು .
ಕುತ್ಸಿತ ಜನ ಸೇರಿ ಗುಣವಂತನೆ ಕೆಡುವ.
ವಿಶ್ವದಾಭಿರಾಮ ಕೇಳು ವೇಮ.

ಸಜ್ಜನ ಸಂಗ . :

ನೀಚ ಗುಣಗಳೆಲ್ಲ ನಿರ್ಮೂಲವಾಗುವವು,
ಗೊಡವೆಯಿಲ್ಲ, ಸುಜನ ಗೋಷ್ಠಿಯಿಂದ.
ಗಂಧ ತೊಡೆಯೆ, ದೇಹ ಕಂಪು, ಅಡಗುವಂತೆ.
ವಿಶ್ವದಾಭಿರಾಮ ಕೇಳು ವೇಮ.

ಕಸ್ತುರಿಯನು ನೋಡೆ ಕಪ್ಪು ಇಹುದು ಮೇಲೆ,
ಸುತ್ತಲು ಘಮ ಘಮವದರ ಪರಿಮಳ!
ಗುರುತರವಾಗಿಹರ ಗುಣವು ಇಂಥ ರೀತಿ.
ವಿಶ್ವದಾಭಿರಾಮ ಕೇಳು ವೇಮ,

ಬಲದ ಅರಿವು :

ಎದುರಾಳಿಯ ಬಲವು ಎಷ್ಟು ಎಂದೆಣಿಸದೆ,
ಎದುರಾಗುವ ಹಠದಿ ಎದುರಾಗಲು,
ಕರಡಿ ಉರಿಯ ಸುತ್ತಿ ಕುಣಿದು ಸುಟ್ಟ ರೀತಿ.
ವಿಶ್ವದಾಭಿರಾಮ ಕೇಳು ವೇಮ,

ಯೋಧ ಬೊಗಳೆ ಹೊಲ್ಲ, ಯುದ್ಧ ಭೂಮಿಯಲ್ಲಿ
ಅಪದ್ಧ ನುಡಿವ ಜೊತೆ ನಲುಮೆ ಹೊಲ್ಲ.
ಬೋಧಕಿಹನ ಜೊತೆಗೆ ವಾದ ಮಾಡೆ ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.





ಕಾಲ ಪರಿಜ್ಞಾನ :

ಬಂಡೆ ಮೇಲೆ ಒರತೆ, ಪರಿಕಿಸಿ, ತೋಡುತಿರೆ,
ಕಷ್ಟ ಪಡುವುದಷ್ಟೆ, ಕಾಣನಾಶೆ.
ಕೆರೆಯ ಬಳಿಯ ಒರತೆ ಕುಲವನುದ್ಧರಿಪುದು.
ವಿಶ್ವದಾಭಿರಾಮ ಕೇಳು ವೇಮ.

ಅನನುಕೂಲ ತಾಣ ಅಧಿಕನೆನಿಸೆ ಹೊಲ್ಲ.
ಕೊಂಚವಿಪ್ಪುದೆಲ್ಲ ಕೊರತೆಯಲ್ಲ.
ಗಿರಿಯು ಕನ್ನಡಿಯೊಳು ಕಿರಿದಾಗಿ ಕಾಣದೆ ?
ವಿಶ್ವದಾಭಿರಾಮ ಕೇಳು ವೇಮ.

ಸ್ಥಲ ಪರಿಜ್ಞಾನ :

ನೀರೊಳಿದ್ದು ಮೊಸಳೆ ಆನೆ ಹಿಡಿಯುತಿಹುದು.
ಹೊರಗೆ ಶ್ವಾನವದನೆ ಹಿಂಸಿಸುವುದು.
ಸ್ಥಾನ ಬಲವದಷ್ಟೆ ಸ್ವಂತ ಬಲವದಲ್ಲ.
ವಿಶ್ವದಾಭಿರಾಮ ಕೇಳು ವೇಮ.

ತಾನು ವಾಸಿಸುತಿಹ ತಾಣ ತೊಂದರೆಯರೆ,
ಸೌಖ್ಯವಿಪ್ಪ ಎಡೆಗೆ ಸೇರ ಹೋಗು.
ಕೊಳವು ಬತ್ತಲಾಗ ಉಳಿವವೇ ಬಕಗಳು?
ವಿಶ್ವದಾಭಿರಾಮ ಕೇಳು ವೇಮ.

ಬಂಧುಗಳ ಆದರ .

ಭಾವ ಬಂಧು ಸಂಬಂಧ ಮರ್ಯಾದೆಗಳು,
ತಪ್ಪಿದಾಗ ನೀತಿ, ತಾಪಕೇಡು.
ಬಪ್ಪುದು ಬಿಡದೆಂದು ತಪ್ಪದಯ್ಯ ನೋವು.
ವಿಶ್ವದಾಭಿರಾಮ ಕೇಳು ವೇಮ.

ಕೊಡೆಯು ತಾನೀವುದು ಕಡು ಸುಖಕರ ನೆರಳು.
ಶಾಸ್ತ್ರವರಿಯೆ ತನಗೆ ಶುದ್ಧ ಜ್ಞಾನ.
ಇಪ್ಪನಂಗೆ ತಂದೆ, ತಪ್ಪದಯ್ಯ ರಕ್ಷೆ.
ವಿಶ್ವದಾಭಿರಾಮ ಕೇಳು ವೇಮ.

ನ್ಯಾಯಾಡಳಿತ :

ನ್ಯಾಯ ತೀರ್ಪು ನೀಡುವಾಗ ಧರ್ಮ ತೊರೆಯೆ,
ಹೇಯನವನು. ಪಾಪ ಸೋಸ ಬೇಕು.
ಧರ್ಮ ವಚನ ನುಡಿಯೆ, ದೈವವಗೆ ನೆರವು.
ವಿಶ್ವದಾಭಿರಾಮ ಕೇಳು ವೇಮ.

ನ್ಯಾಯ ಶಾಸ್ತ್ರ ಮತ್ತನ್ಯಾಯ ಗೆಯ್ಯುತಿಹುದು.
ಧರ್ಮ ಶಾಸ್ತ್ರ ದುರ್ಮತವ ನುಡಿವುದು.
ಜ್ಯೋತಿಷಿ ನುಡಿ ಜನರ ನೀತಿ ಕೆಡಿಸುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಕ್ರೂರಾಡಳಿತ :

ದೊಡ್ಡ ಜನರ ಇರಿದು, ಬಡವರನ್ನು ವಧಿಸಿ,
ಸುಲಿದು ಕೊಳ್ಳೆ ಹೊಡೆದು, ಹೊಟ್ಟೆ ಹೊರೆವ ;
ಎತ್ತ ಹೋದರೇನು ? ಯಮನು ಬಿಡನು ಕಡೆಗೆ,
ವಿಶ್ವದಾಭಿರಾಮ ಕೇಳು ವೇಮ.

ಧನದ ಮದದಿ ಕೊಬ್ಬಿ, ದೈವವನು ಅರಿಯರು.
ಕುಟಿಲ ಭಾವ ಹೊಂದಿ, ಕ್ರೂರ ಜನರು,
ಮದವು ಮೀರಿದಾಗ ಮನ್ನಣೆ ಇರದಾಯ್ತು.
ವಿಶ್ವದಾಭಿರಾಮ ಕೇಳು ವೇಮ

ಚಾಡಿಖೋರ :

ದೊಡ್ಡವನೆನ್ನುತ್ತ ದೊರೆಯ ಬಳಿಗೆ ಸೇರಿ,
ಚಾಡಿ ನುಡಿವ ಪಾಪಿ ಜಾತಿ ನರನು.
ಚಾಡಿ ಹೇಳುವವನು ಸಾಯುಜ್ಯ ಪಡೆಯುವನೆ ?
ವಿಶ್ವದಾಭಿರಾಮ ಕೇಳು ವೇಮ.

ಮರಣಿಸೆ ಕೊಂಡೆಯವ ಮನೆತನಕ ಹೋಹರು.
ಅಷ್ಟೊ ಇಷ್ಟು ಎಷ್ಟು ದುಃಖವಿಲ್ಲ.
ಗುಳ್ಳ ನರಿ ಸಾಯಲು ಕುರಿಯು ಅಳುವುದೇಕೆ ?
ವಿಶ್ವದಾಭಿರಾಮ ಕೇಳು ವೇಮ.





ಕರುಣೆಯ ದೃಷ್ಟಿ :

ತ್ರಾಸು ಬರುವ ವೇಳೆ, ದೇವರನು ನೆನೆವನು,
ಕರುಣೆ ಕಾಣ, ವ್ಯರ್ಥ ಗಾಸಿ ಹೊರತು.
ಸುಖವು ಬರುವ ವೇಳೆ ಸಲೆ ಕಾಣಲೊಲ್ಲನು.
ವಿಶ್ವದಾಭಿರಾಮ ಕೇಳು ವೇಮ.

ಕನಕವಿದ್ದರೇನು ಕರುಣೆ ಇಲ್ಲದನಕ ?
ಕನಕನಿಲುವುದೆಂತು ಕರ್ಮಿಗಳಿಗೆ?
ಹುಟ್ಟು ಮುಟ್ಟೆ, ಜೇನು ಹುಳುವು ಹಾರದಿಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಆಪತ್ತಿನಲ್ಲಿ ಸ್ಥೈರ್ಯ :

ಅನ್ಯರಿಗೆ ಬರುತಿಹ ಆಪದ ತನದೆಂದು,
ಅನ್ನುವವನು ಜಗದಿ ಮಾನ್ಯನಿಹನು.
ಮಾನ್ಯರಿಪ್ಪರೊಳಗೆ ಮಹೀಪರರೆ ಲೇಸು.
ಕಂಡರಿವನೆ ಜಗದಿ ಘನನು ವೇಮ.

ತೂತಾಗಲು ಗಡಿಗೆ ತುರುಕಬಹುದು ಬಟ್ಟೆ,
ಬಂತು ಕೆಲಸಕಾಗಿ ಬಹಳ ಚೊಕ್ಕ.
ಕುಸಿದು ಬಿದ್ದ ನರನು ಕುದುರಿ ಸ್ಥೈರ್ಯ, ಏಳು.
ವಿಶ್ವದಾಭಿರಾಮ ಕೇಳು ವೇಮ.

ಅರ್ಥ ವರ್ಗದರಾಜನೀತಿ ವಿಭಾಗವನ್ನು ಕುರಿತು ಸಂಕ್ಷೇಪವಾಗಿ ಪರಾಂಬರಿಸಿದ್ದಾಯಿತು, ಇನ್ನು ಅರ್ಥವರ್ಗದ ಉಳಿದ ವಿಭಾಗಳತ್ತ ನೋಡುವಾ.

## ಅರ್ಥ ವರ್ಗ : ಆಪ್ತಾಲೋಚನೆ :-

ಗುರುತರ ಹೊಣೆ ನಿರ್ವಹಣೆಯಲ್ಲಿ ಆಪ್ತಾಲೋಚನೆ ಅಗತ್ಯ. ಆಪ್ತಾಲೋಚನೆಯ ಬಳಿಕ ತೀರ್ಪು ನೀಡುವುದೂ ಮುಖ್ಯ.

ಆಪ್ತಾಲೋಚನೆ :

ತೀರ್ಪು ನೀಡದಂಥ ತೀರ್ಪುಗಾರನೇಕೆ?
ಸೇರಿಸಿ, ಬಿಡಿಸದವಗೆ ಕಲಿಸಲೇಕೆ ?
ಪೋಷಿಸಲಾರದನ ಭಂಡ ಬಡಾಯಿ ಏಕೆ?
ವಿಶ್ವದಾಭಿರಾಮ ಕೇಳು ವೇಮ.

ಸುಳ್ಳು ನುಡಿಯುವವನ ಹಳ್ಳಿ ಗೌಡ ಬಲ್ಲ.
ಸತ್ಯ ನುಡಿಯುವವನ ಸ್ವಾಮಿ ಬಲ್ಲ.
ಮಠಿಗೆಟ್ಟು ಭಕ್ಷಿಪನ ಸತಿಯು ಬಲ್ಲಳಲ್ಲ!
ವಿಶ್ವದಾಭಿರಾಮ ಕೇಳು ವೇಮ.

ಮಾತಿನ ಒಲುಮೆ :

ಅತಿ ಹಿತವಾದಂಥ ಆಡಿದಾ ಮಾತಿಗೆ
ಸಂತಸಿಸುವರೆಲ್ಲ ಸತ್ಪುರುಷರು.
ಅಧಿಕ ಭಾಷಣಾದಿ ಆಯೂಸಕರವಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಮಾತನಾಡಲರಿತು, ಮನಸು ಕರಗಿಸುತ್ತ,
ನಲುಮೆ ಒಲುಮೆ-ಜನಕ ನುಡಿಯು ಇರದೆ,
ಓರ್ವನಿಂದ ಸೊತ್ತು ದೊರಕಿಸ ಬಹುದೇನು ?
ವಿಶ್ವದಾಭಿರಾಮ ಕೇಳು ವೇಮ.

ಕಾರ್ಯವಿಧಾನ :

ಫಲವಿರದ ಕಾರ್ಯ ಪ್ರಯತ್ನಿಸರು ಯಾರು.
ನುರಿತ ಬುದ್ಧಿ ಜನರು, ನಿಜವಿದಷ್ಟೆ ?
ಫಲವು ಒಳ್ಳಿತಿರಲು ಪರದಡಿ ಮುದವುಂಟು.
ವಿಶ್ವದಾಭಿರಾಮ ಕೇಳು ವೇಮ.

ಛೂರಿಯಿಂದ ಕೊಯ್ಯೆ ಚೆನ್ನಾಯಿತೆಂದರೆ,
ಅದರ ಹಿಡಿಯ ಕೊಯ್ಯೆ ಅಳವೆ ನಿನಗೆ?
ತಿಳಿವು ಇರದೆ ಮಾಪಿಳುದೇನು ದೇಹ ಬಲವು?
ವಿಶ್ವದಾಭಿರಾಮ ಕೇಳು ವೇಮ

ಸಭಾ ಪರಿಜ್ಞಾನ :

ವಿದ್ಯೆ ಇರದೆ ವಿಬುಧ ಸಭೆಗಳೊಳಿರಲೇನು?
ಪಂಡಿತ ತಾನೆಂತು ? ತಿಳಿದು ನೋಡೆ.
ಕೊಳದಿ ಹಂಸ ಮತ್ತೆ ಬಕಗಳಿಪ್ಪ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಬಾಯೊಳೆಲೆಯ ಮೆಲುವ ಬಳ ಬಳ ಶಿರದವನು.
ಒಂಟಿಗಾಲಿನಾತ ಒಪ್ಪವಿಹನು,
ರಾಜ ಸಭೆಗಳೊಳಗೆ ರಾರಾಜಿಸುತಿಹನಂತೆ.
ವಿಶ್ವದಾಭಿರಾಮ ಕೇಳು ವೇಮ





## ಅರ್ಥ ವರ್ಗ –ರಾಜ್ಯವಿಭಾಗ :–

ರಾಜ್ಯವಿಭಾಗದಲ್ಲಿ ಧನ ಸಂಚಯ, ಧನದ ಮದ, ವಿತರಣ, ರಸವಾದ, ಕಾಯಕಲ್ಪ, ಮದ್ಯ, ಹಗೆ-ಕೆಳೆ, ಕೆಟ್ಟ ಸ್ನೇಹ, ದಡ್ಡತನ, ಹಗೆತನ, ಜೂಜು–ಮದ್ಯಪಾನ, ಹಿರಿಯರಿಗೆ ಗೌರವ ಎಂಬ ಶೀರ್ಷಿಕೆಗಳಡಿ, ಲಭ್ಯವಿರುವ ೬೪ ಪದ್ಯಗಳನ್ನು ವಿಭಜಿಸಲಾಗಿದೆ. ಪ್ರತಿ ಶೀರ್ಷಿಕೆಯಡಿ ಎರಡೆರಡು ಪದ್ಯಗಳನ್ನು ಎತ್ತಿಕೊಂಡು ವಿಷಯದತ್ತ ವಿಹಂಗಮ ದೃಷ್ಟಿ ಬೀರಲಾಗಿದೆ.

ಧನ ಸಂಚಯ :

ಇಹದ ಒಳಗೆ ಸುಖವು ಇಂಪಾಗಿ ಇರದನಕ,
ಪರದ ಒಳಗೆ ಸುಖವ ಪಡೆವುದೆಂತು ?
ಧನವು ಇರದೆ, ಸುಖವು ದೊರೆವುದೆಂತು ತನಗೆ ?
ವಿಶ್ವದಾಭಿರಾಮ ಕೇಳು ವೇಮ.

ಧನವು ಇರದೆ ಗುಣವು ತಕ್ಕದೆನಿಸದಲ್ಲ.
ಧನವು ಇರದೆ ಕೀರ್ತಿ ತೊಲಗಿ ಹೋಯ್ತು.
ಧನವು ಇರದೆ ಶುಚಿಯು ತಾನು ಹುಟ್ಟಿ ಬರದು,
ವಿಶ್ವದಾಭಿರಾಮ ಕೇಳು ವೇಮ.

ಧನದ ಮದ :

ಕಂಡು ಕಾಣಲಾರ, ತುಟಿ ಕದಲಿಸಲಾರ.
ಕೇಳಿ ಕೇಳದಂತಿಹ ವಿಸ್ಮಯದಿ !
ಸಂಪದವಿರುವವನ ಸನ್ನಿಪಾತಕವದು!
ವಿಶ್ವದಾಭಿರಾಮ ಕೇಳು ವೇಮ.

ಚಂಚಲ ಮತಿಯಧಿಕ ಕಾಂಚನ ಪಡೆದೊಡನೆ,
ದೊಡ್ಡ ಜನಕಸಡ್ಡೆ ಮಾಳ್ಪ ಸತತ.
ಕೀಳು ಜಾತಿ ನಾಯಿ ಮೇಲು ಕುಲವಾವುದೆ ?
ವಿಶ್ವದಾಭಿರಾಮ ಕೇಳು ವೇಮ.

ವಿತರಣ :

ವಿತ್ತ ಓರ್ವಗಿತ್ತು , ವಿತರಣ ಗುಣವನ್ನು
ಮತ್ತೆ ಓರ್ವಗಿತ್ತು, ಮಂದಿ ಕೆಡಿಪ;
ಬ್ರಹ್ಮ ಕೆಲಸವೆಲ್ಲ ಬರಿಯ ಹಾಳು ಕೆಲಸ.
ವಿಶ್ವದಾಭಿರಾಮ ಕೇಳು ವೇಮ.

ಧನವಿರುವಾತಂಗೆ ಕನ್ನೆ ನೀಡುತಿಹುದು,
ಭಾವಿ ನೀರು ನದಿಗೆ ಬಿಟ್ಟ ರೀತಿ.
ನಿಂಬೆಗೆ ಜಲ ರಾಶಿ ನೀರು ಹಣಿಸಿದಂತೆ.
ಬಡವಗಿತ್ತ ಮದುವೆ ಪ್ರಬಲ ವೇಮ.

## ರಸವಾದ :-

'ರಸೋ ವೈ ಸಃ' ಎಂದು ಬ್ರಹ್ಮವನ್ನು ಉಪನಿಷತ್ತುಗಳಲ್ಲಿ ಬಣ್ಣಿಸಿದ್ದಾರೆ. ರಸವಾದ ವೆಂದರೆ ನಿಮ್ನ ಧಾತುಗಳನ್ನು ಮೇಲು ಧಾತುಗಳಾಗಿ ರೂಪಾಂತರಿಸುವುದು. ಅದರಲ್ಲೂ ಬಂಗಾರವಾಗಿ ರೂಪಾಂತರಿಸುವುದು. ರಸವಾದದಲ್ಲಿ ಒಟ್ಟು ೨೦ ಪದ್ಯಗಳು ಲಭ್ಯವಿವೆ. ಅವುಗಳಲ್ಲಿ ಇಲ್ಲಿ ಎರಡನ್ನು ನೀಡಲಾಗಿದೆ.

ಉಕ್ಕು ರಸವ ಬೆರೆಸಿ, ಗರ್ವದಿ ಸಿಂಧೂರ
ಹರಿದಳದೊಡನುಜ್ಜಿ, ಹ್ರಾಸಗೊಳಿಸದೆ;
ರಸವಾದವದುವೇ ವಸುಧೆಯಲಿ ಗೆಯ್ಯೆ,
ವಿಶ್ವದಾಭಿರಾಮ ಕೇಳು ವೇಮ.

ಮನೆಯ ಹಿಂದೆ ಬಳ್ಳಿ, ಇಂಗಳೀಕವುಂಟು.
ಪಾದರಸವು ಉಂಟು; ಪೊನ್ನು ಇರದೆ ?
ಸತುವು ಹೊಂದಿಸುತ್ತ ಸಾಧಿಸಬಹುದಲ್ಲ ?
ವಿಶ್ವದಾಭಿರಾಮ ಕೇಳು ವೇಮ

### ಕಾಯ ಕಲ್ಪ- ಮದ್ದು :

ಉಕ್ಕು ಚೂರ್ಣ ತಿನಲು ಉಡುಗುವುದು ಕಷ್ಟವು.
ಉಕ್ಕು ಚೂರ್ಣ ತಿನಲು ಉಡುಗಿತು ಕ್ಷಯ.
ಉಕ್ಕು ಚೂರ್ಣ ತಿನಲು ಉಡುಗುವದು ಕರ್ಮವು.
ವಿಶ್ವದಾಭಿರಾಮ ಕೇಳು ವೇಮ

ನಾಯಿ ಕಡಿದೊಡಾಗ ಚೀರದಂತೆ ಹಿಡಿದು,
ಪಕ್ಕೆ ಮುರಿಯೆ ಹೊಡೆದು ಪವಡಿಸುತ್ತ,
ನಿಂಬೆ ಕಾಯಿ ತಂದು ನೆತ್ತಿಗೆ ತಿಕ್ಕಿದರೆ,
ಶ್ವಾನ ವಿಷವು ಇಳಿದು ಶಾಂತ ವೇಮ

### ಹಗೆ- ಕೆಳೆ :

ಕೊಲ್ಲಲರ್ಹ ವೈರಿ ಕೈ ವಶವಾದರೂ
ಸಲ್ಲ, ಕೇಡು ಬಗೆಯೆ; ಸಿಕ್ಕನೆಂದು.
ಹೆಚ್ಚು ಮೇಲು ಗೆಯ್ದು, ಹೋಗೆನುವುದೆ ಸಾಕು,
ವಿಶ್ವದಾಭಿರಾಮ ಕೇಳು ವೇಮ

ಹಗೆಯುಡುಗಿತು; ಉಡುಗೆ ಕೋಪ;
ಹಗೆಯುಡುಗಲು ಕೋರ್ಕೆಯುಡುಗಿ, ಪರ ಜನ್ಮಗಳ್
ತಗಲಿರದು ಭೇದವುಡುಗಲು;
ತ್ರಿಗುಣಗಳುಡುಗಲು ಮುಕ್ತಿ ಸ್ಥಿರವೈ ವೇಮಾ.





### ಕೆಟ್ಟ ಸ್ನೇಹ :

ಠಕ್ಕರೊಡನೆ ಸೇರಿ ಠಬರು ಚೇಷ್ಟೆ ಗೆಯ್ಯೆ
ನಿಜವಾಗಿಯೂ ಘನನು ನೀತಿಗೇಡು.
ಉಳ್ಳಿ ತೋಟದಲ್ಲಿ ಮಲ್ಲಿಗೆ ಲತೆಯಂತೆ.
ವಿಶ್ವದಾಭಿರಾಮ ಕೇಳು ವೇಮ.

ಸುಬುದ್ಧಿಯವಗೇಕೆ ಸಲ್ಲದವನ ಸಖ್ಯ ?
ಕಾರ್ಯವಾದಿಗೇಕೆ ಕಡುತರ ಹಠ ?
ಕುತ್ಸಿತನಿಗೇಕೆ ಗುರುದೇವತಾ ಭಕ್ತಿ ?
ವಿಶ್ವದಾಭಿರಾಮ ಕೇಳು ವೇಮ

### ದಡ್ಡ ತನ :

ಜಾಲಿ ಗಿಡದ ಮುಳ್ಳು ಜೊತೆಗೆ ಹುಟ್ಟುತಿಹುದು.
ಬೀಜದಲ್ಲೆ ಇದ್ದು ಬೆಳೆಯುವಂತೆ.
ಮೂರ್ಖನಿಹನ ಬುದ್ಧಿ ಮೊದಲೆ ಹುಟ್ಟಿ ಇಹುದು.
ವಿಶ್ವದಾಭಿರಾಮ ಕೇಳು ವೇಮ.
ಹಾದರ ಮುಳ್ಳು ಭುವಿ-ಹೇಗೋ ರಾತ್ರಿ ತುಳಿಯೆ,
ನಶಿಸದಷ್ಟು ಇಷ್ಟು ನೆತ್ತಿ ಚಿಗುರು.
ಮಂದಿ ಛೀ ಎನುತಿರೆ ಮೂಢ ನಾಚುತಿಹನೆ?
ವಿಶ್ವದಾಭಿರಾಮ ಕೇಳು ವೇಮ,

### ಹಗೆ ತನ :

ಸಂಪದವಿಲ್ಲದಿರೆ, ಸೋದರರೆ ಹಗೆಗಳು.
ಸಂಪದವಿಲ್ಲದಿರೆ ಶ್ರೇಯವಿಲ್ಲ.
ಸಂಪದವಿಲ್ಲದಿರೆ ಸಕಲ ತತ್ತ್ವ ಹಾಳು.
ವಿಶ್ವದಾಭಿರಾಮ ಕೇಳು ವೇಮ.

ಖಂಡ ಸಕ್ಕರೆಯನು ಕಲೆಸಿ ಹಾಲನಿಡಲು,
ಬೆಂಬತ್ತಿಹ ಹಾವು ಬಿಡದು ತನ್ನ.
ಕಪಟ ಉಳ್ಳವನನು ಕಂಡು ಅರಿಯಬೇಕು.
ವಿಶ್ವದಾಭಿರಾಮ ಕೇಳು ವೇಮ.

### ಜೂಜು ಮದ್ಯಪಾನ :

ಅನನುಕೂಲ ತಾಣ, ಅಲ್ಲದ ಜೂಜಾಟ,
ಆಡಿ, ಕೂಡಿ ಸೋತು, ಅಡವಿ ಹೊಕ್ಕ.
ಘನನ ಜಾಡು ನೋಡಿ ಬಿಡದೆ ಇರಲು ಮೌಢ್ಯ.
ವಿಶ್ವದಾಭಿರಾಮ ಕೇಳು ವೇಮ.

ಮದ್ಯ ಕುಡಿದು ಮತ್ತೆ ದೊಡ್ಡ ಜನರ ಮಧ್ಯೆ,
ಬಟ್ಟೆ ಕಳಚಿ ತಿರುಗುವಂಥ ದುಷ್ಟ;
ಹೋದ ಮೇಲೆ ಎಲ್ಲ ಹೊದೆವ ಹರಕು ವಸ್ತ್ರ.
ವಿಶ್ವದಾಭಿರಾಮ ಕೇಳು ವೇಮ.

ಹಿರಿಯರಿಗೆ ಗೌರವ :

ಉಸಿರು ಇರದ ತಿದಿಯ ಊದಲಿನಿತಾದರು,
ಪಂಚ ಲೋಹವೆಲ್ಲ ಭಸ್ಮವಹವು.
ದೊಡ್ಡವರುಸಿರಿದೊಡೆ ದೊಡ್ಡ ಉರಿಯೇಳದೆ ?
ವಿಶ್ವದಾಭಿರಾಮ ಕೇಳು ವೇಮ.

ತತ್ತಿ ಬಂದು ಮರಿಯ ಗೋಳು ಹೊಯ್ದ ರೀತಿ.
ವಿಧವ ಕಂಡರಿಯದ ವಿಕೃತ ಮತಿಗಳು.
ಜ್ಞಾನಿಯಾದವರನು ಜರೆಯುತಿಹುದು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಅರ್ಥವರ್ಗದಲ್ಲಿಯ ರಾಜನೀತಿ, ಆಪ್ತಾಲೋಚನೆ, ರಾಜ್ಯವಿಭಾಗಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿದೆವು. ಇನ್ನು ಇದೇವರ್ಗದಲ್ಲಿಯ ಅನುಬಂಧ ವಿಭಾಗವನ್ನು ಕುರಿತು ಈ ಮುಂದೆ ಸಮೀಕ್ಷಿಸೋಣ.

## ಅರ್ಥ ವರ್ಗ ಅನುಬಂಧ :-

ಅರ್ಥವರ್ಗ ಅನುಬಂಧ ವಿಭಾಗವು ಜಾತಿ ವರ್ಣಗಳ ಹುಟ್ಟು, ಭೇದಾಭೇದಗಳಿಗೆ ಸಂಬಂಧಿಸಿದ್ದು ತುಂಬಾ ಸುದೀರ್ಘವಾಗಿದೆ. ಇದನ್ನು ಜಾತಿ ವರ್ಣ, ಶೀಲವಂತಿಕೆ ವಸುಧೈವ ಕುಟುಂಬಕಂ ಶೀರ್ಷಿಕೆಗಳಡಿ ಪ್ರಸ್ತುತಪಡಿಸಿ, ಅನಂತರ ಸ್ವಂತ ನಡತೆ, ಸಾಲ ಶೂಲ, ವೇಷ ಭೂಷಣ, ಮತಾಚಾರ, ಮುಟ್ಟು ಮಡಿ, ಹಿರಿಮೆ, ಸದ್ಭಾವನೆ, ಸದ್ಗುಣಸಂಪಾದನೆ, ನೆರವಿಗೆ ಬಾರದ ಸಿರಿ, ಒಕ್ಕಲಿಗ-ಕಾಪು, ಬಡತನ, ಕೀಳುತನ ಎಂಬಿತ್ಯಾದಿ ಹಲವು ಶೀರ್ಷಿಕೆಗಳಡಿ ಪದ್ಯಗಳನ್ನು ನೀಡಲಾಗಿದೆ. ಆದರೆ ಪ್ರತಿಯೊಂದು ಶೀರ್ಷಿಕೆಯಡಿ ೧೫-೨೦ ಪದ್ಯಗಳಿದ್ದರೂ, ಕೇವಲ ಎರಡೆರಡನ್ನು ಮಾತ್ರ ಎತ್ತಿ ನೀಡಿದ್ದೇವೆ. ಜಾತಿವರ್ಣ ಶೀಲವಂತಿಕೆ, ವಸುಧೈವ ಕುಟುಂಬಕಂ ಶೀರ್ಷಿಕೆಗಳಡಿ ಸಾಕಷ್ಟು ಪದ್ಯಗಳನ್ನು ನೀಡಿ ಸವಿಸ್ತಾರವಾಗಿ ಪ್ರತಿಪಾದಿಸಿದೇವೆ. ಇಲ್ಲಿ ಸಂಕ್ಷೇಪತೆಗೆ ಶರಣಾಗದೆ ವಿಷಯ ಸ್ಪಷ್ಟತೆಗೆ ಒತ್ತು ನೀಡಿದ್ದೇವೆ.

## ಜಾತಿ- ವರ್ಣ :-

ಈಗಿನ ಜಾತಿ ಪದ್ಧತಿಗಳು ವೇದ ಕಾಲದಲ್ಲಿ ಇರಲಿಲ್ಲ. ಅದೇ ರೀತಿ, ಮೂರ್ತಿ ಪೂಜೆಯೂ ಇರಲಿಲ್ಲ. ಇದನ್ನು ಅರಿತುಕೊಂಡ ಸಾಧು ಸಜ್ಜನರು ಜಾತ್ಯತೀತರಾಗಿ ಬಾಳುತ್ತಿದ್ದರು, ಜಾತಿ ಕುರುಹುಗಳನ್ನು ತ್ಯಜಿಸುತ್ತಿದ್ದರು. ಬ್ರಾಹ್ಮಣರಾದ ಬಸವಣ್ಣನವರು, ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ತಿರುವಣ್ಣಾಮಲೈಯ ಶ್ರೀ ರಮಣ ಮಹರ್ಷಿಗಳು ತಮ್ಮ ಜಾತಿ ಸೂಚಕ





ಜನಿವಾರಗಳನ್ನು ಕಿತ್ತೆಸೆದರು. ಇನ್ನು ಲಕ್ಕುಂಡಿಯ ಲಿಂಗಾಯತರಾದ ಅಜಗಣ್ಣನವರು, ಹುಬ್ಬಳ್ಳಿಯ ಶ್ರೀ ಸಿದ್ಧಾರೂಢರು ತಮ್ಮ ಶಿವದಾರವನ್ನು ತ್ಯಜಿಸಿದರು. ಅದರಿಂದಾಗಿಯೇ ವೇಮನ ಯೋಗಿ, ಹೇಳಿದ್ದಾರೆ.

ಜಾತಿ ಮತವ ತೊರೆದು ಯೋಗಿಯಾಗೆ ಮೇಲು.
ಜಾತಿ ಮುಳುಗಿ ನೀತಿ ಹೇಳಲೇನು ?
ಮತವು ತಿಳಿಯೆ ಜಾತಿ ಬಿಡಲು ಅಂಜಬೇಡ.
ವಿಶ್ವದಾಭಿರಾಮ ಕೇಳು ವೇಮ.

ಜನನವೆನಿತೊ ಉಂಟು, ಜಾತಿ ಯಾವುದೇನೋ ?
ಜನನ ಮರಣ ಕುರಿತು ಜಾಡನರಿತು,
ಕೇಳಿ ಕೇಳುತಿದನು ಕಾಣರು ವಿವರವನು.
ವಿಶ್ವದಾಭಿರಾಮ ಕೇಳು ವೇಮ.

ಈ ಜಾತಿ ಎಂದರೇನು ? ಈ ಜಾತಿಯ ಮೂಲವೇನು ? ಇದನ್ನು ಬಿಡುವುದೆಂದರೇನು? ಎಂಬುದನ್ನು ಕುರಿತು. ಆಲೋಚಿಸುವಾ:

ಜನ್ಮದಿಂದ ಅಂಟಿದ ವಿಭಜನೆಯು 'ಜಾತ' ಇಲ್ಲವೆ ಜಾತಿಯಷ್ಟೇ, ಇದರ ವೈಜ್ಞಾನಿಕ ವ್ಯಾಖ್ಯೆಯು ಹೀಗಿದೆ:

(೧) ಯಾವುದೊಂದು ಜಾತಿಯ ಸದಸ್ಯತ್ವವು ಆಯಾ ಜಾತಿಯಲ್ಲಿ ಜನ್ಮ ತಾಳಿದವರಿಗೆ ಮೀಸಲಿರುತ್ತದೆ.

(೨) ಆ ಜಾತಿಯ ಸದಸ್ಯರಿಗೆ ತಮ್ಮ ಕುಲದ ಹೊರಗಿನವರೊಂದಿಗೆ ವಿವಾಹವಾಗುವುದು ನಿಷಿದ್ಧವಿರುತ್ತದೆ.

ಋಗ್ವೇದದ ಹತ್ತನೆಯ ಮಂಡಲದಲ್ಲಿ ಬರುವ ಪುರುಷ ಸೂಕ್ತದಲ್ಲಿ ಸಮಾಜವನ್ನು ನಾಲ್ಕು ವರ್ಗಗಳಾಗಿ ವಿಭಜಿಸುವ ಪ್ರಸ್ತಾಪವಿದೆ. ಅದರ ಪ್ರಕಾರ, ವಿಶ್ವವ್ಯಾಪ್ತ ಸಮಾಜವೆಂಬ ವಿರಾಟ ಪುರುಷನ ಬಾಯಿಯಿಂದ ಬ್ರಾಹ್ಮಣರು ಹೊರಬಂದರೆ, ತೋಳಿನಿಂದ ಕ್ಷತ್ರಿಯರೂ, ತ್ವಚೆಯಿಂದ ವೈಶ್ಯರೂ ಮತ್ತು ಕೊನೆಯದಾಗಿ ಕಾಲುಗಳಿಂದ ಶೂದ್ರರೂ ಹೊರಬರುತ್ತಾರೆ. ಇದುವೇ ಚಾತುರ್ವರ್ಣ್ಯದ ಗ್ರಹಿಕೆಯಿಂದ ಇದೇ ಗ್ರಹಿಕೆಯನ್ನು ಮನು ಸ್ಮೃತಿಯ ಹತ್ತನೆಯ ಅಧ್ಯಾಯದಲ್ಲಿ ನೀಡಲಾಗಿದೆ. ಇಲ್ಲಿಯ ವರ್ಣ ವಿಭಜನೆಯು ಹುಟ್ಟಿನ ಜಾತಿಯನ್ನು ಆಧರಿಸಿಲ್ಲವಷ್ಟೇ ಅಲ್ಲ, ಮೇಲಾಗಿ ಒಂದು ವರ್ಣದಿಂದ ಇನ್ನೊಂದು ವರ್ಣಕ್ಕೆ, ವರ್ಣಾಂತರಕ್ಕೆ, ಅವಕಾಶವಿದೆ. ಮುಂದೆ ಮಹಾಭಾರತದ ಭಾಗವಾದ ಭಗವದ್ಗೀತೆಯಲ್ಲಿಯೂ ಶ್ರೀ ಕೃಷ್ಣನು ಸಾರುವಂತೆ, ಚಾತುರ್ವರ್ಣ್ಯವು ಸೃಷ್ಟಿಗೊಂಡಿದ್ದರೂ, ಅದಕ್ಕೆ ಆಧಾರವಾದುದು ಜಾತಿ (ಹುಟ್ಟು) ಯಲ್ಲ, ಆದರೆ ಆಯಾ ವ್ಯಕ್ತಿಯ ಗುಣ-ಕರ್ಮಗಳು. "ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮವಿಭಾಗಶ". ಎಂದೇ ಕೃಷ್ಣನು ಗೀತೆಯಲ್ಲಿ ಹೇಳಿಲ್ಲವೇ? ಅಷ್ಟೇಕೆ ? ಆದಿ ಶಂಕರಾಚಾರ್ಯರೂ ಸಹ ಪ್ರತಿಯೋರ್ವ ಮಾನವ ಜೀವಿಯೂ ಜನ್ಮದಿಂದ ಶೂದ್ರನೇ ಸರಿ; ಕೇವಲ ಅಧ್ಯಯನ ಮತ್ತು

ಸಂಸ್ಕಾರಗಳ ಮೂಲಕ ಅವನು ದ್ವಿಜನಾಗುತ್ತಾನೆ, ಎಂದು ಹೇಳಿ ಅನೇಕ ಬೆಸ್ತರನ್ನು ಬ್ರಾಹ್ಮಣರಾಗಿ ಉದ್ಧರಿಸಿದರಂತೆ. ಅದನ್ನು ಯೋಗಿ ವೇಮನರು ಹೀಗೆ ಹೇಳಿದ್ದಾರೆ.

ಬ್ರಹ್ಮ, ನೃಪತಿ, ವೈಶ್ಯ ಪತಿಗಳು, ಶೂದ್ರರು,
ಬ್ರಹ್ಮ, ವಿಷ್ಣು, ಹರರು, ಪಶುಗಳೆನಲು
ಬ್ರಹ್ಮ ತಿಳಿಯದಿರಲು, ಬಹಳ ರೂಪವಿಂತು.
ವಿಶ್ವದಾಭಿರಾಮ ಕೇಳು ವೇಮ.

ತಾಯಿ-ಹಡೆದ ತಾಯಿ, ತನ್ನ ತಾಯಿ, ಕಕ್ಕಿ,
ತಂದೆ-ಹಡೆದ ತಾಯಿ, ತಾತ-ತಾಯಿ,
ಎಲ್ಲ ಶೂದ್ರರಿರಲು ಎಂತು ಬ್ರಾಹ್ಮಣನಹ ?
ವಿಶ್ವದಾಭಿರಾಮ ಕೇಳು ವೇಮ.

ಬ್ರಾಹ್ಮಣನು ಎನುವರು, ಬ್ರಹ್ಮತ್ವ ಮನದಿಲ್ಲ.
ಬ್ರಾಹ್ಮವದುವು ಏಕೆ ? ಬ್ರಾಹ್ಮಣಂತೆ.
ಬೊಂಬೆಯಂತೆ ತಾನು ದಿಂಬು ಮೇಲೆ ಕುಳಿತ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ತಾಯಿ ವೇಶ್ಯೆ, ಮಡದಿ ಮಾದಿಗ ಕನ್ನೆ
ಇರುವ ವಶಿಷ್ಠ ಮುನಿ ಗುರುವು ಶ್ರೀಪತಿಗೆ.
ಅರಿತೊಡೆ ತಪದಿಂದ ದ್ವಿಜ ; ಜಾತಿಯೆಲ್ಲಿ ?
ವಿಶ್ವದಾಭಿರಾಮ ಕೇಳು ವೇಮ.

ಅಂದ ಮೇಲೆ, ಸಮಾಜದಲ್ಲಿ ಆಯಾ ವ್ಯಕ್ತಿಗಳ ಗುಣಕರ್ಮಗಳನ್ನು ಪರಿಕಿಸಿ, ಅಧ್ಯಯನ ಸಾಧನೆಗಳನ್ನು ಗಮನಿಸಿ, ಆಯಾ ಜನರ ವರ್ಣಗಳನ್ನು ಗುರುತಿಸಬಹುದೇ ಹೊರತು, ಜಾತಿಯ ಆಧಾರದಿಂದಲ್ಲ. ಹಾಗಾದರೆ ಈ ಮೇಲುಕೀಳು ಭಾವನೆಯ ಜಾತಿಗಳು ಉಂಟಾದುದು ಹೇಗೆ ? ಸಂಚಾರಿ ಆರ್ಯರು ಬರುಬರುತ್ತ ಗೋತ್ರ (ಗುಡ್ಡ) ಪ್ರವರ (ಚಿಕ್ಕ ದಿನ್ನೆ) ಗಳ ಸುತ್ತಮುತ್ತ ನೆಲೆಗೊಳ್ಳುತ್ತ ಸ್ಥಿರ ಸಮಾಜವನ್ನು ಅಭಿವೃದ್ಧಿಸಿದರು. ಒಂದೆಡೆಗೆ ನೆಲೆ ನಿಂತ ಜನರು ಅಗತ್ಯದ ವಸ್ತುಗಳನ್ನು ಉತ್ಪಾದಿಸಲು ಆರಂಭಿಸಿದರು. ತಮ್ಮ ತಮ್ಮ ಕಾರ್ಯಕುಶಲತೆಯಿಂದ ಆಯಾ ಉತ್ಪಾದನೆಯಲ್ಲಿ ಕುಶಲರಾದರು . ತಂದೆಯು ಮಾಡುತ್ತಿದ್ದ ಉದ್ಯೋಗವನ್ನು ಮಗನು ಮಾಡಿದ; ಬಡಿಗನ ಮಗ ಬಡಿಗನಾದ; ಕಮ್ಮಾರನ ಮಗ ಕಮ್ಮಾರನಾದ, ಕರಣಿಕನ ಮಗ ಕರಣಿಕನಾದ; ಆದರೆ, ಈ ಒಂದು ಉದ್ಯೋಗದಲ್ಲಿ ನಿರತರಾದವರ ಕುಲವು ಅವರು ಹುಟ್ಟಿದ ಜಾತಿಯೆನಿಸಿತು. ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಸೇರ್ಪಡೆ ಹೊಂದುವಂತಿಲ್ಲ. ಆಯಾ ಕಾಲದ ಪರಿಸ್ಥಿತಿಗೆ ತಕ್ಕಂತೆ ಆಯಾ ಜಾತಿಗಳು ಮೇಲು, ಕೀಳು ಎನಿಸಿದವು, ಜಾತಿ ಜಾತಿಗಳ ನಡುವಿನ ಲಗ್ನ ಸಂಬಂಧಗಳು ನಿಂತವು. ವೇಮನಯೋಗಿವರ್ಯರು ಈ ಕುರಿತು ಆಳ ಚಿಂತನ ಗೆಯ್ದು ನೂರಾರು ಪದ್ಯಗಳ ಮೂಲಕ ಬೆಳಕು ಬೀರಿದ್ದಾರೆ. ಇಲ್ಲಿ ಕೆಲವನ್ನು ಉದ್ಧರಿಸುತ್ತೇವೆ.





ಜಾತಿಯೊಳಗೆ ಮೇಲು ಜಾತಿ, ಕೀಳು ಎಲ್ಲಿ ?
ನಿಜವರಿಯದೆ ತಿರುಗಲೇನು ಫಲವು ?
ಇದನರಿತ ಮನುಜನ ಕುಲವೆ ಮಿಗಲು ಕಣಾ.
ವಿಶ್ವದಾಭಿರಾಮ ಕೇಳು ವೇಮ.

ಮೇಲು ಕೀಳು ಎನಲು ಮತ್ತೆ ಯಾರಿಗೇನು,
ತನುವು ನಿತ್ಯವಿಹುದೆ ? ತತ್ತ್ವವರಿಯೆ.
ಅರಿತು ಅರಿಯದಿಹರು; ಏನು ಎನ್ನಬಹುದು ?
ವಿಶ್ವದಾಭಿರಾಮ ಕೇಳು ವೇಮ.

ಜಾತಿ ಭೇದವೆಣಿಸಿ ಜನ್ಮಗಳ ತಿಳಿಯದೆ,
ಮುಕ್ತಿಗಾಣಲಿಲ್ಲ ಮೂರ್ಖ ಜನರು.
ಜಾತಿ ಎಣಿಕೆ ಏಕೆ ? ಜನ್ಮಗಳ ತಿಳಿವುದು.
ವಿಶ್ವದಾಭಿರಾಮ ಕೇಳು ವೇಮ.

ಯೋನಿಯಲ್ಲಿ ಹುಟ್ಟಿ ಉತ್ತಮ ಕುಲಜನಿರೆ,
ಬ್ರಹ್ಮ ಕುಲದ ಒಳಗೆ ಬದುಕಬೇಕು.
ಬ್ರಹ್ಮವರಿಯದಿರಲು ಬಿದ್ದು ಸತ್ತ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಕನ್ನೆ ಜೊತೆಗೆ ವರನು ಕಾಮಿಸಿ ಕೂಡಿದೊಡೆ
ಒಂದು ವೇಳೆ ಪಿಂಡ ಉದ್ಭವಿಪುದು.
ಅಲ್ಲಿ ಕುಲಜನಾರು ? ಅರಿಯೆ, ಹೀನರಾರು ?
ವಿಶ್ವದಾಭಿರಾಮ ಕೇಳು ವೇಮ.

ಆಭಿಜಾತ್ಯನೆಂದು ಆಯುಷ್ಯದ ತನಕ,
ತಿರುಗುತಿಪ್ಪ ಭ್ರಮಿಸಿ ತಾನರಿಯದೆ.
ಮುಸುರೆ ಭಾಂಡೆಯನ್ನು ಮುತ್ತುವ ನೊಣದಂತೆ.
ವಿಶ್ವದಾಭಿರಾಮ ಕೇಳು ವೇಮ.

ಪ್ರವರವಿರುವ ಹೆಸರು ಬೆಳಗುತಿದ್ದರೇನು ?
ಆದರೊಳಗೆ ತಗ್ಗಿರೆ ಅರಿವು ನಿಮಗೆ.
ನಿಜವು ತಿಳಿಯೆ ನೀವು ನಿತ್ಯ ಪೂಜ್ಯರಾಗಿ,
ಇಪ್ಪರೆನುವರಿಹದಿ ಒಪ್ಪ ವೇಮ.

ಜಾತಿಭೇದ ಕುಲಭೇದಗಳಿಂದ ಸಮಾಜ ಸ್ವಾಸ್ಥ್ಯವು ಹದಗೆಟ್ಟಿದೆ. ಶೋಷಣೆಗೆ ದಾರಿಯಾಗಿದೆ. ಆದ್ದರಿಂದ ಜಾತಿ ಭೇದವೆಣಿಸದೆ ಬ್ರಹ್ಮಸಾಧನದಲ್ಲಿ ಮುಂದುವರಿಯಬೇಕು. ಎಂದು ವೇಮನ ಯೋಗಿಗಳ ಉಪದೇಶವಿದೆ.

ಜಾತಿ ಮತವು ತಿಳಿಯೆ ಯೋಗಿಯಾಗೆ ಮೇಲು ;
ಜಾತಿಯಲ್ಲಿ ಮುಳುಗಿ ನೀತಿ ಹೇಳಲೇನು ?
ಮತವು ತಿಳಿಯೆ, ಜಾತಿ ಬಿಡಲು ಅಂಜ ಬೇಡ.
ವಿಶ್ವದಾಭಿರಾಮ ಕೇಳು ವೇಮ.

ಎಲ್ಲರೂ ಜನ್ಮದಿಂದ ಶೂದ್ರರೇ ; ಎಂದು ಎಲ್ಲರೂ ಒಪ್ಪಿದ್ದಾರೆ. ಅಂದ ಮೇಲೆ,

ಶೂದ್ರರಲ್ಲಿ ಹುಟ್ಟಿ, ಶೂದ್ರರನು ನಿಂದಿಸಿ.
ದ್ವಿಜನು ಎಂಬ ಹೆಸರು ದಿಟವ ಮಾಡಿ,
ಮನಸು ನಿಲಿಸದಿರಲು ಮನದಿ ಅಧಿಕ ಶೂದ್ರ.
ವಿಶ್ವದಾಭಿರಾಮ ಕೇಳು ವೇಮ

ಯಾರೊಬ್ಬರೂ ತಮ್ಮ ತಮ್ಮಗುಣ ಕರ್ಮಗಳನ್ನು ಅನುಸರಿಸಿ, ಮೇಲು ವರ್ಣಕ್ಕೆ ಸೇರಬಹುದು. ಅದಕ್ಕೆ ತಕ್ಕ ಮನ್ನಣೆ ಪಡೆಯಬಹುದು.

ಧರೆಯ ಶೂದ್ರನಾದುದರಿಯರು ಮೊದಲಿಗೇ
ಮನಸು 'ಅವನ' ಮೇಲೆ ಮರಳಿ ತಿರುಗಿ,
ಭಜಿಸಿ ದ್ವಿಜರಾಗರೆ ? ಬಹಳ ಕೋಟಿಗಟ್ಲೆ.
ವಿಶ್ವದಾಭಿರಾಮ ಕೇಳು ವೇಮ.

ರಾಮನಾಮ ಪಠಣ ಗೆಯ್ದು ವಾಲ್ಮೀಕಿ,
ಜಗದಿ ಬೇಡ; ಬ್ರಾಹ್ಮಣ ತಾನಾದ.
ಕುಲವು ಘನವು ಅಲ್ಲ ; ಗುಣವೆ ಘನವೆನ್ನಿರೊ.
ವಿಶ್ವದಾಭಿರಾಮ ಕೇಳು ವೇಮ.

ಹೊಲೆಯನನ್ನು ಏಕೆ ಇಳೆಯಲ್ಲಿ ನಿಂದಿಪರೊ ?
ಒಡಲು ರಕ್ತ ಮಾಂಸ ಒಂದೆ ಇರವೆ?
ಅವನ ಒಳಗೆ ಸುಳಿವ 'ಅವನ' ಕುಲವದೇನು?
ವಿಶ್ವದಾಭಿರಾಮ ಕೇಳು ವೇಮ.

ಪೂರ್ವ ಕಾಲದಲ್ಲಿ ಒಂದು ಗೋತ್ರ (ಅಂದರೆ ಗುಡ್ಡ) ದಲ್ಲಿ ಇಲ್ಲವೆ ಒಂದು ಪ್ರವರ (ಅಂದರೆ ದಿನ್ನೆದಲ್ಲಿ ನೆಲೆಸಿದ ಋಷಿಮುನಿಗಳ ಕುಲದವರೆಂದು ಹೇಳಿಕೊಂಡು ಅಭಿಮಾನ ಪಡುತ್ತಿದ್ದರು. ಆ ಗೋತ್ರಪಿತರು ಹುಟ್ಟಿನಿಂದ ಬೇರೆ ಬೇರೆ ಕಸುಬಿನ ಕುಲದಿಂದ ಬಂದವರಾಗಿದ್ದರು. ಆದರೆ ಅಧ್ಯಯನ ಬಲದಿಂದ, ತಪೋಬಲದಿಂದ, ಸಮಾನ ದೃಷ್ಟಿಯಿಂದ ಬ್ರಹ್ಮವರಿತು ಬ್ರಾಹ್ಮಣರಾಗಿದ್ದರು. ಋಷಿಮುನಿಗಳಾಗಿದ್ದರು.

ಕಡು ದೊಡ್ಡ ಪರಾಶರ ತಾ
ಕೆಡು ಹೊಲೆಯರವಳ ಒಡಲಲ್ಲಿ ಜನಿಸಿದ ತೆರು.
ನಡೆ ದೊಡ್ಡ ವ್ಯಾಸಂಬಿಗ-
ಕೊಡಲಲಿ ಜನಿಸಿದ ಪರಿಯೊಳಗಿಪ್ಪುದು ವೇಮಾ.





COLLEGE OF BUSINESS ADMINISTRATION LIBRARY HUBLI.

ಕೌಂಡಿನ್ಯನು ಮುಂಡೆ ಮಗನು;
ಮಾಂಡವ್ಯನು ಕಪ್ಪೆ ಮಗನು; ಮಹಿಯಲಿ ಜನನಂ.
ಚಂಡಾಲ ಮಾತಂಗ ಮುನಿಯ
ಪಿಂಡವೆ ಆಗಿಹುದಲ್ಲವೆ ? ಪೃಥಿವಿಲಿ, ವೇಮಾ.

ತನ್ನ ತಾಯಿ ಸೂಳೆ, ತನ್ನ ಸತಿ ಮಾದಿಗೆ.
ವರ ರಾಮನ ಗುರುವು ವಸಿಷ್ಠನರಿಯೆ.
ತಪದಿಂದ ದ್ವಿಜನು; ತರ್ಕಿಸೆ ಕುಲವೆಂತು ?
ವಿಶ್ವದಾಭಿರಾಮ ಕೇಳು ವೇಮ.

ನೋಡಿ ಮಾದರವನ ನಿಂದಿಸುವುದು ಏಕೆ?
ಪಾಡು ಇರದ ಮಾತು ಆಡುವರಲ!
ಅವನೊಳಿಹುದು 'ಶಬ್ದ' ಅದರ ಕುಲವದೇನು?
ವಿಶ್ವದಾಭಿರಾಮ ಕೇಳು ವೇಮ.

ಮಾದಿಗ ಮಾದಿಗಲ್ಲ ಮಹಿಯೊಳಾವ ಕಾಲ;
ಮಾತು ಬದಲಿಸುವನೆ ಮಾದಿಗಷ್ಟೆ,
ಅವನ ಮಾದಿಗೆನುವ ಇವನೆ ಹಿರಿ ಮಾದಿಗ.
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟಿನಿಂದ ಅಂದರೆ ಜಾತಿಯಿಂದ ಮೇಲು ಕೀಳು ಭೇದ ಭಾವವನ್ನು ಎಣಿಸದ ವೇದೋಪನಿಷತ್ತುಗಳ ಮಾತುಗಳನ್ನು ಬದಲಿಸಿ ನುಡಿವವರು ಮೇಲು ಕುಲದವರೆಂತಾಗುವರು? ಕೇವಲ ಗುಣ-ಕರ್ಮದಿಂದ ಆಯಾ ಮನುಷ್ಯನ ವರ್ಣ ಪರಿಗಣನೆಯಾಗಬೇಕೇ ಹೊರತು, ಹುಟ್ಟಿದ ಜಾತಿಯನ್ನು ಆಧರಿಸಿ ಅಲ್ಲ.

ಬ್ರಹ್ಮವೇತ್ತರೆಂದು ಬಿಮ್ಮದಿಂದಿಪ್ಪರು.
ಬ್ರಹ್ಮವೇನೊ ? ಅದರ ಭಾವವೇನೊ?
ಬಿಳಿಪೊ? ಕೆಂಪೊ? ಕಪ್ಪೊ ? ತಿಳಿದಿದ್ದರೆ ಹೇಳು.
ವಿಶ್ವದಾಭಿರಾಮ ಕೇಳು ವೇಮ.

ಯೋಗಿಗಳು ತಮ್ಮ ತಪೋಬಲದಿಂದ ಮನದ ಮಟ್ಟವನ್ನು ಎತ್ತರಿಸಿಕೊಂಡಾಗ. ಅವರಿಗೆ ಜನರ ಗುಣಮಟ್ಟವನ್ನು ಗುರುತಿಸುವ ದೃಷ್ಟಿ ಅವಗತವಾಗುತ್ತಿತ್ತು. ಸಾತ್ವಿಕರ ಸುತ್ತ ಬಿಳಿಯ ಪ್ರಭಾವಳಿಯೂ, ರಾಜಸಿಕರ ಸುತ್ತ ಕೆಂಪು ಪ್ರಭಾವಳಿಯೂ ಮತ್ತು ತಾಮಸಿಕರ ಸುತ್ತ ಕಪ್ಪು ಪ್ರಭಾವಳಿಯೂ ಕಾಣುತ್ತದೆ. ಇದುವೇ ಅವರವರ ವರ್ಣ ನಿರ್ಧಾರಕ್ಕೆ ಆಧಾರ. ಆದರೆ ವರ್ಣಭೇದ ಮಾಡುವವರು ವರ್ಣಾತೀತರಾದ ಬ್ರಹ್ಮಜ್ಞಾನಿಗಳ ಪ್ರಭಾವಳಿಯನ್ನು ಗುರುತಿಸಲಾರರಷ್ಟೇ ?

ವಿಪ್ರವರರು ಎಂದು ವೇದ ಓದುತಿಪ್ಪ,
ಪ್ರಾಕೃತರನು ಕಂಡು ಹಾಸ್ಯ ಗೈವ,
ಧರಣಿ ಸುರರಿಗಿಂತ ದಾಸರ ಮತ ಒಪ್ಪ.
ವಿಶ್ವದಾಭಿರಾಮ ಕೇಳು ವೇಮ.

ಓದಿದಾತಗಿಂತ ಒಗೆವ ಅಗಸ ಮೇಲು;
ಮನೆಯ ದೇವಿಗಿಂತ ಮಹಿಷ ಮೇಲು.
ಬ್ರಾಹ್ಮಣಾರ್ಯಗಿಂತ ಬಡವ ಹೊಲೆಯ ಮೇಲು.
ವಿಶ್ವದಾಭಿರಾಮ ಕೇಳು ವೇಮ

ಏಕೆಂದರೆ, ವೇದೋಪನಿಷತ್ತುಗಳನ್ನು ಓದಿ, ಜನಮನದಲ್ಲಿ ಬೇರೂರಿರುವ ಜಾತಿ ಭೇದ ಭಾವವನ್ನೂ, ಯಜ್ಞಯೋಗಾದಿಗಳನ್ನೂ, ಜಡ-ಶಿಲೆಗಳ ಮೂರ್ತಿಪೂಜೆಯನ್ನೂ, ಇನ್ನಿತರ ದೂಷಿತ ಭಾವನೆಗಳನ್ನು ದೂರ ಮಾಡದ 'ಓದಿದಾತಗಿಂತ' ಬಟ್ಟೆ ತೊಳೆದು ಸ್ವಚ್ಛ ಮಾಡುವ ಅಗಸನೇ ಮೇಲಲ್ಲವೇ ? ಜಡ ಮೂರ್ತಿಯಾದ, ಏನನ್ನೂ ನೀಡದ, ಮನೆಯ ದೇವಿಗಿಂತಲೂ ಹಾಲನ್ನು ಕರೆಯುವ ಮಹಿಷವು ಮೇಲಲ್ಲವೇ ? ಜನಮನದ ಕಶ್ಮಲವನ್ನು ದೂರ ಮಾಡದ ಬ್ರಾಹ್ಮಣ-ಜಾತಿಯವನಿಗಿಂತ ಊರಲ್ಲಿ ಕಸಗುಡಿಸಿ ಸ್ವಚ್ಛ ಮಾಡುವ ಬಡ ಹೊಲೆಯನೇ ಮೇಲಲ್ಲವೇ ?

ಶ್ರುತಿಗಳನ್ನು ಕೇಳಿದ ಶೂದ್ರಾತಿಶೂದ್ರರ ಕಿವಿಗಳಲ್ಲಿ ಸೀಸ ಸುರಿದು, ವೇದಾದಿ ಪಠಣ ಗೆಯ್ವ ಇಂಥವರ ನಾಲಗೆ ಸೀಳುವ ಬೆದರಿಕೆಯೊಡ್ಡಿ ಜಾತಿ-ಬ್ರಾಹ್ಮಣರು ಜನರನ್ನು ಅಜ್ಞಾನ-ಮೂಢ ನಂಬಿಕೆಗಳಿಗೆ ತಳ್ಳಿ ಕೆಡಿಸಿದ್ದಾರೆ, ಕಲಿ ಕಾಲದ ಮಹಿಮೆ!

ದ್ವಿಜವರರು ಕೆಟ್ಟು, ದಿಕ್ಕುಗಾಣದು ಭೂಮಿ.
ಮನುಜರೆಲ್ಲ ಕೆಟ್ಟರೆನುವುದೇಕೆ ?
ಕಾಲ ಗತಿಗಳು ಬದಲು; ಕಲಿಯ ಧರ್ಮವು ಬದಲು.
ವಿಶ್ವದಾಭಿರಾಮ ಕೇಳು ವೇಮ.

## ಎಂಜಲು-ಶೀಲವಂತಿಕೆ :-

ಧರ್ಮದ ಗ್ರಹಿಕೆಯು ಭ್ರಷ್ಟವಾದಂತೆಲ್ಲ, ಗುಣಗಣನೆಯು ಗೌಣವಾಗಿ, ಕರ್ಮ ಕಂದಾಚಾರಗಳೇ ಪ್ರಮುಖವೆನಿಸಿದವು. ಯಾರು ಯಾರನ್ನು ಮುಟ್ಟಬೇಕು? ಯಾರು ಯಾರಲ್ಲಿ ಊಟ ಮಾಡಬೇಕು? ಒಬ್ಬ ಶೂದ್ರನು ಮಾಡಿದ ಅಡುಗೆಯನ್ನು ಬ್ರಾಹ್ಮಣನೊಬ್ಬ ಊಟ ಮಾಡಿದರೆ ಅದು ಎಂಜಲಂತೆ! ಒಬ್ಬ ಶೂದ್ರನ ನೆರಳು ಮಡಿವಂತ ಹಾರುವನ ಮೇಲೆ ಬಿದ್ದರೂ ಅದು ಎಂಜಲು. ಹೀಗೆ ಎಂಜಲು-ಮುಟ್ಟುಗಳ ವಿಪರೀತ ಕಲ್ಪನೆಯು ಸಮಾಜದಲ್ಲಿ ದೂಷಿತ ಭಾವನೆಗಳಿಗೆ ಎಡೆಗೊಟ್ಟಿದೆ. ಹಾಗೆ ನೋಡಿದರೆ ಬಾಯಿಯಿಂದ ಪಠಿ. ಸುವ ವೇದ ಶಾಸ್ತ್ರಗಳು, ಮಂತ್ರಗಳು. ಎಂಜಲಾಗವೇ? ಆದ್ದರಿಂದ ವೇಮನ ಯೋಗಿಗಳು ಹೀಗೆ ತಿಳಿಸಿದ್ದಾರೆ :





ಎಂಜಲೆಂಜಲೆನುತ ನಿಮ್ಮ ಬಾಯಿಯಿಂದ,
ವೇದಗಳನೋದುವ ವಿಭ್ರಮಿತರೆ!
ಅರಿತು ನೋಡಲದುವೆ ಎಂಜಲಾಗದೇನು?
ವಿಶ್ವದಾಭಿರಾಮ ಕೇಳು ವೇಮ.

ಎಂಥ ಮಂತ್ರವಿರಲಿ ಎಂಜಲಾಗದೇನು?
ಇರದು ಮಾತು ವಶ್ಯವು; ಬ್ರಹ್ಮನಿರಲಿ,
ಎಂಜಲೆಂಜಲೆಂದು ಇಳೆಯ ತೊರೆಯಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಕರ್ಮಸುತರು ವಿವಿಧ ದೇವತೆಗಳು.
ಕಾಣದೆ ತಿರುಗುವರು ಕಷ್ಟದಿ ಜನ.
ಅಂಥವರೆಂಜಲನು ಅಖಿಲರು ತಿನ್ನುವರು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನೆಂಜಲರಿಯೆ, ಒಪ್ಪವಾಗಿ ಮಥಿಸೆ,
ಬ್ರಹ್ಮದೆಂಜಲಾಯ್ತು ಬಹುಗತಿಯಲಿ.
ಇಷ್ಟು ಜನರು ಮಥಿಸೆ ನಿನ್ನ ಬಾಯಾಗದೆ ?
ವಿಶ್ವದಾಭಿರಾಮ ಕೇಳು ವೇಮ.

ಸಂಸಾರ ಬಂಧದಿಂದ ಮುಕ್ತಗೊಳಿಸುವ ಮಂತ್ರವೂ ತಾರಕ ಬ್ರಹ್ಮತಾನೇ? ಹಾಗಾದರೆ ಗುರುವಿನ ಬಾಯಿಯಿಂದ ಬಂದ ಅದನ್ನೇ ಹಲವರು ಎಂಜಲೆನ್ನಬಹುದಲ್ಲವೇ ? ಆದ್ದರಿಂದ ಎಂಜಲೆನುವ ಗೊಡವೆ ಇನ್ನು ಸಾಕು .

ಓರ್ವರೆಂಜಲು ಬಾಯಲಿ ಒಪ್ಪ ನುಡಿಯೆ,
ತಾರಕ ಬ್ರಹ್ಮ ಇಳೆಯಲಿ ತೊಳಗಿತಷ್ಟೆ,
ಎನಿಬರು ಪುನರಪಿ ಅದನ್ನೆ ಎಂಜಲೆನರೆ ?.
ಎಂಜಲೆಂಜಲು, ಎನಲೇಕೆ ಇನ್ನು, ವೇಮ ?

ಉದರದಲ್ಲಿ ಹೊಲಸು, ಉಂಡ ಬಾಯೆಂಜಲು,
ಕಡೆಗೆ ವಶವೆ ಬ್ರಹ್ಮ ಕಂದರಿರಲು?
ಸತ್ಯವಿಷ್ಟರಿಯದೆ ಸಿದ್ಧಿಯೆಂತು ಜಗದಿ?
ವಿಶ್ವದಾಭಿರಾಮ ಕೇಳು ವೇಮ.

ಹೀಗೆ ಹೇಳಿದ ಮಾತ್ರಕ್ಕೆ ಯಾರೊಬ್ಬರೂ ತಾವು ಅರ್ಧ ತಿಂದು ಬಿಟ್ಟ ಅನ್ನವನ್ನು ಇತರ ಬಡಮಕ್ಕಳಿಗೆ ನೀಡಬಾರದು. ಅದು ನೀಚ ಕರ್ಮ.

ಎಂಥ ಕ್ಷಾಮವಿರಲಿ, ಎಂಜಲನ್ನವನ್ನು,
ಪರರಿಗಿಡುವ ಧರ್ಮ ಪರರನರಿಯೆ,
ಎಂಜಲಾದ ಕಡ್ಡಿ ನೆಕ್ಕುವಂಥ.
ಶ್ವಾನವಾಗಿ ಜನಿಪ ; ಸತ್ಯ ವೇಮ.

## ವಸುಧೈವ ಕುಟುಂಬಕಂ :

ಇಂದು ಸಮನ್ವಯ ತತ್ತ್ವವು ಅಮಷ್ಯಾನಕ್ಕೆ ಬರಬೇಕಾಗಿದೆ. ಮತ, ಮನುಜ ಮತವಾಗಬೇಕು. ಪಥ ವಿಶ್ವ ಪಥವಾಗಬೇಕು. ಧರ್ಮ ಬೋಧಕರಲ್ಲಿ ಎರಡು ವಿಧ. ಹಲವರು ಜಾತಿ ಪರಿಗಣನೆಯನ್ನು ಆಧರಿಸಿ ಸಮಾಜವನ್ನು ಶ್ರೇಣೀಕರಿಸುತ್ತಾರೆ. ಬೆರೆ ಹಲವರು ಜಾತಿಯನ್ನು ಪರಿಗಣಿಸದೆ 'ವಸುಧೈವ ಕುಟುಂಬಕಂ' ತತ್ತ್ವವನ್ನು ಬೋಧಿಸುತ್ತಾರೆ. ಜಾತಿ ನಿರಪೇಕ್ಷರಾದ ಮಹಾತ್ಮರು ಶಿವನೇ ತಂದೆಯೆಂದೂ ಪಾರ್ವತಿಯನ್ನು ತಾಯಿಯೆಂದೂ ಬಗೆದು ಜನರೆಲ್ಲರನ್ನೂ ಪ್ರಮಥ ಗಣವೆಂದು ಭಾವಿಸಿ ವಿಶ್ವಧರ್ಮವನ್ನು ಎತ್ತಿ ಹಿಡಿಯುತ್ತಾರೆ.

ತಾಯಿಯೇ ಪಾರ್ವತಿಯು; ತಂದೆಯೇ ವರ ಶಂಭುವು.
ಪ್ರಮಥ ಗಣಗಳೆಲ್ಲ ಬಂಧು ಬಳಗ.
ತಾನು ಹುಟ್ಟಿದ ಮನೆಯೆ ತನಗೆ ಕೈಲಾಸವಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮಾಂಡದ ಎಲ್ಲ ಕುಲಗಳೂ ಕೂಡಿಯೇ ಹುಟ್ಟಿವೆ. ಅಂದ ಮೇಲೆ ಮಾನವರೆಲ್ಲ ಅಣ್ಣ ತಮ್ಮಂದಿರಾಗಿ ಬಾಳಿ ಬದುಕಬೇಕು. ಜಾತಿ ಭೇದ ಮತ್ತು ಮತ ಭೇದವನ್ನು ಎಣಿಸದೆ ಒಂದಾಗಿ ಉಣ್ಣಬೇಕು. ಸಮ ಪಾಲು; ಸಮ ಬಾಳು ಎಂದು ಒಪ್ಪಿ ಸರ್ವೋದಯದತ್ತ ಮುನ್ನಡೆಯಬೇಕು.

ವರ ಬ್ರಹ್ಮಾಂಡದಿ ಪರಿಕಿಸಿ ನೋಡಿದೊಡೆ,
ಕುಲಗಳೆಲ್ಲ ಕೂಡಿ ಪುಟ್ಟಿದವ್ವೆ.
ಎಲ್ಲರೊಂದಾಗಲಣ್ಣ ತಮ್ಮಂದಿರಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಕುಲದ ಮೇಲು ಕೀಳು ಗೊಡವೆಯಿಂದಲೇನು?
ಸಾನುಜಾತ ಸಕಲ ಕುಲಗಳೆಲ್ಲ.
ಮೇಲು ಕೀಳು ಮಾತು ತಿಳಿದೊಡೆಲ್ಲಿ ಬಂತು ?
ವಿಶ್ವದಾಭಿರಾಮ ಕೇಳು ವೇಮ.

ಉರ್ವಿ ವಾಸಿಗೆಲ್ಲ ಒಂದೆ ತಾಟನಿಟ್ಟು,
ಸ್ನೇಹವರಳಿಸಿ ಕುಲ ಭಾವವಳಿಸಿ,.
ಶಿರದ ಮೇಲೆ ಕರವನಿರಿಸಿ ಉಣಹೇಳಿರೊ.
ವಿಶ್ವದಾಭಿರಾಮ ಕೇಳು ವೇಮ.





ಸರ್ವೋದಯದಿ ಸರ್ವರೊಂದೆಯಾಗಿ ಬಾಳಿ,
ಸನುತ ಗೆಯ್ಮೆಯಿಂದ ವೈರ ಹೂಳಿ,
ನಿಲಲು, ಮೇಲು ಕೀಳು ಬುಡಮೇಲು, ಕೇಳಿ.
ವಿಶ್ವದಾಭಿರಾಮ ಕೇಳು ವೇಮ.

ಅರ್ಥವರ್ಗ- ಅನುಬಂಧ ವಿಭಾಗದಲ್ಲಿ ಸೇರುವ ಇನ್ನುಳಿದ ಶೀರ್ಷಿಕೆಗಳಡಿ ರೂಢಿಯಂತೆ ಎರಡೆರಡು ಪದ್ಯಗಳನ್ನು ಮಾತ್ರ ನೀಡಿ ಸಂಕ್ಷೇಪಿಸಲಾಗಿದೆ.

### ಸ್ವಂತ ನಡತೆ :

ಪರರ ಚಿತ್ತವರಿತು ಪಾಲನೆ ಮಾಡಿದರೆ,
ಆಯ್ತು ಎರಡು ಪಟ್ಟು ಆಸ್ತಿ ತನದು.
ಅವನಿಲಿ ಪರರಾಸ್ತಿ ಅಪಹರಿಸಕೂಡದು.
ವಿಶ್ವದಾಭಿರಾಮ ಕೇಳು ವೇಮ.

ತಪ್ಪನೆಣಿಸುತಿಹರು ತಂಡೋಪತಂಡದಿ.
ಉರ್ವಿ ಜನತೆಗೆಲ್ಲ ಉಂಟು ತಪ್ಪು
ತಪ್ಪನೆಣಿಸುವವರು ತಮ್ಮ ತಪ್ಪರಿಯರು.
ವಿಶ್ವದಾಭಿರಾಮ ಕೇಳು ವೇಮ.

### ಸಾಲ-ಶೂಲ :

ಸಾಲ ನೀಡುವಾತ ಬೆಡಗಿನಧಿದೇವತೆ.
ಕೇಳುವಾಗ ತಿರುಗಿ, ಕಾಲರಾಯ;
ಸಾಲ ಮಾಡಿ ತಿರುಗಿ ಸಲ್ಲಿಸದಗೆ ನೋಡು.
ವಿಶ್ವದಾಭಿರಾಮ ಕೇಳು ವೇಮ

ಸಾಲ ಗೈದು ಮತ್ತೆ ಸುತನ ಹೀನಗೊಳಿಸಿ,
ತಂದೆ ಲೋಲು ಹೊಡೆಯೆ, ದೊಡ್ಡ ವೈರಿ.
ಅಂತೆ ಇಷ್ಟಳಯ್ಯ ಅಂಕೆ ತಪ್ಪಿದ ಸತಿ.
ವಿಶ್ವದಾಭಿರಾಮ ಕೇಳು ವೇಮ.

## ವೇಷ ಭೂಷಣಗಳು :-

ಈ ಶೀರ್ಷಿಕೆಯಡಿ ರೂಢಿಯಂತೆ ಎರಡೇ ಪದ್ಯಗಳನ್ನು ನೀಡದೆ, ಹೆಚ್ಚು ಪದ್ಯಗಳನ್ನು ನೀಡಿದ್ದೇವೆ. ಏಕೆಂದರೆ, ವೇಷ ಭೂಷಣಗಳಿಂದ ಜನರನ್ನು ವಂಚಿಸುವುದು ವಿಶೇಷವಾಗಿರುತ್ತದೆ. ಈ ಕುರಿತು ಸಾಕಷ್ಟು ಎಚ್ಚರ ವಹಿಸುವುದು ಲೇಸು.

ಬೇರೆ ಬೇರೆ ಮತ, ಸಂಪ್ರದಾಯಗಳಿಗೆ ಅಂಟಿಕೊಂಡ ಜನರು ಒಬ್ಬರು ಇತರರಿಂದ ಪ್ರತ್ಯೇಕಿಸಿಕೊಂಡು, ಭೇದ ಭಾವವನ್ನು ಬೇರೂರಲು ಬೇರೆ ಬೇರೆ ಸಂಕೇತಗಳನ್ನು ಬಳಸಿದರು,

ವಿಶೇಷ ಉಡುಗೆತೊಡುಗೆಗಳನ್ನು ಧರಿಸಿದರು. ಜ್ಞಾನಿಗಳೆಲ್ಲ ಈ ವೇಷ ಭೂಷಣಗಳ ಡಾಂಭಿಕತೆಯನ್ನು ಗೇಲಿ ಮಾಡಿದ್ದಾರೆ. ಆದಿ ಶಂಕರಾಚಾರ್ಯರು ತಮ್ಮ 'ಭಜ ಗೋವಿಂದಂ' ಗೀತೆಯಲ್ಲಿ ಹೀಗೆ ಹೇಳಿದ್ದಾರೆ. "ಜಟಿಲೋ ಮುಂಡೀ ಲುಂಚಿತ ಕೇಶಃ; ಕಾಷಾಯಾಂಬರ ಬಹುಕೃತ ವೇಷಃ ಪಶ್ಯ ಪಿಶಿನ ಪಶ್ಯತಿ ಮೂಢೋ, ಉದರ ನಿಮಿತ್ತಂ ಬಹುಕೃತ ವೇಷ:" ಅರ್ಥಾತ್ ಕೆಲವರು ಜಡೆಕಟ್ಟುತ್ತಾರೆ; ಕೆಲವರು ತಲೆ ಬೋಳಿಸುತ್ತಾರೆ; ಇನ್ನು ಕೆಲವರು ಕೂದಲಿನ್ನು ಕಿತ್ತು ಕೊಳ್ಳುತ್ತಾರೆ; ಕೆಲವರು ಕ್ಯಾವಿ ವಸ್ತ್ರ ಧರಿಸಿದರೆ, ಕೆಲವರು ವಿಧವಿಧ ವೇಷ ಹಾಕುತ್ತಾರೆ. ಹೀಗೆ ಮೂಢರು ಸತ್ಯವನ್ನು ಅರಿತಿದ್ದರೂ ಕಣ್ಣು ಮುಚ್ಚಿರುತ್ತಾರೆ. ಹೊಟ್ಟೆ ಪಾಡಿಗಾಗಿ ಬಹು ವಿಧದ ವೇಷಭೂಷಿತರಾಗುತ್ತಾರೆ. ಈ ಕುರಿತು ವೇಮನ ಯೋಗಿಗಳ ನುಡಿಗಳನ್ನು ಕೇಳಿರಿ.

ಬಕ್ಕ ಬೋಳು ತಲೆಯು, ಬಿಳಿಯುಣ್ಣೆಯ ಬಟ್ಟೆ,
ಬೂದಿ ಬಳಿದ ದೇಹ ಬೇಸರಷ್ಟೆ,
ಇಷ್ಟು ವೇಷವೆಲ್ಲ ಹೊಟ್ಟೆಗಾಗಿಯಷ್ಟೆ.
ವಿಶ್ವಧಾಬಿರಾಮ ಕೇಳು ವೇಮ.

ಬೋಳು ತಲೆಯು, ಜಡೆಯು, ಬಳಿದುಕೊಂಡ ಬೂದಿ,
ಭಾಷಣಾಸನಗಳು ವೇಷವಷ್ಟೆ,
ಯೋಗಿಯಾಗನೊಳಗೆ ಬಾಗು ಉಳ್ಳ ತನಕ.
ವಿಶ್ವದಾಭಿರಾಮ ಕೇಳು ವೇಮ.

ಪುಸ್ತಕಗಳು ಜಡೆಯು ಹುಲಿಯ ತೊಗಲು ಬೆತ್ತ
ಜೋಳಿಗೆಗಳು ಹತ್ತು ಸಾವಿರಿರಲಿ.
ಹೊರಲು ಭಾರವಷ್ಟೆ ; ಹೊಂದಲಾರ ಮೋಕ್ಷ.
ವಿಶ್ವದಾಭಿರಾಮ ಕೇಳು ವೇಮ.

ವೇಷಧಾರಿ ತಾನು ಕಾಷಾಯ ವಸ್ತ್ರವ,
ಬೋಳು ನೆತ್ತಿ ಹೊಂದಿ ಪಡಲು ಗರ್ವ,
ಬೋಳು ತಲೆಯದಷ್ಟೆ, ಬೋಳಿಹವೆ ಯೋಚನೆ ?
ವಿಶ್ವದಾಭಿರಾಮ ಕೇಳು ವೇಮ.

ಹೀಗೆ ಮುಗ್ಧ ಜನರ ಕಣ್ಣಿಗೆ ಮಣ್ಣೆರಚಿ ಡಾಂಭಿಕ ಸಾಧು, ಸನ್ಯಾಸಿ, ಆಚಾರಿ, ಜಂಗಮರು ಆಂತರ್ಯದಲ್ಲಿ ಕಪಟಿ, ವಂಚಕರಾಗಿರುತ್ತಾರೆ. ಇವರ ಬಗೆಗೆ ತುಂಬ ಎಚ್ಚರ ವಹಿಸುವುದು ಅವಶ್ಯ.

ಶುದ್ಧ ಸ್ನಾನ ಮಾಡಿ, ಪಟ್ಟೆನಾಮ ಬಳಿದು,
ನೀರು ಕಾವಿ ಪಂಚೆ ನಿರಿಗೆ ಗಟ್ಟಿ,
ನೃತ್ಯಗಾತಿ ಕಾಣೆ ನಿಖಿಲ ವ್ರತವ ಮರೆವ.
ವಿಶ್ವದಾಭಿರಾಮ ಕೇಳು ವೇಮ.





ಕಾವಿ ಬಟ್ಟೆಯುಟ್ಟು, ಘನಯೋಗಿಯಂದದಿ,
ಅಲೆದು ಸಂಜೆಯಾಗೆ ಅರಿವು ಬಿಟ್ಟು,
ಬೆನ್ನು ಹತ್ತಿ ತಿರುಗೆ ಭಂಡ ಸಂನ್ಯಾಸಿಯು.
ವಿಶ್ವದಾಭಿರಾಮ ಕೇಳು ವೇಮ

ಬಟ್ಟೆ, ರೇಶ್ಮೆಯುಟ್ಟು, ಪಟ್ಟೆ, ನಾಮವಿಟ್ಟು,
ಒಟ್ಟು, ಭ್ರಾಂತಿ ತಾನೆ ವೈಷ್ಣವೆಂದು.
ಕಂಠ ಪೂರ್ತಿ ಕುಡುಕ ಕುಸಿವ ಲೋಕಕಂಟಿ.
ವಿಶ್ವದಾಭಿರಾಮ ಕೇಳು ವೇಮ

ನೊಸಲು ಭಕ್ತನಿರಲಿ ನಾಲಗೆ ತೋಳನದು.
ಚಿತ್ತ ಭೂತದಂತೆ ಚಲಿಸುತಿಹನು.
ನೋಡಿದೆ ಶಿವನೆನಲು ನಾಚುಗೆ ಎನಿಸದೇ ?
ವಿಶ್ವದಾಭಿರಾಮ ಕೇಳು ವೇಮ

ಕಾವಿ ಪಂಚೆಯುಟ್ಟು, ಕಡು ಯೋಗಿಯಂದದಿ.
ಉಚ್ಚ ಕೋರಿಕೆಗಳ ಊದಿ ಬಿಟ್ಟು,
ಸೆಟೆದು ತಿರುಗುವವನು ಸನ್ಯಾಸಿಗಳ್ಳನು.
ವಿಶ್ವದಾಭಿರಾಮ ಕೇಳು ವೇಮ

ಬೂದಿ ದೇಹಕೆಲ್ಲ ಬಳಿದುಕೊಂಡರೇನು?
ನಿಷ್ಠೆ ಶಿವನ ಮೇಲೆ ನಿಲಿಸದಿರಲು.
ಹೋಗಿ ಭಸ್ಮದಲ್ಲಿ ಹೊರಳದೇನು ಕತ್ತೆ?
ವಿಶ್ವದಾಭಿರಾಮ ಕೇಳು ವೇಮ

ಬೂದಿ ಬಳಿಯಲೆಷ್ಟೊ, ಭುಜದಿ ಅಲಂಕಾರ ?
ಧರಿಸಿದ ಲಿಂಗಗಳು ತರದ ಮತವು.
ಇಲ್ಲಿ ಮಾತ್ರವಷ್ಟೆ ; ಅಲ್ಲಿ ಸಲ್ಲವಯ್ಯ.
ವಿಶ್ವಧಾಬಿರಾಮ ಕೇಳು ವೇಮ.

ಒಡಲು ಬೂದಿ ಬಳಿದು ಜಡೆಯ ಧರಿಸಿದೊಡನೆ,
ಒಡೆಯನಹುದು, ಮುಕ್ತಿ ಪಡೆಯಲಾರ.
ತಟ್ಟೆ, ಬಿಗಿಯಾಗಿರೆ, ದ್ವಾರವೆಂತಪ್ಪುದು ?
ವಿಶ್ವದಾಭಿರಾಮ ಕೇಳು ವೇಮ.

ವಿಶ್ವಾಸಕ್ಕೆತಕ್ಕ ವೇಷವಾವುದಿಲ್ಲ.
ಉಣುವ ತಿಂಡಿಯಿಲ್ಲ ; ಉಡುವ ವಸ್ತ್ರ.
ವಿಶ್ವವಾಗಿ ಇರುವ ವಿಭುವು ಹೊಳೆಯನೆಂತು ?
ವಿಶ್ವದಾಭಿರಾಮ ಕೇಳು ವೇಮ.

ವೇಷಧಾರಿಗಳಲಿ ವಿಶ್ವಾಸ ಇಡ ಹೊಲ್ಲ.
ವೇಷ ದೋಷಪೂರ್ಣ ವಸುಧೆಯೊಳಗೆ.
ರಚ್ಚು ಆಯ್ತು ವೇಷ ರಾವಣನದು ಮೊದಲು.
ವಿಶ್ವದಾಭಿರಾಮ ಕೇಳು ವೇಮ.

ರೇಶ್ಮೆ ಸೀರೆ ಕಟ್ಟಿ, ರಂಜಿಪ ತಿರುನಾಮ,
ಸೃಷ್ಟಿ ವೈಷ್ಣವನಿಗೆ ಶಿಬಿಯು ಮೇಲೆ.
ಚೆಹ್ನೆ ಎಷ್ಟೊ ಮಾಳ್ಪ; ಚೋರ ವೈಷ್ಣವಿಂತು.
ವಿಶ್ವದಾಭಿರಾಮ ಕೇಳು ವೇಮ.

ಮುಟ್ಟು, ಮಡಿ :

'ಮುಟ್ಟು' 'ಮುಟ್ಟು' ಎಂದು ಮೂಲೆ ಹಿಡಿವುದೇಕೆ ?
ಮುಟ್ಟಿನೊಳಗೆ ಹುಟ್ಟಿ ಮೂಢ ಜನರು.
'ಮುಟ್ಟು' ಗುಟ್ಟು ತಿಳಿದು, ಮುಂಚೆ ಮೌನ ತಳೆದ.
ವಿಶ್ವದಾಭಿರಾಮ ಕೇಳು ವೇಮ.

ಮಾದಿಗನ ಸ್ಪರ್ಶ; ನೀರು ಮುಳುಗುತಿಹರು.
ಮಸಣಕೊಯ್ಯೆ ಸುಡಲು ಮಾದಿಗನೇ ?
ಈಗ ಅಂಟುವಂಟು ಆಗ ಎಲ್ಲಿ ಹೋಯ್ತೊ ?
ವಿಶ್ವದಾಭಿರಾಮ ಕೇಳು ವೇಮ.

ಹಿರಿಮೆ :

ಮರೆವೆವೇನೊ ಎನುತ, ಮನದಿ ಜನರು ಸತತ,
ಪ್ರೀತಿ ಗೆಯ್ಯರಲ್ತೆ ಎಷ್ಟೆ ಇರಲಿ ?
ಮರಳಿ ಮೇಲು ಗೆಯ್ದು ಮರ್ಯಾದೆ ಕಾಣುವರು.
ವಿಶ್ವದಾಭಿರಾಮ ಕೇಳು ವೇಮ.

ಕೆಡುವ ಮಾನವರನು ಕೈಹಿಡಿದು ಶಿಕ್ಷಿಸಿ,
ಕಡೆಗೆ ತಲುಪಿಸುವವ ಘನನು ಅರಿಯೆ.
ಕಡೆಗೆ ಪುಣ್ಯವಪ್ಪ, ಘನ ಶಿವ ಸನ್ನಿಧಿಯ-
ಲಿರುವ ತಪ್ಪದಂತೆ, ನಿರುತ, ವೇಮ

ಸದ್ಭಾವನೆ :

ಮರೆಬೇಕು ಪಾಪ ಸಂಗತಿ.
ಮರೆಯದಿರಬೇಕು ಯುದ್ಧವನು ಮತ್ತೆ ಮಹಿಯೊಳ್.
ಮರೆಬೇಕು ಪರ ದೋಷವ,
ಮರೆಯದಿರಬೇಕು ಮೇಲನು, ಮಹಿಯಲಿ, ವೇಮಾ.





ಶಾಂತಿಯಲಿ ಸಕಲ ಕಾರ್ಯವು,
ಸಂತೋಷಕರವು, ಸತ್ಯವೆ ಜಯವೈ ಎನುವಾ,
ಪಂಥವ ನಿಲಿಸಿದ ಧರ್ಮಜ-
ನೆಂತೋ ಯತ್ನಿಸಿ, ಕೊನೆಯಲಿ, ಜಯಸಿದ, ವೇಮಾ.

ಸದ್ಗುಣ ಸಂಪಾದನೆ :

ಮಾಡಿ ಮುಗಿಸೆ ತನಗೆ ಮಾಡಲಾರದಷ್ಟು,
ಕೆಟ್ಟ ಜನಕೆ ರಕ್ಷೆ ಕೊಡನು ಅವನು,
ತನ್ನದು ನಡೆಯದೇ? ತನ್ನ ಬದುಕು ಏಕೆ ?
ವಿಶ್ವದಾಭಿರಾಮ ಕೇಳು ವೇಮ.

ತಾಮಸ ಗುಣದಿಂದ ಮಾಡಬೇಡ ಕಾರ್ಯ,
ಮದದಿ ಜಗಿದಾಡಲು ವಿಷಮ ನೋಡು.
ಕಸುಗಾಯಿಯ ತಂದಿರಿಸಲು ಮಾಗುವುದೇ ?
ವಿಶ್ವದಾಭಿರಾಮ ಕೇಳು ವೇಮ.

ನೆರವಿಗೆ ಬಾರದ ಸಿರಿ :

ಕನಸಿನಲಿ ಸಂಪದವೆಲ್ಲ,
ಕನವರಿಪ ; ಕಾಣನೇಕೆ ತಾನು ಎಚ್ಚರಿಯಲ್ ?
ನೆನೆ; ಭೋಗ ಭಾಗ್ಯ ಗುಣಗಳು,
ಕನಸಿನ ರೀತಿ ; ಇದು ನಂಬೆ ಘನವದು, ವೇಮಾ

ಎಷ್ಟು ಸಂಪದವೋ ಅಷ್ಟು ಕಷ್ಟ ಚಿಂತೆ.
ಚಿಂತೆಯಿಂದ ಮಿಗಿಲು ಸೊರಗಿತು ತನು.
ಚಿಂತೆ ಇರದ ಇರವೆ ಕೆಡದ ಸಂಪದವರಿ.
ವಿಶ್ವದಾಭಿರಾಮ ಕೇಳು ವೇಮ.

ಒಕ್ಕಲಿಗ-ಕಾಪು :

ಭೂಮಿ ಪರರಿಗಾಗಿ ಬೆಳೆದು ಉತ್ತಿ ಬಿತ್ತಿ,
ಅವನಿಪತಿಗೆವಶ್ಯ ಆಗಿ ಇಹನು,
ಕಾಪು, ಹಾಲಿನಂಥ ಕುಲಜನವನು ; ಅರಿಯೆ,
ವಿಶ್ವದಾಭಿರಾಮ ಕೇಳು ವೇಮ.

ಕರಣಿಕ ಧನಿಕರಲು, ಕಾಪುರೆಲ್ಲ ಕೂಡಿ,
ಬಾಗುತಿಹರು ಮನಸು ಬಂದ ಹಾಗೆ.
ನಿಷ್ಠುರ ಕರಣಿಕರಲು, ನಿನ್ನ ಸುತರೆನುವರು.
ವಿಶ್ವದಾಭಿರಾಮ ಕೇಳು ವೇಮ.

ಬಡತನ :

ಇದ್ದವನಂತಿರು, ಇಲ್ಲದವನಂತಿರು.
ಮತ್ತೆ ಇಲ್ಲದಿಹುದು ಮರಳಿ ಉಂಟು.
ಆಶೆ ಕೋರಿದಷ್ಟು ಅನುಗ್ರಹಿಸುವ ಶಿವ.
ವಿಶ್ವದಾಭಿರಾಮ ಕೇಳು ವೇಮ.

ನೆರೆಹೊರೆಯರಿಗುಂಟು ; ನೋಡಿ ಸಂಪದವನು,
ತಮಗೆ ಇಲ್ಲವೆನಲು ಧರ್ಮವೇನು ?
ಧರ್ಮ ನಡೆಸಿರೆನಲು ತೊಂದರೆ ಪಡುವರಲ !
ವಿಶ್ವದಾಭಿರಾಮ ಕೇಳು ವೇಮ.

ಕೀಳುತನ :

ಧರ್ಮ ಕಂಟಕನವ ಧನದಿ ಗರ್ವ ತಾಳಿ,
ಸಕಲ ಸಂಪದದಲಿ ಸುತ್ತಿ ಹೊರಳಿ,
ಕಡೆಗೆ ತಾನು ಮೇಲ್ಕೆ ಕಾಣದೆ ಕೆಡುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಪರರ ಮೇಲು ಕಂಡು, ಹಲವು ಕಾಗೆಯಂತೆ,
ವ್ಯರ್ಥ ಮಾತನಾಡುವವನು ಅಧಮ.
ಅಂತಿರುವನ ಬದುಕು ಅದು ಮಣ್ಣಿಗೆ ಸಮವು.
ವಿಶ್ವದಾಭಿರಾಮ ಕೇಳು ವೇಮ.

ಇದು ವರೆಗೆ ಅರ್ಥವರ್ಗವನ್ನು ಕುರಿತು ಸಂಕ್ಷೇಪವಾಗಿ ತಿಳಿದೆವು. ಇನ್ನು ಕಾಮ ವರ್ಗ ಕುರಿತು ಕವಿ ವೇಮನರು ಏನನ್ನು ಹೇಳಿರುವರೆಂದು ತಿಳಿಯೋಣ.

## ಕಾಮ ವರ್ಗ :-

ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳು ಸಮಾವೇಶವಾಗುತ್ತವೆ. ಇವುಗಳಲ್ಲಿ ಕಾಮ ವರ್ಗವು ನಿಗಿನಿಗಿ ಕೆಂಡದಂತೆ, ಚೆನ್ನಾಗಿ ತಿಳಿದುಕೊಂಡರೆ ಸಾಕಷ್ಟು ಪ್ರಯೋಜನಕರ. ಇಲ್ಲವಾದರೆ ತುಂಬಾ ಹಾನಿಕರ. ಸ್ವಂತ ಅನುಭವವಿಲ್ಲದ, ಪುಸ್ತಕ ಪಂಡಿತರ ಗಿಳಿ ಪಾಠಕ್ಕೆ ಇಲ್ಲಿ ಮನ್ನಣೆ ಇಲ್ಲ. ಆದರಿಂದ ಆಚಾರ್ಯ ಶಂಕರರು ಮಂಡನಮಿಶ್ರರ ಪತ್ನಿ ಭಾರತಿ ಯೊಂದಿಗೆ ಕಾಮ ವರ್ಗ ಕುರಿತು ಚರ್ಚೆಗಿಳಿಯಲು ಹಿಂಜರಿದರು. ಬಳಿಕ ಸ್ವಾನುಭವ ಸಂಪಾದಿಸಲು ಕಾಶಿಯ ರಾಜನ ಕಳೇವರದಲ್ಲಿ ಪರಕಾಯ ಪ್ರವೇಶ ಮಾಡಿ, ಅವನ ಸತೀಮಣಿಯರೊಂದಿಗೆ ಭೋಗ ಕ್ರೀಡೆಗಿಳಿದು ಮರಳಿ ಬರಬೇಕಾಯಿತು. ಇದರಿಂದಾಗಿಯೇ ವೇಮನರಂಥ ಯೋಗಿಗಳು ಈ ವಿಷಯದಲ್ಲಿ ಏನು ಹೇಳಿರುವರೆಂಬ ಬಗ್ಗೆ ಎಲ್ಲರ ಕುತೂಹಲ ಇರುವುದು ಸಹಜ.





ಕಾಮ ವರ್ಗದಲ್ಲಿ ನಮಗೆ ಎರಡು ನೂರಾಐವತ್ತಕ್ಕಿಂತ ಅಧಿಕ ಪದ್ಯಗಳು ಲಭ್ಯವಾಗಿವೆ ಈ ಪದ್ಯಗಳನ್ನು ಕಾಮಾಸಕ್ತಿ, ಸಂಸಾರ ಕಲಹ, ದಾಂಪತ್ಯದಲ್ಲಿ ವಿರಸ, ಚೋರತನ-ಜಾರತನ, ಜಾರೆಯರು, ಜಾರ ಪುರುಷರು, ವೇಶ್ಯೆಯರು, ವಿಟ ಪುರುಷರು, ದೇವದಾಸಿಯರು ಎಂಬ ಶೀರ್ಷಿಕೆಗಳಡಿ ವಿಭಜಿಸಿದ್ದೇವೆ. ಆದರೆ ಪ್ರತಿಯೊಂದು ಶೀರ್ಷಿಕೆಯಡಿ ಮೂವತ್ತಕ್ಕಿಂತ ಹೆಚ್ಚು ಪದ್ಯಗಳಿದ್ದರೂ ಇಲ್ಲಿ ಸಂಕ್ಷೇಪಿಸಲೋಸುಗ ಕೇವಲ ಎರಡೆರಡು ಪದ್ಯಗಳನ್ನು ಉಲ್ಲೇಖಿಸಿದ್ದೇವಷ್ಟೇ.

ಕಾಮಾಸಕ್ತಿ :

ಕೂಳಿಗು ಎರವಾಗಿ ಕುಳಿತುಕೊಂಡ ಜನರು,
ತರುಣೆ ಕಂಡ್ರು ಮತ್ತೆ ತಗಲಿ ಮೋಹ,
ದೀಪ ಕಂಡ ಹುಳುವು ದಹಿಸುತಿಪ್ಪ ರೀತಿ.
ವಿಶ್ವದಾಭಿರಾಮ ಕೇಳು ವೇಮ

ಅಂಗವೆಲ್ಲ ಸಡಲಿ ಅಂತೆ ಹಲ್ಲು ಹೋಗಿ,
ತನುವು ಮುಪ್ಪಿನಿಂದ ತೀರ ಒಣಗಿ,
ಮುಪ್ಪು ಅಡರಿದರೂ ಮೋಹ ಬಿಡನು ಭೋಗಿ.
ವಿಶ್ವದಾಭಿರಾಮ ಕೇಳು ವೇಮ

ಸಂಸಾರ ಕಲಹ :

ತಾಯಿ ತಂದೆಯೊಡನೆ ತಂಟೆ ಗೆಯ್ಮೆ ಕೇಡು.
ಪರರ ಭಾಮೆ ಕೈಯ ಪಿಡಿಯೆ ಕೇಡು.
ದೊಡ್ಡ ಜನರ ನಿಂದೆ ದೊಡ್ಡದಾದ ಕೇಡು.
ವಿಶ್ವದಾಭಿರಾಮ ಕೇಳು ವೇಮ.

ಕೆರವಿನೊಳಗೆ ಕಲ್ಲು, ಕಿವಿಯ ಕಡಿಜೇರಿಗೆ,
ಕಣ್ಣೊಳಗಿನ ಕಸಿರು, ಕಾಲ ಮುಳ್ಳು,
ಗೃಹದ ಕಲಹವೆಷ್ಟು, ಗಣನೆ ಗೆಯ್ಯಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ದಾಂಪತ್ಯದಲ್ಲಿ ವಿರಸ :

ಪತಿಯ ತಪ್ಪು ಕಂಡು, ಮನದೊಳಿಟ್ಟುಕೊಂಡು,
ಸಹಜ ಗುಣವ ಬಿಡಳು ಜಾರ ಹೆಣ್ಣು.
ಹಿಟ್ಟು ತಿಂದ ನಾಯಿ ಹೇಸಿಗೆಗಾಸಿಸದೆ ?
ವಿಶ್ವದಾಭಿರಾಮ ಕೇಳು ವೇಮ.

ಗಾರ್ದಭ ಮೈತುಂಬ ಗಂಧ ಬಳಿಯಲೇನು ?
ಅದರ ಪರಿವೆ ಇಲ್ಲ ಒದೆವುದೊಂದೆ.
ಇದುವೆ ತರಹ, ಜೋಡಿ ಎನಿಸದವಳ ಬಯಕೆ.
ವಿಶ್ವದಾಭಿರಾಮ ಕೇಳು ವೇಮ.

**ಚೋರತನ-ಜಾರತನ :**

ಚೋರತನ ಜಾರತ್ವ ಜಗದಿ ತುಂಬಿ ಇಹವು.
ಜಾರಿಣಿಗೆ ಏನಿನಿತು ಶಂಕೆ ಇಹುದು.
ಕಳ್ಳಗೆ ಬೆಳದಿಂಗಳು ಕೂಡಿ ಬಾರದಲ್ಲ!
ವಿಶ್ವದಾಭಿರಾಮ ಕೇಳು ವೇಮ.

ಕಾಗೆ ಗೂಡಿನೊಳಗೆ ಕೋಗಿಲೆ ಮೊಟ್ಟೆಯಿರಿಸಿ,
ಕಾಪಿ ಮರಿಯ ಮೊಳ್ಪ ಗುಟ್ಟು ಅರಿಯೆ,
ನಿಕ್ಕಿ ತಿಳಿವುದಯ್ಯ ನಾರಿ ಮಾಳ್ಪ ಮೋಸ,
ವಿಶ್ವದಾಭಿರಾಮ ಕೇಳು ವೇಮ.

**ಜಾರೆಯರು :**

ಚೊಕ್ಕವಾಗಿರುವನ ಅಕ್ಕರೆಯಿಂದ ನೋಡೆ,
ತಕ್ಕನಲ್ಲವೆನಿಪ ತನ್ನಗಂಡ.
ಜಾರ ಬುದ್ಧಿಯಷ್ಟೆ; ಒರೆಯ ಬುದ್ಧಿಯಲ್ಲ.
ವಿಶ್ವದಾಭಿರಾಮ ಕೇಳು ವೇಮ.
ಗುಣವು ತೀರಿತಲ್ಲ; ಕುಲವು ನಾಶವಾಯ್ತು;
ಲಲನೆ ನಡತೆಯಿಂದ ಲಜ್ಜೆ ಹೋಯ್ತು.
ಜವುಗು ಭೂಮಿಯಿಂದ ಜಲವು ಕೆಟ್ಟು ಹೋಯ್ತು.
ವಿಶ್ವದಾಭಿರಾಮ ಕೇಳು ವೇಮ.

**ಜಾರ ಪುರುಷರು :**

ಭಾರ್ಯೆರಂಭೆಯಿರಲು, ಸುಶೀಲವತಿಯಿರಲು,
ಜಾರ ಪುರುಷನೆಂತು ಜಾಡು ಬಿಡುವ ?
ಹೊಲೆಗೇರಿಯ ನಾಯಿ ತಿರುಗುತಿರುವ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಮನೆಯ ಮಡದಿ ಬಿಟ್ಟು, ಜಾರಕಾಂತೆಯೊಡನೆ.
ಬೆಪ್ಪ ತಿರುಗುತಿಪ್ಪ ಬೆನ್ನು ಹತ್ತಿ.
ತೆನೆಯ ಪೈರು ಬಿಟ್ಟು ಕರಿಕೆ ಕೀಳುವಂತೆ.
ವಿಶ್ವದಾಭಿರಾಮ ಕೇಳು ವೇಮ.

**ವೇಶ್ಯೆಯರು :**

ವಿಟ ಬಳಸಿದ ಬಳಿಕ ತೊರೆದು ಬಿಟ್ಟ ಅವಳು,
ಬಡ ಗಂಡನ ಬಯಸಿ ಬಳಿ ಸಾರಳೆ ?
ತಿಪ್ಪೆ ಗುಂಡಿ ಕೆರಹ ಶ್ವಾನ ನೆಕ್ಕದೇನು ?
ವಿಶ್ವದಾಭಿರಾಮ ಕೇಳು ವೇಮ.





V. S. College of Business Administration
Vidyanagar
Unkal Cross
HUBLI-31

ಒನಪು ಜನಕೆ ತೋರಿ, ಒಡನೆ ಮರೆಸಿ ಬಿಟ್ಟು,
ಕೈಯ ಕಾಸನೆಲ್ಲ ಕಿತ್ತುಕೊಂಡು,
ವಶಪಡಿಸಿ ಕೊಲುವರು ವಸುಧೆಯ ಗಣಿಕೆಯರು.
ವಿಶ್ವದಾಭಿರಾಮ ಕೇಳು ವೇಮ.

**ವಿಟ ಪುರುಷರು :**

ಆಹಾ! ಅಂಗನೆಯರ ಆ ಬ್ರಹ್ಮ ಸೃಜಿಸಿದ;
ಪುರುಷ ಪಾಲಿಗೆ ಹಿರಿ ಭೂತದಂತೆ !
ಅವಳ ಬಲೆಗೆ ಸಿಗದ ಅವನ ನೋಡಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಒಡಲು ಮೆರುಗು ಕಂಡು, ನಡುವಿನ ಸೊಬಗು ಕಂಡು,
ವಂಕ ಹೆಳಲು ಕಂಡು, ವನಿತೆ ಕಂಡು,
ವಿಟರು ಹೊಟ್ಟೆಯೊಳಗೆ ವ್ಯಥೆಯ, ಹೊಂದದಿಹರೆ ?
ವಿಶ್ವದಾಭಿರಾಮ ಕೇಳು ವೇಮ.

**ದೇವ ದಾಸಿಯರು :**

ದಾಸಿ ಸಂಗ ಮಾಡೆ ದೋಷ ದೋಷ ನೋಡು.
ವೇಶ್ಯೆ ಸಂಗ ಮಾಡೆ ಲಜ್ಜೆಗೇಡು.
ಜಾರೆ ಸಂಗ ಮಾಡೆ ಮತ್ತೆ ಸಾವಿಗೀಡು.
ವಿಶ್ವದಾಭಿರಾಮ ಕೇಳು ವೇಮ.

ತನ್ನ ರಕ್ತಯಿಂದ ದಾಸಿ ಕೈಗೆ ಸಿಕ್ಕು,
ಮಿಕ್ಕ ಹೊರಗೆ ಬರದೆ ಮಿಡುಕುತಿರುವ,
ನರನಿಗೆಲ್ಲಿ ಮುಕ್ತಿ ದೊರೆಯುವುದು ? ಹೇಳಿರಿ.
ವಿಶ್ವದಾಭಿರಾಮ ಕೇಳು ವೇಮ,

**ಸಾಧನೆ-ಮತ್ತು ಕಾಮ :**

ಅಬಬ ! ಲಲನೆ ಕಣ್ಣು, ಅತಿ ವಿಚಿತ್ರ!
ಚಿಂತೆ ಕವಿಯದದನೆ ಅಂತೆ ತೊರೆದು,
ಸರಸದಿರುವ ಅವನೆ ಸರ್ವದಾ ಯೋಗಿಯು.
ವಿಶ್ವದಾಭಿರಾಮ ಕೇಳು ವೇಮ,

ಪಂಕಜಾಕ್ಷಿ ನೋಡೆ, ಪೊನ್ನಿನೊಡವೆ ನೋಡೆ,
ದಿಗಿಲುಗೊಳುವ ಯೋಗಿ, ನಂಬಬೇಡ.
ಮನಸು ನಿಲಿಸಿದವನೆ ಮಹಿಯೊಳೊಪ್ಪ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಸಂಕೀರ್ಣ :

ಉಪವಾಸವಿರುವಗೆ ಊರ ಹಂದಿಯ ಜನ್ಮ.
ತಪಸಿಯಾಗೆ ದರಿದ್ರ ತನವು ಬಂತು.
ಶಿಲೆಗೆ ಮಣಿಯ ಬಹುದೆ ? ಜೀವವುಳ್ಳ ಬ್ರಹ್ಮ ?
ವಿಶ್ವದಾಭಿರಾಮ ಕೇಳು ವೇಮ

ಮತದ ಒಳಗೆ ಇರುವ ಮತವನೆಲ್ಲ ಕೊಚ್ಚಿ
ಘಟದ ಒಳಗೆ ಇರುವ ಘನನ ತಿಳಿದು,
ಘನತೆ ನಿಲ್ಲಿಸುವವ ಘನ ತತ್ತ್ವ ಯೋಗಿಯು.
ವಿಶ್ವದಾಭಿರಾಮ ಕೇಳು ವೇಮ.

## ಮೋಕ್ಷ ವರ್ಗ :-

ಧರ್ಮ, ಅರ್ಥ, ಕಾಮ ವರ್ಗಗಳನ್ನು ತ್ರಿಕಗಳೆಂದೂ ಮೋಕ್ಷವರ್ಗವನ್ನೂ ಸೇರಿಸಿದರೆ ಚತುರ್ವಿಧ ಪುರುಷಾರ್ಥಗಳೆಂದೂ ಕರೆಯುತ್ತಾರೆ. ಮೋಕ್ಷ ವರ್ಗವು ತುಂಬಾ ಮಹತ್ವದ್ದಾಗಿದ್ದರೂ ಶ್ರದ್ಧೆಯಿಲ್ಲದ ಸಾಧಕನಿಗೆ ಅಭ್ಯಸಿಸಲು ಕಷ್ಟಸಾಧ್ಯವಾಗಿದೆ. ಧರ್ಮ, ಅರ್ಥ. ಮತ್ತು ಕಾಮ ವರ್ಗಗಳ ಪದ್ಯಗಳು ಸುಲಲಿತ ಶೈಲಿಯಲ್ಲಿವೆ. ಮೋಕ್ಷ ವರ್ಗದ ಪದ್ಯಗಳು ಲಕ್ಷ್ಯ ಸೂಚಿಯಾಗಿದ್ದು ಅನುಭಾವ ಗಮ್ಯವಾಗಿವೆ. ಮೋಕ್ಷವರ್ಗದಲ್ಲಿ ಹದಿನೈದು ನೂರಕ್ಕಿಂತ ಹೆಚ್ಚು ಪದ್ಯಗಳು ಲಭ್ಯವಿದ್ದು, ಅವುಗಳನ್ನು ಹದಿನಾರು ಮುಖ್ಯವಿಭಾಗಗಳಲ್ಲಿ ಜೋಡಿಸಲಾಗಿದೆ. ಪ್ರತಿಯೊಂದು ವಿಭಾಗದಲ್ಲಿ ಉಪಶೀರ್ಷಿಕೆಗಳಡಿ ಸಾಕಷ್ಟು ಪದ್ಯಗಳಿದ್ದು, ನಾವಿಲ್ಲಿ ಕೇವಲ ಪ್ರಾತಿನಿಧಿಕವಾಗಿ ಎರಡೆರಡು ಪದ್ಯಗಳನ್ನು ಮಾತ್ರ ಉಲ್ಲೇಖಿಸಿ ವಿಹಂಗಮ ದೃಷ್ಟಿಗೆ ಅನುವು ಮಾಡಿಕೊಟ್ಟಿದ್ದೇವೆ. ಮಹಾಯೋಗಿ ವೇಮನರ ಒಲವು ನಿಲುವುಗಳನ್ನು ಅರಿಯುವ ಜಿಜ್ಞಾಸುವು ಈ ವರ್ಗದ ಪದ್ಯಗಳ ಆಳ ಅಭ್ಯಾಸ ಮಾಡಬೇಕು. ಅಧಿಕಾರ ಲಕ್ಷಣ, ಮನೋಶುದ್ಧಿ, ಗುರುದೀಕ್ಷೆ, ತತ್ತ್ವ ನಿರ್ಣಯ, ಜೀವ ಶಿವೈಕ್ಯ, ನಿಜ ಬೋಧೆ, ಹಠಯೋಗ, ಲಯಯೋಗ, ಭಕ್ತಿಯೋಗ, ರಾಜಯೋಗ, ಗುರುಶಿಷ್ಯ ಲಕ್ಷಣ, ಸಾಧು ಲಕ್ಷಣ, ಸಹಜ ಸಮಾಧಿ, ಜೀವನ್ಮುಕ್ತಿ ಸ್ಥಿತಿ, ಅವಧೂತ ಚರ್ಯೆ ಮತ್ತು ಅಧ್ಯಾತ್ಮ ಸುಖಬೋಧೆ ಎಂಬಿವೇ ಹದಿನಾರು ಮುಖ್ಯ ವಿಭಾಗಗಳು. ಇವುಗಳನ್ನು ಒಂದೊಂದಾಗಿ ಪರಾಂಬರಿಸೋಣ.

೧ ಅಧಿಕಾರ ಲಕ್ಷಣ :

ಹೆಡ್ಡನಿಗೆ ತಿಳಿಸಲು ಒಂದು ವರುಷ ಸಾಕು,
ಗುಡ್ಡದೊಳಿಹ ಮೌನಿಗರುಹೆ ಮಾಸ,
ಮೂಢಗರುಹೆ ಬೇಕು ಮೂವತ್ತು ವರುಷವು.
ವಿಶ್ವದಾಭಿರಾಮ ಕೇಳು ವೇಮ.

ನಾಯಿ ಏಕಾಂತವು, ನೋಡು ಬಕ ಧ್ಯಾನ,
ಕತ್ತೆ ರಾಗದೇಕೆ, ಕಪ್ಪೆ ಜಳಕ;
ಆತ್ಮವರಿವ ಭಾವ ಅರಿಯರೇಕೂ ಮನದಿ ?
ವಿಶ್ವದಾಭಿರಾಮ ಕೇಳು ವೇಮ.





ಕೇಳು, ವಿವೇಕವೆಂಬ ಕೊಡಲಿ ಕೈಲಿ ಹಿಡಿದು,
ಅವಿಧ್ಯೆಯೆಂಬ ಘನ ಅಡವಿ ತರಿದು,
ತಿಳಿವು ಎಂಬ ಒಪ್ಪ ದೀಪ ಕೈಲಿ ಹಿಡಿದು,
ಮುಕ್ತಿಗಾಣಬಹುದು ಚೊಕ್ಕ ವೇಮ.

ಚಿತ್ತ ಶುದ್ಧಿ ಹೊಂದಿ ಗೈದ ಪುಣ್ಯಕಾರ್ಯ,
ಕೊಂಚವಾದರೇನು ? ಕ್ಷುಲ್ಲಕಲ್ಲ,
ಆಲದ ಮರವೆಷ್ಟು ? ಅದರ ಬೀಜವೆಷ್ಟು ?
ವಿಶ್ವದಾಭಿರಾಮ ಕೇಳು ವೇಮ.

## ಗುರು- ದೀಕ್ಷೆ :-

ಗುರುವನ್ನು ಕುರಿತು ನಾವು ಈ ಮುನ್ನ ಸಾಕಷ್ಟು ದೀರ್ಘವಾಗಿ ವಿವೇಚಿಸಿದ್ದೇವೆ. ಇಲ್ಲಿ ಮೋಕ್ಷ ಗುರುವನ್ನು ಕುರಿತು, ಎರಡು ಪದ್ಯಗಳನ್ನು ಮಾತ್ರ ನೀಡುತ್ತಿದ್ದೇವಷ್ಟೇ.

ಗುರುವೆ ತಾನಾಗುವ ಹರನ ತೋರುವವನು.
ಬ್ರಹ್ಮಲೋಕವನೆ ಪ್ರತ್ಯಕ್ಷಿಸುವ.
ಕಿಂಕರನ ಶೋಧಿಸಿ ಕತ್ತಲೆಯ ತೊಡೆವನು.
ವಿಶ್ವದಾಭಿರಾಮ ಕೇಳು ವೇಮ.

ಹಾಲು ಗೂಡಿ ನೀರು ಹಾಲಾಗಿ ಬೆಳಗಿತು.
ಮಹಾಗುರುವಿನಿಂದ ಮಹಾ ಜ್ಞಾನಿ.
ಸಾಧು ಸಜ್ಜನಾದಿ ಸಂಗವಿಂತಿಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

## ತತ್ತ್ವ ನಿರ್ಣಯ :-

ತತ್+ತ್ವ = ತತ್ತ್ವ. ಇಹ ಪರಗಳಲ್ಲಿ ಬಾಳು ಸಾಗಿಸಬೇಕಾದ ಮಾನವನು ತತ್(ಆದು) ದಿಂದ ಆವಿರ್ಭವಿಸಿ ಇದಂ (ಇದು)ಗೆ ಅಂಟಿದ್ದಾನಷ್ಟೇ. ತತ್ತ್ವ ಸಂಧಾನವೇ ತತ್ತ್ವ ಜ್ಞಾನ. ತತ್ತ್ವ ಜ್ಞಾನ ಮೂಲಕ ತನ್ನನ್ನು ತಾನು ತಿಳಿಯಬಲ್ಲನು.

ತತ್ತ್ವ ನಿರ್ಣಯವನ್ನು ಜನನ-ಮರಣ, ತ್ರಿಗುಣಾತೀತ ಅವಸ್ಥೆ ಮತ್ತು ಬ್ರಹ್ಮಾಂಡೀಯ ತತ್ತ್ವ ಕುರಿತು ಪ್ರತ್ಯೇಕವಾಗಿ ವಿಂಗಡಿಸಿದ್ದೇವೆ. ತತ್ತ್ವನಿರ್ಣಯಕ್ಕೆ ಸಂಬಂಧಿಸಿದಂತೆ ೨೩೦ ಪದ್ಯಗಳಿದ್ದು, ಇಲ್ಲಿ ಸಾಂಕೇತಿಕವಾಗಿ ಒಂದೊಂದರಲ್ಲಿ ಎರಡು ಇಲ್ಲವೆ ಮೂರು ಪದ್ಯಗಳನ್ನು ಮಾತ್ರ ನೀಡಿದ್ದೇವೆ. 'ಜಿಜ್ಞಾಸುಗಳು ಆಳ ಅಭ್ಯಾಸಕ್ಕೋಸುಗ' ವೇಮನ ವಿಶ್ವಗೀತೆ ಗ್ರಂಥದ ಅವಲೋಕನ ಮಾಡುವುದು ಪ್ರಯೋಜನಕರ.

ತತ್ತ್ವನಿರ್ಣಯ-೧.

ಮರಣ ಕಾಲದಲ್ಲಿ ಮನಸು ನಿಲಿಪ ಜ್ಞಾನಿ
ಪರಮ ಪ್ರತಿಭೆಯಿಂದ ಪಟ್ಟು ಬಿಡನು.
ಬರಿಯ ಕೋರಿಕೆಗಳಿಗೆ ಬಳಲುವನು ಅಜ್ಞಾನಿ.
ವಿಶ್ವದಾಭಿರಾಮ ಕೇಳು ವೇಮ

ಅನ್ನ ರಸದಿಂದಲಿ ಆಯ್ತು ಬಿಂದುರಸವು.
ಬಿಂದು ರಸದಿಂದಲಿ ಬೀಜವಾಯ್ತು.
ಬಿಂದು ಬೀಜಗಳನು ಭೇದಿಸಿ ನೋಡಿಕೋ.
ವಿಶ್ವದಾಭಿರಾಮ ಕೇಳು ವೇಮ.

## ತತ್ತ್ವ ನಿರ್ಣಯ -೨

ತಾಮಸಿಕ, ರಾಜಸಿಕ ಮತ್ತು ಸಾತ್ತ್ವಿಕ ಎಂಬ ತ್ರಿಗುಣಗಳಿಗೆ ಪ್ರತಿನಿಧಿಗಳಾಗಿ ಬ್ರಹ್ಮ, ವಿಷ್ಣು, ಶಿವ ಎಂದು ಯೋಗಿ ವೇಮನರ ಗ್ರಹಿಕೆ.

ಮೂರು ಗುಣಗಳಲ್ಲಿ ಮುಖ್ಯವಾದ ಗುಣವು,
ತಿಳಿಯಲಾರದವನು ತೊಳಗಲೆಂತು?
ಭ್ರಮೆಗೆ ಸಿಲುಕುವವನೆ ಬಲು ಹುಚ್ಚನಾಗುವ.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ ಕೊಂದು ವಿಷ್ಣು ಭಾಗದೊಳಗೆ ಬೆರೆಸಿ,
ವಿಷ್ಣು ಕೊಂದು ಶಿವನ ಒಳಗೆ ಬೆರೆಸಿ,
ಶಿವನ ಕೊಂದು ತಾನು ಶಿವಯೋಗಿಯಾದನು.
ವಿಶ್ವದಾಭಿರಾಮ ಕೇಳು ವೇಮ.

## ತತ್ತ್ವ ನಿರ್ಣಯ -೩

ಮೂಲ ಪ್ರಕೃತಿಯ ಮೇಲೆ ಸತ್ತ್ವ, ರಜಸ್ ಮತ್ತು ತಮಸ್ ಎಂಬ ತ್ರಿಗುಣಗಳ ಪರಿಣಾಮವಾಗಿ ಬುದ್ಧಿ, ಅಹಂ ಮತ್ತು ಚಿತ್ತಗಳೆಂಬ ಮೂರು ತತ್ತ್ವಗಳಾಗುತ್ತವೆ. ಈ ಮೂರರ ಒಟ್ಟಾರೆ ಹೆಸರೇ ಮನಸ್ಸು.

ಮನದಲಿ ಬುದ್ಧಿಯು ತೋಚಿತು.
ಮನದಲಹಂಕಾರವಿರುವುದು ; ಮನದಲಿ ಚಿತ್ತಂ.
ಹೆಣೆಯುತ ನಾಲ್ಕು ವಿಧಗಳ,
ಎಣಿಸುತ ತನ್ನ ತನುವ ತಿಳಿಯಲಾರ ವೇಮಾ,

ಚಿತ್ತವ ಬುದ್ಧಿಯ ಮೆರೆಯುತ,
ಹತ್ತಿದಹಂಕಾರಗಳನು, ಆತ್ಮದ ಒಳಗೇ
ಮೊತ್ತವ ಗೆಯ್ಯಲು ಅರಿಯದ,
ಮತ್ತರಿಗೆ ಮುಕ್ತಿ ಇಲ್ಲವು, ಮಹಿಯಲಿ, ವೇಮಾ.





ಪಂಚಭೂತ ಮತ್ತೆ ಪರಮ ಇಂದ್ರಿಯಗಳು,
ಸಂಚರಿಸುತ ಇರಲು ಜಗತ್ ಉಂಟು.
ಸಂಚರಿಸದಿರಲು ಜಗವೆಂತಾಗುವುದು?
ವಿಶ್ವದಾಭಿರಾಮ ಕೇಳು ವೇಮ.

## ಜೀವ ಶಿವೈಕ್ಯ :

ತಾನು ಸಕಲವಿರಲು, ತನ್ನೊಳಗೆ ಸಕಲವು,
ತನ್ನ ಒಳಗೆ ಬೆಳಗಿ ತಾನೆ ತಿಳಿದು,
ಇಪ್ಪ ಮಾನವನಿಗೆ ಇಹುದು ಒಪ್ಪ ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ತಾನೆ ತಾನು ಎಂಬ ತತ್ತ್ವ ಸಂಕುಲದೊಳು,
ಅನ್ಯವರಿಯುತಿಪ್ಪ, ಅಪ್ಪನಾಣೆ!
ತಾನು ತಾನೆ ಇರಲು, ತಲ್ಲಣವು ಏತಕೆ ?
ವಿಶ್ವದಾಭಿರಾಮ ಕೇಳು ವೇಮ.

ಜೀವವಿಳೆಯ ತುಂಬಿ, ಸೃಷ್ಟಿಯೊಳಗೆ ತುಂಬಿ,
ಶಿವನ ಹುಡುಕ ಹೋಹ; ಜೀವನಹಹ!
ಜೀವನೆ ಶಿವನಿಹ, ಚಿಹ್ನವನು ತಿಳಿಯದೆ ?
ವಿಶ್ವದಾಭಿರಾಮ ಕೇಳು ವೇಮ.

## ನಿಜ ಬೋಧೆ :-

ನಿಜ ಬೋಧೆ ಶೀರ್ಷಿಕೆಯಡಿ ೫೫ ಪದ್ಯಗಳಿವೆ. ಅವುಗಳಲ್ಲಿ ೮ ಪದ್ಯಗಳನ್ನಿಲ್ಲಿ ಉದ್ಧರಿಸಲಾಗಿದೆ. 'ನಾನು ಯಾರು ? ' (ಕೋಹಂ) ಎಂಬ ಆತ್ಮ ವಿಚಾರ ಮಾರ್ಗವನ್ನು ಸರಿಯಾಗಿ ತಿಳಿಯಬೇಕಲ್ಲವೇ ?

ತಾನು ತನುವು ; ಎಂದು ದ್ವಯವನೆ ನುಡಿಯುವ,
ಮೋಹ ರಾಶಿಯಲ್ಲಿ ಮುಳುಗಿ ಇರುವ,
ಜನರಿಗೆಂತು ಮೋಕ್ಷ ಸಂಗ ಸಿದ್ಧಿಸುವುದು ?
ವಿಶ್ವದಾಭಿರಾಮ ಕೇಳು ವೇಮ.

ತನುವ ಶೋಧ ಮಾಡಿ, ದೈವ ಮುಖ್ಯ ಮಾಡಿ,
ಮುನ್ನ ಕರ್ಮಗಳನು ಮೂಲೆಗಿರಿಸಿ,
ಮನವ ನಿಜವ ಮಾಡಿ, ಮಮತೆಯೆಲ್ಲ ಅಳಿಸಿ,
ಮನಸು ನಿಲಿಸುವವನು ಮೋಕ್ಷಿ ವೇಮ.

ತಾನೆನುವುದು ಯಾರು ? ತನ್ನವರಿಹರಾರು ?
ತಿಳಿದು ತಿಳಿಯದಿಹರು ತುಚ್ಛ ಜನರು,
ತಿಳಿಯಲಾಗ ರೇಶ್ಮೆ ಹುಳದ ರೀತಿ ಕಣಾ.
ವಿಶ್ವದಾಭಿರಾಮ ಕೇಳು ವೇಮ.

ತಾನೆ ಸಕಲವಿದ್ದು, ತನ್ನೊಳು ಸಕಲವಿದೆ.
ತನ್ನೊಳು ಬೆಳಗುವುದ ತಾನೆ ಅರಿತು,
ಇರುವ ಮಾನವರಿಗೆ ಇಂಪಾಗಿಹುದು ಮುಕ್ತಿ.
ವಿಶ್ವದಾಭಿರಾಮ ಕೇಳು ವೇಮ.

ನಿನ್ನ ನೋಡುತಿರಲು, ತನ್ನ ತಾನೆ ಮರೆವ;
ತನ್ನ ನೋಡುತಿರಲು, ನಿನ್ನ ಮರೆವ.
ನಿನ್ನ ತನ್ನನರಿಯೆ ನರಗೆ ವಿಧವಾವುದು ?
ವಿಶ್ವದಾಭಿರಾಮ ಕೇಳು ವೇಮ.

ನಿನ್ನ ನೋಡುತಿರಲು, ನೆರೆಗಂಡಿತು ತತ್ತ್ವ
ತನ್ನ ನೋಡುತಿರಲು. ತಗಲಿತು ಮಾಯೆ.
ನಿನ್ನನರಿತ ಬಳಿಕ ತನ್ನ ತಾನರಿವನು
ವಿಶ್ವದಾಭಿರಾಮ ಕೇಳು ವೇಮ.

ನಾನು ಎನ್ನುತಿಹುದು ನೀನು ಎನ್ನಬಹುದು.
ನೀನು ನಾನು ಎನುವ ನಿಷ್ಠೆಯರಿತು,
ನಾನೆ ನೀನು, ನೀನೆ ನಾನು, ಎನ್ನಬಹುದು.
ವಿಶ್ವದಾಭಿರಾಮ ಕೇಳು ವೇಮ.

ಹಗಲು ಇರುಳು ಮರೆತು, ಭಾವವನ್ನೆ ಮರೆತು,
ತಾನು ನಾನು ಎನುವ ತಿಳಿವು ಮರೆತು,
ಉಳ್ಳ ಮನುಜನೆ ತಿಳಿ ; ಉತ್ತಮ ಯೋಗಿಯವ.
ವಿಶ್ವದಾಭಿರಾಮ ಕೇಳು ವೇಮ.

## ಹಠಯೋಗ :-

ಹಠಯೋಗ ವಿಭಾಗದಲ್ಲಿ ಸುಮಾರು ಎರಡುನೂರು ಪದ್ಯಗಳು ಲಭ್ಯವಾಗಿವೆ. ಈ ವಿಭಾಗವನ್ನು ನಾಡಿ, ಚಕ್ರದೇವತೆ, ವಿಮರ್ಶೆ, ನಿಮ್ನ ಸಿದ್ಧಿ, ಮುದ್ರೆಗಳು, ಕುಂಭಕ ಯೋಗ ಗುಣಾತೀತ ಭಾವ ಊರ್ಧ್ವಗತಿ, ಪರಾಗತಿ, ಪರಮಹಂಸ ಪಟ್ಟ ಮತ್ತು ಫಲ ಎಂಬ ಹನ್ನೊಂದು ಶೀರ್ಷಿಕೆಗಳಡಿ ವಿಭಜಿಸಿದ್ದೇವೆ. ಸಂಕ್ಷೇಪಿಸುವ ದೃಷ್ಟಿಯಿಂದ ಪ್ರತಿಯೊಂದು ಶೀರ್ಷಿಕೆಯಡಿ ಮೂರು ಪದ್ಯಗಳನ್ನು ಮಾತ್ರ ಉಲ್ಲೇಖಿಸಿದ್ದೇವೆ.





ನಾಡಿ :

ನಾಡೀ ಚಕ್ರವ ನೋಡಲ್
ನಾಡಿಗಳಿವೆ ದಶ ಮುಖ್ಯವು ; ಅವುಗಳ ಒಳಗೇ
ಕೂಡಿವೆ ನಾಸಿಕದೆಡಬಲ
ಜೋಡಿಯು ಇಡ ಪಿಂಗಳೆಂಬವುಗಳಿವೆ ವೇಮಾ.

ಇಡ ಪಿಂಗಳ ನಾಡಿಗಳಿಗೆ
ನಡುವೆ ಸುಷುಮ್ನೆಯು ಬೆಳಗುತ ಅಲೆದಾಡುತಿರಲ್,
ಕಡು ದುಸ್ತರ ಮನದಿ ಕಾಣೆ,
ನಡುವೆಯೆ ಇನ ಚಂದ್ರ ಹರರ,ನಗರವು ವೇಮಾ.

ನೋಟ ನಿಲಿಸಲಾವುದಿದೆಯೊ
ನೋಟವದನೆ ಹಿಡಿದು ಅಹುದಲ್ಲೆ ನದೇ,
ಛೇಟದಿ ರೇಚಕ ಪೂರಕ ಮಾಟದಿ ಕುಂಭಕ
ಮಾಡಿ ಬಯಲನರಿ ವೇಮಾ.

## ಚಕ್ರ ದೇವತೆ :-

ದೇಹದಲ್ಲಿ ಮೇರು ದಂಡದ ಗುಂಟ ನಾಡಿ ಗ್ರಂಥಿ ಮತ್ತು ಉಪಗ್ರಂಥಿಗಳನ್ನು ಯೋಗಿಗಳು ಗುರುತಿಸುತ್ತಾರೆ. ಈ ನಾಡಿ ಗ್ರಂಥಿಗಳಿಗೆ ಯೋಗ ಭಾಷೆಯಲ್ಲಿ ಚಕ್ರಗಳೆನ್ನುತ್ತಾರೆ. ಮತ್ತು ಅವು ಪ್ರಭಾವಿಸುವ ಪ್ರದೇಶಕ್ಕೆ ಮಂಡಲವೆನ್ನುತ್ತಾರೆ. ಈ ಚಕ್ರ ಸ್ಥಾನಗಳು ಮುಖ್ಯವಾಗಿ ಇಡಾ, ಪಿಂಗಳಾ ಮತ್ತು ಸುಷುಮ್ನಾ ನಾಡಿಗಳು ಒಂದನ್ನೊಂದು ದಾಟುವ ಕತ್ತರಿಯಲ್ಲಿ ಇರುವವೆಂದು ಗುರುತಿಸಲಾಗಿದೆ . ಇವು ಭೌತಿಕವಲ್ಲವೆಂಬುದನ್ನು ನೆನಪಿಡಬೇಕು.

ಸೀಸ ॥

ಮೊದಲು ಮೂಲಾಧಾರವಿಹುದು ವಿಘ್ನೇಶ್ವರಂ,
ಆ ತಾಣ ದೇವಾಳಿ ಅರಳುತಿಹುದು,
ಅದರ ಮೇಲೆ ಮತ್ತೆರಡಂಗುಳಂತರ ದಾಟಿ,
ಸ್ವಾದಿಷ್ಠ ಚಕ್ರವದು ಇಹುದು ಬ್ರಹ್ಮ.
ಇದರಿಂದ ಎಂಟು ದೇಹಾಂಗುಳಂತರ
ಮಣಿಪುರ ಚಕ್ರವ್ಹೆ ಅಲೆಯುವ ಹರಿ.
ಬಳಿಕ ದಶಾಂಗುಳ ದೂರ ಅನಾಹತ
ಒಪ್ಪರುದ್ರನಿಹನು ಚೊಕ್ಕವಾಗಿ.

ತೇಟ ||

ಹನ್ನೆರಡಂಗುಳಂತರ ಮೇಲೆ ವಿಶುದ್ಧ,
ಅಲ್ಲಿ ಜೀವನು ಹೊಂದುತಾ ಅರಳುತಿಹನು.
ಹೊಳೆವ ಮಹಿಮಾತ್ಮನಗ್ನಿಯ್ಯೆ ಬೆಳಗುತಿಹನು.
ಇಷ್ಟು ಜಾಡನು ತಿಳಿವುದೆ 'ಅರಿವು' ವೇಮ.

ಒಂಟಿ ಕಂಬದಲ್ಲಿ ಒಪ್ಪ ಅಂಕಣವಿಹುದು.
ಆರು ಅಂಕಣಗಳ ಅಂದ ನಿಲಿಸಿ,
ಆಚೆ ನೇರ ನೋಡೆ, ಅಂಟುವ ತತ್ತ್ವವನು.
ವಿಶ್ವದಾಭಿರಾಮ ಕೇಳು ವೇಮ.

ಅರ್ಧ ಅಂಕಣದಲಿ ಆಧಾರವಾದಂಥ,
ಒಂದೆ ಮಳಿಗೆ ಕಂಭ ಒಪ್ಪನಿಲಿಸಿ,
ಯನೆಗೆ ಒಬ್ಬ ಗಂಡ ಮನೆಯ ಸತಿಯರೇಳು.
ವಿಶ್ವದಾಭಿರಾಮ ಕೇಳು ವೇಮ.

## ಹಠಯೋಗ ವಿಮರ್ಶೆ :-

ವೇಮನರು ರಸಿಕ ಕವಿಗಳೂ ಆಹುದು; ಅನುಭಾವ ಸಿದ್ಧ ಯೋಗಿಗಳೂ ಅಹುದು. ಅವರದು ರಾಜಯೋಗ. ರಾಜಯೋಗಕ್ಕೂ ಇನ್ನಿತರ ಲಯ, ಮಂತ್ರ ಮತ್ತು ಹಠಯೋಗಗಳಿಗೂ ಸಾಮಾನ್ಯವಾದ ಸಂಗತಿಗಳನ್ನು ಅವರು ಪ್ರಸ್ತಾಪ ಮಾಡಿರುವುದರಿಂದ ಸಂಬಂಧಿಸಿದ ಪದ್ಯಗಳನ್ನು ಪ್ರತ್ಯೇಕಿಸಲಾಗಿದೆಯಷ್ಟೇ. ಕುಂಡಲಿನೀ ಯೋಗವು ತಾಂತ್ರಿಕ ಪ್ರಕ್ರಿಯೆಯೇ ಆಗಿದೆ. ವೀರಶೈವ ಶರಣರೂ ಸಹ ಅದರ ಮುಖ್ಯಾಂಶಗಳನ್ನು ಅಂಗೀಕರಿಸಿದ್ದಾರೆ.

ಆಸನಾದಿಗಳಿಂದ ಅಂಗಗಳನು ಬಿಗಿದು,
ಒಡಲು ಹೊರೆಯುವವನ ಯೋಗವೆಲ್ಲ.
ಜಟ್ಟಿ ಸಾಮಿಗಿಂತ ಜಿನುಗು ಕಡಿಮೆಯಲ್ಲ.
ವಿಶ್ವದಾಭಿರಾಮ ಕೇಳು ವೇಮ.

ನಿಯಮಿತಾಸನಗಳು, ನಿಲಿಸಿದಂಥ ಚಿತ್ತ
ತಾಮಸಾದಿ ನಿದ್ರೆ ತೊಲಗಿ, ನೂಕು.
ನಿದ್ರೆ ತೊಲಗಿದಾಗ ನಿರ್ಭೀತಿಯುದಿಪುದು.
ವಿಶ್ವದಾಭಿರಾಮ ಕೇಳು ವೇಮ.

ಹಠದಿ ಸಾಧಿಸುತ, ಘಟದಲಿ ಹರ್ಷ ಉದಿಸೆ,
ಪಟಣದೇರ್ಪಾಡು ಗೆಯ್ವುದೆ ಬಹಳ ಯೋಗ್ಯ.
ನಿಟಿಲ ದುರ್ಗವ ಸೇರುವುದೆ ನಿತ್ಯ ಸುಖವು.
ಪಟುತೆ ಇರುವಂಥ ಲಕ್ಷ್ಯವದು ಪ್ರಾಪ್ತ ವೇಮಾ.





## ನಿಮ್ನ ಸಿದ್ಧಿ :-

ಯೋಗ ಸಾಧನೆಯಲ್ಲಿ ಸಿದ್ಧಿಗಳು ಲಭ್ಯವಾಗುವುದು ಸಹಜ. ಈ ಸಿದ್ಧಿಗಳೆಂದರೆ, ಉನ್ನತ ಮನದ ಶಕ್ತಿಯನ್ನು ನಿಮ್ನ ಸ್ತರದಲ್ಲಿ ಪ್ರಯೋಗಿಸಿದಾಗ ಘಟಿಸುವ ಅಸಾಮಾನ್ಯ ಘಟನೆಗಳೇ ಆಗಿವೆ. ಸಾಧನೆಯಿಂದ ಮನವನ್ನು ಉಚ್ಚಸ್ತರಕ್ಕೆ ಏರಿಸಿದಾಗ, ಅದನ್ನು ನಿಮ್ನ ವಿಷಯಗಳತ್ತ ಹರಿಬಿಡುವುದು ಭ್ರಷ್ಟತೆಯೇ ಸರಿ. ಆದರೆ ಯೋಗಿಯು ಸಂಕಲ್ಪ ಮಾಡದೆ, ಅವನಿಗೆ ಸಂಬಂಧಿಸಿ ಘಟಿಸುವ ಕೃತಿಗಳು ಯೋಗ ಮಹಿಮೆಗಳಾಗಿವೆ.

ಯಂತ್ರ ತಂತ್ರ ವಿದ್ಯೆ ಯಾಚಕ ಜನ ಗಣವು,
ಮಂತ್ರ ವಿದ್ಯೆಗಂಟಿ, ಮಹಿಮೆ ಏನು ?
ಬೆಳುದಿಂಗಳು ಬಯಲು ಒಳಗೆ ಹರಡಬೇಕು.
ವಿಶ್ವದಾಭಿರಾಮ ಕೇಳು ವೇಮ.

ದೇಹ ಗುಣವನೆಲ್ಲ ತಿಳಿದಿಹ ಶಿವಯೋಗಿ,
ಮೋಹದಲ್ಲಿ ಸಿಕ್ಕು ಮೋಸ ಹೋಹ.
ಇಂದ್ರ ಜಾಲದಲ್ಲಿ ಏಕೆ ಸಿಕ್ಕುತಿಹರೊ ?
ವಿಶ್ವದಾಭಿರಾಮ ಕೇಳು ವೇಮ.

ಇಂದ್ರ ಜಾಲದಂಥ ಈ ಜಗಭ್ರಾಂತಿಗಳು?
ಚಂದ್ರ ಕಳೆಯು ದಾಟಿ ಸುಖ್ಯ ಪಡೆದು,
ರಂಧ್ರದಲ್ಲಿ ಸೇರಿ ರಹಿ ಮಿಕ್ಕ ಕಾಣು; ದೇ
ವೇಂದ್ರ ಪೂರ್ಣ ಪದವಿ, ಬಿಡದೆ, ವೇಮ.

ಯೋಗ-ಸಾಧನೆಯಲ್ಲಿ ಮನಸ್ಸನ್ನು ನಿಲ್ಲಿಸಿದ ಮೇಲೆ ಅಮನಸ್ಕ ಸ್ಥಿತಿಯ. ಅನುಭವ ಗಮ್ಯ ಈಗಿನ ಚಿದಾಕಾಶಕ್ಕೆ ಅನುಭಾವಿಗಳು ಬಯಲು ಎನ್ನುತ್ತಾರೆ. ಇಲ್ಲಿ ಇಂದ್ರಿಯ ವ್ಯಾಪಾರದ ಪರಿಣಾಮವಿಲ್ಲ. ಇಲ್ಲಿ ಅರಿಯುವುದು ಆತ್ಮಜ್ಯೋತಿಯಿಂದ. ಇಲ್ಲಿಯ ಆರಂಭಿಕ ಅನುಭವವನ್ನು ಬೆಳುದಿಂಗಳು ಇಲ್ಲವೆ ಚಂದ್ರ ಕಳೆಯೆಂದೂ, ಅನಂತರದ ಅನುಭಾವವನ್ನು ಸೂರ್ಯ ಪ್ರಭೆಯೆಂದೂ ಕರೆಯುತ್ತಾರೆ.

## ಮುದ್ರೆಗಳು :-

ಯೋಗ ಸಾಧನೆಯಲ್ಲಿ ಮುದ್ರೆಗಳೂ ಆಸನಗಳಂತಿವೆ. ಮುದ್ರೆಗಳ ಸಂಖ್ಯೆಯು ಅಜಸ್ರ. ಆದರೆ ಶಾಂಭವಿ, ಷಣ್ಮುಖಿ ಮತ್ತು ಖೇಚರೀ ಮುದ್ರೆಗಳನ್ನು ಯೋಗಿ ವೇಮನರು ಪ್ರಸ್ತಾಪಿಸಿದ್ದಾರೆ .ಮೂಲ ಧ್ಯಾನ ನಿಷ್ಠೆ ತೊರೆದು ಕೇವಲ ಶಾರೀರಿಕ ಕ್ರಿಯೆಯಲ್ಲಿ ನಿರತರಾಗುವುದು ಸರಿಯಲ್ಲ.

ಅರಿಯೆ ಕಣ್ಣುದೃಷ್ಟಿ, ಗುರಿಯು ಮೂಗು ಮೇಲೆ,
ರೆಪ್ಪೆ ಬಡಿಯದೆ ಗುಡ್ಡೆ ಒಪ್ಪ ತಿರುಗಿ,
ವಿವರವರಿಯೆ, ಶಾಂಭವೀ ಮುದ್ರೆಯದೆ ಅಂದ್ರು.
ವಿಶ್ವದಾಭಿರಾಮ ಕೇಳು ವೇಮ.

ಷಣ್ಮುಖೀ ಮುದ್ರೆಯಲಿ ಷಡ್ವರ್ಗ ಹೋಗುವವು.
ಷಡ್ವರ್ಗಗಳ ಜೊತೆಗೆ ಷಣ್ಮತಗಳು.
ತಪ್ಪು ದಾರಿ ಹೊಗದೆ ಒಪ್ಪವಾಗಿರುತಿರು.
ವಿಶ್ವದಾಭಿರಾಮ ಕೇಳು ವೇಮ.

ಖೇಚರೀ ಮುದ್ರೆಗೆ ಕೀಲು ತಿಳಿಯದಿದ್ದು,
ವಾದ ಮಾಡುವಂಥವರುಗಳೆಲ್ಲ,
ತುಳಿದು ಜಿಹ್ವೆ ಹಿಡಿದು ತುದಿಯ ಕೊಯ್ಯ ಬೇಕು.
ವಿಶ್ವದಾಭಿರಾಮ ಕೇಳು ವೇಮ.

ಕುಂಭಕ ಯೋಗ :

ಚೊಕ್ಕವಾಗಿ ಮನದಿ ಚರ್ಚಿಸಿ ನೋಡುತಿರೆ,
ಮೂಗು ತುದಿಯ ಮೀರಿ ಮೋದದಲ್ಲಿ,
ದೃಕ್ಕು ಬ್ರಹ್ಮವೆಂದು ಮಣಿಯುವುದೆ ಮುಕ್ತಿ,
ವಿಶ್ವದಾಭಿರಾಮ ಕೇಳು ವೇಮ.

ಪಂಚ ತತ್ತ್ವಾದಿ ನಿರ್ಣಯ ಬಿಟ್ಟುಗೊಟ್ಟು,
ಮಿಂಚಿ ರೇಚಕ ಪೂರಕ ಮಿತಿಯನರಿತು,
ಸಂಚಲಿಸದೆ ಕುಂಭಿಸುತ ಸೇರಬೇಕು.
ಮತ್ತೆ ತಕ್ಕುದದು ಯೌಗಿಕ ಮಹಿಮೆ ವೇಮ.

ನೋಟ ನಿಲಿಸದಾವುದಿದೆಯೊ,
ನೋಟವನೆ ಹಿಡಿದು, ಅಹುದಲ್ಲೆನದೇ,
ಛೇಟದಿ ರೇಚಕ, ಪೂರಕ.
ಮೋಟದಿ ಕುಂಭಕ ಮೂಡಿ, ಬಯಲನರಿ, ವೇಮಾ

ಗುಣಾತೀತ ಭಾವ :

ಬ್ರಹ್ಮ ವಿಷ್ಣು ಶಿವರ ಭಾಗಗಳನು ನಿಲಿಸಿ,
ಪರಮ ಯೋಗಿಯಿರಲು ಬ್ರಹ್ಮವಾದ.
ಬ್ರಹ್ಮವಾದವನನು ಭಾವಿಸಲು ಶಕ್ಯವೆ ?
ವಿಶ್ವದಾಭಿರಾಮ ಕೇಳು ವೇಮ.

ತಿಳಿದು ಆತ್ಮದಲ್ಲಿ ದೇದೀಪ್ಯಮಾನನಿರೆ,
ತೇಜದಲ್ಲಿ ಶಿವನ ಛೇಟ ಕಂಡು,.
ಮನಸ್ಸು ಶಿವನೊಳಿರಿಸಿ ಮಗ್ನರಾಗಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.





COLLEGE OF BUSINESS ADMINISTRATION LIBRARY HUBLI

ಚಿನ್ಮಯಾನಂದ ಪುರಿ ನಡು ಸೀಮೆ ಸೇರಿ,
ತನ್ಮಯನಾಗಿಯೆ ಪರಶಿವ ತತ್ತ್ವವೇತ್ತ.
ಮನ್ಮಯವಾದ ರಾಜ್ಯವನು ಮುದದಿ ಆಳ್ವ;
ಜನ್ಮರಾಹಿತ್ಯದಲ್ಲಿಯೂ ಸತ್ಯ ವೇಮ.

ಊರ್ಧ್ವಗತಿ :

ಮಂತ್ರ ವಿದ್ಯೆಯೆಲ್ಲ ಮಾಯೆಗಳ ಕೋರಿಕೆ.
ಸೃಷ್ಟಿಯಲ್ಲಿ ಬ್ರಹ್ಮ ಸೃಷ್ಟಿ ಗೆಯ್ಯೆ,
ಮತ್ತರಾದವರು ಮನವ ನಿಲಿಸದವರು,
ವಿಶ್ವದಾಭಿರಾಮ ಕೇಳು ವೇಮ.

ದಿನ ದಿನ ನಿರ್ಗುಣವೆನುತಿರೆ,
ತನಗಿನಿತೊಪ್ಪದು ; ತತ್ತ್ವಗಳನು ತಿಳಿಯದಿರಲ್.
ಮನನಾಂತರಂಗದಲ್ಲಿಯೆ,
ವಿನಯವಹ ಬಯಲು ಸೇರಿ, ವಿಭವಿಸು, ವೇಮ.

ನಿಖಿಲ ದೋಷ, ಅರಿಯೆ, ನಿಂದೆಗಳಿಗೆ ಮೂಲ.
ಅರಿಯೆ, ತತ್ತ್ವವೆಲ್ಲ ಆತ್ಮ ಜನನ.
ತಿಳಿವಿಗಾತುಕೊಳಲು ಧೀರನಾಗಬೇಕು.
ವಿಶ್ವದಾಭಿರಾಮ ಕೇಳು ವೇಮ.

ಪರಾಗತಿ :

ಚೊಕ್ಕವಾದ ಪರವ ಚುರುಕಿನಿಂದ ನೋಡಿ,
ಮೂಗು ತುದಿಯ ಕುರಿತು ಮುದವ ಹೊಂದಿ,
ಬೇಸಿ ನೋಡಿದೊಡನೆ ಬಳಿಗೆ ಇರುವುದಷ್ಟೆ,
ವಿಶ್ವದಾಭಿರಾಮ ಕೇಳು ವೇಮ.

ಸೂಚಿಕಾಗ್ರ ದೃಷ್ಟಿ, ಸರಣಿಯಿಂ ಭ್ರೂಮಧ್ಯೆ,
ನೋಡಿ ನೋಡಿ ಮತ್ತು ನೋಡುತಿರಲು,
ಆತ್ಮದ ಬರು ಹೋಗು ಆಗಲೇ ತಿಳಿವುದು.
ವಿಶ್ವದಾಭಿರಾಮ ಕೇಳು ವೇಮ.

ಚೊಕ್ಕವಾಗಿ ಮನದಿ ಸಾಧಿಸಿ ಕಾಣಬೇಕು.
ನಿಕ್ಕ ಕಂಡು, ಅರಿವು, ತಿಳಿವು, ಮೀರಿ,
ಮೂಗು ತುದಿಯ ನೋಟ ಮುದದಿಂದ ನೋಡಿಕೋ.
ವಿಶ್ವದಾಭಿರಾಮ ಕೇಳು ವೇಮ.

## ಪರಮಹಂಸ ಪಟ್ಟ :-

ಯೌಗಿಕ ಭಾಷೆಯಲ್ಲಿ ಜೀವನಿಗೆ ಹಂಸವೆನ್ನುತ್ತಾರೆ, 'ಹಂಸಃ' (ನಾನು ಅದನೇ) ಎಂಬ ಸೋಹಂ ಮಂತ್ರದಿಂದ ಜೀವನು ಪರಮನಾಗುವುದರಿಂದ ಹಾಗೆಹೇಳುವುದುಂಟು ಪರಮಹಂಸನೆಂದರೆ ಪರದಲ್ಲಿಯೇ ಸದಾ ವಿಹರಿಸುವ ಜೀವ ಶಾಸ್ತ್ರ ಸಮ್ಮತ ಆರು ಸನ್ಯಾಸ ಪ್ರಕಾರಗಳಲ್ಲಿ. ಪರಮಹಂಸವೂ ಒಂದು. ಇಲ್ಲಿ ಕರ್ಮ, ಆಶ್ರಮಗಳ ಗೊಡವೆ ಇಲ್ಲ.

ಪರಮ ಹಂಸನೆಂದು ಭೂಮಿ ಅಲೆಯುತಿದ್ದು,
ಪರ ಧನಕ್ಕೆ ಆಶೆ ಪಡುವ ಅವನು,
ಪರಮ ಹಂಸನಲ್ಲ ; ಪರಹಿಂಸಕನವನು,
ವಿಶ್ವದಾಭಿರಾಮ ಕೇಳು ವೇಮ.

ವಿಶ್ವದಲ್ಲಿ ಪರದ ವಿವರವನು ಅರಿಯದೆ,
ಪರಮ ಹಂಸನೆಂಬ ಪಟ್ಟ ಬಹುದೆ ?
ಮಾನಸದಲಿ ನಿಷ್ಠೆ ಮತ್ತೆ ಹೊಂದಬೇಕು.
ವಿಶ್ವದಾಭಿರಾಮ ಕೇಳು ವೇಮ.

ಆಚಲ ತತ್ತ್ವವೆಲ್ಲ ಅನುಭವವೇದ್ಯವದು;
ಸಮೀಕ್ಷಿಸಿ ಹೇಳರು ; ಸೂಕ್ಷ್ಮ ಮತಿಯ.
ಮನಕೆ ತೋಚುವುದದು; ಮರ್ಮ ತಿಳಿಸಲಿಂತು ?
ವಿಶ್ವದಾಭಿರಾಮ ಕೇಳು ವೇಮ.

ಫಲ :

ವಿಶ್ವಮೂಲದಲ್ಲಿ ವಿಶ್ವ ಭಾವ ಹೊಂದಿ,
ಪಕ್ವವುಂಟು ಕ್ಷೇತ್ರ ; ಬಟ್ಟ ಬಯಲು.
ಫಲವು ಎಂಬ ಕ್ಷೇತ್ರ ಭಾವ ತಿಳಿಯರಯ್ಯ ?
ವಿಶ್ವದಾಭಿರಾಮ ಕೇಳು ವೇಮ.

ಪಟ್ಟು ಬಿಡದೆ ಒಳಗುಟ್ಟನೇ ಗಮನಿಸುತ,
ಮುಟ್ಟಲದನೆ, ಅರಿವು ಮೂಲವಹುದು,
ಬಟ್ಟ ಬಯಲಿನಲ್ಲಿ ಪರಿಕಿಸಿ ಅರಿದದನು .
ವಿಶ್ವದಾಭಿರಾಮ ಕೇಳು ವೇಮ.

ಕೇಳಿ ಹೇಳಿ, ಕಂಡು ಕಡು ವಿಚಿತ್ರಾಯ್ತು !
ನಿನ್ನೆ, ಮೊನ್ನೆ, ಕಂಡುದಿನ್ನು ಇಲ್ಲ.
ಅಖಿಲ ತುಂಬಿ ಇರುವ 'ಅವನ ' ಹೊಂದಬೇಕು.
ವಿಶ್ವದಾಭಿರಾಮ ಕೇಳು ವೇಮ.





## ಲಯ ಯೋಗ :-

ನಾದವೆಂದರೆ ಧ್ವನಿ. ಬ್ರಹ್ಮದಲ್ಲಿ ಸತ್ಸಂಕಲ್ಪವು ಮೂಡಿದರೆ, ಉದಿಸುವ ಸ್ಪಂದನವೇ ಓಂ. ನಾದಾನುಸಂಧಾನದಿಂದ ಜಗವೆಲ್ಲ ನಾದಮಯವಾಗುವುದು. ದೇಹದಲ್ಲಿ ನಾದ ತುಂಬಲು ಪರವಶದಿಂದ ಪರಮಾನಂದದಲ್ಲಿ ತೂಗಾಡಿ, ತನ್ನನ್ನು ತಾನು ಮರೆಯುವುದೇ ನಾದಲಯ ಯೋಗ. ಸಪ್ತ ವ್ಯಸನಗಳು ಲಯಿಸುವುದರಿಂದ ಈ ಯೋಗಕ್ಕೆ ಲಯ ಯೋಗವೆನ್ನುತ್ತಾರೆ. ಎಲ್ಲವನ್ನು ಲಯ ಮಾಡುವ ಸತ್ತ್ವವು ನಾದಾನುಸಂಧಾನದಲ್ಲಿದೆ.

ಸ್ವ-ಸ್ವರೂಪವು ಪ್ರಜ್ಞಾನಂ, ಅನಂತಂ ಆನಂದಂ, ಆಗಿದೆ , ಅದು ಜ್ಞಾನದ ಬುಗ್ಗೆ. ಅರಿವಿನ ಸಾಗರ, ಸೃಷ್ಟಿಯ ಕಾಲಕ್ಕೆ ಗುಣಬಂಧನದಿಂದ ಅರಿವು ಹ್ರಸ್ವವಾಗುತ್ತ ಹೋಗುವುದು, ಸತ್ತ್ವಗುಣ ಪ್ರಭಾವದಿಂದ ನಾದವಾಗಿ, ರಜೋಗುಣ ಪ್ರಭಾವದಿಂದ ಕಳೆಯಾಗಿ, ತಮೋಗುಣ ಪ್ರಭಾವದಿಂದ ಬಿಂದುವಾಗಿ ಪರಿಣಾಮಿಸುತ್ತದೆ ಒಂದೇ ವಿದ್ಯುಚಕ್ತಿಯು ಪ್ರವಾಹದಲ್ಲಿ ಪ್ರತಿರೋಧದ ವ್ಯತ್ಯಾಸಕ್ಕನುಗುಣವಾಗಿ ಬಲ್ಬಿನಲ್ಲಿ ದೀಪವಾಗಿ, ಹೀಟರಿನಲ್ಲಿ ಶಾಖವಾಗಿ, ಪಂಕಾದಲ್ಲಿ ಚಾಲನಶಕ್ತಿ ಆಗುವಂತೆ. ನಾದಯೋಗ ವಿಭಾಗದಲ್ಲಿ ಇದನ್ನು ಮಾತ್ರ ಉಲ್ಲೇಖಿಸಿದ್ದೇವೆ.

ಜ್ಯೋತಿಯಲಿ ಹುಟ್ಟಿತು; ಸೊಂಪಾದ ನಾದವು .
ನಾದದಲಿ ಹುಟ್ಟಿತು ; ಬಿಂದು, ತಿಳಿಯೆ.
ಬಿಂದುವಿನಲಿ ಜನನ ಪ್ರಥಿವಿಯಾಗಸಗಳ್.
ವಿಶ್ವದಾಭಿರಾಮ ಕೇಳು ವೇಮ.

ನಾದ ಬಿಂದು ಕಳೆಯ ನಯದಿ ಹೊಂದಿ ಆತ್ಮ,
ಚಪ್ಪ ಚಿತ್ತ - ಮಮತೆ ಚೊಕ್ಕ ನಿಲಿಸಿ,
ಬ್ರಹ್ಮ ರಂಧ್ರದಲ್ಲಿ ಪ್ರಬಲಿಸೆ ಯೋಗಿಯೈ.
ವಿಶ್ವದಾಭಿರಾಮ ಕೇಳು ವೇಮ.

ಧ್ವನಿ ಜನಿಸಲಾಲಿಸುತ್ತ,
ಧ್ವನಿ ಮಧ್ಯದಲ್ಲಿ ಸೇರಿ, ಧ್ವನಿ ತಾನೇ ತಾ-
ನೆನಿಸುತ ತೋರಲು, ತನ ಹೃ-
ದ್ವನಜದಲ್ಲಿ ನೋಡೆ, ಮುಕ್ತಿಯು, ವಶವೈ.

ಸ್ವ-ಸ್ವರೂಪದಲಿ ಅರಿವು ಹ್ರಸ್ವವಾಗಿ,
ಬಿಂದು ನಾದ ಕಳಾತೀತ ಭಿನ್ನ ಪರಮ.
ತನ್ಮಯ ಶರೀರ ಹೊಂದುವುದೆ ತತ್ತ್ವವಾಯ್ತು.
ಗುರು ಕಟಾಕ್ಷವು ಲಭಿಸಿದೊಡೆ ಕುದುರಿತು, ವೇಮ.

ತಿಳಿವು ನಿಲಿಸಿ ನೋಡು; ತೊಳಗುತಿಹ ಕಳೆಗಳ,
ಕಳೆಯುಡುಗದೆ ನೋಡು ; ಕಾಣು ಬಯಲು.
ಬಯಲಿ ಗಂಟಿ ನೋಡು;ಬ್ರಹ್ಮವು ಕಾಣುವುದು.
ವಿಶ್ವದಾಭಿರಾಮ ಕೇಳು ವೇಮ.

## ಭಕ್ತಿ ಯೋಗ :–

ಭಜ್ ಧಾತುವಿನಿಂದ ಭಕ್ತಿ ಶಬ್ದದ ಉತ್ಪತ್ತಿಯಾಗಿದೆ. ಭಜವೆಂದರೆ ಸೇವಿಸು, ಸತ್ಕರಿಸು, ಪೂಜಿಸು. ಯೋಗವೆಂದರೆ ಜೋಡಣೆ. "ಜೀವಾತ್ಮ ಪರಮಾತ್ಮ ಸಂಯೋಗೋ ಯೋಗ ಇತ್ಯುಚ್ಯತೇ". ಅಂದರೆ, ಜೀವಾತ್ಮಪರಮಾತ್ಮರ ಸಮ್ಮಿಳನವೇ ಯೋಗ. ನಾರದ ಭಕ್ತಿಸೂತ್ರಾಸುಸಾರ," ಭಕ್ತಿಯು ಭಗವಂತನ ಸೇವೆ. ಭಕ್ತಿಯೆಂದರೆ ಪ್ರೇಮ ಸ್ವರೂಪ. ಭಕ್ತಿಯು ಆನಂದದರೂಪ. ಅಷ್ಟೇಕೆ ? ಭಕ್ತನ ಜೀವನವೇ ಭಕ್ತಿಯ ನಿದರ್ಶನವಾಗಿದೆ."

ಭಕ್ತಿಯೋಗ ವಿಭಾಗದಲ್ಲಿ ಇನ್ನೂರು ಪದ್ಯಗಳು ಲಭ್ಯವಿವೆ ಈ ವಿಭಾಗವನ್ನು ಭಕ್ತಿಎಂದರೇನು ? ಯೋಗ, ಭಕ್ತನ ಧ್ಯಾನ ಮೂರ್ತಿ, ಶಿವಪೂಜೆ, ಶಿವನು ಇರುವುದೆಲ್ಲಿ ? ಶಿವ ದರ್ಶನ, ಭಕ್ತನ ಸ್ಥಿತಿ, ನಿರ್ಗುಣೀ ಭಕ್ತಿ ಎಂಬ ಎಂಟು ಶೀರ್ಷಿಕೆಗಳಡಿ ವಿಭಜಿಸಲಾಗಿದೆ , ಸಂಕ್ಷೇಪಿಸುವ ದೃಷ್ಟಿಯಿಂದ ಪ್ರತಿಯೊಂದು ಶೀರ್ಷಿಕೆಯಡಿ ಮೂರು ಪದ್ಯ ನೀಡಿದ್ದೇನೆ.

### ಭಕ್ತಿ ಎಂದರೇನು ?

ಪ್ರಣವನರಿಯದನಕ ಭಕ್ತನಾಗಲಾರ.
ಜ್ಯೋತಿ ಕಾಣದನಕ ಜೋಗಿಯಲ್ಲ.
ನಿತ್ಯವರಿಯದನಕ ನಿರ್ವಾಣೆಯು ಅಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಘಟವ ಗಾಣ ಮಾಡಿ, ಗುಣಗಳೆತ್ತು ಮಾಡಿ,
ಎಲ್ಲ ಕರ್ಮಗಳನು ಎಳ್ಳು ಮಾಡಿ,
ತಿಳಿದು ಗಾಣವಾಡುವ ತೈಲಕಾರ ಆತ್ಮ.
ವಿಶ್ವದಾಭಿರಾಮ ಕೇಳು ವೇಮ.

ಮೂರು ವೇಳೆಯಲ್ಲಿ ಮುದದಿ ಶಿವನ ಆತ್ಮ,
ಪೂಜೆ ಮಾಡುವವನು ಪುಣ್ಯಮೂರ್ತಿ.
ಪೂಜೆ ಇರದೆ, ಮೋಕ್ಷ ಭೋಗವು ದೊರೆಯುವುದೆ ?
ವಿಶ್ವದಾಭಿರಾಮ ಕೇಳು ವೇಮ.





### ಭಕ್ತಿಯೋಗ :

ಕಾಯ ಹಣತೆ ಮಾಡಿ, ಗುಣವ ಬತ್ತಿ ಮಾಡಿ,
ತಮ್ಮ ಕರ್ಮಕುಲವ ತೈಲ ಮಾಡಿ,
ಮೂಲವೊಂದೆ ಜ್ಯೋತಿ ಮುಟ್ಟಿ ನೋಡಿದಾಗ.
ವಿಶ್ವದಾಭಿರಾಮ ಕೇಳು ವೇಮ

ತತ್ತ್ವವರಿತಿರುವವ ದೈವವರಿಯುತಿಹನು.
ಸರ್ವಕಾಮಗಳನು ಸಾವ ಹೊಡೆವ, ?
ಬಾಳೆ ನುಂಗುವವನು ವಿಷವ ನುಂಗಬಹುದೆ, ?
ವಿಶ್ವದಾಭಿರಾಮ ಕೇಳು ವೇಮ.

ಬೊಂಬೆಯಾಟದವನು ಬೊಂಬೆಯಾಡಿಸುವನು.
ಧರಣಿ ಜನರ ನೋಟದೆಲ್ಲೆ ಮೀರಿ.
ತಾನೆ ಮರೆಯೊಳಿದ್ದು ದೈವವಾಡಿಸುವನು.
ವಿಶ್ವದಾಭಿರಾಮ ಕೇಳು ವೇಮ.

## ಭಕ್ತನ ಧ್ಯಾನ ಮೂರ್ತಿ :–

ವೇಮನ ಯೋಗಿಗಳು ಜಡ ಮೂರ್ತಿ ಕಲ್ಪನೆಯನ್ನು ಒಪ್ಪಿಲ್ಲ. ಆದರೆ ಸಗುಣ ನಿರ್ಗುಣ ಬ್ರಹ್ಮವನ್ನು ಒಪ್ಪಿದ್ದಾರೆ. ಅಮೂರ್ತ ಮತ್ತು ವಿರಾಟದ ಮೂರ್ತರೂಪವನ್ನು ಒಪ್ಪಿದ್ದಾರೆ ಈ ಹಿನ್ನೆಲೆಯಲ್ಲಿ ಅವರು ಬೋಧಿಸುವ ಧ್ಯಾನ ಮೂರ್ತಿಯನ್ನು ಕುರಿತು ತಿಳಿಯುವಾ :

ವಿಶ್ವಕರ್ಮ ಪೂಜೆ ವಿಪುಲ ಮುದದಿ ಗೆಯ್ಯೆ,
ವಿಶ್ವಜನನ-ಮಯೀ ವಾಸವಾಯ್ತು
ವಿಶ್ವಕರ್ಮ ಆದಿ ವಿಮಲ ವಿರಾಟನೇ.
ವಿಶ್ವದಾಭಿರಾಮ ಕೇಳು ವೇಮ,

ಭಾವವರಿಯೆ ಬೇರೆ ಪರದೇಶದೊಳಿಲ್ಲ,
ತಾನು ಗೆಯ್ದ ಕಾರ್ಯ ತಗಲಿ ಉಂಟು.
ಭಾವದಲ್ಲಿ ಶಿವನ ಪರಿಕಿಸುತಿರಬೇಕು.
ವಿಶ್ವದಾಭಿರಾಮ ಕೇಳು ವೇಮ.

ಭಾವ ನೆಲೆಗೊಂಡ ಪೂರ್ಣ ಪ್ರಜ್ಞೆ ಹೊಂದಿ,
ನಿರ್ವಿಕಾರ ನಾಗಿ ಉಂಟು; ನಿತ್ಯವಾಗಿ.
ಹೊಂದು ಸಂತತ ಭಾವವನು ಹಿಡಿತ ಬಿಡದೆ,
ಸುಕರ ಪದವಿಗೆ ಮಾರ್ಗ ಸುಲಭ ವೇಮ .

## ಶಿವಪೂಜೆ :-

ಶಿವಪೂಜೆ ಮಂಗಳಕರ. ಪೂಜೆಯೆಂದರೆ ಸೇವೆ. ದೇವರ ಸೇವೆ. ಅಂದರೆ ಸ್ವಾರ್ಥಪರ ಕಾಮನೆಗಳನ್ನು ತೊರೆದು ಮಾಡುವ ಕಾರ್ಯ. ಮಹಾಯೋಗಿ ವೇಮನರು ಮೂರ್ತಿ ಪೂಜೆಯನ್ನೂ ಒಪ್ಪಿಲ್ಲ, ಲಿಂಗ ಪೂಜೆಯನ್ನೂ ಒಪ್ಪಿಲ್ಲ ಅವರ ಅರ್ಥದಲ್ಲಿ ಶಿವಪೂಜೆಯೆಂದರೆ ಮಂಗಳಮಯ ಸೇವೆಯೇ ಅಗಿದೆ.

ಅರಿತ ಶಿವಪೂಜೆಯ ಅಂದ ಕೆಡದು ಎಂದು.
ಮೊದಲ ಪಟ್ಟು, ಹಿಡಿದು ಬದಲಿಸದಿರು.
ಮೊದಲ ಬಿಟ್ಟು, ಗೋಡೆ, ತುದಿಗೆ ಕಟ್ಟಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಮನನ ವೃತ್ತಿಯಲ್ಲಿ ಮಹಿಮೆಯನರಿಯುತ,
ಮನಸಿನಲ್ಲಿ ಪೂಜೆ ಮಹಿಮೆ ಕಂಡು,
ಮಾಣದಿರುವ ಅವನು ಮರ್ಮಜ್ಞನಹ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಅರಿವು ಉಳ್ಳವನಿಗೆ ಅರಿವು ಮಾತ್ರ ಉಂಟು.
ಅರಿವು ಇಲ್ಲದವಗೆ ಅರಿವೆ ಇಲ್ಲ.
ಅರಿವು ಇಲ್ಲದರಿವು ಅರಿಯುವುದೇ ತತ್ತ್ವ
ವಿಶ್ವದಾಭಿರಾಮ ಕೇಳು ವೇಮ.

## ಶಿವನು ಇರುವುದೆಲ್ಲಿ ? :-

"'ಮೂರ್ಖರಿಗೆ ಕಲ್ಲು, ಕಬ್ಬಿಣ ಮೂರ್ತಿಗಳಲ್ಲಿ ದೇವರಿದ್ದರೆ, ಪಂಡಿತರಿಗೆ ಅವನು ಹೃದಯಸ್ಥನಾಗಿದ್ದಾನೆ' ಎಂದು ವಿಷ್ಣು ಪುರಾಣವೂ ಸಾರುತ್ತದೆ.

ಹೃದಯದಲ್ಲಿ ಶಿವನು ಇರುವುದನು ಅರಿಯದೆ,
ಎರಗಲೇಕೆ ಶಿಲೆಗೆ ಎತ್ತಿ ಕೈಯ್ಯ ?
ಅಂಧಕ ಕನ್ನಡಿಯ ಅರಸಿ ನೋಡುವಂತೆ.
ವಿಶ್ವದಾಭಿರಾಮ ಕೇಳು ವೇಮ.

ಅಕ್ಷರಾದಿ ಹಿಂದೆ, ಅಡವಿಯಾದಿ ಹಿಂದೆ,
ಬೆಟ್ಟ ಕಲ್ಲು ಹಿಂದೆ, ಬವಣೆಯೇಕೆ ?
ಹೃದಯದಲ್ಲಿ ಶಿವನು ಹಾಯಾಗಿಹುದರಿಯರೆ ?
ವಿಶ್ವದಾಭಿರಾಮ ಕೇಳು ವೇಮ.





ಪೂಜೆ ಮಾಡಿ ಮಾಡಿ ಪೂಜಾರಿ ತಾನಾದ.
ಪೂಜ್ಯವಸ್ತುವೆನಲು ಭುವಿಯು ತಾನೆ ?
ಎಲ್ಲಿ ಪೂಜೆಸುವುದು ? ಎಲ್ಲ ದಿಶೆಯಲಷ್ಟೆ.
ತಾನೆ ನಾನು, ನಾನೆ ತಾನು ವೇಮ.

## ಶಿವದರ್ಶನ :

ಅಂತರಂಗದಲ್ಲಿ ಅಭವನನುದ್ದೇಶಿಸಿ,
ನಿಲಿಸಿ ನೋಡೆ ನೋಡೆ, ನಿಲುವುದಲ್ತೆ ?
ಬಾಹ್ಯದಲ್ಲಿ ಶಿವನ ಭಾವಿಸಿ ನಿಲಿಸುವರೆ?
ವಿಶ್ವದಾಭಿರಾಮ ಕೇಳು ವೇಮ.

ಸೂಚಿಕಾಗ್ರದೃಷ್ಟಿ, ಸರಣಿ ಭ್ರೂಮಧ್ಯದಿ,
ನೋಡಿ , ನೋಡಿ ಮರಳಿ ನೋಡುತಿರಲು,
ಆತ್ಮ ಬರು ಹೋಗು ಆಗಲೆ. ತಿಳಿಯು ವುದು,
ವಿಶ್ವದಾಭಿರಾಮ ಕೇಳು ವೇಮ.

ಎಲ್ಲೆಡೆ ಹುಡುಕಲು ತಾನೇ ;
ಇಲ್ಲ ; ಮಣಿಯೆ ತಾಣವೆಲ್ಲು ; ಮೂಲವು ತಾನೇ.
ಜಲ್ಲನೆ ನಿರ್ಭೀತನಾಗಲು,
ಎಲ್ಲವು ನಿಸಗಂಟಿರುವುದು, ನಿಜವಿದು, ವೇಮಾ.

## ಭಕ್ತನ ಸ್ಥಿತಿ :

ಭಕ್ತಿಗೆ ಮೂಲವು ಜ್ಞಾನವೆ;
ರಕ್ತಿಯಲ್ಲಿ ಗುರು ಬಳಿಸಾರಿ ಉನ್ನತಿ ಪಡೆಯಲ್
ಮುಕ್ತಿಯಲರಿವೇ ತೋಚಲು,
ಮುಕ್ತಿಗೆ ನಿಲಯವಹ ದಾರಿ, ತೋರ್ಪುದು ವೇಮಾ.

ಮೌನಿ ನಿಜ ಕೇಳಿಯೊಳಗೆ ನಿಜ ಮನಸನು ನೂಕಿ,
ಆವರಿಸಿದೊಡನೆ ಪರಿ ಪೂರ್ತಿ ಅರಿತು ಇರುವ,
ಅವನ ಭಕ್ತಿಗೆ ಸರಿಯಹುದೆ ಅವನಿಯಲ್ಲಿ ?
ಡಾಂಭಿಕವಾದ ನಡೆಗಿರದು ಇಂಬು ವೇಮ

ಉಣಿಸುತಿರುವವರಾರು ? ಉರವನೆಲ್ಲ ಮರೆಸಿ,
ನಿದ್ರೆ ಹೊಗಿಸುವನಾರು ? ನಿಖಿಲ ಗತಿಯ
ತೋರಿ, ಇಳೆಬದ್ಧರನು ಗೆಯ್ದು, ಸೂಕ್ಷ್ಮರೂಪಿ-
ಯೂ ಮಹದೇವನಲ್ಲದೆ ಜಗದಿ ವೇಮ ?

### ನಿರ್ಗುಣ ಭಕ್ತಿ :

ಜಗದಲ್ಲಿಯು ಇಲ್ಲ ; ಜಲದಲ್ಲಿಯು ಇಲ್ಲ,
ನಿಗಮವೇದ್ಯವಾದ ನೈಜ ಪದವಿ.
ಸುಗುಣ ನಿರ್ಗುಣದೊಳು ಸಾಧಿಸಿ ಸಲೆಕಾಣು,
ವಿಶ್ವದಾಭಿರಾಮ ಕೇಳು ವೇಮ.

ಸಗುಣ ನಿರ್ಗುಣ ಭೇದಾರ್ಥ ಸಂಶಯವದು,
ಪರಮ ಗುರುವಾಜ್ಞೆಯಿಂ ಹೊರತು ಪರಲು ಬಿಡದು,
ಅಗಣಿತವಾದುದು ಮನದೊಳಗೆ ಅಂಟಬೇಕು,
ವಾದಗಳ ಗೆಯ್ಯೆ, ಮೆಚ್ಚದು ವಸುಧೆ ವೇಮ.

ಗಗನ ಗೋಚರ ನಿರ್ಗುಣ ಗಮ್ಯ ಸೋಸಿ,
ತಮವು ಮೀರಿದ ಧ್ಯಾನದಲ್ಲಿ ತತ್ಪರಾಗಿ,
ತ್ವರಿತವಾಗಿಯೆ ಮೋಕ್ಷದ ದಾರಿಯಲ್ಲಿ,
ತಲುಪಿ ನಿರ್ಮಲ ಸುಜ್ಞಾನ ತೊಳಗು ವೇಮ,

## ರಾಜಯೋಗ :

ಯೋಗದಲ್ಲಿ ಶರೀರಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಹಠಯೋಗವೆಂದೂ, ಮನಸ್ಸು ಮತ್ತು ಆಚೆಯ ಪ್ರಕ್ರಿಯೆಗಳನ್ನು ರಾಜಯೋಗವೆಂದೂ ಸ್ಥೂಲವಾಗಿ ಬಣ್ಣಿಸುವುದುಂಟು. ನಾವು ಇದು ವರೆಗೆ ಹಠಯೋಗ, ಲಯಯೋಗಗಳನ್ನು ಕುರಿತು ಪ್ರಸ್ತಾಪಿಸಿದ್ದೇವೆ ಈಗ ರಾಜಯೋಗವನ್ನು ಕುರಿತು ಸ್ವಲ್ಪ ತಿಳಿಯುವಾ ರಾಜಯೋಗ ವಿಭಾಗದಲ್ಲಿ ಸುಮಾರು ಮೂರು ನೂರು ಪದ್ಯಗಳು ಲಭ್ಯವಿದೆ ಇವುಗಳನ್ನು ಬ್ರಹ್ಮಸ್ವರೂಪ, ಮನಸ್ಸು ಮತ್ತು ಆಚೆ, ತಿಳಿವಿನಾಚೆಯ ಸಾಧನ ಮತ್ತು ನಿಜದ ಅರಿವು ಎಂಬ ನಾಲ್ಕು ಶೀರ್ಷಿಕೆಗಳಡಿ ವಿಭಜಿಸಿದ್ದೇವೆ, ಇಲ್ಲಿ ಸಂಕ್ಷೇಪಿಸುವ ಉದ್ದಿಶ್ಯದಿಂದ ಪ್ರತಿಯೊಂದು ಶೀರ್ಷಿಕೆಯಡಿ ಐದ್ಯೈದು ಪದ್ಯಗಳನ್ನು ಮಾತ್ರ ನೀಡಿದ್ದೇವೆ.





## ಬ್ರಹ್ಮಸ್ವರೂಪ :

' ಬೃಹತ್ವಾತ್ ಬ್ರಹ್ಮ; ಬೃಹಣತ್ವಾತ್ ಬ್ರಹ್ಮ.' ಅಂದರೆ ಅಳತೆಗೂ ಮೀರಿ ಬೃಹತ್ತಾಗಿರುವುದು ಬ್ರಹ್ಮದ ಇನ್ನೊಂದು ಲಕ್ಷಣವೆಂದರೆ ಇನ್ನೊಂದನ್ನೂ ಬೃಹತ್ತಾಗಿಸುವುದು.

ಬ್ರಹ್ಮವೆಲ್ಲಿ ? ಎಂದು ಹಲವರಾಡುತಿಹರು.
ಹುಚ್ಚು ಮೂಢ ಜನರು ಹೊಲಬರಿಯದೆ
ಬ್ರಹ್ಮವೆಲ್ಲರಲ್ಲಿ ಪರಿಪೂರ್ಣ ವಾಗಿಹ.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ ತಿಳಿಯದಯ್ಯ ಭಾವಕಂಟ ಇರಲು.
ತನುವ ಗುಡಿಯ ಮಾಡಿ, ತನ್ನ ನಿಲಿಸಿ,
ಲೋಕ ಬುದ್ಧಿ ಬಿಟ್ಟು, ಒಳನೋಟದಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ ಘಟವು ದೇಹ; ಪ್ರಾಣವಲ್ಲಿ ಗಾಳಿ;
ಮಿತ್ರ, ಚಂದ್ರ ವಹ್ನಿ ನೇತ್ರ ಚಯವು
ಮತ್ತೆ ಬ್ರಹ್ಮವೆನಲು ಮಹಿಯ ಮೇಲೆ ಉಂಟೆ ?
ವಿಶ್ವದಾಭಿರಾಮ ಕೇಳು ವೇಮ

ಬಾಹ್ಯರೂಪವಿರದೆ ಭಾವದಲ್ಲಿ ಎಣಿಸಿ,
ಬಾಹ್ಯರೂಪ ಹಿಡಿದು, ಬಯಲು ಮಾಡಿ,
ಬ್ರಹ್ಮ ಬಯಲು ಎಂದು ಭಾವಿಸುವುದೆ ತತ್ತ್ವ
ವಿಶ್ವದಾಭಿರಾಮ ಕೇಳು ವೇಮ

ಬಯಲು ರೂಪ ರೂಪ ಬಯಲನ್ನೇ ಮಾಡಿ
ಬಯಲು ರೂಪ ಬಿಟ್ಟು, ಬಯಲು ಮಾಡಿ,
ಬಯಲಿನಲ್ಲಿರುವನ ಭಾವಿಸುವುದೆ ತತ್ತ್ವ
ವಿಶ್ವದಾಭಿರಾಮ ಕೇಳು ವೇಮ.

## ಮನಸ್ಸು ಮತ್ತು ಆಚೆಗೆ :-

ಪ್ರಾಣವಾಯುವಿನ ಸಂಚಾರದ ಅನುಸಂಧಾನವು ಹಠಯೋಗವೆನಿಸಿದರೆ, ನಾದ ತೇಜಗಳ ಅನುಸಂಧಾನವನ್ನು ಲಯಯೋಗವೆನ್ನಬಹುದು. ಇನ್ನು ಮನೋವೃತ್ತಿಗಳ ವೀಕ್ಷಣೆಯನ್ನು ರಾಜಯೋಗವೆನ್ನಬಹುದು ಈ ಯೋಗವು ಇತರ ಯೋಗಗಳಿಗೆ ರಾಜನಿದ್ದಂತೆ. ಇತರ ಹಠ, ನಾದಾದಿ ಯೋಗಗಳೆಲ್ಲ ಪ್ರಧಾನಿಗಳಿದ್ದಂತೆ, ಪ್ರಪಂಚದಲ್ಲಿ ಜಾತಿ ಮತಗಳ ನೊಡರು ಇಲ್ಲದಂತೆ ಬಹು ಪ್ರಿಯವಾದ ಯೋಗ ಪದ್ಧತಿಯೇ ರಾಜಯೋಗ ವೇಮನರ ಅಚ್ಚುಮೆಚ್ಚಿನ ಯೋಗವಿದೆ.

ಮನಸು ಚಲಿಸಬಿಟ್ಟು ಮನಸು ತಾತಿರುಗಿಸಿ,
ಮನಸಿನೊಳಗೆ ಇರುವ ಮರ್ಮವರಿತ,
ಮನಸು ತಾನು ನಿಲಿಸೆ, ಮತ್ತೆ ತಾನೆ ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ

ಮನಸಿನಲ್ಲಿ ಮುಕ್ತಿ ಮತ್ತೆ ಒಂದು ಕಡೆಗೆ,
ಹುಡುಕ ಹೋಗುವನನು ಹುಚ್ಚನಷ್ಟೆ,
ಕುರಿಯ ಬಗಲೊಳಿಟ್ಟು ಕುರುಬ ಹುಡುಕಿಂದತೆ,
ವಿಶ್ವದಾಭಿರಾಮ ಕೇಳು ವೇಮ.

ಮನಸು ಕುದುರೆ ಮಾಡಿ ಮಾಯೆಯ ಹತ್ತಿಸುತ,
ಮೋಸಗೊಳಿಸ ಬ್ರಹ್ಮ ಮೂರ್ಖ ಜನರ
ಬ್ರಹ್ಮನಡೆತೆ ತಿಳಿಯೆ, ಬ್ರಹ್ಮ ಜ್ಞಾನಿ ಬಲ್ಲ.
ವಿಶ್ವದಾಭಿರಾಮ ಕೇಳು ವೇಮ

ಸುಮ್ಮನಿದ್ದು ತಿಳಿಯೆ ಉತ್ತಮ ಯೋಗವದು,
ಮನಸು ಒಲಿಸಿಕೊಳಲು ಮಧ್ಯಮವದು,
ಆಸವಾದಿ ವಿಧಿಯು ಅಥಮ ಯೋಗ ಕಣಾ.
ವಿಶ್ವದಾಭಿರಾಮ ಕೇಳು ವೇಮ.

ದರ್ಪಣದಲ್ಲಿ ಸ್ವ-ರೂಪ ತಗಲಿದಂತೆ,
ಜಾಣ್ಮೆ ಕುದುರಿದ ಮನದೊಳಗೆ ಸ್ವ-ಸ್ವರೂಪ
ಅರ್ಪಣದಲ್ಲಿ ಅರಿವಿನೊಳು ಅಲೆದು ನೋಡಿ,
ಅರಿವು ಮೂಡಿದವನೆ, ತನ್ನ ಅರಿವ, ವೇಮ.

**ತಿಳಿವಿ ನಾಚಿಯ ಸಾಧನೆ :**

ತಿಳಿವಿಗಳವು ಅಲ್ಲ; ದೈವವಾದ ಬ್ರಹ್ಮ;
ತಿಳಿಯಲಾರ ಬ್ರಹ್ಮ, ದೇವನಿರಲಿ.
ಉಸುಕಿನಲ್ಲಿ ಭಾವಿ ತೋಡಲಾರು ಶಕ್ತ ?
ವಿಶ್ವದಾಭಿರಾಮ ಕೇಳು ವೇಮ

ತಿಳಿವು ನಿಲಿಸಿ ನೋದು, ದೀಪ್ತಿಪುದಾಕಳೆಯು,
ಕಳೆಯುಡುಗಲು ನೋಡು, ಕಾಣು ಬಯಲು,
ಬಯಲಿಗಂಟಿ ನೋಡು ಬ್ರಹ್ಮ ಕಾಣುತಿಹುದು.
ವಿಶ್ವದಾಭಿರಾಮ ಕೇಳು ವೇಮ.





ಯಾರು ಅರಿಯದ ತತ್ತ್ವವನು ಅರಿವುದೆಂತು ?
ಲೋಕಿಸುತಿರಲು ಒಳಗೊಳಗೆ ಲೋಕದಾಯ್ತು
ತಿಳಿವು ಮರೆವುಗಳ ದಾಟಿವುದೆ ತನ್ಮಯತೆಯು.
ನಿತ್ಯ, ಪೂರ್ಣತ ಸಾನಂದ ನಿರತಿ ವೇಮ.

ತಿಳಿವು ನಿಲಿಸಿ ನೋಡು, ದೀಪ್ತಿಪುದಾ ಕಳೆಯು.
ಕಳೆಯುಡುಗಲು ನೋಡು, ಕಾಣು ಬಯಲು.
ಬಯಲಿಗಂಟಿ ನೋಡು, ಬ್ರಹ್ಮ ಕಾಣುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಯಾರು ಅರಿಯದ ತತ್ತ್ವವನು ಅರಿವುದೆಂತು ?
ಲೋಕಿಸುತಿರಲು ಒಳಗೊಳಗೆ ಲೋಕವಾಯ್ತು.
ತಿಳಿವು ಮರೆವುಗಳ ದಾಂಟುವುದೆ ತನ್ಮಯತೆಯು.
ನಿತ್ಯಪೂರ್ಣತೆ ಸಾನಂದ ನಿರತಿ ವೇಮ.

ಅರಿವುಗೂಡಿರೆ ತತ್ತ್ವವನು ಅರಿವುದೆಂತು ?
ಅರಿವು ತೊಲಗಲು ತತ್ತ್ವವ ಅರಿಯಲಾರ.
ಅರಿವು ಮರೆವುಗಳಿಗೆ ಸಿಗದ ಇರವ ಕಂಡು,
ಅರಿಯುತಿರುವವನೇ ಅರಿವ ವೇಮ.

ಗಮ್ಯವಹ ಜ್ಞಾನ ಹೊಂದುವುದೆ ಗಗನ ವಿದ್ಯೆ.
ಜ್ಞಾನ ಉದಯಿಸಿ ಮಿಂಚಲು, ಪ್ರಜ್ಞಾನವಮರ.
ಪೊಳೆವ ಪ್ರಜ್ಞಾನ ಹೊಂದುವುದೇ ಬ್ರಹ್ಮ ಪದವಿ.
ಪರಶಿವನಾಗುವ ಅಂದವಿದು, ಪೊಡವಿಲಿ ವೇಮ.

**ನಿಜದ ಅರಿವು :**

ತನ್ನ ತಾನು ತಿಳಿಯೆ, ತಾನೆ ಹೋಗು ಬ್ರಹ್ಮ.
ತನುವಿನೊಳಗೆ ಮುಕ್ತಿ ತಗಲಿ ಉಂಟು.
ತನ್ನ ನರಿಯದವನು ತಾನು ಎಂಥ ಬ್ರಹ್ಮ ?
ವಿಶ್ವದಾಭಿರಾಮ ಕೇಳು ವೇಮ.
ತಾನು ಇಂದ್ರಿಯಗಳ ತೂಗಿ ಜಯಸಿ ಮತ್ತೆ
ತತ್ತ್ವವರಸಿ ನೋಡೆ ತಾನಾಗುವ.
ರಾಜ ಯೋಗಿಯಂತೆ ರಾರಾಜಿಸುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಆತ್ಮ ತೇಜವನು ಗಮನಿಸಿ ಅಭಿನುತಿಸುತ,
ಕೀಲಕ ಬ್ರಹ್ಮ ತನ್ಮಯ ಕೇಳಿ ಮುಳುಗಿ,
ನಿತ್ಯ ಪರಿಪೂರ್ಣ ಹೊಂದುತ ನಿರತಿಶಯದಿ,
ಸತ್ಯ ಸಂಪನ್ನರಿಗಿದು ಸಾಧ್ಯ ವೇಮ,

ರವಿ ಚಂದ್ರ ಗತಿಗಳ ಮೀರಿದ,
ಭವ ಹರವಾದಾತ್ಮ ತೇಜ ಭಾಗ್ಯ ತನಗಿರಲ್,
ಶಿವ ಸಾಯುಜ್ಯವು, ಬ್ರಹ್ಮವು,
ಕವಿವುದೆ ಪರಿಪೂರ್ಣ ಪದವಿ ಕಾಣಾ ವೇಮಾ,

ದೊಡ್ಡ ಕತ್ತಲೆ ತೂರೆದು, ದೇಹ ಮರೆತು ಚೊಕ್ಕ,
ಪರಮನಲ್ಲಿ ಮನಸು ಭದ್ರಪಡಿಸಿ,
ಗರಿಮೆ ಹೊಂದಿದಂಥ ಘನನು ಎಲ್ಲು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ರಾಜಯೋಗದ ಸಂಕ್ಷಿಪ್ತ ಪರಿಚಯವನ್ನು ನಾವು ಇದು ವರೆಗೆ ಮಾಡಿಕೊಂಡೆವು. ಇನ್ನು ಮುಂದಿನ ಉಪವಿಭಾಗಗಳತ್ತ ನಮ್ಮ ವಿಹಂಗಮ ದೃಷ್ಟಿ ಹರಿಸೋಣ.

## ಅಂತಿಮ ಉಪದೇಶ :

ಮಹಾಯೋಗಿ ವೇಮನರ ಜೀವನ ಚರಿತ್ರೆಯನ್ನು ಮೊದಲು ನೀಡಿ, ಅವರ ವೈರಾಗ್ಯದ ಕಾರಣಗಳನ್ನು ವಿವರಿಸಿದೆವು. ಗುರುಕೃಪೆಯಿಂದ ಸಾಧನೆಗೆ ತೊಡಗಿ ಉನ್ಮತ್ತ ಅವಸ್ಥೆ, ಬಾಲ್ಯಾವಸ್ಥೆಗಳಲ್ಲಿ ಸಮಾಜವು ಅವರನ್ನು ಹುಚ್ಚರೆಂದು ಸಹ ಒಮ್ಮೊಮ್ಮೆ ಅನಾದರಿಸಿದ್ದನ್ನೂ ಬಣ್ಣಿಸಿದ್ದೇವೆ. ಆಶುಕವಿಗಳಾದ ವೇಮನರು, ಗುರುಗಳ ಕೃಪೆಯ ಮೂಲಕ ದೈವಾನುಗ್ರಹ ಪಡೆದು, ದಿವ್ಯಾತಿದಿವ್ಯ ಆಧ್ಯಾತ್ಮಿಕ ಅನುಭವಗಳನ್ನು ಪಡೆದರು. ಈ ಪಕ್ವಗೊಂಡ ಚುರುಕು ಬುದ್ಧಿಯು ಪ್ರಾಪಂಚಿಕ ಮತ್ತು ಪಾರಮಾರ್ಥಿಕ ವಿಷಯಗಳನ್ನು ಕುರಿತು ಬರೆದ ವಿವಿಧ ಛಂದಸ್ಸುಗಳ ಪದ್ಯಗಳನ್ನು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ವಿಭಾಗಗಳಲ್ಲಿ ಹೊಂದಿಸಿ ನೀಡಿದ್ದೇವೆ. ಮೂರು-ನಾಲ್ಕು ಪ್ರಕರಣಗಳ ಹೊರತಾಗಿ ಉಳಿದೆಲ್ಲ ಶೀರ್ಷಿಕೆಗಳಡಿ ಇರುವ ಪದ್ಯಗಳಲ್ಲಿ ಬಹಳ ಕಡೆ ಕೇವಲ ಎರಡೆರಡು ಪದ್ಯಗಳನ್ನು ನೀಡಿದ್ದೇವೆ. ಕೆಲವೆಡೆ ಮಾತ್ರ ಮೂರು ಇಲ್ಲವೆ ಐದು ಪದ್ಯಗಳನ್ನು ನೀಡಿದ್ದೇವೆ .

ಮೋಕ್ಷ ವರ್ಗದ ಅಂತಿಮ ಅಧ್ಯಾಯಗಳನ್ನು 'ಅಂತಿಮ ಉಪದೇಶ' ವೆಂಬ ಪ್ರಕರಣದಲ್ಲಿ ಸೇರಿಸಿದ್ದೇವೆ, ಈ ಶೀರ್ಷಿಕೆಗಳೆಂದರೆ, ಗುರುಶಿಷ್ಯ ಲಕ್ಷಣ , ಸಾಧುಲಕ್ಷಣ, ಸಹಜ ಸಮಾಧಿ, ಜೀವನ್ಮುಕ್ತಿ ಸ್ಥಿತಿ ಅವಧೂತ ಚರ್ಯೆ ಮತ್ತು ಅಧ್ಯಾತ್ಮ ಸುಖಬೋಧೆ. ಇವುಗಳಿಗೆ ಸಂಬಂಧಿಸಿದಂತೆ ಒಟ್ಟಾರೆ ಒಂದು ನೂರಾ ಮೂವತ್ತು ಪದ್ಯಗಳು ಲಭ್ಯವಿವೆ. ಇಲ್ಲಿ ಒಂದೊಂದು ಶೀರ್ಷಿಕೆಯಡಿ ಎರಡೆರಡು ಪದ್ಯಗಳನ್ನು ಮಾತ್ರ ನೀಡಿದ್ದೇವೆ.

### ಗುರುಶಿಷ್ಯ ಲಕ್ಷಣ :

ಗುರುವು ಶಿಷ್ಯರೆನಲು ಕೊನೆಯು ಮೊದಲು ಎಂತು ?
ಗುರುವು ಶಿಷ್ಯರೆಂಬ ಗುರುತು ಎಂತು ?
ಗುರುವಿಗಿಪ್ಪ ತಕ್ಕ ಗೌರವವಿರದಿರಲು.
ವಿಶ್ವದಾಭಿರಾಮ ಕೇಳು ವೇಮ.





ಶಿಷ್ಯ ವರ್ಗಕೆಲ್ಲ ಶಿವರೂಪ ತಿಳಿಸದೆ,
ಸಲ್ಲದ ಮತ ಕಟ್ಟಿ ನೂಕುವವರೆ !
ಗುರುತರಿಯದೆ ನಿಲುವ ಹೊಕ್ಕ ಕುರುಡೆತ್ತು !
ವಿಶ್ವದಾಭಿರಾಮ ಕೇಳು ವೇಮ.

### ಸಾಧು ಲಕ್ಷಣ :

ಪೊಡವಿ ತಿರುಗಿ ಪಡೆವ ಪುಣ್ಯ ರಾಶಿಯೆಲ್ಲ,
ಸಾಧು ಜನರ ನೋಡಿದೊಡನೆ ಲಭ್ಯ.
ಬಿದ್ದ ನೀರು ನದಿಯ ತಳದಿಂಗಲು ಶುದ್ಧ.
ವಿಶ್ವದಾಭಿರಾಮ ಕೇಳು ವೇಮ.

ಸಾಧು ಸಾಂಗತ್ಯಕಮರುತ ಶಾಂತಿಗಮರಿ,
ಶಾಂತಿಗಮರಲು ಚಿತ್ತವು ಶಕ್ತವಹುದು.
ಶಕ್ತವಾದಂಥ ಮನದಲಿ ಶೋಭಿಪುದಾ ಪರವು.
ಪರವ ಕಂಡೊಡೆ, ಶಿವ ತಾನು ಪೊಳೆವ ವೇಮ.

### ಸಹಜ ಸಮಾಧಿ :

ಸಂತತ ಸಮಾಧಿ ಪ್ರಜ್ಞೆಯಲಿ,
ಅಂಥಿಂಥ ಆಚ್ಚರಿಯರಿತು ವಿವರಿಸಿದೊಡೆ, ಆ
ನಂತರದಲಿ ಪರಮಾತ್ಮನು.
ಮಂತವ್ಯನಾಗಿ ಹೊಳೆಯುವ, ಮಹಿಯಲಿ, ವೇಮಾ,

ಪೂರ್ಣ ಸಮಾಧಿಯಲಿ ಪೂರಕ, ಕುಂಭಕ, ರೇಚಕಗಳ ಗೆಯ್ಮೆ,
ಭಾರಿ ಗಾಳಿಯಂತೆ ಬೆಳಗುತಿಹುದು; ಏಳು ಕೋಟೆಗಳ ಹುಚ್ಚು
ನಾದಗಳು ಕೇಳಿ ಬಪ್ಪವು, ತನಿಗಾಳಿ ಸೂಸುತಿಹುದು.
ಗಾಳಿಯೊಳಂದು ಗಂಧರ್ವ ನಾದವು; ಕೇಳಿ ಒಪ್ಪುದು ಹಾದಿಯಲ್ಲಿ.
ಎನಿತಾದರೇನು? ನಡುಬೀದಿಯೊಳಾಡುತಿಹುದು ;
ನಾಭಿ ನಡುವಿನ ಬೆಳಕು!
ನಾಭಿಗೆ ಸರಿಯಾಗಿ ನಡುವೆಯೇ ಭಯವೆನಿಸುತಿಹುದು.
ಆಚೆಗಿದೆ ಬ್ರಹ್ಮ ಬಯಲು !
ವೇದಾಂತ ವೇದ್ಯರು ಬೆರಗುಗೊಳುವರು; ರೂಪುಗೊಳ್ಳುತ್ತಿಹರು.
ಅದರ ಮೇಲ್ಗಡೆಯುಂಟು ; ರಾಜಸ ಕಲ್ಯಾಣ ಮೂರ್ತಿ !
ಅದರ ಮೇಲ್ಗಡೆಯುಂಟು ; ನಡುಮನೆಯ ಹಾದಿ!
ಅಲ್ಲಿಯೇ ಉಂಟು ; ದಶೇಂದ್ರಿಯಗಳ ಅವತಾರ ರೂಪೊಂದು;
ಅದರ ಮೇಲ್ಗಡೆಯುಂಟು ; ಚುಕ್ಕೆಗಳ ರೀತಿ!

ಚಂದ್ರ ಸೂರ್ಯರ ಪ್ರಭೆಯು ಬೆಳಗುತಿಹುದು.
ಅದರ ಮೇಲ್ಗಡೆಯುಂಟು; ನವರತ್ನದ ದೇಹ !
ಅದರ ಮೇಲ್ಗಡೆಯುಂಟು ; ತಟಾಕವು !
ಅದರ ಮೇಲ್ಗ ಡೆಯುಂಟು ಹುಣ್ಣಿಮೆಯ ಬಯಲು!
ಅದರ ಮೇಲ್ಗ ಡೆಯುಂಟು ; ನವರಂಧ್ರಗಳ ದಾರಿ ?
ಒಂಭತ್ತು ಛಾಯೆಗಳ ಏಕಾಂತ ಮಿನುಗು!
ಅದರ ಮೇಲ್ಗಡೆಯುಂಟು ; ದೀಪ ಕಳೆಯು!
ದೀಪವು ಬೆಳಗುತಿದೆ, ಅಣು ಮುತ್ತಿನ ಮಾಲೆಯ !
ಅಲ್ಲಿಂದ ಸುರಿಯುತಿದೆ ; ಅಮೃತ ಸೋನೆ !
ಆಗಲೇ ಸುರಿಯುವುದು , ಮಂಜು ಧಾರೆಯಂತೆ ಕರುಣೆ !
ಕರಗಿ, ಕರಗಿ, ಸುತ್ತಲೂ ಬಟ್ಟಬಯಲು, ನಟ್ಟ ನಡುವೆ ಕಪಾಲ ಬುಟ್ಟಿ !
ಅಲ್ಲಿಯೆ ಉಂಟು ಪಂಚ ಭೌತ ದೇಹ ಮೆಟ್ಟಿ ಒಡಲೊಳು ಕಾರಣತನೂಜ.
ವಿಶ್ವದಾಭಿರಾಮ ಕೇಳು ವೇಮ.

ಜೀವನ್ಮುಕ್ತಿ ಸ್ಥಿತಿ :

ದಾಟಿ ಬಂದು ನದಿಯ, ದಡ ತಲುಪಿದ ಪುರುಷ,
ನಾವೆಯನಿಚ್ಛಿಸದೆ ನಡೆಯುವಂತೆ.
ಯೋಗಿ ಪುರುಷಗೇಕೆ ಒಡಲು ಚಿಂತೆಯೆಲ್ಲ ?
ವಿಶ್ವದಾಭಿರಾಮ ಕೇಳು ವೇಮ.

ಉತ್ತಮ ಶಿವಯೋಗಿ ಊಹಿಸಿ ಮನದಾಟಿ,
ಸತ್ವದಲ್ಲಿ ಹೋರಿ ಸುಿದು ಕೊಳದೆ,
ಹೊಂದಿ ಮರೆತು ಇಹನು ಪೂರ್ಣ ಭಾವದಲ್ಲಿ.
ವಿಶ್ವದಾಭಿರಾಮ ಕೇಳು ವೇಮ.

ಅವಧೂತ ಚರ್ಯೆ :

ಲಜ್ಜೆ ತೊರೆಯದನಕ ಲಭಿಸದು ಶಿವ ಸೌಖ್ಯ.
ಬಗ್ಗಿ ನಡೆಯುವನಕ ಎಗ್ಗು ಬಿಡದು.
ಲಜ್ಜೆ ತೊರೆಯುವವನೆ ಲಯವಿಲ್ಲದ ಜೀವಿ.
ವಿಶ್ವದಾಭಿರಾಮ ಕೇಳು ವೇಮ.

ಧ್ಯಾನಿಯಂತೆ ಉಂಟು; ಮೌನಿಯಂತೆ ಉಂಟು;
ಭೋಗಿಯಂತೆ ಉಂಟು ; ರೋಗಿಯಂತೆ ;
ಸಕಲವ ತಿಳಿದಿಪ್ಪ ಸರ್ವಜ್ಞನಾಗಿಯುಂಟು
ಪರಮ .ಯೋಗಿಯಂತೆ ಪೂಳೆಯೊ ವೇಮ.





ಅಧ್ಯಾತ್ಮ ಸುಖ ಬೋಧೆ :

ಅರಿತ ಮನುಜನ ಸುಖ ಆವ ಲೋಕದಿಲ್ಲ,
ಅರಿವು ಅರಿಯಲವಗೆ ಅರಿವೆ ಇಲ್ಲ.
ಅರಿವಿಗೆ ಸಮನರಿವೆ; ಅರಿವೆ ತತ್ತ್ವವಹುದು.
ವಿಶ್ವದಾಭಿರಾಮ ಕೇಳು ವೇಮ.

ಪರಮ ನಿರ್ಗುಣ ವಿದ್ಯೆಯಲಿ ಭಾವದುಂಬಿ,
ಮಾನಸ ಜ್ಞಾನ ಪರಿಪೂರ್ಣ ಮನನದಲ್ಲಿ,
ಏಕ ರೂಪವ ಮನದೆಣಿಸಿ, ನಿತ್ಯ ಕಾಣು.
ಶಾಶ್ವತಾನಂದ ಸಿದ್ಧಿ ಜರುಗು ವೇಮ.

ಮಹಾಯೋಗಿ ವೇಮನರು ಶಿವ ಕವಿಗಳು. ಶಿವ ಎಂದರೆ ಮಂಗಳಕರ. ರಾಜಯೋಗದಲ್ಲಿ ಸಿದ್ಧಾವಸ್ಥೆಗೇರಿದ್ದ ಅವರು ಲೋಕ ಕಲ್ಯಾಣೇಚ್ಛುಗಳಾದ ಗುರುಗಳು. ಅವರ ಅಭಿಮತವು ಗುರೂಪದೇಶವೇ. ಆದ್ದರಿಂದ, ಚತುರ್ವಿಧ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ವರ್ಗಗಳಲ್ಲಿ ಸಮೀಕೃತವಾದ ಪದ್ಯ ಸಾಹಿತ್ಯವು ಅವರು ಸಮಾಜಕ್ಕೆ ಬೋಧಿಸಿದ ಉಪದೇಶವೇ ಆಗಿದೆ.

ಅವರು ಯೌವನದಲ್ಲಿ ಭೋಗಿಯಂತೆ ಜೀವಿಸಿದರು. ಮುಪ್ಪಿನಲ್ಲಿ ರೋಗಿಯಂತೆ ಬಾಳಿದರು. ಸಾಧಕ ಅವಸ್ಥೆಯಲ್ಲಿ ಧ್ಯಾನಿಯಾಗಿ ಇದ್ದರು. ಸಿದ್ಧಾವಸ್ಥೆಯಲ್ಲಿ ಹೆಚ್ಚಾಗಿ ಮೌನಿಯಾಗಿ ಇರುತ್ತಿದ್ದರು. ಕೊನೆಗೆ ಪರಮ ಯೋಗಿ ಎನಿಸಿ ಬಾಳಿದರು. ಸಕಲವನ್ನೂ ತಿಳಿದ ಸರ್ವಜ್ಞರಾಗಿದ್ದರು. ಅವರು ಒಂದೇ ಕಡೆಗೆ ನೆಲೆಯೂರಿ ಬಾಳಲಿಲ್ಲ. ಅಲ್ಲಿ ಇಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ವಸತಿ ಮಾಡಿ, ಜನರಿಗೆ ಉಪದೇಶಿಸುತ್ತಿದ್ದರು. ಅವರ ಶಿಷ್ಯರಾದವರು ಈ ದೇಶಿಕನ ಮಾರ್ಗದರ್ಶಿ ಸೂತ್ರಗಳನ್ನು ಬರೆದಿಟ್ಟುಕೊಂಡು ತಮ್ಮ ಜೀವನದಲ್ಲಿ ಪಾಲಿಸುತ್ತಿದ್ದರು. ಅವರು ಮೂಲತ : ಆಶುಕವಿಗಳಾಗಿದ್ದುದರಿಂದ ಆಯಾ ಸಂಧರ್ಭಗಳಿಗೆ ಅನುಸರಿಸಿ, ಉಪದೇಶಪರ ಪದ್ಯಗಳನ್ನು ರಚಿಸತ್ತಿದ್ದರು. ಅವರ ಆತ್ಮೀಯ ಶಿಷ್ಯರಲ್ಲಿ ಕೆಲವರು ಅವುಗಳನ್ನು ಲೇಖಿಸುತ್ತಿದ್ದರು, ಇಂಥ ಲಿಖಿತ ಸಾಹಿತ್ಯವೇ ಹದಿನೈದು ಸಾವಿರ ಪದ್ಯಗಳಷ್ಟಿತ್ತು. ಸಮಾಜದಲ್ಲಿ ಬೇರೂರಿದ ಅನಿಷ್ಟ ಸಂಪ್ರದಾಯಗಳನ್ನೂ ಡಾಂಭಿಕ ಆಚರಣೆಗಳನ್ನೂ ಕಟುವಾಗಿ ಟೀಕಿಸುತ್ತಿದ್ದರು. ಇಂಥ ಸಾಹಿತ್ಯದ ಪ್ರಸಾರದಿಂದ ಜನ ಜಾಗೃತಿ ಮೂಡಿ , ತಮ್ಮ ಬುಡವೇ ಅದರುವುದೆಂದು ಭಾವಿಸಿದ ಕೆಲ ಪಟ್ಟಭದ್ರ ಹಿತಾಸಕ್ತರು ಉಪಾಯದಿಂದ ಆ ಸಾಹಿತ್ಯವನ್ನು ಬಹುತೇಕ ಭಸ್ಮಗೊಳಿಸಿದರು. ಈ ಕುಹಕ ಕಾರ್ಯವನ್ನು ಅವರ ಮಹಾನಿರ್ಯಾಣದ ನಂತರ ಸಹ ಈ ಪಟ್ಟಭದ್ರ ಹಿತಾಸಕ್ತರು ಮುಂದು ವರಿಸಿದರು. ಹೀಗಾಗಿ, ಇಡೀ ಸಾಹಿತ್ಯವು ಇಂದು ಗ್ರಂಥಸ್ಥವಾಗಿ ಲಭ್ಯವಿಲ್ಲದಿದ್ದರೂ ಹಲವಾರು ಶಿಷ್ಯರು ತಮ್ಮ ಅಭ್ಯಾಸಕ್ಕೆ ಅನುಕೂಲಿಸುವಂತೆ ಬರೆದಿಟ್ಟು ಕೊಂಡ, ತಾಡಪತ್ರಿಗಳ ರೂಪದಲ್ಲಿ, ಲಭ್ಯವಾಯಿತು. ಮುದ್ರಣ ಯಂತ್ರಗಳು ಈ ದೇಶಕ್ಕೆ ಬಂದ ಬಳಿಕ ಅಂದರೆ ಕಳೆದ ಎರಡು ಶತಮಾನಗಳ ಕಾಲದಲ್ಲಿ ವೇಮನರ ಸಾಹಿತ್ಯವು ಮುದ್ರಿತ ರೂಪ ಪಡೆಯಿತು.

# ಮಹಾನಿರ್ಯಾಣ

ಅಂದು ಶಾರ್ವರಿ ನಾಮ ಸಂವತ್ಸರದ, ಚೈತ್ರ ಮಾಸದ, ಶುಕ್ಲ ಪಕ್ಷದ ನವಮಿ ತಿಥಿಯಿತ್ತು. ವೇಮನಯೋಗಿ ಪೂರ್ವ ಸೂಚನೆ ನೀಡಿದಂತೆ, ಆ ದಿನ ಅವರು ದೇಹ ತೊರೆಯುವ ದಿನ. ಅಣು ಮನಸ್ಸಿನ ಪ್ರಕ್ರಿಯೆಯು ಮರಣವನ್ನು ತಿಳಿಯಲಾರದು. ಅವರೇ, ಆ ಮುನ್ನ, ಒಂದು ಬಾರಿ ತಿಳಿಸಿದಂತೆ,

ಹನಿಯು ಬೀಳುವಂದು, ಹರಣ ತೊಲಗುವಂದ,
ತಿಳಿಯಲಾರ ಘನನೆ ಆದೊಡೇನು ?
ತಿಳಿದೊಡಾಗ ಕಲಿಯುಗ ಉಳಿಯುವುದು ಎಂತು ?
ವಿಶ್ವದಾಭಿರಾಮ ಕೇಳು ವೇಮ.

ಆದರೆ, ಬ್ರಾಹ್ಮಿ ಮನವು ಆಗೀಗ ಬೋಧಿ ಸಂಪನ್ನರ ಮೂಲಕ ಕಾರ್ಯಮಾಡುವುದುಂಟು. ಆಗ ಅಣು ಮನಸ್ಸಿನ ಎಲ್ಲೆ ಯಾಚೆಯ ಸಂಗತಿಗಳು ವೇದ್ಯವಾಗುತ್ತವೆ. ಹೀಗಾಗಿ, ಯೋಗಿವರ್ಯರು ತಮ್ಮ ದೇಹತ್ಯಾಗದ ವಿಷಯವನ್ನು ಶಿಷ್ಯ ರಾಮರೆಡ್ಡಿಗೆ ತಿಳಿಸಿದ್ದರು. ಅವನು ಮುಖಾಂತರ ಇತರರಿಗೂ ತಿಳಿದಿತ್ತು. ಹೀಗಾಗಿ, ಸಮಾಧಿ ರಚನೆಯು ಆ ಮುನ್ನನವೇ ಆಗಿತ್ತು. ಅಂದು ಕಟಾರುಪಲ್ಲೆಯ ಹೊರವಲಯದ ದಿನ್ನೆಯ ಮೇಲೆ ಸಾಕಷ್ಟು ಜನ ಸೇರಿದ್ದರು. ಯೋಗಿಯೋರ್ವರ ಜೀವಂತ ಸಮಾಧಿಯ ವಿಚಾರವನ್ನು ಆ ಭಾಗದ ಹಲವು ಜನರು ಗ್ರಂಥಗಳಲ್ಲಿ ಓದಿದ್ದರೇ ಹೊರತು, ಕಣ್ಣಾರೆ ಕಂಡಿರಲಿಲ್ಲ.

ವೇಮನಯೋಗಿ ತಮ್ಮ ಕುಟೀರದಲ್ಲಿ ಆ ದಿನ ವಿಶೇಷ ಸ್ನಾನ ಮಾಡಿ" ನಿತ್ಯದಂತೆ ಧ್ಯಾನಾದಿ ಕ್ರಿಯೆಗಳನ್ನು ತೀರಿಸಿದರು. ರಾಮರೆಡ್ಡಿ ಕೊಟ್ಟ ಒಂದು ಬಟ್ಟಲು ಸಿಹಿ ಹಾಲು ಸೇವಿಸಿದರು. ಹಾಲು ನೀಡುವಾಗ, ಇದೇ ಕೊನೆಯ ಸೇವೆಯೆಂಬ ನೆನಪಾಗಿ, ರಾಮರೆಡ್ಡಿಯ ಕಣ್ಣಂಚಿನಲ್ಲಿ ನೀರು ಕಾಣಿಸಿತು. ಹೊರಗೆ ಜನರ ಸದ್ದುಗದ್ದಲವಿತ್ತು. ವೇಮನ ಯೋಗಿಗಳಿಗೆ ಜಯವಾಗಲಿ ! ಪರಂಜ್ಯೋತಿ ವೇಮನ ಚಿರಾಯುವಾಗಲಿ ! ಎಂಬ ಉದ್ಘೋಷಗಳು ಕೇಳಿ ಬರುತ್ತಿದ್ದವು. ವೇಮನರು ಹೊರಬಂದರು. ತಮಗಾಗಿ ಸಿದ್ಧ ಪಡಿಸಿದ ಸಮಾಧಿ ಕಟ್ಟಡದತ್ತ ಹೆಜ್ಜೆ ಹಾಕಹತ್ತಿದರು. ನೆರೆದ ಜನ ಭಾವಾವೇಶಕ್ಕೊಳಗಾದರು.

‘ ತೊರೆಯದಿರು ತಂದೆ , ನಮ್ಮನ್ನು ತೊರೆಯದಿರು. ನಮ್ಮನ್ನು ಅನಾಥರನ್ನಾಗಿ ಮಾಡದಿರು " ಎಂದು ಬೊಬ್ಬಿಟ್ಟರು. ಆಗ ವೇಮನರು,

"ಹುಟ್ಟುವವರು ಯಾರು ? ಹುಟ್ಟದವರು ಯಾರು ?
ಹುಟ್ಟಿ ಹುಟ್ಟದಂಥ ಪುರುಷರಾರು ?
ಹುಟ್ಟಿ ಹುಟ್ಟದಿಹುದ ಬೋಧಿಸಲು, ಕಾಣಭೋ !
ವಿಶ್ವದಾಭಿರಾಮ ಕೇಳು ವೇಮ.





ಬದುಕುವವರು ಯಾರು ? ಬದುಕದವರು ಯಾರು ?
ಬದುಕಿ ಬದುಕದಂಥ ಪ್ರಾಣಿ ಯಾರು ?
ಬದುಕು ಇರದ ಬದುಕು ಭ್ರಮೆಯಳಿದು ಕಾಣರೋ ?
ವಿಶ್ವದಾಭಿರಾಮ ಕೇಳು ವೇಮ.

ಕಟ್ಟುವವರು ಯಾರು ? ಕಟ್ಟದವರು ಯಾರು ?
ಕಟ್ಟಿ ಕಟ್ಟದಂಥ ಕರ್ಮಿ ಯಾರು ?
ಗಟ್ಟಿ ಹಿಡಿದು ಲೇಸ, ಕಣ್ಣು ಬಿಟ್ಟು ನೋಡಿಕೊ.
ವಿಶ್ವದಾಭಿರಾಮ ಕೇಳು ವೇಮ.

ನೀಡುವವರು ಯಾರು ? ನೀಡದವರು ಯಾರು ?
ನೀಡಿ ನೀಡದಂಥ ನಿಷ್ಠರಾರು ?
ಪಟ್ಟು ಹಿಡಿದು ಇದರ ಗುಟ್ಟ ಭಾವಿಸಿಕೊ !
ವಿಶ್ವದಾಭಿರಾಮ ಕೇಳು ವೇಮ.

ಸಾಯುವವರು ಯಾರು ? ಸಾಯದವರು ಯಾರು ?
ಸತ್ತು ಬದುಕುವಂಥ ಸುಜನರಾರು ?
ಬಿಚ್ಚಿ ತೆರೆದು ಬಿಡಿಸಿ ಬಗೆದು ನೋಡಿರಯ್ಯ !
ವಿಶ್ವದಾಭಿರಾಮ ಕೇಳು ವೇಮ. "

ಇಷ್ಟು ಪದ್ಯಗಳನ್ನು ಪಠಿಸಿ, ರಾಮರೆಡ್ಡಿಯತ್ತ ನೋಡಿದರು. ಸುದೀರ್ಘ ಕಾಲ ಗುರು ಸೇವೆಯಲ್ಲಿದ್ದ ರಾಮರೆಡ್ಡಿ ಇಂಗಿತವರಿತು, ಯೋಗಿ ವಿರಚಿತ ಸೂಕ್ತ ಪದ್ಯಪಾಠ ಮಾಡಲಾರಂಭಿಸಿದನು. ಇತ್ತ ಯೋಗಿಗಳು ಧ್ಯಾನಸ್ಥರಾದರು.

ಸೀಸ : ದೇಹಗಳನಿತ್ಯ ದೇಹೀ ನಿತ್ಯನಿಹನು ;
ದೇಹೇಂದ್ರಿಯಾದಿಯು ತೀವ್ರ ಗತಿಯಲ್ಲಿ,
ಮೋಹಂಗಳೆಲ್ಲವ ಮೊದಲಿಗೆ ವರ್ಜಿಸುತ್ತೆ,
ಆ ಪರಮಾತ್ಮನೊಡನೆ ಐಕ್ಯಗೊಂಡು,
ಚಿತ್ತ ಶಾಂತಿಯ ಹೊಂದಿ, ಚಿನ್ಮಾತ್ರದಲ್ಲಿ
ಇತರರನ್ನು ನೋಡದೆ ಎಂದಿಗೊಂನು,
ಸರ್ವಾತ್ಮವೆಂಬ ಸತ್ಯವನ್ನು ಸಲೆಗಾಣು-
ವವರೆ ತತ್ತ್ವಜ್ಞರು ವಸುಧೆಯಲ್ಲಿ.

ತೇ : ಅಂಥವರ ಮರ್ಮವನು ಅರಿತುಕೊಳಲು,
ಹರಿಹರ ಬ್ರಹ್ಮರಿರಲು, ಅಳವು ಅಲ್ಲ.
ಹೀಗೆ ಶಾಸ್ತ್ರಗಳೆಲ್ಲ ಹೇಳುತಿಪ್ಪವು.
ತಿಳಿದು ಹೇಳಿದ ವೇಮನ ದೇಶಿಕಾರ್ಯ.

ದ್ವಿಪದಿ :

“ ಲೋಕಾಲೋಕವು ನಾನೇನಲ್ಲವು.
ನಾಕವು ಶಬ್ದವು ನಾನೇನಲ್ಲವು.

ಹೋಗುವ ಬರುವುದು ನಾನೇನಲ್ಲವು ;
ತಾಕಿದೆ, ಸಿಕ್ಕಿತು, ದಕ್ಕಿತು ಎಂದಿರಿ.

ಏಕವನೇಕವು ನಾನೇ ಎಂದಿರಿ ;
ಸೋಕಿದ ಮನದಲಿ ತಾಕಿದೆನೆಂದಿರಿ.

ಪಾಕವ ತಪ್ಪದೆ ಬಡಿಸಿರಿ ಎಂದಿರಿ.
ಪ್ರಾಕ್ಧಿಶೆ ಉಷೆಯನು ಅರಿಯಿರಿ ಎಂದಿರಿ.

ನೆಪ ನಿಡಲೇಕೆ ? ಸತ್ಯವ ನುಡಿದಿರಿ.
ಪಾಕವ ಬಯಸದೆ ಶ್ರಮಿಸಿರಿ, ಎಂದಿರಿ.

ಆಕಾರಗಳಿಗೆ ಆದಿಯು ಎಂದಿರಿ.
ಸಾಕಾರಗಳಿಗೆ ಸಾಕ್ಷಿಯು ಎಂದಿರಿ,

ನಿತ್ಯಾನಂದವು ನಿರ್ಮಲವೆಂದಿರಿ.
ಸತ್ಯಂ ಪರತೆಯು ಸಂಧಿಯು ಎಂದಿರಿ.

ಸಂಧಿಲಿ ವೇಮನ ಶೋಭಿಪನೆಂದಿರಿ.

ಸೋಹಂ ಭಾವದಿ ಮುಳುಗಿಹನೆಂದಿರಿ.

ಸೀಸ : ಸಕಲ ವೇದಗಳ ಸಾರವಾಗಿ ಬೆಳಗುವ,
ಸದ್ಗುರು ವಾಕ್ಯವದು ಸತ್ಯವಿಹುದು.

ಮನದಲಿ ಸದ್ಭಕ್ತಿ ಮರೆಯದೆ ಮೂಡಿರಲು,
ಮಮತೆ ತೊರೆಯಲಾಗ ಮಹಿಮನಹನು.

ಚಿತ್ತ ವಿಭ್ರಮ ಭಾಷೆ ಚಿನ್ಮಾತರದಲ್ಲಿಯೇ ,
ಸೇರಿ , ಬಯಸಿದ ಮುಕ್ತಿ ಸೇರುತಿಹನು ,

ಹರಿಹರಾದಿಯೆ ಇರಲಿ ; ಪೊಂದಲಳವಲ್ಲಿ ,
ಅನುಭವವೇದ್ಯವಾಗಿ ಅರಳುತಿಹುದು,





ತೇಟ : ಅಂಥ ಸದ್ಬೋಧ ಮರ್ಮವ ಅರಿಯಬೇಕು.
ಮನಸಿನೊಳು ಕಲ್ಮಷಗಳನು ಮಾಣಬೇಕು.
ಶೀಘ್ರ ಕಾಲದಲಿ ಆತ್ಮ ಶುದ್ಧಿಯಹುದು.
ವಿಮಲ ಗುಣ ರಾಜೇಂದ್ರ, ವೇಮನಾರ್ಯ .

ಸೀಸ : ಗುರುಬೋಧೆ ತಿಳಿಯದ ಕುಟಿಲ ಶಾಸ್ತ್ರಂಗಳ ,
ಪರಿಕಿಸಿದೊಡೆ ಏನು ಫಲವು ಉಂಟು ?
ಆತ್ಮೈಕ್ಯವರಿಯದ ಅಖಿಲ ಯೋಗಗಳು
ಸಾಧಿಸುವ ಫಲವೇನು, ಸತ್ಯವಾಗಿ ?
ತನ್ನ ಯತ್ನವನು ತಾನರಿಯದ ನರನು
ಸೇವೆ ಗೆಯ್ದೊಡೆ ಏನು ಸಿದ್ಧಿಯುಂಟೆ ?
ತಮ್ಮ ಕುಂದನರಿಯದೆ , ತಾನೋದಲು ಬಹಳ ,
ಓದಿನ ಫಲವೇನು ಒಪ್ಪವಾಗಿ ?

ತೇಟ : ನುಡಿದ ಸದ್ಗುರು ಬೋಧೆ ನಿತ್ಯವರಿತು ,
ಮರೆಯದಿರುವಂಥವರು , ಮಾಯೆ ಜಗಕೆ
ಅಂಟರೆನ್ನುತಿಹರು , ಅಂದವಾಗಿ ;
ತಿಳಿಸಿ ಹೇಳಿದ ವೇಮನ ದೇಶಿಕಾರ್ಯ .

ಯೋಗಿವರ್ಯರು ಕಣ್ಣು ತೆರೆದರು. ನೆರೆದ ಜನಸ್ತೋಮದತ್ತ ಕೃಪಾ ದೃಷ್ಟಿ ಹರಿಸಿದರು. ವರದ ಹಸ್ತ ಎತ್ತಿ ಅಭಯ ಮುದ್ರೆ ದಯಪಾಲಿಸಿದರು. ಜನಮಧ್ಯೆ ವಿದ್ಯುತ್ಸಂಚಾರವಾದಂತಾಯಿತು. ಗಂಭೀರತೆ ಪಸರಿಸಿತು. ಯೋಗಿಗಳು ಎದ್ದು , ಸಮಾಧಿ ಸ್ಥಳಕ್ಕೆ ಸಾಗಿ ಅಲ್ಲಿ ವೀರಾಸನದಲ್ಲಿ ಕುಳಿತು, ಇನ್ನೊಮ್ಮೆ ಜನತಾ ಜನಾರ್ದನನಿಗೆ ನಮಿಸಿ,

“ ಓಂ ನಮಃ ಶಿವಾಯ” ಎಂದು ಶಿವ ಪಂಚಾಕ್ಷರಿ ಪಠಿಸಿದರು.

“ ಶ್ರೀರಾಮನು ಹುಟ್ಟುವದರೊಂದಿಗೆ ತಾವು ............” ಎಂದು ಊರಿನ ಹಿರಿಯ , ಭಕ್ತ ನುಡಿದ . ಆಗ ಯೋಗಿಗಳು,

“ ಜಯ ಶ್ರೀರಾಮ ” ಎಂದು ಕಣ್ಣು ಮುಚ್ಚಿಬಿಟ್ಟರು. ಮುಂದೆ ರಾಮರೆಡ್ಡಿ, ವಿಧಿ ವಿಧಾನಗಳನ್ನು ಪೂರೈಸಿದನು. ಜನತೆಯೆಲ್ಲ ಏಕ ಕಂಠದಿಂದ ,

ವೇದಾತೀತನು ವೇಮನ ಕಾಣಾ .
ವೇಮನ ಮಾತೇ ವೇದವು ಕಾಣಾ .

ವೇದ ಶಾಸ್ತ್ರಗಳು ವಾದವು ಕಾಣಾ .
ವಾದಿಪ ಬಾಯಿಗ ಬೂದಿಯು ಕಾಣಾ .

ಬೇಸರಿಯದೋದೆ ಬಲು ರುಚಿ ಕಾಣಾ .
ಕೇಳಿದವರು ಮತ್ತೆ ಹೇಳರು ಕಾಣಾ .

ಹೇಳುವರಾರೂ ಮಾಡರು ಕಾಣಾ .
ಸಾಧಿಸಿದವರು ಸಿದ್ಧರು ಕಾಣಾ .
ಜಾತರ ಜಾತರ ಜಾತರ ಕಾಣಾ.
ಜಾತರತೀತನು ವೇಮನ ಕಾಣಾ.

ಎಂದು ಪಠಿಸಿದರು .

ಕೊನೆಗೆ ರಾಮರೆಡ್ಡಿ , ಗದ್ಗುದಿತನಾಗಿ

ವೇಮನೆಂಬ ಯೋಗಿ ವಾಸಿಸಿದ ಲೋಕದಿ ;
ಪೂಜೆ ಸಲಿಸಿರವಗೆ ಪುಣ್ಯ ಪುರುಷರಿರ !
ಸಲಿಸಿದಷ್ಟು ಪೂಜೆ ಸುಖ ಶ್ರೇಯ ಲಭ್ಯ .
ವಿಶ್ವದಾಭಿರಾಮ ಕೇಳು ವೇಮ .

ಓಂ ಶಾಂತಿ : ಓಂ ಶಾಂತಿ : ಓಂ ಶಾಂತಿ :

' ವೇಮನ ಮಹಾಯೋಗಿ ಚಿರಾಯುವಾಗಲಿ '

ಎಂಬ ಘೋಷವು ಎಲ್ಲೆಡೆ ಮಾರ್ದನಿಸಿತು .



# ಒಮ್ಮನದ ಹಕ್ಕಿಗಳು

-ಎಸ್. ಆರ್. ಪಾಟೀಲ

## ಮಹಾಪುರುಷ ತಿರುವಳ್ಳುವರ

ಮಹಾಯೋಗಿ ವೇಮನರು ಹದಿನೈದನೆಯ ಶತಮಾನದಲ್ಲಿ ವಿಂಧ್ಯಾದ್ರಿಯಿಂದ ಸೇತು ಬಂಧಗಳ ಮಧ್ಯದ ಪ್ರದೇಶ ಬೆಳಗಿದ ಮಹಾಯೋಗಿಯಾಗಿದ್ದರೆ, ಆ ಕಾಲಕ್ಕಿಂತ ಹದಿಮೂರು ಶತಮಾನಗಳಷ್ಟು ಪೂರ್ವದಲ್ಲಿ ದ್ರಾವಿಡ ದೇಶದ ಪೂರ್ವದಿಗಂತವನ್ನು ಬೆಳಗಿದರು, ಮಹಾಪುರುಷ ತಿರುವಳ್ಳುವರ .

**ಜನನ-ದೇಶ-ಕಾಲ :-**

ತಿರುವಳ್ಳುವರ ಮದ್ರಾಸ ನಗರದ ಭಾಗವಾಗಿರುವ ಮೈಲಾಪುರದಲ್ಲಿ ಕ್ರಿ.ಶ. ಎರಡನೆಯ ಶತಕದಲ್ಲಿ ಜನಿಸಿದರು. ಇವರ ತಾಯಿ ತಂದೆ, ಕುಲ , ಜಾತಿ , ಜನನ-ಮರಣ ಕಾಲಗಳನ್ನೇ ಕುರಿತು ಐತಿಹಾಸಿಕ ಅಂಶಗಳು ಲಭ್ಯವಿಲ್ಲ. ಪ್ರಾಚೀನ ಭಾರತೀಯರು ತಮ್ಮ ಮಹಾಪುರುಷರ ಜೀವನ ಚರಿತ್ರೆಯ ಬಗ್ಗೆ ಉಪೇಕ್ಷೆ ತೋರಿಸಿರುವುದಕ್ಕೆ ಕಾರಣವೆಂದರೆ, ವ್ಯಕ್ತಿಗಳು ತಮ್ಮ ಕಾಲದ ಶಿಶುಗಳಲ್ಲದೆ ಬೇರೇನೂ ಅಲ್ಲ; ಎಂಬ ಅರಿವು. ' ಅವರಿಗಾಗಿ ಸಿದ್ಧವಾಗಿರುವ ನೆಲದಲ್ಲಿ ಅವರು ಬೆಳೆಯುತ್ತಾರೆ; ಅವರು ಉಸಿರಾಡುವ ಬೌದ್ಧಿಕ ವಾತಾವರಣವನ್ನು ಸೃಷ್ಟಿಸಿದವರು ಅವರಲ್ಲ ' ಎಂಬ ಅರಿವು ಭಾರತೀಯರಿಗಿತ್ತು , ಎಂದು ಸೂಚಿಸಲಾಗಿದೆ. ಆ ಮಹಾ ಪುರುಷರು ತಮ್ಮ ಬಗ್ಗೆ ತಾಳಿದ್ದ ವಿನೀತ ಭಾವವೂ ಅದಕ್ಕೆ ಕಾರಣವಲ್ಲ ಎಂದು ಹೇಳುವಂತಿಲ್ಲ "

ತಿರುವಳ್ಳವರ ತಮ್ಮ ಅಮೋಘ ಕೃತಿ ' ತಿರುಕ್ಕುರುಳ್ ' ದಲ್ಲಿ ತಮ್ಮ ವ್ಯಕ್ತಿಗತ ವಿಷಯಗಳನ್ನು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಲಭ್ಯ ಸಾಹಿತ್ಯ ಕೃತಿಗಳಲ್ಲಿ ಕಾಣಬರುವ ತಿರುಕ್ಕುರುಳ್ಳಿನ ಉಲ್ಲೇಖದ ಮೇಲಿಂದ ಕವಿಯ ಕಾಲವನ್ನು ಕ್ರಿ. ಶ. ಎರಡನೆಯ ಶತಮಾನವೆಂದು ನಿರ್ಣಯಿಸಿದ್ದಾರೆ. ತಿರುವಳ್ಳುವರರ ತಾಯಿ-ತಂದೆ ಯಾರೆಂದು ತಿಳಿದಿಲ್ಲ. ವೇಮನರು ತಮ್ಮ ಪದ್ಯದಲ್ಲಿ ' ತಾಯಿಯೇ ಪಾರ್ವತಿಯು ; ತಂದೆಯೇ ವರ ಶಂಭುವು. ಅಖಿಲ ಪ್ರಮುಥ ಗಣವೆ ಬಂಧು ಬಳಗ; ತಾನು ಹುಟ್ಟಿದ ಮನೆ ತನಗೆ ಕೈಲಾಸವು " ಎಂದು ಹೇಳಿದ್ದಾರೆ. ಇತ್ತ ಸರ್ವಜ್ಞನು. ' ಪರಶಿವನ ದಯೆಯಿಂದ ಧರೆಗುದಿಸಿ ಸರ್ವಜ್ಞ , ಗುರು ಕೃಪೆಯ ಪಡೆದು, ಬಿನ್ನೈಸಿದುದು ಸತ್ಯ, ಶರಣರಿಗೆ ಸಹಜ " ಎಂದು ಹಾಡಿದ್ದಾನೆ. ಅದೇ ರೀತಿ, ತಿರುವಳ್ಳುವರ ' ಅಕ್ಷರಗಳಿಗೆಲ್ಲ ಅಕಾರವೇ ಮೊದಲು; ಲೋಕಕ್ಕೆಲ್ಲ ಆದಿ ಭಗವನ್ ' ಎಂದು ಲೋಕಪಿತನನ್ನು ಭಜಿಸಿದ್ದಾರೆ. ಸಾಂಖ್ಯರ ಪ್ರಕೃತಿ ಪುರುಷರಂತೆ ಈ ಆದಿ ಮತ್ತು ಭಗವನ್. ಶಿರಡಿ ಮತ್ತು ಪುಟ್ಟಪರ್ತಿಯ ಸಾಯಿಬಾಬಾ, ಹೆಸರಿನಂತೆ ಆದಿ ಭಗವನ್ ಹೆಸರಿದೆ. ಸಂನ್ಯಾಸ ಸ್ವೀಕಾರಾನಂತರ ಬರೆದುದೆಂದು ಕಾಣುವ ಕೃತಿಯಾದ ತಿರುಕ್ಕುರುಳ್ಳಿನಲ್ಲಿ ಲೌಕಿಕ ತಾಯಿ-ತಂದೆಯಂದಿರ ಹೆಸರಿನ ಪ್ರಸ್ತಾಪವಿರುವ ಪ್ರಮೇಯವೇ ಇರದಲ್ಲವೇ ? ಹಾಗಾಗಿ,

ತಿರುವಳ್ಳುವರರ ತಾಯಿ-ತಂದೆ ಆದಿ ಭಗವನ್ ಆದರು.

'ವ್ಳಳವರ' ಎಂಬುದು ತಮಿಳು ದೇಶದ ಒಂದು ಜಾತಿಯ ಹೆಸರು. ರಾಜ ಸಭೆಯಲ್ಲಿ ಆಮಾತ್ಯ ಮತ್ತು ಸೇನಾಧಿಪತಿಯ ಮಧ್ಯದ ಹುದ್ದೆಯ ಪ್ರಾಚೀನ ಹೆಸರಿದು. ಈಗೀಗ ವಳ್ಳುವರ್ ಜಾತಿಯನ್ನು-ಆರ್ಯರು ಆದಿವಾಸಿಗಳನ್ನು ಅಂತ್ಯಜರಾಗಿ ಮಾಡಿದ ಮೇಲೆ-ಡೋಹರ ಸಮಾನವಾದ ಜಾತಿಯಾಗಿ ಗಣಿಸಲಾಗಿದೆ. ತಿರು ಎಂಬುದು 'ಪೂಜ್ಯ', 'ಶ್ರೀ' ಎಂಬರ್ಥವೀಯುವ ಅರವ ಭಾಷೆಯ ಪದ. ಹೀಗಾಗಿ ; ಹೆಸರು ಹೇಳದ ಕವಿಗೆ, ಜನರು ಕೊಟ್ಟ ಹೆಸರೇ ತಿರುವಳ್ಳುವರ್.

ಲೌಕಿಕವಾಗಿ ವಿಚಾರಿಸುವುದಾದರೆ, 'ವಳ್ಳುವರ್' ಜಾತಿಗೆ ಸೇರಿದ ಸ್ತ್ರೀ ಯೋನಿಯಲ್ಲಿ ಓರ್ವ ಮೇಧಾವಿ ಪುರುಷನ ಪಿಂಡ ಬೆಳೆದಿದೆ. ಆ ಸಂತಾನವೇ ಮಹಾ ಪುರುಷ ತಿರುವಳ್ಳುವರ್. ವಳ್ಳುವರ್ ಜಾತಿಯ ಸ್ತ್ರೀಯನ್ನು ನಂತರದ ಶತಮಾನದವರು 'ಆದಿ' ಎಂದೇ ಕರೆದರು. ರೇತಸ್ಸು ಇರಿಸಿದವನಿಗೆ ಭಗವನ್ ಎಂದು ಕರೆದರು. ಮತ್ಸ್ಯಗಂಧಿ ಪರಾಶರ ಮುನಿಗಳ ರತಿ ಕ್ರೀಡೆಯಿಂದ ಮಹಾಪುರುಷ, ಬ್ರಾಹ್ಮಣರ ಗುರು ಭಗವಾನ ವ್ಯಾಸರು ಜನಿಸಿದರು. ಆದರೆ, ಜನಿಸಿದ ಮಗುವನ್ನು ಜನನಿ-ಜನಕರು ಪೋಷಿಸಿ, ಪೊರೆಯಲಿಲ್ಲ. ಅವರು, ಭೀಷ್ಮನ ತಾಯಿ ಗಂಗೆಯು , ಪತಿಯು ವಚನ ಭ್ರಷ್ಟನಾದೊಡನೆ, ತ್ಯಜಿಸಿ ಹೋದಂತೆ, ತಮ್ಮ ಮಗು ತಿರುವಳ್ಳುವರರನ್ನು ಓರ್ವ ವೆಲ್ಲಾಳ್ (ಕೃಷಿಕ) ಕುಟುಂಬದ ಆಶ್ರಯದಲ್ಲಿರಿಸಿ ಹೋಗಿಬಿಟ್ಟರು. ಹೀಗಾಗಿ, ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಪ್ರತಿಭಾ ಸಂಪನ್ನ ಕುವರನು ಸಾಧು ಸನ್ಯಾಸಿಗಳ ಸಂಗದಲ್ಲಿ ಬಾಳಿ ಬೆಳೆದನು. ಇವನ ಅಸಾಮಾನ್ಯ ಪ್ರತಿಭೆಯನ್ನು ಗುರುತಿಸಿದ ಆ ಸಾಧುಗಳು ತಮ್ಮ ವಿದ್ಯೆಯನ್ನು ಇವರಿಗೆ ಧಾರೆಯೆರೆದರು.

ತಿರುವಳ್ಳುವರ್ ಚತುರಾಶ್ರಮ ಪದ್ಧತಿಯನ್ನೂ ಮತ್ತು ಚತುರ್ವಿಧ ಪುರುಷಾರ್ಥಗಳನ್ನೂ ಪರಿಪಾಲಿಸುವ ಸಂಪ್ರದಾಯಿಗಳು. ಸಾಧು ಸಂತರ ಸಂಗದಲ್ಲಿ ವಿದ್ಯಾರ್ಜನೆ ಮಾಡಿ, ಪ್ರಾಪ್ತ ವಯಸ್ಕರಾದ ತಿರುವಳ್ಳುವರ್ ಅವರಿಗೆ ವಿಧಿ ಲೀಲೆಯಂತೆ ವಾಸುಕಿ ಎಂಬ ಸ್ತ್ರೀ ಪರಿಚಯವಾಯಿತು. ಇವರ ಆಕರ್ಷಕ ವ್ಯಕ್ತಿತ್ವ, ಅದ್ಭುತ ಪ್ರತಿಭೆ ಹಾಗೂ ಸಚ್ಚಾರಿತ್ರ್ಯಗಳಿಗೆ ಒಲಿದು ಬಂದ ಸುಶೀಲೆಯಾಕೆ.

**" ಮನೆಗೆ ತಕ್ಕ ಮಡದಿಯಾಗಿ, ಪತಿಯ ವರಮಾನದ ಮಿತಿಯರಿತು, ಸಂಸಾರವನ್ನು ತೂಗಿಸಿಕೊಂಡು ಹೋಗುವವಳೇ ಬಾಳಿನಾಧಾರವಾಗುವಳು. "**

**" ಮನೆಯೊಡತಿ ಸದ್ಗುಣವಂತೆಯಾದರೆ, ಬಾಳಿನಲ್ಲಿ ಇಲ್ಲವಾದುದಾದರೂ ಏನು ? ಅವಳಲ್ಲಿ ಸದ್ಗುಣಗಳಿಲ್ಲವಾದರೆ ಬಾಳಿನಲ್ಲಿ ಇರುವುದಾದರೂ ಏನು ? "**

**" ಮನೆಯೊಡತಿಯ ಸದ್ಗುಣವೇ ಮನೆಗೆ ಮಂಗಳಕರ ; ಒಳ್ಳೆಯ ಮಕ್ಕಳನ್ನು ಪಡೆಯುವುದು ಅದಕ್ಕೆ ಮತ್ತಷ್ಟು ಶೋಭೆ ನೀಡುವುದು. "**

ಸಂತ ಕವಿ ವೇಮನರು ಸಹ ಗೃಹಸ್ಥ ಜೀವನದ ಪ್ರಾಮುಖ್ಯವನ್ನು ಮನ್ನಿಸಿದವರೇ. ಮನೆ ಮಾರು ತೊರೆದು ಅಡವಿಗೆ ಓಡಿ ಹೋಗುವುದನ್ನು ಅವರು ಪುರಸ್ಕರಿಸಿಲ್ಲ. ಅವರ ಹಾಡುಗಳಲ್ಲಿ ತಿರುವಳ್ಳುವರ್ ಪ್ರತಿಧ್ವನಿಸಿದಂತೆ ಕಾಣಬರುತ್ತದೆ.

**ಮನವಾರೆ ಮುದಿಸುವ ಮಡದಿ ತನ್ನವಳಿರೆ ,**
**ಮನೆಗಾದರು ಒಡೆಯನೆನಿಸಬಹುದು .**
**ಇನಿತಾದರು ಜಗದಿ ಇರದ ಬದುಕು ಅಧಮ !**
**ವಿಶ್ವದಾಭಿರಾಮ ಕೇಳು ವೇಮ .**





**ಗುಣವತಿಯಿರೆ ಯುವತಿ ಗೃಹವು ಚೊಕ್ಕಟಯ್ಯ ;**
**ಕತ್ತಲು ಮನೆ ದೀಪ ಬೆಳಗುವಂತೆ .**
**ದೇವಿಯಿಪ್ಪ ಮನೆಯು ದೇವಾಲಯವಯ್ಯ .**
**ವಿಶ್ವದಾಭಿರಾಮ ಕೇಳು ವೇಮ .**

**ಅತಿ ಅನುಕೂಲವಿಹ ಅಂಗನೆ ದೊರೆತಾಗ ,**
**ಸತಿಪತಿ ಜೊತೆ ಪರಮ ಸೌಖ್ಯವಿಹುದು .**
**ಪ್ರತಿಕೂಲವಿರಲು ಪರಲು ಹರಿವುದೆ ಮೇಲು .**
**ವಿಶ್ವದಾಭಿರಾಮ ಕೇಳು ವೇಮ .**

**ಸುಗುಣವಂತೆ ಕಾಂತೆ ಸುದತಿಯಾಗಿ ಇರಲು ,**
**ಮಿಗಿಲು ಬುದ್ಧಿವಂತ ಮಕ್ಕಳಿರಲು ,**
**ಸಗ್ಗವೇತಕಯ್ಯ ? ಸಂಸಾರ ಸಾಲದೆ ?**
**ವಿಶ್ವದಾಭಿರಾಮ ಕೇಳು ವೇಮ .**

ಅಂತೂ ತಿರುವಳ್ಳುವರ ಮತ್ತು ವಾಸುಕಿ ದಾಂಪತ್ಯ ಕೊಡುಕೊಳ್ಳುವುದಾಗಿತ್ತು. ಒಲುಮೆಯನ್ನೇ ಹಂಚಿಕೊಂಡು ಬಾಳಿದರು. ಪತಿಗೆ ವಿಧೇಯಳಾಗಿ, ಹಾಸುಗೆ ಇದ್ದಷ್ಟು ಕಾಲು ಚಾಚಿದಳು. ಗೃಹಸ್ಥ ಜೀವನವು ಬ್ರಹ್ಮಚರ್ಯ, ವಾನಪ್ರಸ್ತ ಮತ್ತು ಸನ್ಯಾಸ ಜೀವನಗಳಿಗೆ ಪೋಷಕವಾಗುವಂತೆ ಅವರು ಬಾಳಿದರು. ಪ್ರೀತಿಯ ಮಡದಿ ವಾಸುಕಿ ಮರಣಿಸಿದಾಗ ತಿರುವಳ್ಳವರ ಪರಿತಪಿಸಿದರು .ಅದನ್ನೇ ಕುರುಳ್‌ನಲ್ಲಿ ಹಾಡಿದರು :

**" ಉಣವಿನಂತೆ ಸವಿಯಾದವಳೇ,**
**ಪ್ರೀತಿಯ ಕಣಯೇ, ಮಾತಿಗೆ ತಪ್ಪದ ಮುಗುದೆಯೇ,**
**ಪಾದ ಸ್ಪರ್ಶಿಸಿ, ನಾನು ಮಲಗಿದ ನಂತರ ಮಲಗಿ ,**
**ಏಳುವ ಮುನ್ನ ಏಳುವ ನನ್ನ ಮನದನ್ನೆಯೇ,**
**ನೀನು ಹೋದೆಯೆಂದು ನನ್ನ ಕಂಗಳು,**
**ಇರುಳಲ್ಲಿ ಕಂಗೆಟ್ಟು ಭ್ರಮೆಗೊಂಡಿವೆ . "**

ಪ್ರೀತಿಯ ಮಡದಿಯ ಮರಣದ ನಂತರ ತಿರುವಳ್ಳುವರ ಸನ್ಯಾಸ ಸ್ವೀಕರಿಸಿದರು. ಅಷ್ಟರಲ್ಲಿ ಅವರಿಗೆ ಸಾಕಷ್ಟು ಜನ ಶಿಷ್ಯರಾಗಿದ್ದರು. ಕಾಲ ಕ್ರಮದಲ್ಲಿ ತಿರುವಳ್ಳವರ ಧರ್ಮ, ಅರ್ಥ ಕಾಮ ವಿಭಾಗಗಳನ್ನೊಳಗೊಂಡ ನೀತಿ-ತತ್ತ್ವ ಗ್ರಂಥವನ್ನು ರಚಿಸಿದ್ದರು. ಆ ಕಾಲದ ಸಂಪ್ರದಾಯದಂತೆ, ತಮ್ಮ ಗ್ರಂಥವನ್ನು ಪರಿಶೀಲನೆ ಮತ್ತು ಮನ್ನಣೆಗಾಗಿ ಮುದುರೈಯಲ್ಲಿದ್ದ ಕವಿಗಳ ಸಂಘಕ್ಕೆ ಸಲ್ಲಿಸಿದರು. ಮೊದಮೊದಲು ಆ ಸಂಘದ ೪೯ ಜನ ಸದಸ್ಯರು ಈ ಕೃತಿಯ ಪರಿಶೀಲನೆಯನ್ನು

ನಿರ್ಲಕ್ಷಿಸಿದರು. ಆದರೆ ಅಂತಿಮವಾಗಿ, ಕೃತಿ ಮನ್ನಣೆ ಪಡೆದು ಹೊರಬಂದ ಮೇಲೆ, ಅವರೇ ಅದರ ಹಿರಿಮೆಯನ್ನು ಹಾಡಿಹೊಗಳಿದರು. ಇಂಥ ಪ್ರಶಸ್ತಿ ಕವನಗಳನ್ನು ' ತಿರುವಳ್ಳುವರ ಮಾಲೈ ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಲಾಗಿದೆ. ತಿರುಕ್ಕುರುಳ್ ತಮಿಳಿನ ವೇದವೆಂದೇ ಪ್ರಸಿದ್ಧವಾಗಿದ್ದು ಜಗತ್ತಿನ ಪ್ರಮುಖ ಭಾಷೆಗಳಿಗೆ ಭಾಷಾಂತರಗೊಂಡಿದೆ. ವೇಮನ ಪದ್ಯಗಳು ಸಹ ಜಗತ್ತಿನ ಪ್ರಮುಖ ಭಾಷೆಗಳಿಗೆ ಹತ್ತೊಂಭತ್ತನೆಯ ಶತಮಾನದ ಆದಿಯಲ್ಲಿಯೇ ಅನುವಾದಗೊಂಡಿವೆ.

**ದೇವ, ಜೀವ , ಜಗತ್ :-**

ಜಗತ್ತು ಮತ್ತು ಜೀವರಿಗೆ ಮೂಲವೊಂದಿದೆ. ಅದು ಪ್ರಕೃತಿಯ ಮೂರು ಗುಣಗಳಾದ ಸತ್ವ , ರಜಸ್ ಮತ್ತು ತಮಾಸ್ಸುಗಳಿಂದಾಚೆಗಿದೆ. ಹಾಗಾಗಿ, ನಿರ್ಗುಣವಾಗಿದೆ. ನಿರ್ಗುಣವು ಸಗುಣವಾಗುತ್ತದೆ. ಸಗುಣದಿಂದ ತತ್ವಗಳ ಸೃಷ್ಟಿಯಾಗುತ್ತದೆ. ಹೀಗೆ ಇಪ್ಪತ್ತುನಾಲ್ಕು ಅನಾತ್ಮ ತತ್ವಗಳು ಮತ್ತು ಮೂಲ ತತ್ ಸೇರಿ, ಪಂಚವಿಂಶತಿ ತತ್ವಗಳ ಮೂಲಕ ಜಗತ್ತನ್ನು ಅರಿಯಬಹುದು. ಅರಿತು, ತತ್ವಗಳನ್ನು ದಾಟಿ, ಬಟ್ಟ ಬಯಲಾದ ನಿರ್ಗುಣ ಶಿವನಲ್ಲಿ ಒಂದಾಗುವುದೇ ಮೋಕ್ಷ , ಎಂದು ಯೋಗಿ ವೇಮನರು ಸಾರಿದ್ದಾರೆ.

**ನಿಖಿಲಾಕಾರನು ಆತನು ;**
**ನಿಖಿಲಾತ್ಮನು ಸರ್ವಸಾಕ್ಷಿ ಜಗದಲಿ ತಾನೇ ;**
**ನಿಖಿಲವಿರುವಲ್ಲಿ ನೋಡಲು ,**
**ನಿಖಿಲಾಗಿಯೆ ಉಂಟು , ನಿಚ್ಚ ನಿಜವಿದು , ವೇಮಾ .**

**ಮೂವರನರಿವಂಥ ಮೂಲವನ್ನು ಅರಿತು ,**
**ಮೂವರ ಮೇಲೋರ್ವನ ಮೊದಲು ತಿಳಿದು ,**
**ಪೊಳೆವ ಜಿಹ್ವೆಯಿಂದ ಪ್ರಸ್ತುತಿ ಗೆಯ್ಯಿರೋ .**
**ವಿಶ್ವದಾಭಿರಾಮ ಕೇಳು ವೇಮ .**

**ಕಪ್ಪುರದಂತೆ ಮನ ಕನವರಿಪ ಯೋಗಿಗೆ ,**
**ಜ್ಞಾನದೀಪ ಶಿಖಿಯು ಜ್ವಲಿಸುತಿಹುದು ;**
**ಕಾಣಬಹುದು ಆತ್ಮ ಕ್ರಮದಿಂದ ನೋಡಲು .**
**ವಿಶ್ವದಾಭಿರಾಮ ಕೇಳು ವೇಮ .**

**ಬ್ರಹ್ಮಘಟವು ದೇಹ , ಪ್ರಾಣ ತಕ್ಕ ಗಾಳಿ ,**
**ನೆಲಾಗ್ನಿ ಚಂದ್ರ ನೇತ್ರ ತ್ರಯವು .**
**ಮತ್ತೆ ಬ್ರಹ್ಮವೆನಲು ಮಹಿಯ ಮೇಲೆ ಇಹುದೆ ?**
**ವಿಶ್ವದಾಭಿರಾಮ ಕೇಳು ವೇಮ.**





ತಿರುವಳ್ಳುವರ ದೇವರನ್ನೂ, ಜಗತ್ತನ್ನೂ ಬಣ್ಣಿಸುವ ಬಗೆಯೇ ಬೇರೆ. ಯಾವುದೇ ಪ್ರಚಲಿತ ಮತ ಧರ್ಮಗಳ ಪದ ಪ್ರಯೋಗವಿಲ್ಲದೆ, ನಾಮ ರೂಪವಿರದ, ಸಗುಣ ಪರಮಾತ್ಮನನ್ನು ಅವರು ಬಣ್ಣಿಸುತ್ತಾರೆ. ಅವನ ಅಡಿವಾದರೆಗಳಲ್ಲಿ ಜೀವನು ಶರಣು ಪಡೆದು ಮುಕ್ತನಾಗಬೇಕೆಂದೂ ಅವರ ಮತ. ' ದೈವ ಸ್ತುತಿ ' ಪ್ರಕರಣದಲ್ಲಿ ಅವರು ದೇವರನ್ನು ಹಲವು ವಿಶೇಷಣಗಳಿಂದ ಕರೆದಿದ್ದಾರೆ. ಹೂವಿನಲ್ಲಿಯ ಸುರಭಿಯಂತೆ, ಎಲ್ಲದರಲ್ಲಿಯೂ ಇರುವವನಾತ. ಅವನು ಜಿತೇಂದ್ರಿಯನು. ಉಪಮಾತೀತನು. ಅವನು ಧರ್ಮ ಸಾಗರನು ; ಅಷ್ಟ ಗುಣ ಸಂಪನ್ನನು. 'ಇರೈವನ್' ಇಲ್ಲವೆ ಇರೈ ಪದಗಳಿಂದ ದೇವರನ್ನವರು ಕರೆದಿದ್ದಾರೆ. ಆ ಶಬ್ದಗಳ ಅರ್ಥವೆಂದರೆ ಅರಸ ಇಲ್ಲವೆ ಪ್ರಭು. ನಿಸರ್ಗದ ಕಣ ಕಣಗಳಲ್ಲಿಯೂ ದೇವರು ವ್ಯಾಪಿಸಿದ್ದಾನೆ. ಅವನು ಜೀವರ ನಿಯಾಮಕ. ಹೀಗೆ , ಅವನು ಸರ್ವಾನುಸ್ಯೂತ ಮತ್ತು ಸರ್ವಾಂತರ್ಯಾಮಿ. ತಿರುವಳ್ಳುವರರ ಮೇರೆಗೆ ದೇವರು ನಿಷ್ಕ್ರಿಯನಲ್ಲ. ಬದುಕಿನ ಕ್ಷಣ ಕ್ಷಣದಲ್ಲಿಯೂ ಆ ಉಪಮಾತೀತ ಪ್ರಭುವಿನ ಅದ್ಭುತ ಶಕ್ತಿಯು ಕ್ರಿಯಾತ್ಮಕವಾಗಿ ಗೋಚರಿಸುತ್ತದೆ. ಅವನು ಪ್ರಕೃತಿಯ ಸರ್ವ ಕ್ರಿಯೆಗಳಿಗೂ ಆದಿ ಇಲ್ಲವೆ ಪ್ರೇರಕನಾದ ಭಗವನ್. ಹೀಗಾಗಿ, ತಿರುವಳ್ಳುವರ ಅವನನ್ನು ಆದಿ ಭಗವಾನ ಎಂದು ಕರೆದಿದ್ದಾರೆ.

ದಾರ್ಶನಿಕ ಆಲೋಚಕರ ವಿಷಯಗಳಾದ ಜೀವ, ಜಗತ್ತುಗಳ ಸೃಷ್ಟಿ , ದೇವರೊಂದಿಗೆ ಅವುಗಳ ಸಂಬಂಧ, ಅವುಗಳಲ್ಲಿರುವ ಪರಸ್ಪರ ಭೇದ ಇಲ್ಲವೆ ನಿರ್ಭೇದಗಳನ್ನು ಕುರಿತು ತಿರುವಳ್ಳುವರ ಚರ್ಚಿಸಿಲ್ಲ. ಏಕೆಂದರೆ, ಇವೆಲ್ಲ ಇಂದ್ರಿಯಾತೀತ, ಮತ್ತು ಭಾವಾತೀತ ಅವಸ್ಥೆಯ ಅನುಭಾವಕ್ಕೆ ಸಂಬಂಧಿಸಿವೆ. ಕುರುಳ್‌ದಲ್ಲಿ ಕೇವಲ ಧರ್ಮ, ಅರ್ಥ ಮತ್ತು ಕಾಮ ವಿಭಾಗಗಳಷ್ಟೇ ಇದ್ದು , ಕೇವಲ ಸ್ವಾನುಭವ ಗಮ್ಯವಾದ ಮತ್ತು ರಹಸ್ಯವಾದುದರಿಂದ ತುಂಬಿದ ಮೋಕ್ಷ ವಿಭಾಗವನ್ನು ಆಲೋಚನೆಗೆ ತೆಗೆದುಕೊಂಡಿಲ್ಲ. ಗೌತಮ ಬುದ್ಧನು ಆತ್ಮ ಇದೆಯೋ, ಇಲ್ಲವೋ ಎಂದು ನಿಶ್ಚಿತವಾಗಿ ಹೇಳದೆ ಮೌನ ತಾಳಿದ ರೀತಿಯಲ್ಲಿಯೇ, ತಿರುವಳ್ಳುವರ ಮತಭೇದ ಅಥವಾ ಅವರವರ ಭಾವಕ್ಕೆ ಅನುಗುಣವಾಗಿರಬಹುದಾದ ಅನುಭಾವದ ಆಲೋಚನೆಗಳನ್ನು ಕಲಕಿ, ಒಂದು ಮತಕ್ಕೆ ಅಂಟಿಕೊಳ್ಳುವ ಗೋಜಿಗೆ ಹೋಗದೆ, ಮತಾತೀತರಾಗಿ ಉಳಿದಿದ್ದಾರೆ. ಅವರ ಪದ್ಯಗಳನ್ನಿಲ್ಲಿ ಗಮನಿಸುವಾ :

**ಅಕಾರವೆ ಮೊದಲು ಎಲ್ಲಾ ಅಕ್ಷರಕೆ ,**
**ಆದಿ ಭಗವನೆ ಮೊದಲು ಲೋಕಕ್ಕೆ .**

**ತನಗುಪಮೆಯಿರದವನಡಿಯಲಿ ಇರದವನು ,**
**ಮನಸಿನ ಭೀತಿಯ ನೀಗಲು ಅಳವೇನು ?**

**ಧರ್ಮಕಡಲಾದವನಡಿಯ ಸೇರದಿರೆ ,**
**ಕರ್ಮ ಕಡಲನು ದಾಟರು ; ನಂಬು ಖರೆ ;**

**ಗುಣಗಳು ಕಳೆದಿಹ ಇಂದ್ರಿಯ ತೆರನಿಹುದು ;**
**ಗುಣವಂತಿರುವ ಅಡಿಯಲಿ ಇರದಿಹುದು .**

**ಭವಹರನಡಿ ಸೇರಿಯವರೆ, ದಾಟುವರು ;**
**ಭವ ಸಾಗರವನು ; ದಾಟರು ಉಳಿದವರು .**

ನಮ್ಮ ಜ್ಞಪ್ತಿಗೆ ಎಟುಕದ ತಾರ್ಕಿಕ ಮತ್ತು ಭಾವಾತೀತ ವಿಚಾರಗಳನ್ನು ತಿರುವಳ್ಳುವರ ಪ್ರಸ್ತಾಪಿಸುವುದಿಲ್ಲ. ವೇಮನರು ದಾರ್ಶನಿಕ ಸಿದ್ಧಾಂತ ಪ್ರತಿಪಾದಕರಾದುದರಿಂದ ಸೈದ್ಧಾಂತಿಕವಾಗಿ ಭಾವಾತೀತ ವಿಷಯಗಳನ್ನೂ ವಿವೇಚಿಸಿದ್ದಾರೆ; ಮಾನಸಿಕ ಮತ್ತು ಭೌತಿಕ ವಿಷಯಗಳನ್ನೂ ವಿವೇಚಿಸುತ್ತಾರೆ. ಆದರೆ ತಿರುವಳ್ಳುವರ, ತಮ್ಮ ಪ್ರತಿಪಾದನೆಯನ್ನು ಬುದ್ಧಿಯಾಚೆಗೆ ಒಯ್ಯಬಯಸಿಲ್ಲ. ಆ ಕಡೆಗೆ ಕೇವಲ ಸೂಚನೆ ನೀಡಿದ್ದಾರಷ್ಟೇ .

**ಸಾಧನ ಮಾರ್ಗ :-**

ವೇಮನ ಯೋಗಿ ಇಂದ್ರಿಯಗಳನ್ನು ಸಾಧುಗೊಳಿಸಿ, ಮನೋಶುದ್ಧಿ ಸಾಧಿಸಿ, ಅಗ್ರ್ಯಬುದ್ಧಿಯಲ್ಲಿ ಆತ್ಮನ ಪ್ರತಿಬಿಂಬವನ್ನು ಕಾಣಲು, ರಾಜಯೋಗವನ್ನೂ, ಭಕ್ತಿಯೋಗವನ್ನೂ ಪ್ರತಿಪಾದಿಸಿದ್ದಾರೆ. ಕುಂಡಾಲಿನೀ ಯೋಗದ ವಿವರಗಳನ್ನು ನೀಡಿದ್ದಾರೆ. ಮಂತ್ರ ಮಹಾತ್ಮ್ಯೆಯನ್ನು ತಿಳಿಸಿದ್ದಾರೆ. ಈ ಮುಂಚಿನ ಅಧ್ಯಾಯಗಳಲ್ಲಿ ಈ ಸಾಧನ ಪದ್ಧತಿಯನ್ನು ಕುರಿತು ವಿಶದವಾಗಿ ಬರೆದಿರುವುದರಿಂದ, ಈಗ ಬರೆಯುವ ಅಗತ್ಯವಿಲ್ಲ. ಈ ಬಗ್ಗೆ ತಿರುವಳ್ಳುವರ್ ಹಿಡಿದ ಹಾದಿ ಬೇರೆ. ಅವರು ವಿವೇಚಿಸಿದ ವಿಷಯ ವ್ಯಾಪ್ತಿಯು ಎಷ್ಟು ಪರಿಮಿತವೋ, ಅಷ್ಟೇ ಪರಿಮಿತವಿದೆ , ಅವರು ಬಳಸಿದ ಶಬ್ದ ಗುಚ್ಛ.

" ದೃಢ ನಿಶ್ಚಯದಿಂದ ಐದಿಂದ್ರಿಯಗಳನ್ನು ಕಡಿವಾಣ ಹಾಕಿ ಕಾಪಾಡುವವನು, ವರನಿಧಿಯಾದ ಮೋಕ್ಷಕ್ಕೆ ಬೀಜದಂತೆ ". " ರೂಪ, ರಸ, ಸ್ಪರ್ಶ, ಶಬ್ದ, ಗಂಧಗಳೆಂಬ ಐದು ಇಂದ್ರಿಯ ವಿಷಯಗಳನ್ನು ಬಲ್ಲವನ ಬಳಿಯಲ್ಲಿಯೇ ಲೋಕವೆಲ್ಲ ನೆಲೆಸಿರುತ್ತದೆ ". " ಮನದಲ್ಲಿ ನಿರ್ಮಲನಾದರೆ, ಅದೇ ಧರ್ಮ . ಮತ್ತೆಲ್ಲವೂ ಬರಿಯ ಆಡಂಬರ. " " ಅಸೂಯೆ, ಅಳಿಯಾಸೆ, ಕೋಪ, ಮನ ನೋಯಿಸುವ ಮಾತು, ಈ ನಾಲ್ಕನ್ನು ತೊರೆದು ಬಿಡುವುದೇ ಧರ್ಮ. "

ಸತ್ಯ , ಅಹಿಂಸೆ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯೆಗಳನ್ನು ಎಲ್ಲರೂ ಆಚರಿಸಲೇಬೇಕೆಂದು ವೇಮನರು ನಿರ್ದೇಶಿಸಿದ್ದಾರೆ. ತಿರುವಳ್ಳುವರರು ಸಹ ಕ್ರಮಬದ್ಧವಾಗಿ ಈ ನೀತಿವಾದವನ್ನು, ಪ್ರಸ್ತಾಪಿಸಿದ್ದಾರೆ. ಸಂಯಮದ ಮಹತಿಯನ್ನೂ, ಕಾಮ ಕ್ರೋಧಾದಿ ನಿಗ್ರಹವನ್ನೂ ಚೆನ್ನಾಗಿಯೇ ಬೋಧಿಸಿದ್ದಾರೆ, ತಿರುವಳ್ಳುವರ .

**' ಸಂಯಮ ಯುಕ್ತತೆ ಅಮರರೊಳೊಯ್ಯುವುದು ;**
**ಸಂಯಮ ಹೀನತೆ ಇರುಳಿಗೆ ತಳ್ಳುವುದು .'**

**' ಒಂದಾದರಿರಲಿ ಆಡಲು ಕೆಡು ನುಡಿಯ ,**
**ಚೆಂದಾಗಿರದದು ; ಕೆಡಿಪುದು ಸುಕೃತಿಯ '**

**' ಪಕ್ಕಿಲಿ ಸುಟ್ಟಿಹ ಗಾಯವು ಮಾಯುವುದು ;**
**ಜಿಹ್ವೆಯ ಕಿಚ್ಚಿನ ಗಾಯವು ಮಾಯದದು .'**





**' ಕ್ರೋಧವನಡಗಿಸಬಲ್ಲವನ ಪಥದೊಳು**
**ಆ ಧರ್ಮ ದೇವತೆ ತಪ್ಪದೆ ಸುಳಿಯುವಳು '.**

**ಧರ್ಮ ವಿಭಾಗ :-**

ತಿರುಕ್ಕುರುಳಿನಲ್ಲಿ ತಿರುವಳ್ಳುವರ್ ಧರ್ಮ ಸಾಧನೆಯನ್ನು ಎರಡು ವಿಭಾಗಗಳಲ್ಲಿ ವಿವೇಚಿಸಿದ್ದಾರೆ. ಒಂದು ಗೃಹಸ್ಥ ಧರ್ಮ, ಎರಡನೆಯದು ಸನ್ಯಾಸ ಧರ್ಮ. ಯೋಗಿ ವೇಮನರ ಪದ್ಯ ಸಂಖ್ಯೆ ಮೂರುಪಟ್ಟು ಇದ್ದರೂ, ಇಂಥ ಸುಸ್ಪಷ್ಟ ವಿಭಜನೆಯು ಕಾಣಬರದು . ಹಾಗೆ ನೋಡಿದರೆ, ಆ ಪದ್ಯಗಳ ಕ್ರಮಬದ್ಧ ಜೋಡಣೆಯ ಕಾರ್ಯವನ್ನು ಇನ್ನೂ ಮಾಡಬೇಕಾಗಿದೆ.

ಗೃಹಸ್ಥ ಧರ್ಮದಲ್ಲಿ ಬಾಳ ಸಂಗಾತಿಯೊಂದಿಗೆ ಬದುಕು, ಪುತ್ರ ಸಂತತಿ, ಪ್ರೀತಿ, ಲೋಭ ಪಡದಿರುವಿಕೆ; ಕೃತಜ್ಞತೆ, ಇತ್ಯಾದಿಗಳು ಸೇರುತ್ತವೆ. **" ಧರ್ಮ ಮಾರ್ಗದಲ್ಲಿ ಕುಟುಂಬ ಜೀವನ ನಡೆಸಿದರೆ, ಬೇರೆ ಮಾರ್ಗಗಳಿಂದ ಸಾಗಿ ಹೆಚ್ಚಿಗೆ ಪಡೆಯುವುದೇನಿದೆ ?" " ಇತರರನ್ನು ಸನ್ಮಾರ್ಗಕ್ಕೆ ಹಚ್ಚಿ, ತಾನೂ ಧರ್ಮ ಮಾರ್ಗದಿಂದ ವಿಮುಖನಾಗದೆ ಇರುವವನ ಕುಟುಂಬ ಜೀವನವು, ತಪಸ್ವಿಗಳಿಗಿಂತ ಹೆಚ್ಚು ತಪೋ ಬಲವುಳ್ಳದ್ದು ." " ಧರ್ಮವೆಂದೆನಿಸಿಕೊಳ್ಳುವುದೇ ಗೃಹಸ್ಥ ಧರ್ಮ ; ಅದೂ ಪರರ ಅಪಕೀರ್ತಿ ನಿಂದೆಗಳಿಗೆ ಗುರಿಯಾಗದಿದ್ದರೆ, ಮತ್ತಷ್ಟು ಶೋಭಿಸುತ್ತದೆ."**

ಗೃಹಸ್ಥ ಜೀವನ ಕುರಿತು ವೇಮನರು ಹೀಗೆ ಹಾಡಿದ್ದಾರೆ.

ವೇಮನ :-

**ಸುಗುಣವಂತೆ ಕಾಂತೆ ಸುದತಿಯಾಗಿ ಇರಲು ,**
**ಮಿಗಿಲು ಬುದ್ಧಿವಂತ ಮಕ್ಕಳಿರಲು ,**
**ಸಗ್ಗವೇತಕಯ್ಯ ಸಂಸಾರ ಸಾಲದೆ ?**
**ವಿಶ್ವದಾಭಿರಾಮ ಕೇಳು ವೇಮ.**

**ಉರ್ವಿವಾಸಿಗೆಲ್ಲ ಒಂದೆ ತಾಟನಿಟ್ಟು ,**
**ಅರಳಿಸಿ ಸ್ನೇಹವ , ಅಳಿಸಿ ಕುಲವ ,**
**ಶಿರದ ಮೇಲೆ ಕರವ ಇರಿಸಿ , ಉಣಲು ಹೇಳಿ .**
**ವಿಶ್ವದಾಭಿರಾಮ ಕೇಳು ವೇಮ .**

**ಪುತ್ರ ಸಂತತಿ :-**

ದಾಂಪತ್ಯದ ಫಲವೇ ಸಂತಾನ ಪ್ರಾಪ್ತಿ . ಮಕ್ಕಳ ಭಾಗ್ಯವಿದ್ದಾಗ ಮಕ್ಕಳು ಜನಿಸುತ್ತವೆ.

ವೇಮನ :-

**ಪುಣ್ಯ ಭಾಗ್ಯದಿಂದ ಪುಣ್ಯವತಿಯ ಪಡೆವ ,**
**ಸುಗುಣೆ ಪುಣ್ಯವತಿಯು ಸುತರ ಪಡೆವಳು .**

**ಕರ್ಮರನುಭವಿಪರು ಇಷ್ಟ ಪುತ್ರ ಫಲವ ;**
**ವಿಶ್ವದಾಭಿರಾಮ ಕೇಳು ವೇಮ .**

ತಿರುವಳ್ಳುವರ :-

**" ತಮ್ಮ ಮಕ್ಕಳೇ ತಮ್ಮ ಸಂಪತ್ತು ; " ಎನ್ನುವರು ;**
**ಆ ಮಕ್ಕಳ ಸಂಪತ್ತೆಂದರೆ ಅವರವರ**
**ಕರ್ಮಫಲಗಳು ".**

ವೇಮನ :-

**ಕಾಯೊ! ಕಾಯೊ! ಎಂದು ಕರುಣೆ ಕೋರಿ ಕರೆವ ,**
**ಕಂದನನ್ನು ಕಂಡು ಕರೆದು ಮುದಿಸಿ ,**
**ಕೊಟ್ಟು ಹಾಲು ಕುಡಿಸೆ ಕಡು ಪುಣ್ಯವತಿಯಲ!**
**ವಿಶ್ವದಾಭಿರಾಮ ಕೇಳು ವೇಮ .**

ತಿರುವಳ್ಳುವರ :-

**" ಮಕ್ಕಳ ಮೈ ಸವರುವುದು, ಒಡಲಿಗೆ ಹಿತ .**
**ಆ ಮಕ್ಕಳ ತೊದಲ್ನುಡಿ ಕೇಳುವುದು ಕಿವಿಗೆ ಹಿತ .**
**ತಮ್ಮ ಮಕ್ಕಳ ತೊದಲು ಮಾತನ್ನು ಕೇಳದವರು -**
**ಕೊಳಲು ಇನಿದು ; ವೀಣೆ ಇನಿದು ; ಎಂದು ಹೇಳುವರಷ್ಟೇ .**

ವೇಮನ :-

**ಕುಲದ ಒಳಗೆ ಓರ್ವ ಗುಣವಂತನಿರ್ದೊಡೆ ,**
**ಕುಲವು ಶೋಭಿಸುವುದು ಗುಣಗಳಿಂದ .**
**ಕಾನನದಿ ಮೆರೆಯುವ ಗಂಧದ ಗಿಡದಂತೆ .**
**ವಿಶ್ವದಾಭಿರಾಮ ಕೇಳು ವೇಮ .**

ಇನ್ನುಳಿದ ಗೃಹಸ್ಥ ಧರ್ಮದಲ್ಲಿಯೂ ತಿರುವಳ್ಳುವರರಲ್ಲಿ ಮತ್ತು ವೇಮನರಲ್ಲಿ ಭಾಷೆ ಬೇರೆಯಾದರೂ ಭಾವವು ಏಕವಾಗಿರುವಂತೆ ಕಾಣುತ್ತದೆ.

**ಅರ್ಥ ವಿಭಾಗ :-**

ತಿರುಕ್ಕುರುಳಿನಲ್ಲಿ ಪ್ರಸ್ತುತ ಪಡಿಸಿದ ಅರ್ಥವಿಭಾಗವು , ಗ್ರಂಥದ ಒಟ್ಟು ೧೩೩ ಅಧಿಕರಣಗಳಲ್ಲಿ, ೭೦ ಅಧಿಕರಣಗಳಷ್ಟು ದೀರ್ಘವಿದೆ. ಅಂದರೆ ೭೦೦ ಪದ್ಯಗಳನ್ನು ಹೊಂದಿದೆ. ಅರ್ಥ ವಿಭಾಗಕ್ಕೆ ತಮಿಳಿನಲ್ಲಿ ' ಪೊರುಳ್ ' ಎನ್ನುತ್ತಾರೆ. ಇದರಲ್ಲಿ ಮುಖ್ಯವಾಗಿ ರಾಜ ನೀತಿಯ





ಪ್ರಸ್ತಾಪವಿರುತ್ತದೆ. ಅರಸನ ಗುಣಲಕ್ಷಣ ವಿವರಣೆ, ಅವನು ಅನುಸರಿಸಬೇಕಾದ ಶಾಸನ ಸೂತ್ರಗಳ ವಿಶದೀಕರಣ ಮತ್ತು ಇತರ ಸಾಮಾನ್ಯ ರಾಜ್ಯ ನಿರ್ವಹಣೆಯ ವಿಷಯಗಳು ಅರ್ಥ ವಿಭಾಗದಲ್ಲಿ ಸೇರಿವೆ.

**" ಪಡೆ, ಪ್ರಜೆ, ಸಂಪದ , ಮಂತ್ರಿ, ಸ್ನೇಹಿತರು ಮತ್ತು ಕೋಟೆ ಎಂಬ ಆರು ಅಂಗಗಳನ್ನು ಹೊಂದಿದ ರಾಜನು ಪುರುಷ ಸಿಂಹನೆನಿಸುತ್ತಾನೆ. "**

**" ಧೈರ್ಯ, ದಾನ, ಜ್ಞಾನ, ಪ್ರಯತ್ನ ಈ ನಾಲ್ಕು ಗುಣಗಳಲ್ಲಿ ಅಜೇಯನಾಗಿರುವುದೇ ರಾಜನ ಗುಣ ಸಂಚಯ "**

ರಾಜನು ಪ್ರಜಾ ಸಂಪರ್ಕ ಹೊಂದಿರಬೇಕು. ಮೃದು ಭಾಷಿಯಾಗಿರಬೇಕು, ಸತ್ಸಂಗ ಹೊಂದಿರಬೇಕು. ವಿವೇಕಿಯಾಗಿ ವರ್ತಿಸಬೇಕು. ಎದುರಾಳಿಯ ಬಲ ಅರಿತು ಕಾರ್ಯಪ್ರವೃತ್ತನಾಗಬೇಕು. ಸಮಯ ಪ್ರಜ್ಞೆಯರಿತು ಮುನ್ನಡೆಯಬೇಕು . ಒಟ್ಟಾರೆ, ರಾಜನು ತನ್ನ ಪ್ರಜೆಗಳ ಹಿತವನ್ನು ರಕ್ಷಿಸಲು, ನೀತಿಯುತವಾದ ಯಾವ ಯಾವ ಕರ್ತವ್ಯ ಕರ್ಮಗಳನ್ನು ಮಾಡಬೇಕೆಂಬ ಬಗ್ಗೆ ತಿರುವಳ್ಳುವರ ತುಂಬಾ ಸೂಕ್ಷ್ಮ ವಿಚಾರಗಳನ್ನು ರಾಜನೀತಿ ವಿಭಾಗದಲ್ಲಿ ವಿವರಿಸಿದ್ದಾರೆ. **" ಅರಸನಿಗೆ ಜಯಗಳಿಸಿ ತರುವುದು ಆಯುಧಗಳಲ್ಲ ; ಪಕ್ಷಪಾತವಿಲ್ಲದ ಅವನ ರಾಜದಂಡದ ಬಲ . " " ಲೋಕವನ್ನೆಲ್ಲಾ ಅರಸನು ಕಾಪಾಡುವನು . ನೀತಿ ಧರ್ಮ ಕೆಡದಂತೆ ಆಡಳಿತ ನಡೆಸುವವನಾದರೆ, ಅರಸನನ್ನು ಆ ಧರ್ಮವೇ ಪಾಲಿಸುವುದು "**

**ಮಂತ್ರಾಲೋಚನೆ :-**

ರಾಜ್ಯ ಭಾರವನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ರಾಜನಿಗೆ ಸಲಹೆ ನೀಡುವ ಮಂತ್ರಿಯ ಪಾತ್ರವು ತುಂಬ ಮಹತ್ವಪೂರ್ಣವಾಗಿದೆ.

**" ಕೆಲಸಕ್ಕೆ ತಕ್ಕ ಸಾಧನವನ್ನೂ, ತಕ್ಕ ಕಾಲವನ್ನೂ ,ಯೋಚಿಸಿ ಕಷ್ಟಸಾಧ್ಯ ಕೆಲಸವನ್ನು ವಿಶಿಷ್ಟ ರೀತಿಯಲ್ಲಿ ಮಾಡಬಲ್ಲವನೇ ಮಂತ್ರಿಯು " . " ಮಾಡುವ ಕೆಲಸಗಳನ್ನು ಚೆನ್ನಾಗಿ ತಿಳಿದುಕೊಂಡು, ಅದಕ್ಕೆ ಬೇಕಾದ ಮಾರ್ಗಗಳನ್ನು ಆಲೋಚಿಸಿ ಕೈಕೊಂಡು, ನಿಶ್ಚಯವಾಗಿ ಅಭಿಪ್ರಾಯಗಳನ್ನು ಹೇಳಬಲ್ಲವನೇ ಮಂತ್ರಿಯು . "**

**" ಒಂದು ಕೆಲಸದಲ್ಲಿ ತೊಡಗಿದವನು ಮಾಡಬೇಕಾದ ಕರ್ತವ್ಯವೆಂದರೆ , ಕೆಲಸದ ರಹಸ್ಯವನ್ನು ಚೆನ್ನಾಗಿ ತಿಳಿದವನ ಸಲಹೆಯನ್ನು ಪಡೆದುಕೊಳ್ಳುವುದು . "**

ಹೀಗೆ , ಅರಸು ಮತ್ತು ಮಂತ್ರಿಗಳ ಕರ್ತವ್ಯಗಳನ್ನೂ, ಗುಣದೋಷಗಳನ್ನೂ ತಿಳಿಸಿದ ಬಳಿಕ ತಿರುವಳ್ಳುವರ ಸೇನಾಪಡೆಯ, ಕೋಟೆಯ, ದೂತರ ಹಾಗೂ ಇತರ ಅಂಗಾಂಗಗಳನ್ನು ಕುರಿತು ವಿಶದವಾಗಿ ತಿಳಿಸುತ್ತಾರೆ. ಕಾರ್ಯ ಸಾಧನೆಗೆ ಕೆಲವು ವಿಶೇಷ ಸಲಹೆಗಳನ್ನು ನೀಡುತ್ತಾರೆ.

**" ಸ್ನೇಹಿತರಾದವರಿಗೆ ಒಳಿತು ಮಾಡುವುದಕ್ಕಿಂತ ಮುಖ್ಯವಾಗಿ ಮೊದಲು ಮಾಡಬೇಕಾದ ಕೆಲಸವೆಂದರೆ, ಶತ್ರುಗಳನ್ನು ತಮ್ಮ ಸಮೀಪಕ್ಕೆ ಸೆಳೆದುಕೊಳ್ಳುವುದು. "**

**" ಒಂದು ಕೆಲಸದಲ್ಲಿ ತೊಡಗಿದವನು ಮಾಡಬೇಕಾದ ಕರ್ತವ್ಯವೆಂದರೆ, ಆ ಕೆಲಸದ ರಹಸ್ಯವನ್ನು ಚೆನ್ನಾಗಿ ತಿಳಿದವನ ಸಲಹೆಯನ್ನು ಪಡೆದುಕೊಳ್ಳುವುದು. "**

**ಸೇನೆ :–**

ಹೀಗೆ ಅರಸು ಮತ್ತು ಮಂತ್ರಿಯ ಗುಣ ಕರ್ಮಗಳನ್ನು ತಿಳಿಸಿ, ದೂತನ, ಕೊಂಡೆಯವನ, ಸೇನಾಪಡೆಯ, ದುರ್ಗ ರಕ್ಷಣೆಯ ಕುರಿತು ವಿವರವಾಗಿ ತಿರುವಳ್ಳುವರ ತಿಳಿಸುತ್ತಾರೆ. ಜೀವನದಲ್ಲಿ ನಿಜವಾದ ಗೆಳೆಯರು ಸಿಕ್ಕುವುದೇ ದುರ್ಲಭ. ಅಂಥ ಗೆಳೆತನ ಕುರಿತು ಹೇಳುತ್ತಾ,

**" ಕಂಡಾಗ ಮುಖದಲ್ಲಿ ಮಾತ್ರ ನಗೆ ಸೂಸುವ ಕೆಳೆತನವು ಕೆಳೆತನ ಎನಿಸಿಕೊಳ್ಳುವುದಿಲ್ಲ. ಪ್ರೀತಿಯಿಂದ ಹೃದಯವರಳಿಸಿ ನಕ್ಕಾಗ ಮಾತ್ರ , ಅದು ಸ್ನೇಹವೆನಿಸಿಕೊಳ್ಳುವುದು "**

**" ಕೆಳೆತನಕ್ಕೆ ಉನ್ನತವಾದ ನೆಲೆಯಾವುದೆಂದರೆ ಗೆಳೆಯನಿಂದ ಬೇರೆಯಾಗದೆ, ಸಾಧ್ಯವಾದಾಗಲೆಲ್ಲ ಅವನ ಸಂಕಟದ ವೇಳೆಯಲ್ಲಿ ನೆರವಾಗಿ ನಿಲ್ಲುವುದು ."**

**ಸ್ನೇಹ :–**

ಸಿಕ್ಕ ಸಿಕ್ಕವರೊಡನೆ ಸ್ನೇಹ ಮಾಡುವುದನ್ನು ತಿರುವಳ್ಳುವರ ಒಪ್ಪುವುದಿಲ್ಲ. ಯಾರೊಡನೆ ಸ್ನೇಹ ಮಾಡಬೇಕು ? ಯಾರೊಡನೆ ಸಲಿಗೆ ಬೆಳೆಸಿಕೊಳ್ಳಬೇಕು ? ಯಾರೊಡನೆ ಸ್ನೇಹವನ್ನು ಕೇವಲ ನಟಿಸಬೇಕು ? ಯಾರನ್ನು ಹತ್ತಿರ ಸುಳಿಯಗೊಡಕೂಡದು ? ಎಂಬೆಲ್ಲ ಪ್ರಪಂಚದ ಜನರ ಸಂಬಂಧ ವ್ಯವಹಾರ ಕುರಿತು ನೀತಿಪರ ನುಡಿಗಳನ್ನು ತಿರುವಳ್ಳುವರ ವಿಶದವಾಗಿ ಅರ್ಥವಿಭಾಗದಲ್ಲಿ ತಿಳಿಸಿದ್ದಾರೆ. ಉದಾಹರಣೆಗೆ ನೋಡಿರಿ.

**" ಒಬ್ಬನ ಗುಣವನ್ನೂ , ಕುಲೀನತೆಯನ್ನೂ ಗುಣ ದೋಷಗಳನ್ನೂ, ಕುಂದದಿರುವ ಬಂಧುಗಳ ಸ್ವಭಾವಗಳನ್ನೂ ಅರಿತು ಸ್ನೇಹವನ್ನು ಕೈಕೊಳ್ಳಬೇಕು. "**

**" ಒಳ್ಳೆಯ ಕುಲೀನನಿದ್ದು ತನ್ನನ್ನು ಕುರಿತು ಬರುವ ನಿಂದೆಗಳಿಗೆ ನಾಚುವವನ ಸ್ನೇಹವನ್ನು ಏನಾದರೂ ಪ್ರತಿಫಲ ಕೊಟ್ಟಾದರೂ , ಕೊಂಡುಕೊಳ್ಳಬೇಕು ."**

**" ನಾವು , ಕೆಟ್ಟ ಸಮಯದಲ್ಲಿ ಕೈ ಬಿಡುವವರ ಕೆಳೆಯನ್ನು ನೆನೆದರೂ ಕೂಡ, ಮನಸ್ಸು ಸುಡುವುದು. "**

**" ಅರಿವುಗೇಡಿಗಳ ಅಧಿಕ ಸಲಿಗೆಯ ಸ್ನೇಹಕ್ಕಿಂತ, ಅರಿವುಳ್ಳವರ ನಿರ್ಲಕ್ಷ್ಯ ಮನೋಭಾವವು ಕೋಟಿ ಪಾಲು ಪ್ರಯೋಜನವನ್ನು ಉಂಟು ಮಾಡುವುದು. "**

**" ನಡೆ ಬೇರೆ, ನುಡಿ ಬೇರೆಯಾಗಿರುವವರ ಸ್ನೇಹವು ಒಬ್ಬನಿಗೆ ಕನಸಿನಲ್ಲಿ ಕೂಡ , ದುಃಖವನ್ನು ತರುವುದಾಗುತ್ತದೆ. "**

**" ಕಂಡಾಗ ಮುಖದಲ್ಲಿ ಸ್ನೇಹದ ನಗೆ ಸೂಸುತ್ತ, ಹೃದಯದಲ್ಲಿ ಕೇಡೆಣಿಸುವ ವಂಚಕರನ್ನು ಕಂಡು ಹೆದರಿ ದೂರವಿರಬೇಕು ".**

**ಸ್ನೇಹ :–**

**" ಹಗೆಗಳು ಸ್ನೇಹಿತರಾಗುವ ಕಾಲ ಬಂದಾಗ, ಅರಸನು ಮುಖದಲ್ಲಿ ಸ್ನೇಹವನ್ನು ಪ್ರಕಟಿಸಿ, ಮನಸ್ಸಿನಲ್ಲಿ ಆ ಸ್ನೇಹವನ್ನು ತೊಡೆದು ಹಾಕಬೇಕು. ಸ್ವಲ್ಪ ಕಾಲಾನಂತರ, ಬಹಿರಂಗವಾಗಿಯೂ ಆ**





**ಸ್ನೇಹವನ್ನು ಕೈ ಬಿಡಬೇಕು ."**

**" ಅರಿವುಗೇಡಿತನ ಯಾವುದೆಂದರೆ, 'ನಾನು ಜ್ಞಾನಿ' ಎಂದು ಹೇಳಿಕೊಳ್ಳುವ ಅಹಂಕಾರವೇ ."**

**" ತಿಳಿದವರು ಒಳ್ಳೆಯದನ್ನು ಹೇಳಿದರೂ ಅರಿವುಗೇಡಿ ಅದಕ್ಕೆ ಕಿವಿಗೊಡನು. ಇಂಥವನ ಬದುಕು ಸಾಯುವ ವರೆಗೂ ಒಂದು ಕುತ್ತಾಗಿ ಪರಿಣಮಿಸುವುದು "**

**" ಜೀವಿಗಳು ಪರಸ್ಪರ ಹೊಂದಿಕೊಳ್ಳದೆ ಬೇರ್ಪಡಿಸುವ ಕೆಟ್ಟ ಜಾಡ್ಯವೇ ಹಗೆತನವೆಂದು ಹೇಳುವರು."**

**" ಹಗೆತನವನ್ನು ಸಾಧಿಸುವುದರಿಂದ ಸಂತೋಷವಿದೆ, ಎಂದು ತಿಳಿಯುವವನ ಬಾಳುವೆಯು ಅತಿ ಶೀಘ್ರದಲ್ಲಿಯೇ ಸೋಲನ್ನೂ, ಅಳಿವನ್ನೂ ಪಡೆಯುವುದು ."**

**" ಮನದಲ್ಲಿ ಮೂಡುವ ಹಗೆತನಕ್ಕೆ ನಾಚಿ, ಅದರೆದುರು ತಲೆ ತಗ್ಗಿಸಿ ನಡೆದರೆ, ಅದೇ ಐಶ್ವರ್ಯ ; ಆ ಹಗೆತನವನ್ನು ಬಯಸಿ ಕೈಕೊಂಡರೆ ಅದೇ ಕೇಡಿಗೆ ಕಾರಣ ."**

**" ಹಗೆತನವನ್ನು ಸ್ನೇಹವಾಗಿ ಪರಿವರ್ತಿಸಿಕೊಂಡು ನಡೆದುಕೊಳ್ಳುವ ಗುಣವುಳ್ಳ ಅರಸನ ಹಿರಿಮೆಯೊಳಗೆ ಇಡೀ ಲೋಕವೇ ತಂಗುತ್ತದೆ ."**

**" ನೋವನ್ನು ಅರಿಯದ ಸ್ನೇಹಿತರಲ್ಲಿ , ತಮ್ಮ ನೋವನ್ನು ತಾವಾಗಿಯೇ ಹೇಳಿಕೊಳ್ಳಬಾರದು. ಹಗೆಗಳ ಬಳಿ ತಮ್ಮ ದೌರ್ಬಲ್ಯವನ್ನು ವ್ಯಕ್ತಪಡಿಸಬಾರದು ."**

**" ಮುಳ್ಳಿನ ಮರವನ್ನು ಎಳೆಯದಾಗಿರುವಾಗಲೇ ಕತ್ತರಿಸಿ ಹಾಕಬೇಕು ; ಅದು ಬಲವಾಗಿ ಬೆಳೆದ ನಂತರ, ಕಡಿಯಲು ಹೋದರೆ, ಕೈಯನ್ನೇ ಕತ್ತರಿಸುತ್ತದೆ ."**

**" ಕತ್ತಿಯಂತೆ ಬಹಿರಂಗವಾಗಿಯೇ ಪ್ರಕಟವಾಗುವ ಹಗೆಗಳಿಗೆ ಅಂಜಬಾರದು ; ಆದರೆ ಗೆಳೆಯರಂತೆ ನಟಿಸಿ, ಒಳಗೆ ಹಗೆ ಸಾಧಿಸುವವರ ಸಂಬಂಧದ ಬಗ್ಗೆ ಅಂಜಬೇಕು "**

**ರಾಜಸಂಗ :–**

**" ಕಾಳ್ಗಿಚ್ಚಿನ ಬೇಗೆಗೆ ತುತ್ತಾದರೂ ಜೀವದಿಂದ ಉಳಿಯಬಹುದು. ಬಲಶಾಲಿ ಅರಸರನ್ನು ಪೀಡಿಸುವವರು ಜೀವಸಹಿತ ಉಳಿಯುವದು ಕಷ್ಟ . "**

**ಸಜ್ಜನ ಶಾಪ :–**

**" ಮಹಾ ಮಹಿಮರಾದ ಸಚ್ಚರಿತರು ಕೋಪಿಸಿಕೊಂಡರೆ, ಅರಸಾಂಗಗಳನ್ನು ಒಳಗೊಂಡ ಕೀರ್ತಿವೆತ್ತ ಬಾಳೂ , ಸಂಪನ್ಮೂಲಗಳೂ ಏತಕ್ಕೆ ಬರುತ್ತವೆ ? "**

ತಿರುವಳ್ಳುವರರು, ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ನಾಯಕನಾಗುವವನು, ತನ್ನ ಮಡದಿಗಾಗಲಿ , ಇತರ ಹೆಣ್ಣಿಗಾಗಲಿ ಮೋಹಗೊಂಡು , ಅವಳ ದಾಸನಾದರೆ ಎಲ್ಲವೂ ಕೇಡಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಇದಲ್ಲದೆ ವೇಶ್ಯಾಗಮನ, ಮದ್ಯಪಾನ , ಜೂಜು ಖೋರತನಗಳನ್ನು ಬಲವಾಗಿ ಖಂಡಿಸಿದ್ದಾರೆ. ಕುಲ , ಮಾನಗಳನ್ನು ಕಾಪಾಡಿಕೊಂಡು ಬಾಳಲು ಅವರು ಒತ್ತು ನೀಡಿದ್ದಾರೆ.

**" ತಮಗೆ ಅಪಮಾನವಾಗುವ ಸಂದರ್ಭದಲ್ಲಿ ಬಾಳು ನೀಗುವ ಅಭಿಮಾನಧನರ ಕೀರ್ತಿಯನ್ನು**

ಲೋಕದ ಜನರು ಪೂಜಿಸಿ ಗೌರವಿಸುವರು."

ಹಿರಿಮೆ :-

"ಹಿರಿಮೆಯ ಗುಣವುಳ್ಳವರು, ಕಷ್ಟಕಾಲದಲ್ಲಿಯೂ ಮಾಡುವುದಕ್ಕೆ ಅಸಾಧ್ಯವಾದ ಕೆಲಸಗಳನ್ನು ತಕ್ಕ ರೀತಿಯಲ್ಲಿ ಮಾಡಿ ಮುಗಿಸಬಲ್ಲವರಾಗುತ್ತಾರೆ."

"ಹಿರಿಯರ ಹಾದಿಯಲ್ಲಿ ನಡೆದು ಅವರ ಗುಣಗಳನ್ನು ನಾವೂ ಪಡೆದುಕೊಳ್ಳಬೇಕು, ಎನ್ನುವ ದೃಷ್ಟಿಯು ಅಲ್ಪರ ಮನಸ್ಸಿನಲ್ಲಿ ಬರುವದಿಲ್ಲ."

"ಯಾವಾಗಲೂ ತಗ್ಗಿ ನಡೆಯುವುದೇ ಹಿರಿಯ ಗುಣ. ತಮ್ಮ ಪ್ರತಿಷ್ಠೆಯನ್ನು ಮೆರೆಸಿ ಕೊಂಡಾಡುವುದು, ಕೀಳು ಗುಣ."

"ಸಜ್ಜನರ ಸುಖ ಬಾಳುವೆಯೆನ್ನುವುದು ಅವರ ಗುಣದ ಒಳಿತಿನಿಂದಲೇ ಉಂಟಾಗುವುದು. ಮಿಕ್ಕ ಇಂದ್ರಿಯಗಳಿಂದ ಬರುವ ಸುಖವು ಬರಿಯ ಹೆಸರಿಗೆ ಮಾತ್ರ."

ಸದ್ಭಾವನೆ :-

"ಪ್ರೀತಿ, ವಿನಯಶೀಲತೆ, ಉಪಕಾರ, ಪ್ರಸನ್ನತೆ, ಸತ್ಯಶೀಲತೆಯೂ ಸೇರಿದ ಐದು ಗುಣಗಳು, ಸದ್ಭಾವನೆ ಎಂಬ ಕಟ್ಟಡವನ್ನು ಆಧರಿಸಿ ನಿಂತಿರುವ ಆಧಾರಸ್ತಂಭಗಳು."

"ಮಾನವೀಯ ಗುಣವನ್ನು ಹೊಂದಿರದೆ ಇರುವವರು, ಅರವನ್ನು ಹೋಲುವ ಹರಿತವಾದ ಬುದ್ಧಿಯುಳ್ಳವರಾದರೂ ಚಲನೆಯಿಲ್ಲದ ಮರವನ್ನೇ ಹೋಲುತ್ತಾರೆ."

"ಗುಣವಿಲ್ಲದವನ ಕೈಲಿರುವ ಅತುಳವಾದ ಐಶ್ವರ್ಯವು ಕೊಳಕು ಪಾತ್ರೆಯಿಲ್ಲಿಟ್ಟ ಒಳ್ಳೆಯ ಹಾಲಿನಂತೆ, ಶೀಘ್ರವೇ ಕೆಟ್ಟು ಹೋಗುತ್ತದೆ."

"ಇರುವ ಧನ ಸಂಪತ್ತನ್ನು ಹಂಚಿಕೊಂಡು ಉಣ್ಣಬೇಕು. ಉಪಭೋಗಿಸದ ಸಿರಿಯು ಯಾವ ಕೆಲಸಕ್ಕೂ ಬಾರದು."

ಲೋಭ :-

"ಸಿರಿಯಿಂದಲೇ ಎಲ್ಲ ಸುಖ ಸಾಧನಗಳು ದೊರೆಯುವವೆಂದು ತಿಳಿದು, ಅದನ್ನು ಪರರಿಗೆ ಕೊಡದಿರುವ ಕೃಪಣತನದ ಭ್ರಮೆಯಿಂದ ಕೀಳಾದ ಜನ್ಮವು ಉಂಟಾಗುವುದು."

"ತಾನೂ ಅನುಭವಿಸದೆ, ತಕ್ಕವರಿಗೆ ಕೊಟ್ಟು ಸಿರಿವಾಗುವ ಸ್ವಭಾವವೂ ಇಲ್ಲದೆ ಬಾಳುವವನು, ತನ್ನಲ್ಲಿರುವ ಹೇರಳವಾದ ಹಣಕ್ಕೆ ತಾನೇ ಕುತ್ತಾಗಿ ಪರಿಣಮಿಸುವನು."

ಕೃಷಿಕ :-

ತಿರುವಳ್ಳುವರರು, ಜನಾಂಗದ ಉಳಿವಿಗೆ ಮೂಲವಾದ ವ್ಯವಸಾಯವನ್ನು ಅಲಕ್ಷಿಸಿಲ್ಲ. ಭೂಮಿಯ ಸಾಗುವಳಿಯೇ ತುಂಬಾ ಶ್ರೇಷ್ಠವೆಂದು ಸಾರಿದ್ದಾರೆ. ರೈತನ ಬಾಳಿನ ಘನತೆಯನ್ನು ಎತ್ತಿ ಹಿಡಿದಿದ್ದಾರೆ.





VIJAYA COLLEGE OF BUSINESS ADMINISTRATION LIBRARY HUBLI

"ಹೊಲದ ದುಡಿಮೆಯುಳಿದು, ಬೇರೆ ಕೆಲಸಗಳನ್ನು ಮಾಡುವ ಎಲ್ಲರ ಭಾರವನ್ನು ಉಳುವವನು ಹೊರುವುದರಿಂದ ನೇಗಿಲುಯೋಗಿಯು, ಲೋಕ ರಥದ ಅಚ್ಚಿನ ಮೊಳೆಯಂತೆ ಇದ್ದಾನೆ."

"ಧಾನ್ಯದ ಬೆಳೆಯ ತಂಪಿನ ಛತ್ರದ ನೆರಳಿನಲ್ಲಿ ಬಾಳುವವರು, ಹಲವು ಅರಸರ ಛತ್ರದ ನೆರಳನ್ನು ತಮ್ಮ ಅರಸರ ಛತ್ರದಡಿಯಲ್ಲೇ ಕಾಣುವರು."

"ಉಳುವವರು ಕೆಲಸ ಮಾಡುವುದನ್ನು ನಿಲ್ಲಿಸಿದರೆ, ಆಸೆಗಳನ್ನೆಲ್ಲ ತೊರೆದಿದ್ದೇವೆ, ಎನ್ನುವ ಸನ್ಯಾಸಿಗಳಿಗೂ ಬಾಳಿನಲ್ಲಿ ನೆಲೆ ಇಲ್ಲದಾಗುತ್ತದೆ."

ಇತ್ತೀಚೆಗೆ ಜನಪ್ರಿಯವಾಗುತ್ತಿರುವ ನಿಸರ್ಗ ಕೃಷಿ ಕುರಿತು ತಿರುವಳ್ಳುವರ ೨೦೦೦ ವರ್ಷ ಮುನ್ನ ಸೂಚಿಸಿದ್ದಾರೆ. ನೇಗಿಲಿನಿಂದ ಉಳುವುದಕ್ಕಿಂತ, ಭೂಮಿಗೆ ಸಾರ ನೀಡುವುದು ಒಳ್ಳೆಯದೆಂದು ಅವರು ಸೂಚಿಸಿದ್ದಾರೆ. ಉಳುವವನಿಗೆ ಅವರೊಂದು ತಕ್ಕ ಮಾರ್ಮಿಕ ಮಾತು ಹೇಳುತ್ತಾರೆ.

"ನೆಲದೊಡೆಯನಾದವನು ತನ್ನ ನೆಲವನ್ನು ಸರಿಯಾಗಿ ನೋಡಿಕೊಳ್ಳದಿದ್ದಲ್ಲಿ, ಕುಪಿತಳಾದ ಹೆಂಡತಿಯಂತೆ, ಅವನಲ್ಲಿ ಆ ನೆಲವು ಅಸಹಕಾರವನ್ನು ತೋರುತ್ತದೆ."

ಬಡತನ :-

ತಿರುವಳ್ಳುವರ, ಬಡತನದ ಚಿತ್ರವನ್ನು ನೀಡುತ್ತ ಹೀಗೆ ಹೇಳಿದ್ದಾರೆ :

"ದೈವ ಕೃಪೆಯಿಲ್ಲದೆ ದಾರಿದ್ರ್ಯಕ್ಕೊಳಗಾದವನನ್ನು ಹೆತ್ತ ತಾಯಿಯೇ ಪರಕೀಯಳಂತೆ ಕಾಣುವಳು."

"ಒಬ್ಬನು ಬೆಂಕಿಯ ನಡುವೆ ಮಲಗಿ ನಿದ್ರಿಸಬಹುದು; ಆದರೆ ಬಡತನದ ನಡುವೆ ನಿದ್ರಿಸುವುದು ಅಸಾಧ್ಯ."

"ಜಿಪುಣತನವೆಂಬ ರೋಗವಿಲ್ಲದವರನ್ನು ಕಂಡರೆ, ಬಡತನವೆಂಬ ರೋಗವು ಒಂದೇ ಸಲಕ್ಕೆ ನಾಶವಾಗುವದು"

"ಬಡತನವಿದ್ದರೂ, ಭಿಕ್ಷೆ ಬೇಡದಿರುವುದೇ ಒಳ್ಳೆಯದು. ಬೇಯಿಸಿಟ್ಟ ತಿಳಿ ಗಂಜಿಯೇ ಆದರೂ, ಪ್ರಯತ್ನ ಪೂರ್ವಕ ದೊರೆತುದನ್ನು ಊಟ ಮಾಡುವುದಕ್ಕಿಂತ ಹೆಚ್ಚು ಸವಿಯಾದುದು ಬೇರಿಲ್ಲ."

ಕೀಳು ಗುಣ :-

ಏನೇ ಆಗಲಿ, ಮನುಷ್ಯನು ಕೀಳಾಗಿರಬಾರದು. "ಕೀಳಾದ ಜನರು ಇತರರು ಚೆನ್ನಾಗಿ ಉಡುವುದನ್ನೂ, ಉಣ್ಣುವುದನ್ನೂ ಕಂಡಾಗ, ಅವರನ್ನು ಸಹಿಸದೆ, ಅವರಲ್ಲಿ ಇಲ್ಲದ ದೋಷವನ್ನು ಕಾಣಲು ಯತ್ನಿಸುವರು." ಇಂಥ ಜನರು ಯಾವುದಕ್ಕೆ ತಾನೇ ಯೋಗ್ಯರು ? ಎಂದವರ ಪ್ರಶ್ನೆ.

ಹೀಗೆ ಮಹಾತ್ಮ ತಿರುವಳ್ಳುವರರು ಅರಸ, ಅರಸಾಂಗಗಳು, ಪ್ರಜೆಗಳು, ಸಜ್ಜನ-ದುರ್ಜನರು, ಚಾಡಿಖೋರತನ, ಮದ್ಯಸೇವನೆ, ಜೂಜಾಟ, ವೇಶ್ಯಾವೃತ್ತಿ, ದಾರಿದ್ರ್ಯ ಇತ್ಯಾದಿ ಸಮಾಜದ ವಿವಿಧ ಮುಖಗಳನ್ನು ಕುರಿತು ೭೦೦ ಪದ್ಯಗಳ ಮೂಲಕ ವಿಸ್ತಾರವಾಗಿ ವಿವೇಚಿಸಿದ್ದಾರೆ.

ಈಯೆಲ್ಲ ವಿಷಯಗಳನ್ನು ಕುರಿತು ಯೋಗಿ ವೇಮನರು ಇಷ್ಟೊಂದು ವಿಶದವಾಗಿ ತಿಳಿಸಿಲ್ಲವಾದರೂ, ಈ ವಿಚಾರಗಳನ್ನವರು ವಿಮರ್ಶಿಸಿದ್ದಾರೆ. ಕೆಲವು ಕಡೆ ಸಂಕ್ಷೇಪಿಸಿದ್ದಾರೆ. ಕೆಲವು ಕಡೆಗೆ ಹೆಚ್ಚು ವಿವರವಾಗಿ ಬಣ್ಣಿಸಿದ್ದಾರೆ.ಹೋಲಿಕೆಗಾಗಿ ಕೆಲವೇ ಪದ್ಯಗಳನ್ನು ನಾವಿಲ್ಲಿ , ಸ್ಥಳಾಭಾವದಿಂದ, ಉಲ್ಲೇಖಿಸುತ್ತಿದ್ದೇವೆ.

**ರಾಜ :-**

ಕೊಲುವ ರಾಜ ಬಹಳ ಕರುಣೆ ತೋರುತಿರ್ಪ ;
ಹಾಳು ಮಾಡಲೆಂದು ಹಗೆಯ ಮೈತ್ರಿ .
ಕಾಳ ಸರ್ಪ ಅವಿತು ಕುಳಿತ ರೀತಿಯಂತೆ .
ವಿಶ್ವದಾಭಿರಾಮ ಕೇಳು ವೇಮ .

ಅಧಿಕ ರಾಜನೊಬ್ಬ ಅಲ್ಪನ ಕೈ ಹಿಡಿಯೆ ,
ಅವನಿ ಸೈ ಗುಡುವುದು ಅವನ ನುಡಿಗೆ .
ಹರದನೊಪ್ಪಿದೊಡನೆ ಕವಡಿ ನಾಣ್ಯವಹುದು .
ವಿಶ್ವದಾಭಿರಾಮ ಕೇಳು ವೇಮ .

ಎದುರಾಳಿಯ ಬಲವು ಎಷ್ಟು ಎಂದೆಣಿಸದೆ ,
ಎದುರಾಗುವ ಹಠದಿ ಎದುರಾಗಲು ,
ಕರಡಿ ಉರಿಯ ಸುತ್ತಿ, ಕುಣಿದು ಸುಟ್ಟ ರೀತಿ .
ವಿಶ್ವದಾಭಿರಾಮ ಕೇಳು ವೇಮ .

ಕೂರ್ಮ ನೀರೊಳಿದ್ದು ಕರಿಯ ಹಿಡಿಯುತಿಹುದು ;
ನಾಯಿಯದನೆ ಹೊರಗೆ ನೋಯಿಸುವುದು ;
ಸ್ಥಾನ ಬಲವದಷ್ಟೆ ; ಸ್ವಂತ ಬಲವು ಅಲ್ಲ .
ವಿಶ್ವದಾಭಿರಾಮ ಕೇಳು ವೇಮ .

ಪ್ರಭುವು ಕೋತಿ ಎನಿಸೆ, ಹಂದಿ ಆಯ್ತು ಮಂತ್ರಿ .
ಪಕ್ಷಿ ಯೋಧರಂತೆ; ಪಶುವು ಸೇನೆ .
ಚಿಕ್ಕ ಇಲಿಯು ಸೊಕ್ಕಿ ಬೀಗುವಾನೆ ಕುದುರೆ .
ವಿಶ್ವದಾಭಿರಾಮ ಕೇಳು ವೇಮ .

**ಕ್ಷಮೆ :-**

ಕೊಲ್ಲಲರ್ಹನೆನಿಪ ಶತ್ರು ವಶವಾಗಲು ,
ಮುಳ್ಳನಾಡಿಸದಿರು, ಶಿಕ್ಷನೆಂದು .





ಒಳ್ಳೆಯದನೆ ಬಗೆದು ಹೋಗಿಸುವುದೆ ಸಾವು .
ವಿಶ್ವದಾಭಿರಾಮ ಕೇಳು ವೇಮ .

**ಬಡತನ :-**

ಹಣವ , ಲೋಭಿಯಿಂದ ಪಡೆಯಲಾಶಿಸುತ್ತ ,
ಸುತ್ತುತಿರುವ ಬಡವ ಸುಖವರಸುತ ;
ಟಗರಿನ ಹಿಂದೆ ನರಿ ತಗಲಿಕೊಂಡ ರೀತಿ .
ವಿಶ್ವದಾಭಿರಾಮ ಕೇಳು ವೇಮ .

**ದಾನ :-**

ದಾನ ಕೇಳುವವನು ಧರಣಿಯೊಳಧಮನು .
ದಾನ ಕೇಳದವನು ದೈವ ಸಮನು .
ದಾನ ಕೊಡದಿರುವವನು ಧನ್ಯನಲ್ಲ ನೋಡು .
ವಿಶ್ವದಾಭಿರಾಮ ಕೇಳು ವೇಮ .

**ಮೂರ್ಖ :-**

ತಿಳಿದು ತಿಳಿಯದಂತೆ ; ತಿಳಿದವರು ಹೇಳಲು
ಕೇಳ; ಕಡು ಮೂರ್ಖ ಕೊನೆಗೂ ನಿಜವ .
ಮುನಿಯುಸುರಿದ ಧರ್ಮ, ಮೀರಿ ನಿಂತರಲ್ಲ !
ವಿಶ್ವದಾಭಿರಾಮ ಕೇಳು ವೇಮ .

**ಲೋಭಿ :-**

ಇರುವ ಕಾಲ ದಾನವೀಯದಂಥ ಜನರು
ಇದ್ದು ತಿನ್ನದಿಹರು ಇರುವ ತನಕ ;
ಕನಕ ಕಾಣದಂತೆ ಕೆಟ್ಟು ಹೋಹರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಲೋಭಿ ಮನುಜನನ್ನು ಲೋಕದೊಳಗೆ ಕೊಲಲು
ಬೇಡ ವಿಷವು ಉಂಟು ; ಬೇರೆ ಮತವು
ಕೇಳಲೊಡನೆ ಧನವ ,ಕುಸಿದು ಬೀಳುತಿಪ್ಪ.
ವಿಶ್ವದಾಭಿರಾಮ ಕೇಳು ವೇಮ.

**ಸಜ್ಜನ ಶಾಪ :-**

ಖಳರು ಬೈದರೆಂದು ಕಳವಳ ಪಡಬೇಡ .
ಒರಟು ಬೈಗಳಿಂದ ಒಳಿತು ಕೆಡದು .
ಸಜ್ಜನರು ಬೈಯಲು ಶಾಪವುಂಟು ನೋಡು .
ವಿಶ್ವದಾಭಿರಾಮ ಕೇಳು ವೇಮ .

**ವೇಶ್ಯೆ :-**

ವಿಟನ ದೃಷ್ಟಿ ಪಥವು ವಿಭ್ರಮಕರವಷ್ಟೆ !
ಸಾಟಿ ಇರದ ಸುರತಿ ಸರಸದಾಟ .
ನೋಟದೊಳಿಹ ಮಾಟ ನೇರ ಕುಂಟಲಗಿತ್ತಿ .
ವಿಶ್ವದಾಭಿರಾಮ ಕೇಳು ವೇಮ .

**ಸತ್ಸಂಗ :-**

ನೀಚ ಗುಣಗಳೆಲ್ಲ ನಿರ್ಮೂಲವಾಗುವವು ;
ಗೊಡವೆಯೇಕೆ ? ಸುಜನ ಗೋಷ್ಠಿಯಿಂದ .
ಗಂಧ ತೊಡೆಯೆ , ದೇಹ ಕಂಪು ಅಡಗುವಂತೆ .
ವಿಶ್ವದಾಭಿರಾಮ ಕೇಳು ವೇಮ.

**ದುಷ್ಟ ಸಂಗ :-**

ಠಕ್ಕರೊಡನೆ ಸೇರಿ , ಕುಟಿಲ ಚೇಷ್ಟೆ ಗೆಯ್ಯೆ ,
ನಿಜವಾಗಿಯೂ ಘನನು ನೀತಿಗೇಡು ;
ಉಳ್ಳಿ ತೋಟದಲ್ಲಿ ಮಲ್ಲಿಗೆ ಲತೆಯಂತೆ .
ವಿಶ್ವದಾಭಿರಾಮ ಕೇಳು ವೇಮ .

ಹೀಗೆ , ಯೋಗಿ ವೇಮನರು ಜೀವನದ ವಿವಿಧ ರಂಗಗಳಲ್ಲೂ ಅನುಸರಿಸಬೇಕಾದ ನೀತಿಗಳನ್ನು ಹೇಳಿದ್ದಾರೆ. ಅವರ ದೃಷ್ಟಿಯು ಹೆಚ್ಚಾಗಿ, ಸಾಧನಾಭಿಮುಖವಾಗಿದ್ದು, ಮನವನ್ನು ಆ ದಿಶೆಯಲ್ಲಿ ಸೆಳೆಯುತ್ತದೆ. ಈ ಪದ್ಯಗಳ ಕ್ರಮಿಕ ಜೋಡಣೆಯು ಆಗಿರದ ಕಾರಣ, ಅವು ಬೀರಬೇಕಾದ ಪೂರಾ ಪ್ರಭಾವವನ್ನು ಬೀರಿಲ್ಲವೆಂದು ಒಪ್ಪದೆ ಗತಿಯಿಲ್ಲ.

**ಕಾಮ ವಿಭಾಗ :-**

ಕಾಮ ಕುರಿತು ತಿರುಕ್ಕುರುಳ್ ಗ್ರಂಥದಲ್ಲಿ ೨೫೦ ಕುರುಳ್‌ಗಳಿವೆ. ತಮಿಳು ಸಾಹಿತ್ಯದಲ್ಲಿ ಕಾವ್ಯ ಲಕ್ಷಣ ಗ್ರಂಥಗಳಲ್ಲಿ, ಸಂಗ ಕಾಲದಲ್ಲಿ ಕಾವ್ಯಗಳನ್ನು , ಅಗಮ್ ಮತ್ತು ಪುರಮ್ ಎಂದು ವಿಭಜಿಸಲಾಗಿದೆ. ಅಗಮ್ ಪ್ರಣಯ ವಸ್ತು ನಿರೂಪಕ ಕಾವ್ಯ. ಪುರಮ್ ಇನ್ನಿತರ, ವೀರ, ನೀತಿ, ಲೌಕಿಕ ಮತ್ತು ತಾತ್ತ್ವಿಕ ವಸ್ತು ನಿರೂಪಕ ಕಾವ್ಯ. ವ್ಯಕ್ತಿಯ ಅಂತರ್ಯದ ಭಾವಾಭಿವ್ಯಕ್ತಿಯೇ ಆಗಮ್; ಈ ವರ್ಗದ ಕಾವ್ಯಗಳಲ್ಲಿ ವಿವಾಹಪೂರ್ವದ ಪ್ರಣಯ ಜೀವನ ಕುರಿತ ಕಾವ್ಯವು 'ಕಳುವು' ಎನಿಸಿದರೆ, ವಿವಾಹಾನಂತರದ ಕಾವ್ಯವು ' ಕರ್ಪ್ಪು ' ಎನಿಸುತ್ತದೆ. ಕಳುವಿನಲ್ಲಿ ನಾಯಕ ನಾಯಕಿಯರು ಮಿಲನವಾಗುವ ರಹಸ್ಯ ತಾಣ, ಮಿಲನಕ್ಕೆ ಸಹಾಯಕವಾಗುವ ಸಖಿ, ಮಿಲನದ ರಹಸ್ಯ ಕಾಪಾಡುವಿಕೆ, ರಹಸ್ಯ ಬಯಲಾಗುವ ಘಟ್ಟ ತಲುಪಿದಾಗ, ಸಖಿ ಇಲ್ಲವೆ ಸಾಕುತಾಯಿಯರು, ಪ್ರಣಯಿಗಳ ತಾಯಿ ತಂದೆಯರೊಂದಿಗೆ ವಿವಾಹ ಸಂಬಂಧ ಏರ್ಪಡಿಸುವುದು. ಅವರು ಒಪ್ಪದಿದ್ದರೆ, ತಾಡಪತ್ರಿಗಳಿಂದ ಮಾಡಿದ ಕುದುರೆಯೇ, ಪ್ರಣಯವಾರ್ತೆಯನ್ನು ಊರವರಿಗೆ ಮುಟ್ಟಿಸಿ, ವಿವಾಹಕ್ಕೆ ಒತ್ತಾಯಿಸುವ ತಂತ್ರ, ಇತ್ಯಾದಿ ಸೇರುತ್ತವೆ.





ಕರ್ಪ್ಪು ಕಾವ್ಯಗಳ ವಿಷಯವೆಂದರೆ ವಿವಾಹಿತರ ಪ್ರಣಯಕಲಹ, ವೈಮನಸ್ಸು ಇತ್ಯಾದಿ. ' ಕಳುವಿ ' ನ ಪ್ರಣಯ ಕುರಿತು ಕೆಲವು ಕುರುಳ್ ಗಳ ಪದ್ಯಾನುವಾದ ಹೀಗಿದೆ.

ಸುರ ಕನ್ನಿಕೆಯೋ ? ನವಿಲೋ ? ಪುಲು ಜಡೆಯ
ಧರೆ ಸುಂದರಿಯೋ ? ಭ್ರಮಿಸಿದೆ ಮಮ ಹೃದಯ.

ಮದಿಸಿದ ಆನೆಯ ಕಣ್ಪಟದಂತಿಹುದು .
ಮದನಿಕೆ ಮೊಲೆಗಳ ಮುಚ್ಚಿದ ವಸನವದು .

ಜಿಂಕೆಯ ತೆರ ಕುಡಿ ನೋಟವು ಇರುವವಳ-
ಲಂಕರಿಸಬೇಕೆ? ತಂದಾಭರಣಗಳ !

ಸೇವಿಸದರಿಯೆವು ಮದ್ಯವ ; ಕಾಮ ತೆರ ;
ಕೇವಲ ನೋಡಿದೊಡನದು ಮೋದಕರ !

**ಸಂಕೇತ ಪರಿಜ್ಞಾನ :-**

ನೋಡಿ , ದಿನ ನೋಡಿ , ನಾಚುತ ಬಳುಕುವಳು ;
ಕೂಡಿ ಪ್ರೀತಿ ಲತೆಗೆ ಜಲವೆರೆಯುವಳು .

ನಾ ನೋಳ್ಪ ಕಾಲ ನೋಡುತಿರುವಳು ;
ನಾ ನೋಡಿದರೆ ತಾ ನೋಡಿ ನಗುತಿಹಳು .

ಸುಡುತಿದೆ ದೂರಿರೆ, ತಂಪಿದೆ ಬಳಿಯಿರಲು ;
ಪಡೆದಳು ಎಲ್ಲಿಂದೀ ಉರಿ ; ಪ್ರಿಯತಮಳು ?

ಉಸಿರಾಡದಂಥ ಗಾಢ ಅಪ್ಪುಗೆಯು ,
ಬಿಸಿ ಸುಖ ಉಭಯರಿಗೀಯುವ ರತಿ ಕ್ರಿಯೆಯು .

**ಸೌಂದರ್ಯ ಪ್ರಜ್ಞೆ :-**

ಹೂ ಕಂಡೇತಕೆ, ಭ್ರಮಿಸುವೆ ಮುಗ್ಧ ಮನ ?
ಹಲರಿಗಿವಳ ಕಣ್ ನೋಡಿಯೆ ಹೂ ಸ್ಮರಣ .

ತಳಿರೊಡಲು, ಸುಗಂಧಾನಿಲದುಸಿರವಳು ;
ಸುಳಿಪಲ್ಲು ಮುತ್ತು , ಬಿದಿರಿನ ತೋಳವಳು .

**ಪ್ರೇಯಸಿಯ ಭಾವ :-**

ಕಣ್ಣೊಳಿಹ ನಲ್ಲ ; ಆದರಿಂ ಕಾಡಿಗೆಯ
ಕಣ್ಣಿಗೆ ಹಚ್ಚೆನು ; ಮಾಡೆನು ನಾ ಮರೆಯ .

ಹೃದಯದಿಹ ನಲ್ಲ ; ಆದರಿಂ ಬಿಸಿಯುಣಲು ,
ಬೆದರಿಹೆ ಅವನ ಸುಡಬಹುದೆ ? ಎನ್ನಿಸಲು .

ವೈವಾಹಿಕ ಪ್ರೇಮ ಕುರಿತು ಹೀಗೆ ಹಾಡಿದ್ದಾರೆ. " ಬೆಂಕಿಯು ತನ್ನನ್ನು ಮುಟ್ಟಿದಾಗ ಮಾತ್ರ ಸುಡುವುದಲ್ಲದೆ ಕಾಮ ವೇದನೆಯಂತೆ ದೂರವಿದ್ದಾಗಲೂ ಸುಡಬಲ್ಲದೇ ?" ವಿರಹ ದುಃಖ "ಈ ಪ್ರಣಯ ಯಾತನೆಯನ್ನು ನನ್ನಿಂದ ಬಚ್ಚಿಡಲೂ ಸಾಧ್ಯವಾಗುತ್ತಿಲ್ಲ ; ನನಗೆ ಯಾತನೆಯುಂಟು ಮಾಡಿದ ಇನಿಯನಿಗೆಹೇಳಿಕೊಳ್ಳುವೆ ; ಎಂದರೆ ನಾಚಿಗೆ ಅಡ್ಡ ಬರುತ್ತದೆ." "ಕಾಮ ವೇದನೆಯೆಂಬ ಕಡಲು ಮಾತ್ರ ದೊರೆಯುತ್ತದೆ. ಆದರೆ ಅದನ್ನು ದಾಟಿ ಸುರಕ್ಷಿತವಾಗಿ ಕೊಂಡೊಯ್ಯುವ ನಾವೆ ಇಲ್ಲವಾಗಿದೆ. " " ನನ್ನ ನಲ್ಲನು ಬಾರದಿರುವಾಗ ನಿರೀಕ್ಷೆಯಲ್ಲಿ ನಿದ್ರಿಸವು; ಬಂದಾಗಲೂ ಆಗಲುವರೆಂಬ ಭೀತಿಯಲ್ಲಿ ನಿದ್ರಿಸವು. ಇಬ್ಬಗೆಯಲ್ಲೂ ಮಿಗಿಲಾದ ದುಃಖದಿಂದ ನನ್ನ ಕಣ್ಣುಗಳು ತಪ್ತವಾಗಿವೆ "

**ಕನಸು-ನನಸು :-**

" ನನ್ನ ಕಪ್ಪಾದ ಮೀನ್ ಕಣ್ಣುಗಳು ನನ್ನ ಕೋರಿಕೆಯಂತೆ ನಿದ್ರಾವಶವಾದರೆ, ಕನಸಿನಲ್ಲಿ ಸಂಧಿಸುವ ನನ್ನ ಪ್ರಿಯತಮನಿಗೆ ನಾನು ವಿರಹ ವೇದನೆಯಲ್ಲಿ ಪಾರಾಗಿ ಉಳಿದಿರುವ ಸಂಗತಿಯನ್ನು ಸಾರಿ ಹೇಳುವೆನು ." "ನನಸಿನಲ್ಲಿ ಪ್ರಿಯತಮನನ್ನು ಕಾಣುವಾಗ ಉಂಟಾದ ಮಧುರ ಅನುಭವವೇ ಕನಸಿನಲ್ಲಿ ಅವನನ್ನು ಕಾಣುವಾಗಲೂ ನನಗೆ ಸಿಗುತ್ತದೆ ". " ನನಸಿನಲ್ಲಿ ನನ್ನನ್ನು ಅವರು ತೊರೆದು ಹೋದರೆಂದು ಈ ಊರವರು ನಿಂದಿಸಿ ಮಾತನಾಡುವರಲ್ಲ ! ನನ್ನ ಕನಸಿನಲ್ಲಿ ಅವರು ಬಂದು ಹೋಗುವುದನ್ನು ಕಾಣಲಾರರೇ ?

**ಅಂಗ ಕೃಶವಾಗುವಿಕೆ :-**

ಸಖಿ :-

" ಕೈ ಬಳೆಗಳು ಸಡಿಲವಾಗಿ, ಹಿಂದಿನ ಚೆಲುವಳಿದು , ಬಾಡಿದ ನಿನ್ನ ತೋಳುಗಳು, ನಿರ್ದಯನಾದ ನಿನ್ನ ಇನಿಯನ ಹೃದಯ-ಕಾಠಿಣ್ಯವನ್ನು ಸಾರಿ ಹೇಳುತ್ತಿವೆ "

**ಪ್ರಿಯತಮ :-**

" ಬಳೆಗಳು ಸಡಿಲವಾಗುವಷ್ಟು ತೋಳುಗಳು ಕೃಶವಾದುದರಿಂದ ನೀನು ನನ್ನ ಇನಿಯನನ್ನು ನಿರ್ದಯನೆಂದು ಹೇಳುವುದನ್ನು ಕೇಳಿ ನಾನು ದುಃಖ ಪಡುತ್ತಿದ್ದೇನೆ ". " ಓ ಎನ್ನ ಹೃದಯವೇ!





ನಿರ್ದಯನಾದ ಇನಿಯನಿಗೆ ನನ್ನ ಕೃಶವಾದ ತೋಳುಗಳ ಗೋಳನ್ನು ಬರೆದು ಪುಣ್ಯ ಕಟ್ಟಿಕೊಳ್ಳಲಾರೆಯಾ?"

**ಪ್ರಿಯತಮ :-**

" ಅಪ್ಪಿಕೊಂಡ ನನ್ನ ಕೈಗಳನ್ನು ಸಡಿಲಿಸಿದೊಡನೆಯೇ ಚಿನ್ನದ ಬಳೆಗಳನ್ನು ತೊಟ್ಟ

ಕಾಮಿನಿಯ ನೊಸಲು ( ಅಲ್ಪ ವಿರಹವನ್ನು ಸಹಿಸಲಾರದೆ ) ವಿವರ್ಣವಾಯಿತು. "

**ಸಮಾಗಮನದ ಬಯಕೆ :-**

" ಸಖೀ ! ನಾನು ಅವನೊಡನೆ ಕಲಹ ಮಾಡಲು ಹೊರಟೆನಲ್ಲವೆ ? ಆದರೆ ನನ್ನ ಮನಸ್ಸು ಅದನ್ನು ಮರೆತು ಅವನೊಡನೆ ಕೂಡುವುದಕ್ಕೆ ಹಾತೊರೆಯಿತು ." " ಕಾಡಿಗೆ ಬಳಿಯುವಾಗ, ಕಾಡಿಗೆ ಕಡ್ಡಿಯನ್ನು ಕಾಣಲಾರದ ಕಣ್ಣುಗಳಂತೆ, ಪ್ರಿಯತಮನನ್ನು ಕಂಡಾಗಮಾತ್ರ, ಅವನ ದೋಷಗಳನ್ನೆಲ್ಲ ಮರೆತು ಬಿಡುವೆನು ."

**ಪ್ರಿಯತಮನು :-**

" ಪ್ರೇಮವು ಹೂವಿಗಿಂತ ಮೃದು . ಅದನ್ನು ಅರಿತು ಅದರ ಫಲವನ್ನು ಅನುಭವಿಸುವವರು ಕೆಲವರು ಮಾತ್ರವೇ ." " ನನ್ನ ಮನದರಸಿ ತನ್ನ ಕಣ್ನೋಟದಲ್ಲಿ ಮುನಿಸನ್ನು ತೋರುತ್ತಲೇ ಗೊಂದಲಕ್ಕೀಡಾದಳು . ಆದರೂ , ನನಗಿಂತ ಮುಂದಾಗಿ ತಾನೇ ಆಲಿಂಗನಕ್ಕಾಗಿ ಆತುರಪಟ್ಟಳು."

**ಪ್ರಣಯ ಕೋಪ :-**

ಹುಸಿಯಾದ ಪ್ರಣಯ ಕೋಪದ ಪರಿಣಾಮವು ಅಧಿಕ ಸುಖಕ್ಕೆ ಬೀಜವಿದ್ದಂತೆ. ಪ್ರಿಯತಮ ಪ್ರಿಯ-ತಮೆಯರ ಭಾವಗಳನ್ನಿಲ್ಲಿ ನೋಡೋಣ. " **ಅವರಲ್ಲಿ ದೋಷವೊಂದೂ ಇಲ್ಲದಾಗಲೂ, ಅವರೊಂದಿಗೆ ಪ್ರಣಯದ ಮುನಿಸು ತೋರುವುದರಿಂದ ಅವರು ನನ್ನ ಮೇಲೆ ಅಧಿಕ ಪ್ರೀತಿ ತೋರುವಂತೆ ಮಾಡಬಲ್ಲದು .**" ನಾಯಕನ ಭಾವನೆಯು ಇನ್ನೊಂದು ರೀತಿ. "**ಪ್ರಣಯದ ಮುನಿಸು ಪ್ರೇಮಕ್ಕೆ ಸೊಗಸು. ಮುನಿಸು ತೀರಿದ ಮೇಲೆ ಕೂಡಿ ಅಪ್ಪಿಕೊಂಡರೆ, ಆ ಮುನಿಸು ಸೊಗಸಿಗೂ ಮಿಗಿಲು .** ".

ಹೀಗೆ , ಮಹಾತ್ಮ ತಿರುವಳ್ಳುವರ , ಕಾಮ ಕುರಿತು ಒಳ್ಳೇ ಹೃದಯಂಗಮ ಸಾಹಿತ್ಯ ಸೃಷ್ಟಿ ಮಾಡಿದ್ದಾರೆ. ವೇಮನರು ಕಾಮವೃತ್ತಿ, ಲೈಂಗಿಕ ಭೋಗ ಕುರಿತು ಸಾಕಷ್ಟು ಬರೆದಿದ್ದಾರೆ. ಸ್ವಾನುಭವದಿಂದ ಪ್ರಾಮಾಣಿಕವಾಗಿ ಸಾಹಿತ್ಯ ರಚಿಸಿದ್ದಾರೆ. ಆದರೆ, ಅದು ಓರ್ವ ಯೋಗಿಯ ಉಪದೇಶ . ಅಲ್ಪ ಸ್ವಲ್ಪು ಗೃಹಸ್ಥನ ಜೀವನದ ಹಿರಿಮೆಯನ್ನು ಹೊಗಳಿದ್ದರೂ. ಮಾನವ ಮನವನ್ನು ಇಂದ್ರಿಯ ನಿಗ್ರಹದತ್ತ, ಆಧ್ಯಾತ್ಮಿಕ ಅನುಭಾವದತ್ತ ಎಳೆಯುವ ಯತ್ನ ಅಲ್ಲಿ ಬಲವತ್ತರವಾಗಿದೆ. ಅಲ್ಲಲ್ಲಿ ಬಿಚ್ಚಿದೆದೆಯ, ನಗ್ನ ದೇಹದ ಬಣ್ಣನೆಯಿದ್ದರೂ ಸಹ, ಅದೆಲ್ಲ ಕಾಮಾಸಕ್ತಿಯನ್ನು ತೊಲಗಿಸಲೆಂದೇ ಹೊರತು , ಕಾಮವನ್ನು ಹೆಚ್ಚಿಸಲೂ ಅಲ್ಲ ; ಮಾನವ ಮನವನ್ನು ನಿಂತ ನೀರಾಗಿ

ಬಿಡಲೂ ಅಲ್ಲ , ಅವರ ಕೆಲವು ಪದ್ಯಗಳನ್ನು ನೋಡುವಾ :

ಹುಡುಗಿ ಮೊಲೆಗಳೆಲ್ಲ ಹೂವು ದಂಡೆಯೆಂದು ,
ಹೊಗಳುತಿಹರು ಜಗದಿ ಹುಚ್ಚರಾಗಿ ;
ಮಾಂಸ ಖಂಡದೊಳಗೆ ಮತ್ತೆ ಇರುವುದೇನು ?
ವಿಶ್ವದಾಭಿರಾಮ ಕೇಳು ವೇಮ .

ಹರೆಯದಳ ಕಂಡು ಹಲುಬುವ ಕಾಮುಕನು ,
ಬೀಳುವ ಬೆಂಕಿಯಲಿ ಭೂಮಿ ಮೇಲೆ ;
ಮಾಡಿ ನಿತ್ಯ ಪ್ರೀತಿ, ಮೋಹ ಹೆಚ್ಚುತಿಹುದು .
ವಿಶ್ವದಾಭಿರಾಮ ಕೇಳು ವೇಮ .

ಬಾಲ್ಯದಲ್ಲಿ ನೀನು ಬಹಳ ವಿಧದಿ ಹಿಡಿದು
ಸವಿದು , ಚಪ್ಪರಿಸಿದ ಸ್ತನಕಾಗಿ ,
ಮೋಹವಿಷ್ಟು ಏಕೆ ? ಮೂಢಾತ್ಮ ತಿಳಿದುಕೋ .
ವಿಶ್ವದಾಭಿರಾಮ ಕೇಳು ವೇಮ .

ಹೆಣ್ಣಿನ ಹಿರಿ ಸೊಬಗು ಹರೆಯದುಬ್ಬರೆಲ್ಲ
ವಿಭುವಿನ ಕೃಪೆಯಿರದೆ ವ್ಯರ್ಥವಾಯ್ತು .
ನಿನ್ನ ಕರುಣೆ ಇರದೆ , ಮಿನ್ನ ಜಾಣ್ಮೆ ವ್ಯರ್ಥ .
ವಿಶ್ವದಾಭಿರಾಮ ಕೇಳು ವೇಮ .

ಆದರೂ ಸುಖ ಸಂಸಾರದ ಚಿತ್ರವನ್ನು ವೇಮನಯೋಗಿ ನಮ್ಮ ದಿನದಿನದ ಬಾಳಿನ ಸಾಕ್ಷಾತ್ ಚಿತ್ರದಂತೆ ಬಿಡಿಸಿದ್ದಾರೆ.

ಪುಣ್ಯ ಭಾಗ್ಯದಿಂದ ಪುಣ್ಯವತಿಯ ಪಡೆವ ;
ಪುಣ್ಯವತಿಯು ಸೌಖ್ಯ ಪಡೆಯುತಿಹಳು .
ಪಡೆವರಿರ್ವರೊಳ್ಳೆ ಪುತ್ರ ಫಲವ ಮಿನ್ನ .
ವಿಶ್ವದಾಭಿರಾಮ ಕೇಳು ವೇಮ .

ಪತಿಯ ಮೇಲೆ ಭಕ್ತಿ ಹಿಂಗದಿರುವ ಕಾಂತೆ ,
ಮೂರು ಲೋಕದೊಳಗೆ ಮುಕ್ತಿ ಪಾತ್ರೆ .
ಸತಿ ಮಣಿಯರಿಗೆಲ್ಲ ಪತಿಯೆ ದೇವ ದೇವ .
ವಿಶ್ವದಾಭಿರಾಮ ಕೇಳು ವೇಮ .





ಮಾನ ಧನವ ಬಿಡದೆ ಮತ್ತೆ ಪುಣ್ಯವಂತೆ ;
ಪತಿ ಪೂಜಿಪ ವನಿತೆ ಭಕ್ತಿವಂತೆ .
ಒಳಗೊಳಗೆ ಮೆಚ್ಚುವ ಒಳಗುಣವನರಿವನು .
ವಿಶ್ವದಾಭಿರಾಮ ಕೇಳು ವೇಮ .

ಸಿಹಿಯೊಳಗತಿ ಸಿಹಿಯು , ಸಲೆಯರಿಯೆ ಪ್ರಾಣ .
ಪ್ರಾಣಕಿಂತ ಬಹಳ ಹಣವು ಸಿಹಿಯು .
ಹಣದಕಿಂತ ಮಿಗಿಲು ತರುಣಿ ಮಾತಿನ ಸಿಹಿ .
ವಿಶ್ವದಾಭಿರಾಮ ಕೇಳು ವೇಮ .

ಪರಸ್ತ್ರೀ ಗಮನವನ್ನು ವೇಮನರು ಬಲವಾಗಿ ಖಂಡಿಸಿದ್ದಾರೆ.

ತನ್ನ ಹೆತ್ತು ಹೊತ್ತ ತಾಯಿಯಂತೆ ಕಾಣು ;
ಅನ್ಯರ ಸತಿಯು , ನ್ಯಾಯ ಅರಿತು ನೋಡಿ .
ತನ್ನ ತಾಯಿಯಂತೆ ತಿಳಿಯಬೇಕೋ ನರನು ?
ವಿಶ್ವದಾಭಿರಾಮ ಕೇಳು ವೇಮ .

ಆದರೂ , ಕುಟುಂಬ ಜೀವನದಲ್ಲಿ ಗಂಡನಾದವನು ತನ್ನ ಹೊಣೆಯರಿತುಕೊಂಡು ತಾನು ಪತ್ನೀವ್ರತಸ್ಥನಾಗಿ, ತನ್ನ ಪತ್ನಿಯೂ ಜಾರದಂತೆ, ಮುಂಚಿನಿಂದ ನೋಡಿಕೊಳ್ಳಬೇಕೆಂಬ ವ್ಯವಹಾರಿಕ ಎಚ್ಚರಿಕೆ ನೀಡುತ್ತಾರೆ.

ಮಡದಿಯನು ಮಣಿಸದೆ , ಮೊದಲು ಅಧಮನಾಗಿ ,
ಮೀರೆ , ಹಣಿವೆನೆನಲು ಮಂಕುತನವು .
ಮರವಾಗಿ ಬೆಳೆದುದು , ಮತ್ತಳಿವುದೆ ಚಿವುಟಲು?
ವಿಶ್ವದಾಭಿರಾಮ ಕೇಳು ವೇಮ .

**ಮೋಕ್ಷ :-**

ನಾಲ್ಕು ಪುರುಷಾರ್ಥಗಳಲ್ಲಿ ಮೋಕ್ಷ ಕುರಿತು ತಿರುವಳ್ಳುವರ್ ಮೌನವಾಗಿದ್ದಾರೆ. ಅದು ಮತ ಭೇದದ ವಿಷಯ. ಮೇಲಾಗಿ, ಅದನ್ನು ವೈಯಕ್ತಿಕ ಸಾಧನೆಯ ಮೂಲಕ, ಗುರೂಪದೇಶಾನುಸಾರ ಮಾಡಬೇಕು. ಆದ್ದರಿಂದ ಸರ್ವ ಮತಗಳವರಿಗೂ, ಅನ್ವಯಿಸುವ ತಮ್ಮ ತಿರುಕ್ಕುರುಳ್ಳಿನಲ್ಲಿ ಆ ವಿಷಯ ಕುರಿತು ಹೆಚ್ಚಿನ ಚರ್ಚೆಗಿಳಿದಿಲ್ಲವಾದರೂ, ದೇವರನ್ನು ಬಣ್ಣಿಸುವಾಗ, ಧರ್ಮವನ್ನು ತಿಳಿಸುವಾಗ , ಇಂದ್ರಿಯ ನಿಗ್ರಹ, ಸತ್ಸಂಗಾದಿ ಪ್ರಾರಂಭಿಕ ಸಾಧನಗಳನ್ನು ಕುರಿತು ಸೂಕ್ತವಾಗಿ ಹೇಳಿದ್ದಾರೆ . ದೇವರನ್ನು ನಾಮ ರೂಪಗಳಾಚೆಯೆ ಊರ್ಧ್ವದಲ್ಲಿ ಇರಿಸಿದ್ದಾರೆ.

**ಸಾಮ್ಯ :-**

ತಿರುವಳ್ಳುವರ , ಭಾರತದಲ್ಲಿ ಬೌದ್ಧ ಧರ್ಮವು ಸರ್ವತ್ರ ವ್ಯಾಪಿಸಿದ ಕಾಲದಲ್ಲಿ ಬಾಳಿದವರಾದರೂ, ಅವರ ಗ್ರಂಥದಲ್ಲಿ ಯಾವುದೇ ದರ್ಶನದ ಸೊಡರು ಇಲ್ಲ. ಜೈನರು ಈ ಗ್ರಂಥವನ್ನು ತಮ್ಮ ಏಲಾಚಾರ್ಯನೇ ರಚಿಸಿದ್ದಾನೆಂದು ಹೆಮ್ಮೆ ಪಟ್ಟುಕೊಳ್ಳುವಷ್ಟು ಗ್ರಂಥವು ಮತಾತೀತವಾಗಿದೆ. ಪ್ರಚಲಿತ ದೇವರ ಯಾವ ಹೆಸರನ್ನೂ ಬಳಸದೆ, ಆದಿ ಭಗವನ್ ಎಂದು ಮಾತ್ರ ಸ್ತುತಿಸಿದ ಕವಿ , ತನ್ನ ವೈಶಿಷ್ಟ್ಯವನ್ನು ಬೆಳಗಿದ್ದಾನೆ. ಇತ್ತ ವೇಮನರು ಯಾವುದೇ ಮತಕ್ಕೆ ಅಂಟದಿದ್ದರೂ, ತತ್ತ್ವಾರ್ಥದಲ್ಲಿಯಾದರೂ ಶಿವ ಶಬ್ದ ಬಳಸಿದ್ದಾರೆ. ಹರಿ , ಹರ , ಬ್ರಹ್ಮಗಳನ್ನು ರಜಃ, ಸತ್ತ್ವ ,ಮತ್ತು ತಮೋ ಗುಣಗಳ ಪ್ರತಿನಿಧಿಗಳಾಗಿಯೂ ಗ್ರಹಿಸಿದ್ದಾರೆ. ಹೀಗಾಗಿ, ವೇಮನರ ಮತವನ್ನು ದೇವತಾ ಹಾಗೂ ದರ್ಶನ ಮತ್ತು ಸಾಧನ ಪದ್ಧತಿಗೆ ಅಂಕಿತಗೊಳಿಸಬಹುದಾಗಿದೆ. ತಿರುವಳ್ಳುವರರ ಸಾಕು ತಾಯಿ ತಂದೆಯಂದಿರು ಕೃಷಿಕರು. ವೇಮನರ ತಾಯಿ, ತಂದೆ ಕೃಷಿ ಮೂಲದವರಾದರೂ, ರಾಜವಂಶದವರು . ತಿರುವಳ್ಳುವರ ಸಂಸಾರ ನಡೆಸಿ, ಗೃಹಸ್ಥ ಧರ್ಮದ ಹಿರಿಮೆ ಮೆರೆದವರು. ಯೋಗಿ ವೇಮನರು ಸಾಂಸಾರಿಕ ಬಾಳನ್ನು ಕಂಡು, ತಮ್ಮ ಭಾಗ್ಯಾನುಸಾರ ಬೇಗ ವಿರಕ್ತ ಜೀವನ ನಡೆಸಿದರು. ಆದರೆ ಪ್ರಪಂಚ ತೊರೆದು ಅಡವಿ ಸೇರಲಿಲ್ಲ.

ಧರ್ಮ ವಿಭಾಗದ ಕುರುಳ್‌ಗಳಲ್ಲಿ ಬರುವ ಎಲ್ಲ ವಿಚಾರಗಳೊಂದಿಗೆ ಯೋಗಿ ವೇಮನರ ವಿಚಾರಗಳು ಸಮ್ಮಿಳಿತವಾಗುತ್ತವೆ. ಅರ್ಥ ವಿಭಾಗದ ವಿಚಾರಗಳು ತಿರುಕ್ಕುರುಳ್ಳಿನಲ್ಲಿ ಸುಸಂಬದ್ಧವಾಗಿ ಜೋಡಣೆಯಾಗಿವೆ; ವಿಷಯಗಳೆಲ್ಲ ಅಡಕವಾಗಿದ್ದರೂ, ಸುಸಂಬಂದ್ಧ ಜೋಡಣೆಯ ಅಭಾವವು ವೇಮನರಲ್ಲಿ ಎದ್ದು ಕಾಣುತ್ತದೆ. ಅವರ ಪದ್ಯಭಾಗದಲ್ಲಿ ಬಹ್ವಂಶ ಲೋಪವಾಗಿರುವುದರಿಂದ ವಿಷಯ ವಿಸ್ತಾರವು ತಗ್ಗಿದೆ.

ತಿರುವಳ್ಳುವರ ಪ್ರಪಂಚಾಸಕ್ತಿಯುಳ್ಳವರು. ಹಾಗೆಂದು, ವಿಷಯಾಸಕ್ತರೇನಲ್ಲ. ಮನಸ್ಸಿನ ಸೂಕ್ಷ್ಮ ತಿರುವುಗಳನ್ನು ಅರಿತು, ಅದನ್ನು ಸಾಧುಗೊಳಿಸುವ ಕುಶಲ ಕಲೆಯಲ್ಲಿ ಸಿದ್ಧಹಸ್ತರು. ವೇಮನರಾದರೋ, ಮನಸ್ಸಿಗೆ ಆದೇಶಿಸುವ, ಛಾಟಿಯೇಟಿನ ಕುದುರೆ ಸವಾರರು. ತಿರುವಳ್ಳುವರರ ಲೋಕಾಭಿರಾಮತೆಯು ವೇಮನರ ವಿಶ್ವದಾಭಿರಾಮತೆಗೆ ಅನುಗುಣವಾಗಿಯೇ ಇದೆ. ಆದರೆ ತನ್ನ ಹದ್ದು ಮುಟ್ಟುವ ವರೆಗೆ.

**ವೈಷಮ್ಯ :-**

ಒಂದೇ ಬೆಟ್ಟದ ಮೇಲೆ , ಆಕಾಶದಿಂದ ಸುರಿದ ಪರ್ಜನ್ಯ ಜಲವು ವಿರುದ್ಧ ದಿಕ್ಕುಗಳಲ್ಲಿ ಹರಿದು, ಒಂದು ಬೇಗನೇ ಪಶ್ಚಿಮದತ್ತ ಹರಿದು ಅರಬ್ಬೀ ಸಾಗರ ಸೇರಿದರೆ, ಇನ್ನೊಂದು ಪೂರ್ವಕ್ಕೆ ಹರಿದು, ಬಯಲು ಪ್ರದೇಶ ತೊಯ್ಸಿ, ಪೂರ್ವದ ಬಂಗಾಲ ಆಖಾತ ಸೇರಿದಂತೆ, ವೇಮನರ ಹಾಗೂ ತಿರುವಳ್ಳುವರ್‌ರ ಪಾತ್ರ, ಮೂಲಕ ಹರಿದ ಪ್ರತಿಭೆಗಳಿವೆ. ಘಟ್ಟದಿಂದ ನೇರ ಅರಬ್ಬೀ ಸಮುದ್ರ ಸೇರುವ ಪ್ರವಾಹಕ್ಕಿರುವ ರಭಸ ಹೆಚ್ಚು. ಅವಧಿ ಕಡಿಮೆ . ಪ್ರಯೋಜನವು ಆಯ್ದ ಕೆಲವರಿಗೆ . ಅದೇ ಪೂರ್ವಾಭಿಮುಖವಾಗಿ ಹರಿಯುವ ನದಿ ಪ್ರಶಾಂತ. ಬಹು ಜನೋಪಯೋಗಿ, ಹಾಗೂ ದೀರ್ಘ ಕಾಲೀನ ಪಯಣ. ತಿರುವಳ್ಳುವರರ ಕಾವ್ಯವು ವಿಸ್ತಾರದಲ್ಲಿ , ಗಾಂಭೀರ್ಯದಲ್ಲಿ ಹಾಗೂ, ಪ್ರಾಪಂಚಿಕ ರಸಾನುಭವದಲ್ಲಿ ಹೆಚ್ಚಳ ಹೊಂದಿದೆ ಎಂಬಲ್ಲಿ ಎರಡು ಮಾತಿಲ್ಲ. ಅವುಗಳ





ದಿಕ್ಕು ಬೇರೆ ಬೇರೆಯಾದರೂ, ಉಗಮವು ಒಂದೇ ; ಗುರಿಯೂ ಒಂದೇ . ಎರಡೂ ಅದೇ ಜಲಸಾಗರ ಸೇರುತ್ತವೆ . ವೇಮನರದು ಉತ್ಸಾಹದ ವಿರಕ್ತಿ ; ತಿರುವಳ್ಳುವರರದು ಪ್ರಶಾಂತ ರಸಾನುಭೂತಿ. ಮಾತು ಮಾತಿಗೂ ಮುಕ್ತಿ , ಮೋಕ್ಷಗಳನ್ನು ಸ್ಮರಿಸಿ ವೇಮನ ಯೋಗಿ ಉಚ್ಚರಿಸಿದರೆ, ತಿರುವಳ್ಳುವರ ಅದೆಲ್ಲವನ್ನು, ಬೀದಿಯಲ್ಲಿ ಘೋಷಾ ಹಾಕಿ, ಶಯನಾಗಾರದಲ್ಲಿ ಲಾವಣ್ಯವತಿ ವಸನ ಬಿಚ್ಚಿದ ರೀತಿ, ತಿರುವಳ್ಳುವರ ಮುಚ್ಚಿರಿಸಿಕೊಂಡಿದ್ದಾರೆ . ಯೋಗಿ ವೇಮನರು ಅನುಭಾವ ಸ್ಫುರಿತ ಆಶು ಕವಿಯಾದರೆ, ತಿರುವಳ್ಳುವರ ಸರಸ ಭಾವಾಭಿವ್ಯಕ್ತಿಯ ಅಭ್ಯಾಸಪೂರ್ಣ ಬರೆಹಗಾರರಾಗಿದ್ದಾರೆ. ಅವರು ತಮ್ಮ ಭಾವಾಭಿವ್ಯಕ್ತಿಯನ್ನು , ಸಹನೆ, ತಾಳ್ಮೆಗಳಿಂದ ವಿವೇಚಿಸಿ, ತರ್ಕ ಬದ್ಧಗೊಳಿಸಿ, ಬರೆಹ ರೂಪಕ್ಕಿಳಿಸುತ್ತಾರೆ. ವೇಮನರು ಜಾತೀಯ ಮೇಲು ಕೀಳಿನ ಬಗ್ಗೆ, ಧಾರ್ಮಿಕ ಶೋಷಣೆಯ ಬಗ್ಗೆ, ಸುಧಾರಣೆಯ, ಕ್ರಾಂತಿಯ ಕೂಗೆಬ್ಬಿಸಿದರೆ, ತಿರುವಳ್ಳುವರ್ ಗಂಭೀರ, ಮಾರ್ಮಿಕ ಸೂಳ್ನುಡಿಗಳ ಮೂಲಕ ಜನರ ಹೃದಯ ತಟ್ಟುತ್ತಾರೆ.

ವೇಮನ ಸಾಹಿತ್ಯದ ಸಾರವೆಲ್ಲ ಆಧ್ಯಾತ್ಮಿಕ ದರ್ಶನ, ಸಾಧನ, ಸಿದ್ಧಿಗಳ ಕುರಿತು ಮೀಸಲಿದ್ದರೆ , ತಿರುವಳ್ಳುವರ ಈ ಕ್ಷೇತ್ರದಲ್ಲಿ ಕೈ ಹಾಕದೆ ಉಳಿದು , ಸಾಮ್ಯ ವೈಷಮ್ಯಗಳ ಸೂಕ್ಷ್ಮ ಅಳವಿನಲ್ಲಿ ಬಾರದೆ ಉಳದಿದ್ದಾರೆ.

# ಮಹಾತ್ಮ ಕಬೀರ

-ಎಸ್. ಆರ್. ಪಾಟೀಲ.

ಭಾರತೀಯ ಆಧ್ಯಾತ್ಮಿಕ ಕಾಸಾರದಲ್ಲಿ ಜಾತಿ ಮತಗಳ ಕೆಸರು ತಾಕದೆ ಅರಳಿದ ಶ್ವೇತ ಕಮಲವೇ ಮಹಾತ್ಮ ಕಬೀರ. ತಾನು ಬೆಳೆದ ಪರಿಸರದಿಂದ, ಜನಗಣದ ಸಂಸ್ಕೃತಿಯಿಂದ ಬಂದ ಆಚಾರ ವಿಚಾರಗಳನ್ನು ಸಂಸ್ಕರಿಸಿ ಹಾಡುವ ಕವಿಯೇ ಬೇರೆ. ಆದರೆ, ಒಳದನಿಗೆ ಅನುವು ನೀಡಿ, ಪರಾ ವಾಕ್ಕನ್ನು ವೈಖರಿಗೊಳಿಸುವ ದಾರ್ಶನಿಕ ಕವಿಯೇ ಬೇರೆ. ಈ ಒಳದನಿಯು ಕಾಲದ ಕಟ್ಟಿಗೆ ಒಳಗಾಗಿಲ್ಲ. ಅದು ಹಿಂದೂ ಇತ್ತು ; ಇಂದೂ ಇರುತ್ತದೆ ; ಮುಂದೂ ಇರಬಲ್ಲದು. ಅದು ಸನಾತನ ಸತ್ಯವಾಗಿದೆ. ಪುಣ್ಯ ಕ್ಷೇತ್ರ ಕಾಶಿಯ ನೆಲದಲ್ಲಿ ಪೋಷಣೆ ಪಡೆದು, ಇಂಚರ ನುಡಿವ ಈ ಕಬೀರ-ಕೋಗಿಲೆ, ಭಾರತದ ಭಕ್ತ ಕೋಟಿಯ ನಾಲಗೆಯ ಮೇಲೆ ಇಂದಿಗೂ ಕುಣಿಯುತ್ತ ಜೀವಂತವಾಗಿದೆ.

**ಜನನ-ದೇಶ-ಕಾಲ :-**

ಭಾರತೀಯ ದರ್ಶನಗಳಲ್ಲಿ ಪುನರ್ಜನ್ಮದ ಕಲ್ಪನೆಯು ಗ್ರಾಹ್ಯವಾಗಿದೆ. ಶ್ರೀ ಕೃಷ್ಣ, ಬುದ್ಧ ಭಗವಾನರು ತಮ್ಮ ಮರುಜನ್ಮ ಕುರಿತು ಹೇಳಿದ್ದಾರೆ. ಅರ್ಜುನನಿಗೆ ಇದನ್ನು ಭಗವದ್ಗೀತೆಯಲ್ಲಿ ತಿಳಿಸಿದ ಶ್ರೀಕೃಷ್ಣನು, ' ನಾನು ಹಿಂದೆಯೂ ಇದ್ದೆ, ನನ್ನ ಜನ್ಮಗಳನ್ನು ನಾನು ತಿಳಿದಿದ್ದೇನೆ. ನೀನು ತಿಳಿದಿಲ್ಲ ; ಅಷ್ಟೇ " ಎಂದು ಹೇಳಿದ್ದಾನೆ. ಹದಿಮೂರನೆಯ ಶತಮಾನದಲ್ಲಿ ಬಾಳಿದ, ಆಚಾರ್ಯತ್ರಯರಲ್ಲಿ ಕೊನೆಯವನಾದ, ಮಧ್ವಾಚಾರ್ಯನು ತಾನು ತ್ರೇತಾಯುಗದಲ್ಲಿ ಹನುಮನಾಗಿಯೂ, ದ್ವಾಪರದಲ್ಲಿ ಭೀಮನಾಗಿಯೂ ಮತ್ತು ಕಲಿಯುಗದಲ್ಲಿ ಮಧ್ವನಾಗಿಯೂ ಜನ್ಮ ತಾಳಿದ್ದೇನೆ, ಎಂದು ತಿಳಿಸಿದ್ದಾನೆ. ವೀರಶೈವ ಮತದಲ್ಲಿ ಕ್ರಾಂತಿಕಾರಕ ಸುಧಾರಣೆ ಮಾಡಿದ ಜಾತ-ಬ್ರಾಹ್ಮಣ ಬಸವಣ್ಣ, ತನ್ನ ಪೂರ್ವದ ಏಳು ಜನ್ಮಗಳನ್ನು ಸ್ಮರಿಸಿದ್ದಾನೆ. ಕನ್ನಡದ ಕವಿ ಸರ್ವಜ್ಞ ತಾನು ಮಧ್ವಾಚಾರ್ಯನ ರೀತಿ, ಪುಷ್ಪದತ್ತ , ವರರುಚಿ ಎಂಬ ಜನ್ಮಗಳನ್ನು ಮೊದಲು ತಾಳಿ ಕೊನೆಗೆ ಚಂದ್ರಶೇಖರನ ಕೃಪೆಯಿಂದ ಸರ್ವಜ್ಞನಾಗಿ ಜನ್ಮ ತಾಳಿದೆನೆಂದು ತಿಳಿಸಿದ್ದಾನೆ. ತೀರ ಇತ್ತೀಚಿನವರಾದ ಆನಂದ ಮಾರ್ಗದ ಮಾರ್ಗಗುರು ಪ್ರಭಾತ ರಂಜನ ಸರಕಾರರು, ತಾವು ಕಾಶಿಯಲ್ಲಿ ರಾಮಚಂದ್ರ ಉಪಾಧ್ಯಾಯನೆಂಬ ವೈದಿಕ ಬ್ರಾಹ್ಮಣನಾಗಿ, ನಂತರ ಪಂಜಾಬದಲ್ಲಿ ಓರ್ವ ಮುಸ್ಲಿಂ ಫಕೀರನಾಗಿ, ಕೊನೆಗೆ ಪ್ರಭಾತ ರಂಜನ ಸರಕಾರರಾಗಿ ಜನ್ಮ ತಾಳಿದ ಬಗೆಗೆ ಹೇಳಿದ್ದಾರೆ. ಬಹಳಷ್ಟು ಜನರಿಗೆ ಎಳೆ ಪ್ರಾಯದಲ್ಲಿ ಪೂರ್ವ ಜನ್ಮದ ಸ್ಮರಣೆ ಇರುವುದುಂಟು, ಇವರಿಗೆ ' ಜಾತಸ್ಮರ ' ರೆನ್ನುತ್ತಾರೆ. ಮಹಾತ್ಮ ಕಬೀರರೂ ಇಂಥ ಓರ್ವ ಜಾತಸ್ಮರರು. ' ಗ್ರಂಥ ಭವತಾರಣ' ದಲ್ಲಿ ಕಬೀರರು ಹೀಗೆ ನುಡಿದಿದ್ದಾರೆ. ' ಯುಗ ಯುಗಗಳಲ್ಲಿ ನಾನು ಅವತಾರ ಮಾಡಿದ್ದೇನೆ. ಪ್ರಕಟ ರೂಪದೊಂದಿಗೆ ಜಗತ್ತಿನಲ್ಲಿ ನಾನು ನಿರಂತರವೂ ವರ್ತಮಾನನಾಗಿರುತ್ತೇನೆ. ಸತ್ಯಯುಗದಲ್ಲಿ ನನ್ನ ಹೆಸರು ಸತ್ ಸುಕೃತನೆಂದಿತ್ತು. ತ್ರೇತಾ ಯುಗದಲ್ಲಿ ಮುನೀಂದ್ರ; ದ್ವಾಪರದಲ್ಲಿ ಕುರುರಾಮ ಹಾಗೂ ಕಲಿಯುಗದಲ್ಲಿ 'ಕಬೀರ' ನಾಗಿದ್ದೇನೆ. ಹೀಗೆ, ನಾಲ್ಕು ಯುಗಗಳಲ್ಲಿ ನಾಲ್ಕು ಹೆಸರುಗಳಿವೆ ; ಈ ಯುಗದಲ್ಲಿ ನಾನು ಮಾಯಾರಹಿತನಾಗಿ ನಿವಾಸವಾಗುತ್ತೇನೆ. "

ವೇಮನ ಯೋಗಿ ತಮ್ಮ ಪೂರ್ವ ಜನ್ಮ ಕುರಿತು ಏನನ್ನೂ ಹೇಳಿಲ್ಲ. ಆದರೆ, ಜ್ಞಾನಿಗಳ





ಇರವಿನ ಬಗ್ಗೆ ಅಷ್ಟೇ ತಿಳಿಸಿದ್ದಾರೆ.

**ಉಂಟು ಉಂಟು ಜ್ಞಾನಿ ಯುಗಯುಗಾದಿ ಕಳೆಯೆ ,**
**ಪ್ರಾಣ ಹಾನಿಯಿಲ್ಲ ಪ್ರಳಯವಿರಲು ;**
**ಪ್ರಳಯವಿರಲು ಮತ್ತೆ ಪರಮಾತ್ಮನ ಸೇರುವ .**
**ವಿಶ್ವದಾಭಿರಾಮ ಕೇಳು ವೇಮ .**

ಕಬೀರರನ್ನು ಕುರಿತು ಬರೆದ ಹಲವು ಗ್ರಂಥಗಳಲ್ಲಿ ಕಬೀರರ ಜನ್ಮ ದಿನಾಂಕವನ್ನು ಕಾಣಿಸಿದ್ದರೂ, ಅಲ್ಪ ಮತಭೇದವಿದೆ. ಕೆಲವರು ಆ ದಿನವನ್ನು ವಿಕ್ರಮ ಸಂವತ್ಸರ ೧೪೫೫ ( ಕ್ರಿ.ಶ. ೧೩೯೮ ) ಜೇಷ್ಠ ಶುಕ್ಲ ಪೌರ್ಣಿಮೆಯೆಂದೂ , ಬೇರೆ ಕೆಲವರು, ಕಾಲಗಣನೆಯ ತಾಂತ್ರಿಕ ಕಾರಣಗಳಿಂದಾಗಿ, ಜನನ ಮುಹೂರ್ತವನ್ನು ಕ್ರಿ. ಶ. ೧೩೯೯ ರ ಜೇಷ್ಠ ಮಾಸದ ಶುಕ್ಲ ಪಕ್ಷದ ಪೌರ್ಣಿಮೆ ಎನ್ನುತ್ತಾರೆ. ಈ ಮೇರೆಗೆ ಮಹಾತ್ಮ ಕಬೀರರು ವೇಮನ ಯೋಗಿಗಿಂತ ಹದಿಮೂರು ವರ್ಷ ಮುನ್ನವೇ ಜನಿಸಿದ್ದಾರೆ.

ಮಹಾತ್ಮ ಕಬೀರರು ಜನ್ಮ ತಾಳುವ ಮುನ್ನ , ಮೊಹಮ್ಮದ ಪೈಗಂಬರರ ಮತವನ್ನು ಸ್ವೀಕರಿಸಿದ ಅರಬರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದು ಹೋಗುತ್ತಿದ್ದರು. ಮಳೆಗಾಲದಲ್ಲಿ ಇಲ್ಲಿಯೇ ತಂಗುತ್ತಿದ್ದರು. ಮುಂದೆ ೮ ನೇ ಶತಮಾನದಲ್ಲಿ ಮೋಹಮ್ಮದ ಬಿನ್ ಕಾಸಿಮನು ಭಾರತದ ಮೇಲೆ ದಾಳಿ ಮಾಡಿದನು. ಅನಂತರ, ಕ್ರಿ. ಶ ೧೦೦೦ ಇಸ್ವಿಯಲ್ಲಿ ಗಝನಿಯ ಮಹಮ್ಮದನು ಭಾರಿ ಆಕ್ರಮಣ ಮಾಡಿ, ಪ್ರಸಿದ್ಧ ಸೋಮನಾಥ ದೇವಾಲಯವನ್ನು ನಾಶ ಪಡಿಸಿ, ಬಹು ಸಂಖ್ಯೆ ದೇವಾಲಯಗಳಲ್ಲಿಯ ಮೂರ್ತಿಗಳನ್ನು ಭಂಗಗೊಳಿಸಿದನು ; ಪೂಜಾರಿಗಳನ್ನು ಕೊಂದು ಹಾಕಿದನು. ಇವನೊಬ್ಬ ಕ್ರೂರ ಅಫಘಾಣ ದೊರೆ. ಇದೇ ರೀತಿ, ಮಂಗೋಲರೂ ದಾಳಿಯಿಟ್ಟು, ಬೌದ್ಧ, ಜೈನ ಮತ್ತು ಹಿಂದು ಮಂದಿರಗಳನ್ನು ಉತ್ತರ ಭಾರತದಲ್ಲಿ ಹಾಳು ಮಾಡಿದರು. ಅನೇಕ ಹಿಂದುಗಳನ್ನು ಇಸ್ಲಾಮಿಗೆ ಮತಾಂತರಿಸಿದರು. ಮಹಾತ್ಮ ಕಬೀರರ ಜೀವನ ಕಾಲದಲ್ಲಿ ದಿಲ್ಲಿಯ ಗದ್ದುಗೆಯನ್ನು ಅಲಂಕರಿಸಿದ ಲೋದಿ ವಂಶದ ಬಹ್ಲೋಲ ಲೋದಿ, ಸಿಕಂದರ ಲೋದಿ ಮತ್ತು ಇಬ್ರಾಹಿಮ ಲೋದಿ ಇವರು ಕ್ರಮವಾಗಿ ಆಳಿದರು. ಆಗಿನ್ನೂ ಮೊಗಲ ವಂಶದ ಆಳ್ವಿಕೆ ಪ್ರಾರಂಭಿಸಿರಲಿಲ್ಲ.

ವೈದಿಕ ಬ್ರಾಹ್ಮಣರು ಮೊದಲಿನಿಂದಲೂ ಕೀಳಾಗಿ ಕಾಣುತ್ತಿದ್ದ ಜನರಲ್ಲಿ , 'ಜುಲಾಹ' ಜನಂಗವೂ ಒಂದಾಗಿತ್ತು. ಇವರು ಮೂಲತಃ ಬೌದ್ಧರು. ಮುಂದೆ ನಾಥ ಪಂಥೀಯ ಹಠಯೋಗ ಅಭ್ಯಾಸ ಮೂಲಕ ಸಿದ್ಧಿ ಪಡೆದ ಸಿದ್ಧರ ಮಾರ್ಗಾನುಯಾಯಿಗಳಾಗಿದ್ದರು. ಮುಸ್ಲಿಂ ಆಳ್ವಿಕೆಯ ಕಾಲದಲ್ಲಿ ಕಬೀರರ ಸಾಕು ಅಜ್ಜನ ಕಾಲದಲ್ಲಿ ಆ ಕುಟುಂಬವು ಇಸ್ಲಾಂ ಮತವನ್ನು ಅಂಗೀಕರಿಸಿದ್ದತ್ತು. ಆದರೂ ಇವರ ಸಾಕು ತಂದೆ ಇನ್ನೂ, ಮನೆತನದ ಪೂರ್ವದ ಧಾರ್ಮಿಕ ಸಂಸ್ಕೃತಿ ಮತ್ತು ಸಾಧನ ಕ್ರಮವನ್ನು ಬಿಟ್ಟುಕೊಟ್ಟಿರಲಿಲ್ಲ. ಸಾಕು ತಾಯಿ ಮಾತ್ರ ಪೂರ್ಣ ಇಸ್ಲಾಮೀ ಸಂಸ್ಕೃತಿಯನ್ನು ಅಳವಡಿಸಿಕೊಂಡಿದ್ದಳು. ಇಂಥ ಧರ್ಮಾಂತರಿಗಳನ್ನು ' ಕೋರೀ ' ಎಂದು ಕರೆಯುತ್ತಾರೆ. ಕಬೀರರು ತಮ್ಮನ್ನು ' ಕಹೈ ಕಬೀರ ಕೋರೀ ' ಎಂದೇ ಪರಿಚಯಿಸಿಕೊಂಡಿದ್ದಾರೆ. ಕಬೀರರ ಸಾಕು ತಂದೆಯ ಹೆಸರು ' ನೀರೂ ' ಮತ್ತು ಸಾಕು ತಾಯಿಯ ಹೆಸರು ' ನೀಮಾ '. ಆದರೆ ಇವರ ಸಾಕು ತಾಯಿ-ತಂದೆಯಂದಿರು, ಕರ್ಣನಿಗೆ ಅಧಿರಥ , ರಾಧಾ ಇದ್ದಂತೆ . ಕಬೀರರ ನಿಜವಾದ ತಾಯಿ ತಂದೆ

ಯಾರು? ಗೊತ್ತಿಲ್ಲವೆನ್ನುತ್ತಾರೆ, ಸಂಶೋಧಕರು. ಯಾವಳೋ ವಿಧವೆಗೆ ಹುಟ್ಟಿದ ಕೂಸನ್ನು, ಜನಾಪವಾದಕ್ಕೆ ಹೆದರಿ, ಆ ಹೆಣ್ಣುಮಗಳು ಕುಂತಿಯಂತೆ, ತೊರೆದು ಬಿಟ್ಟಿದ್ದರಿಂದ, ' ನೀರೂ ' ಮತ್ತು 'ನೀಮಾ' ಸಾಕಿದರು, ಎಂದು ಪ್ರಚಲಿತ ಕತೆಯಿದೆ. ತಂದೆ ಯಾರೋ ಗೊತ್ತಿಲ್ಲದೆ ಬೆಳೆದ ಯೇಸೂ ಸ್ವಾಮಿ, ಮತ್ತು ಶಿವಶರಣ ಚೆನ್ನಬಸವಣ್ಣನಂತೆ, ತಾಯಿ-ತಂದೆ ಯಾರೆಂಬುದನ್ನು ಅರಿಯದ ಗರಗದ ಮಡಿವಾಳ ಸ್ವಾಮಿಗಳಂತೆ, ಕಬೀರರ ಜನ್ಮವನ್ನು ತಿಳಿಸಿ, ಅವರ ಅಭಿಮಾನಿಗಳು ಗೌರವ ತಾಳುತ್ತಾರೆ.

ಕಬೀರರ ಜನ್ಮ ಸ್ಥಾನ ಕುರಿತು ಸಾಕಷ್ಟು ವಾದವಿವಾದವಿದೆ. ಕೆಲವರು ಕಾಶಿಯೇ ಕಬೀರರ ಜನ್ಮಸ್ಥಾನವೆಂದು ಕರೆದರೆ, ಬೇರೆ ಹಲವರು ' ಮಗಹರ ' ಅವರ ಜನ್ಮಸ್ಥಾನವೆಂದು ಹೇಳಿದ್ದಾರೆ. ಅಂತೂ ಕಬೀರರು ' ಮಗಹರ ' ದಲ್ಲಿ ಹುಟ್ಟಿ, ಕಾಶಿಯಲ್ಲಿ ಬೆಳೆದು ವಿದ್ಯಾಭ್ಯಾಸ ಮಾಡಿ, ಮರಳಿ ಮಗಹರದಲ್ಲಿಯೇ ಮಹಾ ನಿರ್ಯಾಣ ಹೊಂದಿದರೆಂದು ಸಾಮಾನ್ಯವಾಗಿ ನಂಬಲಾಗಿದೆ. ಮಹಾಯೋಗಿ ವೇಮನರ ಜನ್ಮಸ್ಥಾನ ಕುರಿತು ಅವರದೊಂದು ಪದ್ಯದಲ್ಲಿ ತಿಳಿಸಿದ ಆಧಾರದಿಂದ ಅವರ ಹುಟ್ಟೂರು ಮೂಗಚಿಂತಪಲ್ಲಿಯೆಂದೂ, ಬೆಳೆದದ್ದು, ಕೊಂಡವೀಡು ಎಂದೂ ಖಚಿತಪಟ್ಟಿರುವಂತೆ, ಸಿಕ್ಕರ ಧರ್ಮಗ್ರಂಥವಾದ ಗ್ರಂಥ ಸಾಹಿಬದಲ್ಲಿ ' ಪಹಲೆ ದರ್ಶನ ಮಗಹರ್ ಪಾಯೋ ಪುನಿ ಕಾಶೀ ಬಸೆ ಆ ಈ ' ಎಂಬ ಪ್ರಸ್ತಾಪದ ಮೇಲಿಂದ, ಕಬೀರರು ಮಗಹರದಲ್ಲಿಯೇ ಜನಿಸಿ, ಮುಂದೆ ಕಾಶಿಗೆ ಬಂದು ವಾಸಿಸಿದರೆಂದು ಖಚಿತಪಟ್ಟಿದೆ. ಮಗಹರವು ಮಗಧ ದೇಶದ ಒಂದು ಹಳ್ಳಿ. ಮಗಧ ( ವೈದಿಕ ವಿರೋಧಿ ) ದೇಶವು ವೈದಿಕ ವಿರೋಧಿ ರಾಜರು ಆಳಿಕೊಂಡು ಬಂದ, ಬುದ್ಧ-ಮಹಾವೀರರು ಬೋಧೆ ನೀಡಿದ ಕೇಂದ್ರ ಪ್ರದೇಶ. ಹೀಗಾಗಿ, ವೈದಿಕ ಬ್ರಾಹ್ಮಣರು ' ಮಗಹರ ' ಕುರಿತು ಅಸಡ್ಡೆ ಹೊಂದಿದ್ದರು. ಆ ನಾಡಿಗರನ್ನು ಕುರಿತು ವೈದಿಕರು ಘೃಣಾ ಭಾವ ವ್ಯಕ್ತಪಡಿಸುತ್ತ ಬಂದಿದ್ದಾರೆ.

**ಈಶ್ವರ-ಜೀವ-ಜಗತ್ :-**

ಮಹಾತ್ಮ ಕಬೀರರು ಉಚ್ಚ ಮಟ್ಟದ ಯೋಗ ಸಾಧಕರು ; ನಿರ್ಗುಣೋಪಾಸಕರು. ಜನನ-ಮರಣ ರಹಿತನಾದ, ಆಕಾರ, ಆಧಾರ ವಿದೂರನಾದ, ರೂಹಿಲ್ಲದ, ಕೇಡಿಲ್ಲದ ಚೆಲುವನಾದ, ತನ್ನೊಳಗೇ ಇರುವ ಪರಮಾತ್ಮನನ್ನೇ ದೇವರೆಂದು ಗ್ರಹಿಸಿದರು. ಯೋಗಿ ವೇಮನರಿಗೂ ಮತ್ತು ಮಹಾತ್ಮ ಕಬೀರರಿಗೂ ಎಷ್ಟೊಂದು ತಾಳ ಮೇಳವಿದೆಯೆಂದರೆ, ಪರಾ, ಪಶ್ಯತೀ ಹಾಗೂ ಮಧ್ಯಮೀಗಳಲ್ಲಿ ಏಕರೂಪವಾದ ವಾಕ್, ಕೇವಲ ವೈಖರೀ ಹಾಗೂ ಶ್ರುತಿಗೋಚರಾಗಳಲ್ಲಿ ಮಾತ್ರ ಭಿನ್ನವಾದಂತೆ ಭಾಸವಾಗುತ್ತದೆ. ವೇಮನರ ಹಲವು ದಾರ್ಶನಿಕ ಪದ್ಯಗಳೊಂದಿಗೆ ಇಟಗಿ ವೀರಣ್ಣನವರು ಕನ್ನಡಿಸಿದ ಕಬೀರರ ದೋಹಗಳನ್ನು ಹೋಲಿಸಿ ನೋಡಿದರೆ, ನಮ್ಮ ಮಾತಿನ ಮರ್ಮ ತಿಳಿಯಬಹುದು.

ವೇಮನ :-

**ಮೊದಲ ತರುವಿನಲ್ಲಿ ಮೂರು ರೆಂಬೆ ಹುಟ್ಟಿ ,**
**ಚಿಗುರು ಒಡೆದು ಬೆಳೆದು ಎಲೆಗಳಾಗಿ ,**





**ಹೂವು, ಮಿಡಿಯು , ಹಣ್ಣು , ಭುವನವನು ತುಂಬಿವೆ !**
**ವಿಶ್ವದಾಭಿರಾಮ ಕೇಳು ವೇಮ .**

ಕಬೀರ :-

**ಅಕ್ಷಯ ಪುರುಷ ತಾ ಮರದಂತೆ ;**
**ಪರಬ್ರಹ್ಮ ಅದರ ರೆಂಬೆ ;**
**ತ್ರಿಮೂರ್ತಿಗಳೇ ಶಾಖೆ , ಕಬೀರ ,**
**ಎಲೆಗಳನೇ ಸಂಸಾರವೆಂಬೆ .**

ವೇಮನ :-

**ಧ್ವಜವನೆತ್ತಿ ಸಾರು ದೇವನೊಬ್ಬನೆಂದು ;**
**ನಿಜವಿದಿಹುದು ಒಳಗೆ ನಿಂತಿರುವನು ;**
**ಚೊಕ್ಕ ನೋಡಲವನ ಸಂತಸದಿ ಮುಳುಗುವೆ .**
**ವಿಶ್ವದಾಭಿರಾಮ ಕೇಳು ವೇಮ .**

ಕಬೀರ :-

**ನನ್ನ ಸ್ವಾಮಿಯು ಒಬ್ಬನಿಹನು ;**
**ಇಬ್ಬರಿಲ್ಲ ಜಗದಿ .**
**ಇಬ್ಬರೆಂದು ನುಡಿದರೆ ,**
**ಕುಪಿತನವನಾ ಕ್ಷಣದಿ .**

ವೇಮನ :-

**ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ ,**
**ರೂಪವೇನು ಇರದ ರೀತಿಯಲ್ಲಿ ,**
**ಪರಮ ಯೋಗಿ ನೋಳ್ಪ ಪರಮಾತ್ಮನಿರವನು .**
**ವಿಶ್ವದಾಭಿರಾಮ ಕೇಳು ವೇಮ .**

ಕಬೀರ :-

**ರೇಖೆಯಿಲ್ಲ , ರೂಪವಿಲ್ಲ ;**
**ಆಧಾರ ವಿದೂರನಾತ .**
**ಗಗನ ಮಂಡಲ ಮಧ್ಯದಲ್ಲಿ**
**ಇರುವ ವಿದೇಹಿ ಆತ .**

ವೇಮನ :-

**ಜಗದಲ್ಲಿಯು ಇಲ್ಲ ; ಜಲಗಲ್ಲಿಯು ಇಲ್ಲ .**
**ನಿಗಮ ವೇದ್ಯವಾದ ನಿತ್ಯ ಪದವಿ ;**
**ಸಗುಣ ನಿರ್ಗುಣದೊಳು ಸಾಧಿಸಿ ಸಲೆ ಕಾಣು .**
**ವಿಶ್ವದಾಭಿರಾಮ ಕೇಳು ವೇಮ .**

ಕಬೀರ :-

ಹರ ನಿರ್ಗುಣ ಗುರು ಸಗುಣ
ಭೇದವೆನ್ನೊಳಗಿಲ್ಲ.
ಸಗುಣ ಸೇವೆ, ನಿರ್ಗುಣ ಧ್ಯಾನ ;
'ಕಬೀರ' ನನ್ನನರಿತವರಿಲ್ಲ.

ವೇಮನ :-

ಮೊಸರಿನಲ್ಲಿ ತುಪ್ಪ, ಮರದ ಒಳಗೆ ಬೆಂಕಿ,
ಸೌಮ್ಯ ಪುಷ್ಪಗಳಲಿ ಸೌರಭಗಳು.
ಎಳ್ಳಿನೆಣ್ಣೆಯಂತೆ ಹೊಳೆಯುವುದು ಚಿದಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ಕಬೀರ :-

ನಿನ್ನ ಸ್ವಾಮಿಯು ನಿನ್ನೊಳಗಿಹನು,
ಪುಷ್ಪದೊಳಗಣ ಪರಿಮಳದಂತೆ.
ಅಡವಿಯ ಹುಡುಕುತ ಅಲೆಯುವಿಯೇತಕೆ ?
ನೀ ಕಸ್ತೂರಿಯ ಮೃಗದಂತೆ.

ಎಣ್ಣೆಯಂತಿಹನು ಎಳ್ಳಿನೊಳಗೆ ;
ಬೆಂಕಿಯಂತಿಹನು ಕಲ್ಲೊಳಗೆ.
ಎಚ್ಚರಿದರಷ್ಟೇ ಏಳುವನವನು,
ನಿನ್ನ ಸ್ವಾಮಿಯು ನಿನ್ನೊಳಗೆ.

**ಜಗತ್ತು :-**

ಕಬೀರರು ಉತ್ತರ ಭಾರತದ ಹಾಗೂ ಮಹಾರಾಷ್ಟ್ರದ ಸಂತ ಸಂಪ್ರದಾಯದ ಹರಿಕಾರರು. ಅವರು ನಿರಾಕಾರ ಮತ್ತು ನಿರ್ವಿಕಾರ ಬ್ರಹ್ಮನನ್ನು ಒಪ್ಪಿದ್ದಾರೆ. ಆ ಬ್ರಹ್ಮನ ಮಾಯೆಯ ಪ್ರಭಾವದಿಂದ ಜಗತ್ತು ಕಾಣಬರುತ್ತದೆ. ಯಾವುದು ದೃಶ್ಯಮಾನವಾಗಿದೆಯೋ ಅದು ಜಗತ್ ಎನಿಸುತ್ತದೆ. 'ಗಚ್ಛತಿ ಇತಿ ಜಗತ್' ಎನಿಸಿದೆ. ಹೀಗಾಗಿ, ಜಗತ್, ಭ್ರಮಮಯವೂ, ಚಂಚಲವೂ ಮತ್ತು ನಶ್ವರವೂ ಆಗಿದೆ. ಜಗತ್ ನಾಲ್ಕು ದಿನದ ಬೆಳದಿಂಗಳಂತೆ! ಧನ, ವೈಭವ, ಆಡಂಬರ, ವಿಲಾಸ, ಸುಖ ಮತ್ತು ದುಃಖಗಳೆಲ್ಲ ಜಗತ್ ಆಗಿವೆ.

ವೇಮನರ ಪ್ರಕಾರ, ಪರಶಿವ ಇಲ್ಲವೆ ಪರಬ್ರಹ್ಮನ ಮೇಲೆ ಪ್ರಕೃತಿಯ ಗುಣ ಪ್ರಪಾತದಿಂದ, ಮಹತ್ ತತ್ತ್ವ, ಅಹಂ ತತ್ತ್ವ, ಚಿತ್ತ ತತ್ತ್ವ, ಪಂಚಭೂತಗಳು ಮತ್ತು ಪಂಚತನ್ಮಾತ್ರೆಗಳು ಉಂಟಾಗಿವೆ. 'ಪಂಚ ಭೂತಗಳು ಪರಮ ಇಂದ್ರಿಯಗಳು ಸಂಚರಿಸುತಿರಲು ಜಗವುಂಟಾಗುವುದು. ಹೀಗೆ ಜಗತ್ ಸಾಪೇಕ್ಷಿಕವಾಗಿದೆ. ನಿರಪೇಕ್ಷವಲ್ಲ.





**ಜೀವ :-**

ಈಶನಿಂದ ಸೃಷ್ಟಿಯಾದ ಜಗತ್ತನ್ನು ಭೋಜ್ಯವಾಗಿಯೂ, ಜೀವಾದಿಗಳನ್ನು ಬೋಕ್ತ್ರವನ್ನಾಗಿಯೂ, ನಿರ್ಮಿಸಲಾಗಿದೆ. ಜೀವನು ಜಗತ್ತಿನಲ್ಲಿಯ ಆಸಕ್ತಿಯನ್ನು ಹ್ರಾಸಗೊಳಿಸಿ, ಈಶನಲ್ಲಿ ಒಂದಾಗಲು ಸಾಧನೆ ಮಾಡುವುದಕ್ಕಾಗಿಯೇ ಜನಿಸಿದ್ದಾನೆ. ಈ ಕ್ರಮದಲ್ಲಿ ಯೋಗಿ ವೇಮನ ಮತ್ತು ಮಹಾತ್ಮ ಕಬೀರರಲ್ಲಿ ಐಕಮತ್ಯವಿದೆ.

ವೇಮನ :-

ಜೀವ ಗುಣವು ಇಹುದು ಜೀವಬ್ರಹ್ಮವೆಂದು ;
ಸಾಟಿ ಎಂತು ಇಹುದು ; ಸರಿಯು ತಿಳಿಯೆ ?
ಊರ ನಾಯಿ ಸಿಂಹ ಒಂದೆ ಎನಿಸಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಜೀವಿಗಳೊಳು ಮುನ್ನ ಜೀವಾತ್ಮ, ಪರಮಾತ್ಮ
ಜೋಡು ತಿಳಿಯ ಪಾಪ! ಜಲಧಿ ಮುಳುಗಿ.
ನಾವು ನಡೆಸುವವನು ನೀರೊಳು ಮುಳುಗುವನೇ ?
ವಿಶ್ವದಾಭಿರಾಮ ಕೇಳು ವೇಮ.

ಜೀವಿಯಲ್ಲಿ ಭ್ರಮೆಯು ಸೇರಿಕೊಂಡು ಉಂಟು.
ಕರ್ಮ ಜೀವಿ ಮೇಲು ಕಾಣಲಾರ.
ಜೀವಿ ಜೀವಿಯಷ್ಟೆ ; ಚಿನ್ಮಾತ್ರವು ಬಯಲು.
ವಿಶ್ವದಾಭಿರಾಮ ಕೇಳು ವೇಮ.

ಕಬೀರ :-

ತನುವೆಂಬ ಪಣತಿಯ ಒಳಗೆ,
ರಕ್ತವೆಂಬ ತೈಲವನೆರೆದು,
ಜೀವಬತ್ತಿಯ ಹಿಡಿದು, ಕಬೀರ,
ಜ್ಯೋತಿ ಬೆಳಗಿತು ನೋಡಿದು.

ಕಂಗಳ ಒಳಗೆಯೆ ನೀನಿರುವೆ ಕಬೀರ ;
ಕಾರಣ ದುಃಖ ಕಂಗಳಿಗಿಲ್ಲ.
ಶಿವ ಸ್ನೇಹಿ ಜೀವ ; ಶಿವೈಕ್ಯಗೊಳ್ಳದೆ,
ನೀರೊಡೆಯುತಿದೆ ಈ ಕಣ್ಣೆಲ್ಲ.

ಪ್ರಿಯನಿಲ್ಲದೆ ಜೀವ ಚಡ್ಪಡಿಸುತಿದೆ
ಕ್ಷಣ ಕ್ಷಣ ವಿರಹವು ಕೊಲ್ಲುತಿದೆ,

ದಿಕ್ಕು ದಿವಾದ ಲಕ್ಷ್ಯವೆ ಇಲ್ಲದೆ,
ಬಿಕ್ಕುತ ಜೀವವು ಬರಿಯುತಿದೆ.

ತನು ಮನ ಬೆಂದವು ವಿರಹಾಗ್ನಿಯಲಿ ;
ಜೀವವು ಶಿವನನು ಚಿಂತಿಪುದು ;
ಪ್ರಿಯನನು ಕಂಡಿಹ ಪ್ರೇಯಸಿ,
ಅಥವಾ ವಿರಹಿನಿಗೇ ಇದು ತಿಳಿಯುವುದು.

**ಸಾಧನ ಮಾರ್ಗ :-**

ಮಾನವನು ತನ್ನ ಬಾಳನ್ನು ಗೃಹಸ್ಥಾಶ್ರಮಿಯಾಗಿಯೇ ಸಾಗಿಸಲಿ, ಇಲ್ಲವೆ ವಿರಕ್ತನಾಗಿಯೇ ಸಾಗಿಸಲಿ, ಅವನು ಸಾಮಾನ್ಯ ನೀತಿ ಮಾರ್ಗವನ್ನು ಅನುಸರಿಸಲೇಬೇಕು. ಸತ್ಯ, ಅಸ್ತೇಯ, ಅಪರಿಗ್ರಹಗಳನ್ನು , ಶೌಚ , ಸಂತೋಷ , ತಪ , ಸ್ವಾಧ್ಯಾಯ , ಈಶ್ವರ ಪ್ರಣಿಧಾನಗಳನ್ನೂ ಆಚರಿಸಬೇಕು. ಇಂಥ ಕರ್ಮಗಳಿಂದ ಮೋಕ್ಷ ಮಾರ್ಗದ ಪ್ರಾರಂಭಿಕ ಹಂತವಾದ ಮನೋಶುದ್ಧಿಯನ್ನು ಸಾಧಿಸಬಹುದು. ಈ ಕುರಿತು ಯೋಗಿ ವೇಮನ ಮತ್ತು ಮಹಾತ್ಮ ಕಬೀರರಲ್ಲಿ ವಿಚಾರ ಸಾಮ್ಯವಿದೆ. ಸಾಧು ಸಂಗ , ದುರ್ಜನ ಸಂಗ ತ್ಯಾಗಗಳಿಂದ ಆತ್ಮಸ್ಥೈರ್ಯ ಬೆಳೆಸಿಕೊಳ್ಳಬೇಕು.

ವೇಮನ :-

ಆಸೆಯ ಬಿಟುಗೊಟ್ಟು , ಅಗ್ನಿಯನು ಆರಿಸಿ ,
ಗೋಟಿ ಬಿಗಿದು ಕಟ್ಟಿ ಕೋಪವಡಗಿ ,
ಗುಟ್ಟು ಮೀರುವವನು ಗುರುವಿನ ಗುರುವಹನು .
ವಿಶ್ವದಾಭಿರಾಮ ಕೇಳು ವೇಮ .

ಕಬೀರ :-

ಹಣದ ಗಂಟನು ಕಟ್ಟದೆ ಇರುವಗೆ ,
ನಾರಿಯ ನೇಹವ ಬಿಟ್ಟಿರುವನಿಗೆ ,
ಅವರ ಚರಣದ ಧೂಳಾಗುತ , ಕಬೀರ ,
ಸಾಧು ಎನುವನು ಅವರಿಗೆ .

ವೇಮನ :-

ಇಲ್ಲ ಒಳ್ಳೆಯವರು ಇಳೆಯಲ್ಲಿ ಆರಸಲು ,
ದುಷ್ಟರೆಷ್ಟೊ ಇಹರು ; ಧರಣಿಯಲ್ಲಿ ;
ಉಳ್ಳಿ ತೋಟದಲ್ಲಿ ಮಲ್ಲಿಗೆ ಲತೆಯಂತೆ .
ವಿಶ್ವದಾಭಿರಾಮ ಕೇಳು ವೇಮ .





ಕಬೀರ :-

ಅಫೀಮಿನ ಬಿಳಿ ಎಲೆ ಹೊಲದಂತೆ ,
ಶುಭ್ರ ಶ್ವೇತರೆಲ್ಲ ಸಾಧುಗಳು .
ಎಲ್ಲೋ ಒಂದು ಶ್ರೇಷ್ಠ ಕೆಂಪೆಲೆ ,
ಕಾಣುವುದಂಥಹ ಹೊಲದೊಳು .

ವೇಮನ :-

ಹಗಲು ಇರುಳು ಮರೆತು , ಭಾವವನ್ನೆ ಮರೆತು ,
ತಾನು ನಾನು ಎನುವ ತಿಳಿವು ಮೀರಿ ,
ಉಳ್ಳ ಮನುಜನೆ ತಿಳಿ ಉತ್ತಮ ಯೋಗಿಯವ ;
ವಿಶ್ವದಾಭಿರಾಮ ಕೇಳು ವೇಮ .

ಕಬೀರ :-

ಕಾಮಿ ಕಾಮವ ನೆನೆವ ಹಾಗೆ ಕಬೀರ ,
ಸಾಧಕ , ಧ್ಯಾನದಲಿರಬೇಕು .
ಹಗಲೂ ರಾತ್ರಿ ಎಂಟೂ ಜಾವದಿ ,
ಕ್ಷಣವೊಂದು ಅಗಲದೆ ಇರಬೇಕು .

ವೇಮನ :-

ಆಸೆಯಿಂದ ಮನುಜ , ಆಯುವಿರುವ ಕಾಲ ,
ತಿರುಗುತಿಪ್ಪ ಭ್ರಮೆಯ ತೊರೆಯದಿದ್ದ ;
ಮುಸುರೆ ಪಾತ್ರೆಯಲ್ಲಿ ಮುಕುರುವ ನೊಣದಂತೆ .
ವಿಶ್ವದಾಭಿರಾಮ ಕೇಳು ವೇಮ .

ಕಬೀರ :-

ಅನ್ಯ ಆಸೆಗಳನೆಲ್ಲವ ತೊರೆದು , ನಿನ್ನನೆ ;
ಭಜಿಸುವನೇ ಸುಂದರನು .
ಕ್ಷಣವೂ ನಿನ್ನನು ಬಿಟ್ಟಿರಲಾರದೆ ,
ನಿನ್ನ ಬಳಿಯಲೆ ವಾಸಿಪನು .

**ಧರ್ಮ :-**

" ಧಾರಣಾತ್ ಧರ್ಮ ಇತ್ಯಾಹು : ಧರ್ಮೋ ಧಾರಯತಿ ಪ್ರಜಾನಾಮ್." ಜನರನ್ನು ಹಿಡಿದೆತ್ತಿ ನಡೆಸುವುದೇ ಧರ್ಮ. ಲೋಕ ಸಂಗ್ರಹವೇ ಧರ್ಮ ಕಾರ್ಯ. ಕೂಡಿಕೆ ಧರ್ಮ; ಒಡಕು ಅಧರ್ಮ.

ವೇಮನ :-

**ಉರ್ವಿವಾಸಿಗೆಲ್ಲ ಒಂದೆ ತಾಟನಿಟ್ಟು,**
**ಅರಳಿಸಿ ಸ್ನೇಹವ, ಅಳಿಸಿ ಕುಲವ,**
**ಶಿರದ ಮೇಲೆ ಕರವ ಇರಿಸಿ ಉಣಹೇಳಿರೋ.**
**ವಿಶ್ವದಾಭಿರಾಮ ಕೇಳು ವೇಮ.**

ಕಬೀರ :-

**ಮಹದೇವನೂ ಅವನೆ, ಅವನೇ ಮಹಮ್ಮದ**
**ಬ್ರಹ್ಮಾ ಆದಮನೆನ್ನಿರಿ.**
**ಹಿಂದೂ ಕೆಲವರು, ಕೆಲವರು ತುರುಕರು,**
**ಇರಲಿ ; ಒಂದೇ ನೆಲದಲಿ ಬನ್ನಿರಿ.**

**ಮೋಕ್ಷ ವಿಭಾಗ :-**

ಜೀವಭಾವವನ್ನು ತೊರೆದು ಈಶಭಾವದಲ್ಲಿ ನೆಲೆಸುವುದೇ ಮೋಕ್ಷ. ಈಶನ ಸಮುದ್ರದಲ್ಲಿ ದೇಹಭಾವ ಹೊಂದಿದ ಜೀವನು, ಘಟದೊಳಗಿನ ನೀರಿನಂತೆ. ಈ ಘಟವು ಒಡೆದೊಡನೆ ಒಳಗಿನ ನೀರು ಹೊರಗಿನ ನೀರಿನಲ್ಲಿ ಒಂದಾಗಿ, ಎಲ್ಲವೂ ನೀರೇ ಆಗುವುದು. ಇದುವೇ ಮೋಕ್ಷ. ಈ ದೇಹ, ಮತ್ತದರ ತತ್ತ್ವ ಸಂಕುಲವು ನೀರಿನಿಂದ ಪರಿಣಮಿಸಿದ ಹಿಮಬಂಡೆಯಂತೆ ; ಅದು ಕರಗಿದರೆ ಮತ್ತೇನಾದೀತು ? ಮೂಲದಲ್ಲಿ ಐಕ್ಯಗೊಳ್ಳುವುದು. ಉಪ್ಪಿನ ಹಳಕನ್ನು ಸಮುದ್ರದಲ್ಲಿ ಬಿಟ್ಟರೆ, ಅದು ನೀರೇ ಆಗುತ್ತದೆ. ಏಕೆಂದರೆ ಉಪ್ಪು ನೀರಿನಿಂದಲೇ ಬಂದಿದೆ. ಹೀಗೆ, ಮೂಲದಲ್ಲಿ ಬೆರೆಯುವುದನ್ನೇ ಮೋಕ್ಷವೆನ್ನುತ್ತಾರೆ, ಕಬೀರ.

ಕಬೀರರೂ ಗುರುವಿಗೆ, ವೇಮನರಂತೆ, ಉಚ್ಚ ಸ್ಥಾನ ನೀಡುತ್ತಾರೆ.

**ಕಂಡೆನು ಗುರುವನು ಹೃದಯದ ಒಳಗೆ ;**
**ನಿಂತಿತು ನಾ ಹಾಡುವ ಹಾಡು.**
**ಕಬೀರ ಹಾಡುತ ಕಳೆದ ಕಾಲದಿ,**
**ಗುರುವನು ಕಾಣದೆ ಇದ್ದನು ನೋಡು.**

ಗುರುವಿನ ಶೋಧದಲ್ಲಿ ಇವರು ತುಂಬ ಅಲೆದಾಡಿದರು. ಮಕ್ಕಾ ಮದಿನಾ, ಹಜ್ ಯಾತ್ರೆಯನ್ನು ಕೈಕೊಂಡರು. ಆದರೆ ಅವರಿಗೆ ತಕ್ಕ ಮೋಕ್ಷ ಗುರು ದೊರಕಲಿಲ್ಲ. ಗೋಮತೀ ದಂಡೆಯಲ್ಲಿ ದೇವರ ಹಾಡುಗಳನ್ನು ತಮ್ಮ ಸುಮಧುರ ಕಂಠದಿಂದ ಹಾಡುತ್ತಿದ್ದ ಪೀತಾಂಬರ ಪೀರರ ಸತ್ಸಂಗವೇ ಅವರಿಗೆ ಹಜ್ ಎನಿಸಿತು. ಕಾಶಿಯಲ್ಲಿಯ ಧರ್ಮ ಸಂಪ್ರದಾಯಗಳು ಹಲವಾರು ಇದ್ದವು. ಕೊರಳಲ್ಲಿ ರುದ್ರಾಕ್ಷಿ, ಮೈ ತುಂಬ ಭಸ್ಮ, ಒಂದು ಕೈಯಲ್ಲಿ ಜಪಮಣಿ, ಇನ್ನೊಂದರಲ್ಲಿ ಕಮಂಡಲು ಹಿಡಿದು ತಿರುಗುವ ವೇಷಧಾರಿಗಳಲ್ಲಿ ಅವರು ಸನ್ನಡತೆ ಕಾಣಲಿಲ್ಲ. ಅವರಿಗೆ ಸಮ್ಮತವಾದವರೆಂದರೆ, ಆ ಕಾಲದ ಸುಧಾರಕ ವೈಷ್ಣವ ಪಂಥದ ಸದ್ಗುರು ರಮಾನಂದರು.





ಆದರೆ ಸೋಜಿಗವೆಂದರೆ, ಈ ಬ್ರಾಹ್ಮಣ ಗುರು, ಮುಸಲ್ಮಾನ ಕಬೀರರಿಗೆ ವಿಧಿವತ್ತಾಗಿ ದೀಕ್ಷೆ ನೀಡಲೇ ಇಲ್ಲ. ನೋಡಿ ಕೆಲರಂ, ಮುಟ್ಟಿ ಕೆಲರಂ, ಮಿಗೆ ಮಾತನಾಡಿ ಕೆಲರಂ ಯೋಗಿಯಾಗಿ ಮಾಳ್ಪ ಸದ್ಗುರುಗಳಾಗಿದ್ದರು, ಆ ರಮಾನಂದ. ಇದನ್ನರಿತ ಕಬೀರರು ಒಂದು ದಿನ ನಸುಕಿನಲ್ಲಿ ಮಣಿ ಕರ್ಣಿಕಾ ಘಾಟದ ಮೆಟ್ಟಿಲುಗಳ ಮೇಲೆ ಹಾಯಾಗಿ ಮಲಗಿದರು. ಗುರು ರಮಾನಂದರು ನಿತ್ಯದಂತೆ ಸ್ನಾನಕ್ಕಾಗಿ ಮೆಟ್ಟಿಲು ಇಳಿಯುತ್ತಿದ್ದಂತೆ, ಕಬೀರರನ್ನು ತುಳಿದು ಬಿಟ್ಟರು. ಯಾರೆಂದು ನೋಡುತ್ತಾರೆ, ಕಬೀರ! 'ರಾಮ್ ರಾಮ್' ಎಂದು ಕಬೀರರನ್ನೇ ಕರುಣಾ ಪೂರ್ಣ ದೃಷ್ಟಿಯಿಂದ ನೋಡಿದರು, ರಮಾನಂದ. ಅವರು ನೋಡುತ್ತಿದ್ದಂತೆ, ಮೊದಲೇ ಪಕ್ವವಾದ ಕಬೀರರ ಮನಸ್ಸು ಮೇಲು ಮೇಲಕ್ಕೆ ಹೋಯಿತು. ಕಬೀರರು ಮೈಮರೆತರು. ಎಚ್ಚತ್ತಾಗ, ಧನ್ಯೋಸ್ಮಿ ! ಧನ್ಯೋಸ್ಮಿ ! ಎಂದರು.

ಕಬೀರ :-

**ಹರಗಿಂತ ಗುರುವೇ ಅಧಿಕನು ;**
**ಯೋಚಿಸಿ ನೋಡು ನೀ ಮನದಲ್ಲಿ.**
**ಹರನೊಲಿದರೆ ದಾಟಲು ತಡವಿದೆ ;**
**ಗುರು ಒಲಿದರೆ ದಾಟುವೆ ಕ್ಷಣದಲ್ಲಿ.**

**ಶ್ರೀಗುರು ಸ್ಪರುಷದ ಮಣಿ ಅವನು ;**
**ಶೀತಲ ಶ್ರೀಗಂಧದ ಮರ ಅವನು**
**ಸ್ಪರುಷದಿ ಜೀವನ 'ಶಿವ'ನನು ಮಾಡಿ,**
**ಮುಕ್ತ್ಯಂಗನೆ ವಾಸದೊಳಿರಿಸುವನು.**

**ಮನ ಕಬ್ಬಿಣ, ಗುರು ಸಾಣೆಗ,**
**ಜ್ಞಾನದ ಸಾಣೆಯ ಕಲ್ಲಿದೆ ಅವನಲ್ಲಿ ;**
**ಅರ್ಚಿಸೆ ನೀನು, ದರ್ಪಣ ಗೆಯ್ದು,**
**ನಿಜ ರೂಪವ ತೋರುವ ನಿನ್ನಲ್ಲಿ.**

ಯೋಗಿ ವೇಮನರು ಸಹ ಗುರುವಿನ ಮಹಿಮೆಯನ್ನು ಬಹುಸಂಖ್ಯೆ ಪದ್ಯಗಳಲ್ಲಿ ಹಾಡಿದ್ದಾರೆ.

ವೇಮನ :-

**ಗುರುವು ಕಶಕ ಬೀಜ, ಕುಂಭದಂತೆ ದೇಹ ;**
**ಆತ್ಮ ಕಲುಷ ರಾಡಿ ಆಳಕಿಳಿಯೆ,**
**ತಕ್ಕ ಸೇವ್ಯವಾದ ದಿವ್ಯಾಮೃತವದು.**
**ವಿಶ್ವದಾಭಿರಾಮ ಕೇಳು ವೇಮ.**

ಇಂಥ ಗುರುವಿನ ಮಾರ್ಗದರ್ಶನದಲ್ಲಿ ತಮ್ಮ ದೋಷಗಳನ್ನು ದೂರೀಕರಿಸಿಕೊಂಡು ಪರಮ ಪದವನ್ನು ತಲುಪಬಹುದೇ ಹೊರತು, ತಾವೇ ಕಾಣದ ಕುರುಡರು ಅನ್ಯರಿಗೆ ಹೇಗೆ ಮಾರ್ಗ ತೋರಬಲ್ಲರು ? ಇಂಥವರು ನಡುನೀರಲ್ಲಿ ಕೈ ಬಿಡುವವರಷ್ಟೇ.

ವೇಮನ :-

ಕಳ್ಳ ಗುರು ಕಟ್ಟುವ ಕರ್ಮಗಳನೆಲ್ಲವ ;
ಮಧ್ಯಮನು ಕಟ್ಟುವ ಮಂತ್ರ ತಂತ್ರ .
ಉತ್ತಮನು ಕಟ್ಟುವ ಯೋಗ ಸಾಮ್ರಾಜ್ಯವ .
ವಿಶ್ವದಾಭಿರಾಮ ಕೇಳು ವೇಮ .

ಉತ್ತಮೋತ್ತಮನಾದ ಉಚಿತಜ್ಞನೆ ಮೇಲು .
ಮಹಿಮೆ ತೋರುವವನು ಮಧ್ಯಮನಿಹ .
ವೇಷಧಾರಿಯುದರ ಪೋಷಿಸುವವನಧಮ .
ವಿಶ್ವದಾಭಿರಾಮ ಕೇಳು ವೇಮ .

ಗುರುವಿನ ಶಿಕ್ಷೆಯಿರದೆ ಗುರುತು ದೊರೆವುದೆಂತು ?
ಅಜನೆ ಇರಲಿ; ಅವನ ಅಪ್ಪನಿರಲಿ ;
ಬೀಗದ ಕೈ ಇರದೆ , ಬೀಗ ತೆರೆವುದೆಂತು ?
ವಿಶ್ವದಾಭಿರಾಮ ಕೇಳು ವೇಮ .

ಗುರುವೆ ತಾನಾಗುವ ಹರನ ತೋರುವವನು .
ಬ್ರಹ್ಮಲೋಕವನೆ ಪ್ರತ್ಯಕ್ಷಿಸುವ .
ಕಿಂಕರನ ಶೋಧಿಸಿ ಕತ್ತಲೆಯ ಕಳೆಯುವ .
ವಿಶ್ವದಾಭಿರಾಮ ಕೇಳು ವೇಮ .

**ಸಾಧನಾ ಪಥ :-**

ಸಂತ ಸಂಪ್ರದಾಯಾನುಸಾರ, ಸಾಧನೆಯೊಳಗೆ ಎರಡು ಅಂಶಗಳು ಒಳಗೊಳ್ಳುತ್ತವೆ. ಅವುಗಳೆಂದರೆ , ಭಕ್ತಿ ಮತ್ತು ಯೋಗ. ಭಕ್ತಿಯು ನಿಷ್ಕಾಮವಿರಬೇಕು. ಮತ್ತು ನಿಶ್ಚಲವಿರಬೇಕು. ನಾಮ ಸ್ಮರಣ , ಶ್ರವಣ ಮತ್ತು ಕೀರ್ತನಗಳಿಂದ ಮನವು ಸಂಪುಷ್ಟವಾಗುತ್ತದೆ. ಭಾವ ನಿರ್ಭರವಾಗುತ್ತದೆ. ಕೀರ್ತನದಿಂದ ಶುದ್ಧ ಮಧುರ ಪ್ರೇಮವು ಸ್ಫುರಿಸುತ್ತದೆ. ದಾಂಪತ್ಯ ಪ್ರೇಮದ ರೀತಿ, ಭಗವಂತನನ್ನು ಪತಿಯೆಂದು ಭಾವಿಸಿದಾಗ ಆತ್ಮ ಸಮರ್ಪಣ ಭಾವವು ಸಹಜವಾಗಿ ಉದಿಸುತ್ತದೆ. ಇಂಥ ಆತ್ಮ ಸಮರ್ಪಣದ ಬ್ರಹ್ಮಾನುಭೂತಿಯೇ ಅನುಭಾವವಾಗಿದೆ.

ಇಂಥ ಅನುಭಾವವು ಹಂತ ಹಂತವಾಗಿ ಪ್ರಾಪ್ತವಾಗುತ್ತದೆ. ಪ್ರಥಮ ಹಂತದಲ್ಲಿ





ಆತ್ಮನು ಜ್ಯೋತಿಯ ದರ್ಶನದಿಂದ ಆಕರ್ಷಿತನಾಗುತ್ತಾನೆ. ಅಚ್ಚರಿ ಬಡುತ್ತಾನೆ.

" ಕಬೀರ ಹೇಳುತ್ತಾನೆ : ಅದನ್ನು ಅದ್ಭುತವೆಂದೇ ಹೇಳಬಹುದು "

ಅನಂತರದ ಹಂತದಲ್ಲಿ, ಪರಮಾತ್ಮನೊಂದಿಗೆ ಸೇರುವ ಅತುರತೆ ಪ್ರಕಟವಾಗುತ್ತದೆ. ಈ ಅವಸ್ಥೆಯಲ್ಲಿ ವಿರಹ , ಮಿಲನ , ಆಶಾ - ನಿರಾಶಾ, ಅಭಿಲಾಷೆ-ವೇದನೆಗಳು ಅತ್ಯಂತ ಜೀವಂತವಾಗಿರುತ್ತವೆ

ಕಬೀರ :-

" ನಿನ್ನ ಜೊತೆಯಲಿ ಆಟವನಾಡಲು ,
ಈ ಸುಂದರಿ ಕಣಕೆ ಇಳಿದಿಹಳು
ಜ್ಞಾನದ ದೀಪವ ಬೆಳಿಸಿ ' ಕಬೀರ ' ,
ಎಣ್ಣೆಯಾಗಿ ದೀಪಕೆ ಎರುವಳು.

ಪ್ರಿಯನಿಲ್ಲದೆ ಜೀವ ಚಡ್ಪಡಿಸುತಿದೆ ;
ಕ್ಷಣ ಕ್ಷಣ ವಿರಹವು ಕೊಲ್ಲುತಿದೆ .
ದಿಕ್ಕು ದಿವಸದ ಲೆಕ್ಕವೆ ಇಲ್ಲದೆ ,
ಬಿಕ್ಕುತ ಜೀವವು ಬರಿಯುತಿದೆ .

ನಿರುಕಿಸಿ , ನಿರುಕಿಸಿ , ಉರುಳಿತು ಹಗಲು ;
ಉರುಳುವುದಿನ್ನು ಈ ಇರುಳು .
ಪ್ರಿಯನನು ಕಾಣದೆ ವಿರಹಿನಿ ಮನದಲಿ ,
ಬರಿದೇ ಗಾಬರಿಗೊಳ್ಳುವಳು .

ಕಂಗಳ ಒಳಗೆ ಬಾ ನೀನು ;
ನಾ ಕಂಗಳ ಮುಚ್ಚಿ ಅಪ್ಪುವೆನು .
ನಾನೂ ನೋಡೆನು ಅನ್ಯರನು ,
ನಿನಗೂ ನೋಡಲು ಬಿಡೆ ನಾನು .

ಕೊನೆಯ ಹಂತದಲ್ಲಿ ಆತ್ಮ , ಪರಮಾತ್ಮರ ಐಕ್ಯವು ಘಟಿಸುತ್ತದೆ.

ಲಾಲೀ ಮೇರೇ ಲಾಲ ಕೀ .
ಜಿತ ದೇಖೂ ತಿತ ಲಾಲ .
ಲಾಲೀ ದೇಖನ ಮೈ ಗಈ
ಮೈ ಭೀ ಹೋಗಈ ಲಾಲ.

**ಅಂದರೆ,**

ಎನ್ನ ಮಗುವಿನ ಬಣ್ಣ ಕೆಂಪು ,

ಎಲ್ಲಿ ನೋಡಿದಡಲ್ಲಿ ಕೆಂಪು.
ಕೆಂಪನು ನೋಡಲು ಹೋದೆ ನಾನು ;
ನಾನೂ ಆದೆನು ಆ ಕೆಂಪು.

ಬೆಳಗನೆ ಬೆಳಗುವ ಬೆಳಗನೆ ನೋಡಲು,
ಬೆಳಗೇ ಬೆಳಗಿದೆ ಆ ಬೆಳಗಿನಲಿ.
ಬೆಳಗನು ನೋಡಲು ಬಳಿ ನಾ ಹೋದೆನು ;
ಬೆಳಕಾದೆನು ನಾನೂ ಆ ಬೆಳಕಿನಲಿ.

ಜಲದಲಿ ಕುಂಭ, ಕುಂಭದಿ ಜಲವು ;
ಕುಂಭದ ಒಳಹೊರಗೂ ಜಲವು.
ಒಡೆಯಿತು ಕುಂಭ, ಜಲ ಜಲದಲಿ ಸೇರಿತು ;
ಇದುವೇ ಜ್ಞಾನಿಯ ತತ್ತ್ವವು.

ಶಿವ-ಜೀವೈಕ್ಯದ ಈ ಮಟ್ಟದ ಅನುಭಾವಿ ಅವಸ್ಥೆಯು ಯೋಗಿ-ವೇಮನರಲ್ಲಿ ಸ್ಫುಟವಾಗಿದ್ದರೂ ಸಹ, ಅದು ಪರಮಾತ್ಮನೊಂದಿಗೆ ಬೆಳೆಸಿದ ದಾಂಪತ್ಯ ಪ್ರೇಮವಂತೂ ಅಲ್ಲ. ವೇಮನ ಯೋಗಿಗಳ ಭಕ್ತಿಯು ಜ್ಞಾನ ಪೂರ್ವಕ ಕುದುರಿದ ಭಕ್ತಿ ಭಾವವಾಗಿದೆ.

ವೇಮನ :-

ಭಕ್ತಿಯುಳ್ಳ ಎಡೆಗೆ ಪರಮೇಶ್ವರನುಂಟು ;
ಭಕ್ತಿಯಿಲ್ಲದೆಡೆಗೆ ಪಾಪವುಂಟು ;
ಭಕ್ತಿ ಹೊಂದಿದವನೆ ಪರಮಾತ್ಮನಾಗುವ.
ವಿಶ್ವದಾಭಿರಾಮ ಕೇಳು ವೇಮ.

' ಮೋಕ್ಷ ಸಾಧನ ಸಾಮಗ್ರಿಗಳಲ್ಲಿ ಭಕ್ತಿಯೇ ಅತಿ ಶ್ರೇಷ್ಠವಾದದ್ದು ' ಎಂದು ಜ್ಞಾನ ಮಾರ್ಗಿ ಆಚಾರ್ಯ ಶಂಕರರ ವಿಚಾರವು ವೇಮನರ ವಿಚಾರದೊಂದಿಗೆ ಶ್ರುತಿಗೊಳ್ಳುತ್ತದೆ.

ಸಂತರ ಸಾಧನ ಪಕ್ಷದಲ್ಲಿಯ ಇನ್ನೊಂದು ಪಾರ್ಶ್ವವೇ ಯೋಗ. ಯೋಗ ಪರಂಪರೆಯು ಸಂತರಲ್ಲಿ ನಾಥಪರಂಪರೆಯ ಪ್ರಭಾವದಿಂದ ಸುಳಿದಿದೆ. ಆದರೆ ಸಂತರು ಯೋಗ ಸಂಪ್ರದಾಯವನ್ನು ಅಕ್ಷರಶ: ಅನುಸರಿಸಿರುವರೆಂದು, ವಿಮರ್ಶಕರು ಹೇಳುತ್ತಿಲ್ಲ. ಆದರೆ ಯೋಗದ ಪಾರಿಭಾಷಿಕ ಶಬ್ದಗಳಾದ, ಇಡಾ, ಪಿಂಗಳಾ, ಸುಷುಮ್ನಾ, ಷಟ್ಚಕ್ರಗಳನ್ನು, ಸಹಸ್ರಾರ ಚಕ್ರ, ಕುಂಡಲಿನೀ ಹಾಗೂ ಬ್ರಹ್ಮರಂಧ್ರಾದಿ ಶಬ್ದಗಳು ಕಬೀರ ಹಾಗೂ ಇನ್ನಿತರ ಸಂತರ ಪದಗಳಲ್ಲಿ ಕಂಡು ಬರುತ್ತವೆ. ಆದರೆ, ಈ ಅವಸ್ಥೆಯನ್ನು ಅವರು ಅಷ್ಟಾಂಗಯೋಗ ಮಾರ್ಗದಿಂದ ಪಡೆದಿರಲಿ ಇಲ್ಲವೆ ಅಜಪಾ ಜಪ, ಸಹಜ ಸಮಾಧಿಗಳ ಮೂಲಕ ಪಡೆದಿರಲಿ, ಪರಿಣಾಮದಲ್ಲಿ ಯೋಗಸಿದ್ಧಿಯಂತೆಯೇ ಅನುಭೂತಿ ಹೊಂದಿದ್ದಾರೆ.





ಕಬೀರ :-

' ಯೋಗಿಯಾಗುತಲೆ ಜ್ಯೋತಿಯ ಕಂಡೆನು,
ಹೋಯಿತು ದ್ವೈತ ಭಾವ.
ಜ್ಯೋತಿ ಪರಂಜ್ಯೋತಿಯ ಸೇರಲು,
ಬ್ರಹ್ಮವಾಯಿತು ಈ ಜೀವ '.

' ಅಲಿ ನಿಲ್ಲಲು ಗಾಳಿ ನಿಂತಿತು ;
ಮನವು ನಿಂತಿತು ಗಗನದಿ.
ತಿಂಗಳಿಲ್ಲದೆ ಬೆಳದಿಂಗಳಾಯಿತು ;
ಅಲಕ್ ನಿರಂಜನ ಭಾವದಿ.

ಬೆಳಗು ಬೆಳಗನು ಸೇರಿ ಬೆಳಗಿತು ;
ಹಂಸ ಬ್ರಹ್ಮದಿ ತೇಲಿತು.
ಅರಿವು ಇರವಿನ ಒಳಗೆ ಬೆರೆಯಿತು ;
ಜೀವ ಬ್ರಹ್ಮವ ಸೇರಿತು.

ಶೂನ್ಯ ಮಂಡಲದಲಿ ಮನೆಯನು ಮಾಡಿ,
ಸುಮಧುರ ನಾದವ ಕೇಳಿದೆನು.
ರೋಮ ರೋಮಗಳೂ ದೀಪಗಳಾಗಿ,
ಬ್ರಹ್ಮವ ಬೆಳಗುತ ನಿಂತಿಹೆನು.

ಸಹಜ ನಾದವು ಸತತವು ನಡೆದಿದೆ ;
ಕಬೀರ ದಾಸನ ಘಟದಲ್ಲಿ.
ಮಿಲನವಾಗಿದೆ ಆತ್ಮವು ಸುರತದಿ,
ಬಾಯಿಯ ಹಾಜರಿ ಬೇಡಿಲ್ಲ.

ಗಗನದಿ ಘರ್ಜನೆ, ಅಮೃತ ಸರಿಮಳೆ,
ನಿತ್ಯ ಕೇಳುವೆ ನಾ ಝೇಂಕಾರ.
ಪುರಾಣ ಕುರಾನಗಳ ಸದ್ದೇ ಇಲ್ಲದಲ್ಲಿ,
ನಿತ್ಯಾನುಭವವಿದು ನನ್ನ ಕಬೀರ.
ಕೋಟಿ ಸೂರ್ಯ ಚಂದ್ರ ಪ್ರಭೆಯನು
ಕಾಣುವೆ ಅಂತರಂಗದಲಿ ;
ಸದ್ಗುರು ದೊರೆಯದೆ ಹೋದರೆ, ಕತ್ತಲೆ
ಸೂರ್ಯ ಚಂದ್ರರ ಲೋಕದಲಿ.

ಇತ್ತ ವೇಮನರು ವಿಶೇಷವಾಗಿ ರಾಜಯೋಗ ಪ್ರಕ್ರಿಯೆಯನ್ನು ಜನರಿಗೆ ಬೋಧಿಸಿದ್ದಾರೆ. ಜ್ಞಾನ-ಕರ್ಮಗಳಾಚೆಗೆ ಭಕ್ತಿಯ ಧಾಮವಿದೆಯೆಂದು ಅವರು ಪ್ರತಿಪಾದಿಸುತ್ತಾರೆ. ಆದರೆ ಧ್ಯಾನಯೋಗವನ್ನು ಮುಮುಕ್ಷುವು ಅಭ್ಯಸಿಸಬೇಕೆಂದು ಅವರ ಸ್ಪಷ್ಟ ನಿರ್ದೇಶನವಾಗಿದೆ. ಯೋಗಿಯ ಅನುಭೂತಿಯನ್ನು ಅವರು ಹೀಗೆ ಬಣ್ಣಿಸಿದ್ದಾರೆ.

ಕಂದ :-

**ಮೂಲಾಧಾರದ ಒಳಗೇ**
**ಸಾಲುವನಿತು ಗಾಳಿ ಹಿಡಿದು, ಸಾಧನ ಕಾಣಾ .**
**ಎಲ್ಲವ ಧಾರಣ ಮಾಡುತ,**
**ಮೂಲವ ಮನದೊಳಿರಿಸುವುದತಿ ಮುಖ್ಯ ವೇಮಾ .**

**ಕಿವಿಯೊಳಗೆ ಜನಿಸುವ ರವದೆ ಆಕಾಶವು ;**
**ಕಣ್ಣಿಗೆ ಕಾಣುವುದೆ ಕಳೆಯ ಜ್ವಾಲೆ ;**
**ಮೂಗಿನೊಳಿಹ ಗಾಳಿ , ಮುಕ್ತಿ ಪಥದ ದಾರಿ .**
**ವಿಶ್ವದಾಭಿರಾಮ ಕೇಳು ವೇಮ .**

ಪೂರ್ಣ ಸಮಾಧಿಯನ್ನು , ಅವರು ಬಣ್ಣಿಸಿದ ಶಬ್ಧ ಚಯದಿಂದ ಆಯ್ದ , ಅಂಶ ಭಾಗವು ಹೀಗಿದೆ.

**“ ...............................................**
**...............................................**
**ಚಂದ್ರ ಸೂರ್ಯರ ಪ್ರಭೆಯು ಬೆಳಗುತಿಹುದು ;**
**ಅದರ ಮೇಲ್ಗಡೆಯುಂಟು ನವ ರತ್ನದ ದೇಹಿ ;**
**ಅದರ ಮೇಲ್ಗಡೆಯುಂಟು ತಟಾಕವು .**
**ಅದರ ಮೇಲ್ಗಡೆಯುಂಟು ಹುಣ್ಣಿಮೆಯ ಬಯಲು .**
**ಅದರ ಮೇಲ್ಗಡೆಯಂಟು ನವರಂಧ್ರಗಳು !**
**ಒಂಭತ್ತು ಛಾಯೆಗಳ ಏಕಾಂತ ಮಿನುಗು !**
**ಅದರ ಮೇಲ್ಗಡೆಯುಂಟು ಸಪ್ತ ದ್ವೀಪಗಳ ದಿವ್ಯ ತೇಜ!**
**ಅದರ ಮೇಲ್ಗಡೆಯುಂಟು ದಿವ್ಯ ಕಾಂತಿ ! ರತ್ನ ಮಹಾ ಮಂಟಪವು!**
**ಅದರ ಮೇಲ್ಗಡೆಯುಂಟು ಹವಳ ಛಾಯೆ- !**
**...............................................**
**...............................................**

**ನಾದ ನಾದ ಗೂಡಿ, ನಾಮ ರೂಪವಾಯ್ತು ;**
**ನಾದದೊಳಗೆ ನಾದ ನಾಟಿ ಇರಲು,**





**ವಾದ ಗೆಯ್ಯುವವರು ವರ್ಣಿಸಬಲ್ಲರೇ ?**
**ವಿಶ್ವದಾಭಿರಾಮ ಕೇಳು ವೇಮ .**

**ಹಗಲು ಇರುಳು ಮರೆತು, ಭಾವವನ್ನೆ ಮರೆತು ,**
**ತಾನು ನಾನು ಎನುವ ತಿಳಿವು ಮರೆತು,**
**ಉಳ್ಳ ಮನುಜನೆ ತಿಳಿ ; ಉತ್ತಮ ಯೋಗಿಯವ .**
**ವಿಶ್ವದಾಭಿರಾಮ ಕೇಳು ವೇಮ .**

**ಮೂಢ ನಂಬುಗೆ : ಕಂದಾಚಾರ :-**

ಮಹಾತ್ಮ ಕಬೀರರು, ಇದ್ದ ಕಾಲದಲ್ಲಿ ಸಿಕಂದರ ಲೋದಿ ದಿಲ್ಲಿಯ ಬಾದಶಹನಾಗಿದ್ದನು. ಇವನಾಗಲಿ, ಇವನ ತಂದೆಯಾಗಲಿ , ಹಿಂದು ಧರ್ಮೀಯರಿಗೆ ಕೊಟ್ಟ ಚಿತ್ರಹಿಂಸೆ ಅಷ್ಟಿಷ್ಟಲ್ಲ. ಸ್ವತಃ ಕಬೀರರಿಗೂ ಪರಿ ಪರಿ ಕಷ್ಟ ನೀಡಿದರು , ಈ ಬಾದಶಹರು . ಈ ಧರ್ಮಾಂಧರು ಮೂರ್ತಿಗಳನ್ನು ಒಡೆದರು, ಪೂಜಾರಿಗಳನ್ನು ಕೊಂದರು. ಹಲವಾರು ಮಂದಿರಗಳನ್ನು ಮಸೀದೆಗಳನ್ನಾಗಿ ಪರಿವರ್ತಿಸಿದರು. ಇಂಥ ಪರಿಸರದಲ್ಲಿ ನಿರಾಕಾರ ಪರಮಾತ್ಮ ಕಲ್ಪನೆ ಮತ್ತು ಜಾತಿ ಭೇದದ ಪೂತ್ಕಾರಗಳು ಪರಿಸ್ಥಿತಿಯ ಅನಿವಾರ್ಯ ಅಗತ್ಯಗಳೇ ಆಗಿದ್ದವು. ಹೀಗಾಗಿ , ಮುಸ್ಲಿಂ ಸಾಕು-ತಾಯಿ ತಂದೆಗಳ ನೆರಳಲ್ಲಿ ಬೆಳೆದ ಕಬೀರರು ಮೂರ್ತಿ ಪೂಜೆಯನ್ನು ಪುರಸ್ಕರಿಸಲಿಲ್ಲ; ತೀರ್ಥ ಕ್ಷೇತ್ರಗಳ ಯಾತ್ರೆಯನ್ನು ಪೂತ್ಕರಿಸಿದನು. ‘ ಕಲ್ಲಿನ ಪೂಜೆಯಿಂದ ಮೋಕ್ಷ ಸಿಗುವಂತಿದ್ದರೆ, ನಾನು ಚಿಕ್ಕ ಶಿಲಾ ಮೂರ್ತಿಯನ್ನಷ್ಟೇ ಏಕೆ ? ದೊಡ್ಡ ಪರ್ವತವನ್ನೇ ಪೂಜಿಸುತ್ತಿದ್ದೆ ” ಎಂದು ತಿಳಿಸಿದ್ದಾರೆ.

“ ನಾನು ಅನೇಕ ತೀರ್ಥ ಕ್ಷೇತ್ರಗಳಲ್ಲಿ ನೀರು ಮುಳುಗಿದ್ದೇನೆ. ಆದರೆ ಅದರಿಂದಾವ ಪ್ರಯೋಜನವೂ ಇಲ್ಲವೆಂದು ಕಂಡುಕೊಂಡಿದ್ದೇನೆ. ” ಎಂದೂ ಕಬೀರರು ಹೇಳಿದ್ದಾರೆ.

**“ ತಿರುಗಿಸಿ ಜಪಮಣಿ ಯುಗಗಳೆ ತಿರುಗಿವೆ .**
**ತಿರುಗುವ ಮನವದು ನಿಲಲಿಲ್ಲ .**
**ತಿರುಗುವ ಮನವನು ತಿರುಗಿಸು ಧ್ಯಾನದಿ ;**
**ತಿರುಗುವ ಜಪಮಣಿ ಬೇಕಿಲ್ಲ . ”**

ತೋರಿಕೆಯ ಜಪಮಣಿ ತಿರುಗಿಸಿ ಜಪದೆಣಿಕೆ ಮಾಡುವುದರಿಂದ ಧ್ಯಾನ ಸಾಧನೆಯಾಗದು. ಹಾಗಾದರೆ , ಧ್ಯಾನವು ಹೇಗೆ ನಡೆಯಬೇಕು ?

**ಧ್ಯಾನದ ಪೂಜೆಗೆ ತೊಡಗಿರೆ ಮನವು ,**
**ಮಾತು ಅಪ್ಪಲಿ ಮೌನವನು .**
**ಹೊರಗಿನ ಬಾಗಿಲು ಎಲ್ಲವ ಮುಚ್ಚಿ ,**
**ತೆರೆಯೋ ಒಳಗಿನ ಬಾಗಿಲನು .**

ನಾಥ ಯೋಗಿಗಳ ಬಾಹ್ಯ ವೇಷ ಭೂಷಣ ಕಂಡು , ಕಬೀರರು ಹೀಗೆ ಟೀಕಿಸಿದ್ದಾರೆ.

**ಗಂಧ ಮಾಲೆಗಳ ಹೊಂದಿದ ಮಾತ್ರಕೆ**
**ಭಕ್ತಿಯೆಂತು ಪಡೆಯುವಿರಿ ?**
**ಗಡ್ಡ ಮೀಸೆಗಳ ಬೆಳೆಸಿಕೊಂಡು ,**
**ಜಗದೊಳಗೆ ಲಾಗವ ಹಾಕುವಿರಿ . "**

ಪೂಜಾರಿ-ಪುರೋಹಿತರು ಗಡ್ಡ-ಮೀಸೆಗಳನ್ನು ಬೋಳಿಸಿಕೊಂಡು ತಮ್ಮ ವೈಶಿಷ್ಟ್ಯವನ್ನು ಮೆರೆಯಿಸಬಯಸುತ್ತಾರೆ. ಅವರಿಗೆ ಕಬೀರರ ಉಪದೇಶ ಈ ರೀತಿಯಿದೆ.

**ಗಡ್ಡ ಮೀಸೆಗಳೆಲ್ಲವ ಬೋಳಿಸಿಕೊಂಡು ,**
**ಏತಕೆ ಲಕ ಲಕ ಹೊಳೆಯುವಿರಿ ?**
**ಹೊಲಸೆಲ್ಲವು ಒಳಗೆ ಮನದಲಿ ತುಂಬಿದೆ ;**
**' ಕಬೀರ ' ; ಮನವನೆಲ್ಲರೂ ಬೋಳಿಸಿರಿ .**

**ಕಬ್ಬಿಣದ ನಾವನು ಏರಿ ಆದರಲಿ ,**
**ಕಲ್ಲು ಬಂಡೆಗಳನೇ ನೀ ತುಂಬಿಕೊಂಡೆ .**
**ವಿಷದ ಗಂಟನು ತಲೆಯಲಿ ಹೊತ್ತು ,**
**ಇಳಿಯಬಯಸುವೆ ನೀ ಆಚೆಯ ದಂಡೆ.**
ಮಸೀದೆಯ ಮುಲ್ಲಾನಿಗೆ ಕಬೀರ ಹೇಳುತ್ತಾರೆ :

**ಮಸೀದೆಯೊಳೇತಕೆ ನೀ ಕೂಗುವೆ ಮುಲ್ಲಾ ?**
**ನಿನ್ನ ದೊರೆಯು ಕಿವುಡನೇನು ?**
**ಇರುವೆಯ ಕಾಲಲಿ ಉಲಿಯುವ ನೂಪುರ**
**ನಿನಾದವನೂ ದೊರೆ ಕೇಳುವನು.**

ಸೂಫೀ ಸಾಧಕನಿಗೆ ಕಬೀರನ ಛಾಟಿಯೇಟು ಬೇರೆ ರೀತಿ.

**ಮುಸುಗು ಹಾಕಿ ಧ್ಯಾನ ಮುದ್ರೆಯಲ್ಲಿ ,**
**ಜಪಿಸುವೆಯಾ ಉದ್ದನೆ ಮಾಲೆಯನು .**
**ನಿನ್ನಂತರಂಗದ ಕಪಟ ಕತ್ತರಿಯ ,**
**ಸ್ವಾಮಿಯು ನೋಡದೆ ಇಹನೇನು ?**

ಮಾತಿನ ಡಂಬಾಚಾರಿಗಳನ್ನು ಕುರಿತು ಮಹಾತ್ಮ ಕಬೀರ ಹೀಗೆ ಉಪದೇಶಿಸಿದ್ದಾರೆ.





**ಸೂಚಿಸುವವರೇ ದೊರೆತರು ಎಲ್ಲ ;**
**ಆಚರಿಸುವರೆನಗೆ ಸಿಗಲಿಲ್ಲ.**
**ಆಚರಿಸದೆ ಬರಿ ಸೂಚಿಸುವವ ಸತ್ತರೆ,**
**ಅಳುವವರಾರೂ ಇಲ್ಲ.**

ಹೀಗೆ , ಮಹಾತ್ಮ ಕಬೀರರು ಮೋಕ್ಷ ಸಾಧನೆಗೆ ಅನವಶ್ಯಕಗಳೆಂದು ತಮಗೆ ಕಂಡು ಬಂದ, ಮತ್ತು ಕಾಲದ ಕರೆಗೆ ಓಗೊಟ್ಟು , ಮೂರ್ತಿ ಪೂಜೆ, ಬಾಹ್ಯ ವ್ರತಾಚಾರ, ತೀರ್ಥಕ್ಷೇತ್ರ ಮುಂತಾದ ಮೂಢ ನಂಬುಗೆಗಳನ್ನೆಲ್ಲ ಕಟುವಾಗಿ ಟೀಕಿಸಿದ್ದಾರೆ. ನಾಮಸ್ಮರಣೆ, ಶುದ್ಧ ಭಕ್ತಿ, ಪ್ರೇಮಾನುಸಂಧಾನಗಳನ್ನು ಬಹುವಾಗಿ ಮೆಚ್ಚಿ ಉಪದೇಶಿಸಿದ್ದಾರೆ. ಇವರ ಉಪದೇಶದ ಧಾಟಿಯಲ್ಲಿ ಈ ಮುಂಚಿನ ಮಹಾರಾಷ್ಟ್ರದ ಸಂತರ ಹಾಗೂ ಅಲ್ಪಾಂಶ ಸೂಫಿ ಸಂತರ ಪ್ರೇಮದ ಮಾದಕತೆಗಳ ಪ್ರಭಾವವನ್ನು ವಿಮರ್ಶಕರು ಗುರುತಿಸುತ್ತಾರೆ. ನಾಮ ಸ್ಮರಣೆಯಲ್ಲಿ ' ರಾಮ ' ಶಬ್ದವನ್ನು ಬಳಸುತ್ತಿದ್ದರೂ, ಇದು ದಾಶರಥಿ ರಾಮನ ಅವತಾರಿಕ ಕಲ್ಪನೆಯೇನೂ ಅಲ್ಲ. ಏಕೆಂದರೆ, ಅವರು ಆ ರೀತಿ ಸ್ಪಷ್ಟೀಕರಿಸಿದ್ದಾರೆ.

**ದಶರಥ ಸುತ ತಿಹು ಲೋಕ ಬಖಾನಾ !**
**ರಾಮ ನಾಮ ಕಾ ಮರಮ ಹೈ ಆನಾ !**
**ತಥಾ ತು ಹರಖಿ ಹರಖಿ ಗುಣ ಗಾ ಈ .**

ಈ ಬಗೆಯ ಮೂರ್ತಿ ಪೂಜೆಯ ನಿರರ್ಥಕತೆ, ಕಂದಾಚಾರ-ಭಾವ ಜಡತೆ ಮತ್ತು ಮೂಢ ಶ್ರದ್ಧೆಗಳ ಖಂಡನೆಯಲ್ಲಿ ಯೋಗಿ ವೇಮನರು ಸಹ , ಇನ್ನೂ ಹೆಚ್ಚಲ್ಲವಾದರೆ, ಕಬೀರರಷ್ಟಾದರೂ , ಉಗ್ರ ಟೀಕಾಕಾರರಾಗಿದ್ದಾರೆ. ಕಬೀರರು ವೇಮನರ ಸಮಕಾಲೀನರಾಗಿದ್ದರೂ, ಅವರು ಉತ್ತರ ಭಾರತದ ಮುಸ್ಲಿಂ ಕ್ರೂರ ಆಡಳಿತದ, ಮತಾಂಧತೆಯ ಪಿಡುಗನ್ನು ಕಣ್ಣಾರೆ ಕಂಡವರು ; ಸ್ವಯಂ ಅನುಭವಿಸಿದವರು. ಇನ್ನು ವೇಮನರ ನುಡಿಗಳಲ್ಲಿಯೇ ಅವರ ವಿಚಾರಪ್ರಣಾಲಿಯನ್ನು ಅರಿಯುವಾ.

**ಹೃದಯದೊಳಿರುತಿಪ್ಪ ಹರನ ತಿಳಿಯದಿದ್ದು ,**
**ಜಗದಿ ಶಿಲೆಗೆ ನಮಿಪ ಜೀವಿಗಳೇ!**
**ಕಲ್ಲಿನೊಳೇನುಂಟು ? ಕಾಣು ಜೀವಿಯಲ್ಲಿ ,**
**ವಿಶ್ವದಾಭಿರಾಮ ಕೇಳು ವೇಮ .**

**ನದೀ ತೀರ ಕುರಿತು, ನಡು ಕಾನನ ಕುರಿತು,**
**ಗುಡ್ಡ ಕಲ್ಲು ಕುರಿತು ಗೊಡವೆ ಏಕೆ ?**
**ಮನಸಿನಲ್ಲಿ ಶಿವನು ಮಡಗಿಹುದನರಿಯನು .**
**ವಿಶ್ವದಾಭಿರಾಮ ಕೇಳು ವೇಮ .**

**ಕಾಶಿ, ಮಧುರೆ, ಕಂಚಿ, ಗಯೆ, ಪ್ರಯಾಗ, ಸೇತು,**
**ಅಲೆದು ಅಲೆದು ತನ್ನ ಆತ್ಮ ಕಾಣ.**
**ವಾಸನೆಯಳಿಯದಿರೆ ವ್ಯರ್ಥ ವಿಧಗಳಷ್ಟೆ.**
**ವಿಶ್ವದಾಭಿರಾಮ ಕೇಳು ವೇಮ.**

**ದೇಶ ವೇಷಗಳನು ದೇವ ನೋಡನಯ್ಯ;**
**ಆತ್ಮದಲ್ಲಿರುತಿಹ ಪ್ರೀತಿ ತುಂಬಿ.**
**ಕಂಡರಿಯಲು ವೇಷ ಕೂಳಿಗಾಗಿಯಷ್ಟೆ.**
**ವಿಶ್ವದಾಭಿರಾಮ ಕೇಳು ವೇಮ.**

**ವೇಷಧಾರಿ ತಾನು ಕಾಷಾಯ ವಸ್ತ್ರವ,**
**ಬೋಳು ನೆತ್ತಿ ಹೊಂದಿ, -ಪಡಲು ಗರ್ವ,**
**ಬೋಳು ತಲೆಯದಷ್ಟೆ, ಬೋಳಿಹವೆ ಯೋಚನೆ?**
**ವಿಶ್ವದಾಭಿರಾಮ ಕೇಳು ವೇಮ.**

**ಬಟ್ಟೆ ರೇಶ್ಮೆಯುಟ್ಟು, ಪಟ್ಟೆ ನಾಮವಿಟ್ಟು,**
**ಒಟ್ಟು ಭ್ರಾಂತಿ ತಾನೆ ವೈಷ್ಣವೆಂದು.**
**ಕಂಠ ಪೂರ್ತಿ ಕುಡುಕ ಕುಸಿವ ಲೋಕಕಂಟಿ.**
**ವಿಶ್ವದಾಭಿರಾಮ ಕೇಳು ವೇಮ.**

**ಬೂದಿ ಬಳಿಯಲೆಷ್ಟೊ; ಭುಜದಿ ಅಲಂಕಾರ;**
**ಧರಿಸಿದ ಲಿಂಗಗಳು! ತರದ ಮತವು.**
**ಇಲ್ಲಿ ಮಾತ್ರವಷ್ಟೆ, ಅಲ್ಲಿ ಸಲ್ಲವಯ್ಯ!**
**ವಿಶ್ವದಾಭಿರಾಮ ಕೇಳು ವೇಮ.**

**ಅಕ್ಷಮಾಲ ಎಣಿಸಿ, ಅಳಲು ಪಡೆಯಲೇಕೆ?**
**ನಿಶ್ಚಯಾತ್ಮನಾಗು ನಿಯತಿ ಮೀರಿ;**
**ಹುಚ್ಚ ಇಷ್ಟ ಅವನು ಗುಹೆಯ ಸೇರಲೇನು?**
**ವಿಶ್ವದಾಭಿರಾಮ ಕೇಳು ವೇಮ.**

**ನೀರು ಮುಳುಗಲೇನು? ನಿಧಿಯ ಹೂಳಲೇನು?**
**ಮನದಿ ಗುಡಿಯೆಡೆ ಕರ ಮುಗಿದರೇನು?**
**ಒಳಗೆ ಕಪಟ ಕಲ್ಮಶ ಒಡಲು ತುಂಬಿ ಇರಲು.**
**ವಿಶ್ವದಾಭಿರಾಮ ಕೇಳು ವೇಮ.**





**ವರ್ಣ ಭೇದ :-**

ಮಾನವನು ತನ್ನ ಬುದ್ಧಿ ಮತ್ತು, ಕರಕುಶಲತೆ, ಪರಿಸರದ ಅನುಕೂಲತೆಗೆ ಹೊಂದಿಕೊಂಡು, ಅಲ್ಲಲ್ಲಿಯ ಅಗತ್ಯಗಳನ್ನು ಗಮನಿಸಿ, ವಿವಿಧ ಕರ್ಮಗಳನ್ನು ಅನುಸರಿಸುವುದು ಸಹಜವೇ ಆಗಿದೆ. ಹೀಗೆ, ಗುಣ ಮತ್ತು ಕರ್ಮಗಳನ್ನು ಅನುಸರಿಸಿ, ಸಮಾಜದ ಸದಸ್ಯರ ವರ್ಗೀಕರಣವನ್ನು ಜಗತ್ತಿನ ಎಲ್ಲ ಪ್ರದೇಶಗಳಲ್ಲಿಯೂ ಕಾಣಬಹುದು. ಓದಿ ಬ್ರಾಹ್ಮಣನಾದ; ಕಾದಿ ಕ್ಷತ್ರಿಯನಾದ; ಊರೂರು ತಿರುಗಿ, ಸರಕು ಹಂಚಿ ವೈಶ್ಯನಾದ; ಶಾರೀರಿಕ ಶ್ರಮ ಸಲ್ಲಿಸಿ ಶೂದ್ರನಾದ. ಹಿಂದಿನ ಶೂದ್ರನು ಓದನೋದಿ, ಬ್ರಾಹ್ಮಣನಾಗುತ್ತಿದ್ದ; ಕಾದಾಟದಲ್ಲಿ ತೊಡಗಿ ಕ್ಷತ್ರಿಯನಾಗುತ್ತಿದ್ದ; ವ್ಯಾಪಾರದಲ್ಲಿ ತೊಡಗಿ ವೈಶ್ಯನಾಗುತ್ತಿದ್ದ. ಈಗಲೂ ಹಾಗೇ ನಡೆಯುತ್ತಿದೆ. ಅದು ನಡೆಯಲೇಬೇಕು. ಇಂದಿನ ವೀರಶೈವರಲ್ಲಿಯೂ ಸಹ, ಓದಿದ ಇಲ್ಲವೆ ಅಯ್ಯಾಚಾರದ ಪೌರೋಹಿತ್ಯ ನಡೆಸುವವರು ವಿಪ್ರ ಇಲ್ಲವೆ ಅರಾಧ್ಯ ಇಲ್ಲವೆ ಜಂಗಮರೆನಿಸಿದ್ದಾರೆ. ಗೌಡಕಿ, ನಾಡಗೌಡಕಿ, ದೇಸಾಯಿಗಿರಿ ನಡೆಸುವ ಬಂಟರು ಕ್ಷತ್ರಿಯ ಸಮಾನ ಪಂಚಮ ಸಾಲಿಗಳಾದರು. ಇನ್ನು, ವ್ಯಾಪಾರ ಹಾಗೂ ಹಣಕಾಸಿನ ವ್ಯವಹಾರದಲ್ಲಿ ತೊಡಗಿದವರು ವಣಿಕ ಇಲ್ಲವೆ ವೈಶ್ಯ ಅರ್ಥಾತ್ ಶ್ರೇಷ್ಠ,-ಶೆಟ್ಟಿ ಇಲ್ಲವೆ ಬಣಜಿಗರಾಗಿದ್ದಾರೆ. ಕೊನೆಗೆ, ಇತರ ಜನರೆಲ್ಲರನ್ನೂ ಸಾದಾ ಲಿಂಗಾಯತ ಇಲ್ಲವೆ ಸಾದರು ಮತ್ತು ಕುರುಬ-ಲಿಂಗಾಯತ, ಬೇಡ ಲಿಂಗಾಯತ, ಇತ್ಯಾದಿ ಅವರ ಮೂಲ ಬುಡಕಟ್ಟಿನೊಂದಿಗೆ ಗುರುತಿಸಿದ ಶೂದ್ರ ಸಮಾನರಾದರು. ಇನ್ನು, ಚತುರ್ವರ್ಣೀಯರೆಂದು ಹೆಸರಿಸಿದ ಬ್ರಾಹ್ಮಣ್ಯ ಪ್ರಧಾನ ಗುಂಪು ಹೊರಗಿರಿಸಿದ, ಹೊಲೆಗೇರಿ ಇಲ್ಲವೆ ಮಹಾತ್ಮಾ ಗಾಂಧಿಯವರು ಹೆಸರಿಸಿದ ಹರಿಜನ ಕೇರಿಯ ಹರನ ಭಕ್ತರಲ್ಲಿ ಸಹ, ಪೂಜಾರಿ-ಪುರೋಹಿತರಾಗಿರುವವರು ಡೋಹರರೆನಿಸಿದ್ದಾರೆ. ತಲವಾರ ಹಿಡಿದು ಕಾದುವ ಬಂಟರು ( ಛ ) ಚಲವಾದಿಯರಾಗಿದ್ದಾರೆ. ಚರ್ಮ-ಕೈಗಾರಿಕೆಯ ಉದ್ದಿಮೆ ನಿರತರು, ಹೊಲೆಯರಾಗಿದ್ದಾರೆ ಮತ್ತು ಸತ್ತ ದನದ ಮಾಂಸ ತಿನ್ನುವ ಮತ್ತು ಚರ್ಮ ಸುಲಿದು ಕೊಡುವವರು ಮಾದಿಗರಾಗಿದ್ದಾರೆ. ಆದರೆ ಈ ಶಾಸ್ತ್ರೀಯ ಸಮಾಜ ವಿಭಜನೆಯ ಅಡಿಯಲ್ಲಿ ಚತುರ ಮತಿಗಳಾದ ವಿಪ್ರರು, ವೇದ ನಂತರದ ಬೌದ್ಧ ಪೂರ್ವ ಯುಗದಿಂದಲೂ, ಶೋಷಣೆಯ ಹೇತುವಿನಿಂದ ಮತ್ತು ತಮ್ಮ ಮೇಲ್ಮೆಯನ್ನು ಚಿರಸ್ಥಾಯಿಗೊಳಿಸುವ ಹೇತುವಿನಿಂದ ಮನುಷ್ಯನ ಜಾತಿಯೊಂದಿಗೆ ಈ ವರ್ಣ ವ್ಯವಸ್ಥೆಯನ್ನು ಟಳಕು ಹಾಕಿದರು. ಸ್ಮೃತಿಕಾರನಾದ ಮನುವು ಜಾತಿಯೊಂದಿಗೆ ವರ್ಣಗಳನ್ನು ಟಳುಕು ಹಾಕಿ ಶೋಷಣೆಯ ಹಾದಿಯನ್ನು ಚಿರಸ್ಥಾಯಿಗೊಳಿಸಿದ ಮಹಾವಿಪ್ರ. ಪೂಜಾರಿ ಪುರೋಹಿತರು, ಆಚಾರ್ಯರು ಮತ್ತು ಅಯ್ಯಾಚಾರದ ಜಂಗಮರು ಹಾಗೂ ಡೋಹರರು ಈ ವಿಪ್ರರ ಗತ್ತನ್ನು ತಮ್ಮ ಸೀಮಿತ ಸ್ವಾರ್ಥ ಸಾಧನೆಗಾಗಿ ಮುಂದುವರಿಸಿಕೊಂಡು ಬಂದರು. ಅದರ ಪ್ರತಿಪಾದಕರಾಗಿ ನಿಂತರು. ಧಾರ್ಮಿಕ ಸಾಧನೆ ಹಾಗೂ ಮೋಕ್ಷ ಪ್ರಾಪ್ತಿಯ ವಿಷಯದಲ್ಲಂತೂ ಈ ಜಾತಿ ವರ್ಣಗಳ ಭೇದವು, ಬ್ರಾಹ್ಮಣ್ಯ ಪ್ರಧಾನ ಸಮಾಜದಲ್ಲಿ ಶಿಖರ ಮುಟ್ಟಿ ಇಂಥ ಅಶಾಸ್ತ್ರೀಯ ಪದ್ಧತಿಯನ್ನು ಚಿರಸ್ಥಾಯಿಗೊಳಿಸಲು, ಗೊಲ್ಲರ ಕೃಷ್ಣನನ್ನೂ, ಕ್ಷತ್ರಿಯ ರಾಮ-ಬುದ್ಧರನ್ನೂ, ಬೇಡ ವಾಲ್ಮೀಕಿಯನ್ನೂ, ಎಲ್ಲಕ್ಕಿಂತ ಹೆಚ್ಚಾಗಿ ಮಾದಿಗ ವಸಿಷ್ಠರನ್ನೂ ಮತ್ತು ವರ್ಣ ಸಂಕರ ಸಂಜಾತ ವ್ಯಾಸನನ್ನೂ ಅವತಾರ ಪಟ್ಟಕ್ಕೇರಿಸಿ, ಕೈ ತೊಳೆದುಕೊಂಡರು. ಆದರೆ ಕಣ್ತೊತ್ತುವಂತೆ ಪರಮಾತ್ಮ ಸೃಷ್ಟಿಯಲ್ಲಿ ಜಾತಿಗೆ ಸಂಬಂಧಿಸಿ ಮೇಲುಕೀಳು ಗಣನೆ ಇಲ್ಲ, ಎಂದು ತೋರಿಸಲು

ಪರಮಾತ್ಮನು ಯಾರಿಗೋ ಹುಟ್ಟಿದ ಪರಿಚಾರಿಕೆಯ ಮಗ, ಸತ್ಯಕಾಮನನ್ನು ಋಷಿಯನ್ನಾಗಿಸಿದ; ಮಹರ್ಷಿಗಳಾದ ನಾರದ, ಪರಾಶರರನ್ನು ವೇಶ್ಯೆಯರ ಯೋನಿಯಲ್ಲಿ ಜನಿಸುವಂತೆ ಮಾಡಿದ. ಹುಟ್ಟಿದ ( ಜಾತ ) ಯೋನಿ ಮುಖ್ಯವಲ್ಲ; ಕಪ್ಪೆ ಹೊಟ್ಟೆಯಲ್ಲಿ ಹುಟ್ಟಿ ಮಾಂಡವ್ಯನಾಗಬಹುದು; ಗಿಳಿಯ ಗರ್ಭದಲ್ಲಿ ಜನಿಸಿ ಶುಕ ಮುನಿಯಾಗಬಹುದು. ಆದರೆ ಶೋಷಕ ವಿಪ್ರರು ತಮ್ಮನ್ನು ಗುಣ-ಕರ್ಮಗಳಿಂದ ಮೇಲಾಗಿ ಗುರುತಿಸಲು ಒಪ್ಪದೆ, ಜಾತಿಯ ಮೇಲ್ಮೆಯಿಂದಲೇ ಗುರುತಿಸಬೇಕೆಂದು ಸಾಧಿಸುತ್ತ ಬಂದಿದ್ದಾರೆ. ಆದರೆ ಉತ್ತರ ಭಾರತದ ಸಂತರೂ, ದಕ್ಷಿಣ ಭಾರತದ ನಯನಾರರೂ, ಆಳ್ವಾರರೂ, ಕರ್ನಾಟಕದ ಶಿವಶರಣರೂ, ವೇಮನ , ತುಕಾಮರಂಥ ವಿಭೂತಿ-ಪುರುಷರೂ , ಈ ಜಾತಿ ಭೇದವನ್ನೂ , ಜಾತಿಯೊಂದಿಗೆ ಗುರುತಿಸಲಾದ ವರ್ಣ ವ್ಯವಸ್ಥೆಯನ್ನೂ ಕಟುವಾಗಿ ಟೀಕಿಸಿದ್ದಾರೆ. ಮಹಾತ್ಮ ಕಬೀರರು ಹೀಗೆ ಹಾಡಿದ್ದಾರೆ :

**" ಜಾತಿ ಪಾತಿ ಪೂಛೇ ನಹಿ , ಕೋಈ ,**
**ಹರಿ ಕೋ ಭಜೇ ಹರಿ ಕಾ ಹೋ ಈ**

ಅಂದರೆ , ಯಾರ ಜಾತಿ-ಪಾತಿಗಳನ್ನು ಕೇಳಬೇಡ; ನಿನ್ನಷ್ಟಕ್ಕೆ ನೀನು ಹರಿಯನ್ನು ಭಜಿಸು; ತೀರಿತು ; ಹರಿಯವನೇ ಆಗುವಿ.

**ಶ್ರೀ ಹರಿಯೇ ರತ್ನ, ಸಂತ ಪರೀಕ್ಷಕ .**
**ಜನ ಹರಳಿನ ಪರೀಕ್ಷೆಯ ಹುಚ್ಚಿಹರು .**
**ರತ್ನ ಪರೀಕ್ಷಕ ಬಂದರೆ ಮಾತ್ರವೆ**
**ರತ್ನವ ಕೊಂಡು ಹೋಗುವರು .**

**ರಾಮನಾಮವೇ ಒರೆಗಲ್ಲು ಕಬೀರ ,**
**ಖೋಟಾ ನಿಲ್ಲದು ಇಲ್ಲಿ ;**
**ರಾಮ ನಾಮದಾ ಒರೆಗಲ್ಲಿಗೆ ನಿಂತವ**
**ಸತ್ತರೂ ಬದುಕುವನಿಲ್ಲಿ .**

ಮಹಾತ್ಮ ಕಬೀರರು ಮೂಲತಃ ಭಕ್ತರು. ಆದರೆ ಅವರ ಭಕ್ತಿಯು ಆತ್ಮ ಭಕ್ತಿಯ ಹಂತಕ್ಕಷ್ಟೇ ಸೀಮಿತವಾಗಿದ್ದಿತೆಂದೇನೂ ಇರಲಿಲ್ಲ. ಅವರಲ್ಲಿ ಅಂತಸ್ಸಂಘರ್ಷವೂ ಇತ್ತು. ಇತ್ತ ಲೋಕ ಸಂಘರ್ಷವೂ ಇತ್ತು. ನಿವೃತ್ತಿಯೂ ಇತ್ತು. ಮತ್ತು ಲೋಕ ಸಂಗ್ರಹಕ್ಕೆ ಬೇಕಾದಷ್ಟು ಪ್ರವೃತ್ತಿಯೂ ಇತ್ತು. ಕಬೀರರ ಕಾಲದ ಸಾಮಾಜಿಕ ಪರಿಸ್ಥಿತಿ ಕುರಿತು ವಿಮರ್ಶಿಸಿದ ಲೇಖಕರು ತಿಳಿಸುವಂತೆ, ಆ ಕಾಲದಲ್ಲಿ ಈಶ್ವರೋಪಾಸನೆಯ ಅಧಿಕಾರದ ಬೇಡಿಕೆಯು, ಸಾಮಾಜಿಕ-ಆರ್ಥಿಕ ಸ್ವಾತಂತ್ರ್ಯದ ಬೇಡಿಕೆಯೇ ಆಗಿತ್ತು. ಈ ಕಾರಣದಿಂದಾಗಿಯೇ ಆ ಸಮಯದ ಜನತಾ ಚಳುವಳಿಗಳ ಬಾಹ್ಯರೂಪವು ಧಾರ್ಮಿಕವೇ ಆಗಿತ್ತು. ಸಕಲ ಮಹಾನ್ ನಾಯಕರು ಧರ್ಮದ ಹೆಸರಿನಲ್ಲಿಯೇ ಮಾನವ ಮುಕ್ತಿ ಮತ್ತು ಮಾನವರಲ್ಲಿ ಸಮಾನತೆಯ ಮೇಲೆ ಹಾಗೂ ಏಕತೆಯ ಮೇಲೆ ಒತ್ತು ನೀಡಿದ್ದರು. ಅವರೆಲ್ಲರೂ ಅಂದಂದಿನ ಕೆಟ್ಟ ರೂಢಿ ಸಂಪ್ರದಾಯಗಳನ್ನೂ , ಕುರುಡು ನಂಬುಗೆಗಳನ್ನೂ,





ಬಾಹ್ಯ ವಿಧಿನಿಷೇಧಗಳನ್ನೂ ಮತ್ತು ಕರ್ಮಕಾಂಡದ ಹಿಂಸಾಮಯ ಆಡಂಬರದ ಯಜ್ಞಯಾಗಗಳನ್ನೂ ಮುಕ್ತವಾಗಿ ಖಂಡಿಸುತ್ತಿದ್ದರು. ಆ ಯುಗದ ಧುರೀಣರ ಗುರಿ ಜನ ಸಾಮಾನ್ಯರ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿಯ ಯಾವುದೇ ರೂಪದ ಶೋಷಣೆಯನ್ನು ಕೊನೆಗೊಳಿಸುವುದೇ ಆಗಿತ್ತು. ಮಹಾತ್ಮ ಕಬೀರರ ಕಾವ್ಯದಲ್ಲಿ ಅಂದಿನ ವಿಸ್ಫುಟ ಚಿತ್ರವನ್ನು ಕಾಣಬಹುದಾಗಿದೆ.

ಕಬೀರರ ಸಮಯದಲ್ಲಿ ಮುಸ್ಲಿಂ ಆಡಳಿತವು ಸಾಕಷ್ಟು ದೃಢವಾಗಿಯೇ ಕಾಲೂರಿತ್ತು. ಮತ್ತು ಖಡ್ಗದ ಬಲದಿಂದ ತನ್ನ ಧರ್ಮವನ್ನು ಜನರ ಮೇಲೆ ಹೇರಲು ಕಟಿಬದ್ಧವಾಗಿತ್ತು. ಇತ್ತ ಹಿಂದುಗಳು , ಮೇಲು ವರ್ಗದ ಸ್ಥಳೀಯ ಆಳರಸರು , ಒಟ್ಟುಗೂಡಿ ಇಸ್ಲಾಮನ್ನು ಎದುರಿಸಲು ಸನ್ನದ್ಧರಾಗಿದ್ದರು. ಆ ಕಾಲಕ್ಕೆ ಉಪನಿಷತ್ತಿನ ಬ್ರಹ್ಮವಾದಿಗಳು, ಕರ್ಮಕಾಂಡಿಗಳಾದ ಮೀಮಾಂಸಕರು, ಶೈವರು, ವೈಷ್ಣವರು, ಶಾಕ್ತರು, ಸ್ಮಾರ್ತರು ಮೊದಲಾದವರ ಮತಗಳು ಪ್ರಚಲಿತವಿದ್ದವು. ಸ್ಮೃತಿಗಳನ್ನು ಆಧರಿಸಿ, ಸ್ಮಾರ್ತ ಪಂಡಿತರು ಶಾಸ್ತ್ರೀಯ ವಿವೇಚನೆಯ ಆಧಾರದ ಮೇಲೆ ಸಮಾಜ ಸಂಘಟನೆಯನ್ನು ಮಾಡಲು ಪ್ರಯತ್ನಿಸಿದರು. ಆದರೆ ಅವರು ನಿಮ್ನ ಜಾತಿಯವರನ್ನು ನಗಣ್ಯರೆಂದೂ, ತ್ಯಾಜ್ಯರೆಂದೂ ಪರಗಣಿಸಿದರು. ಪ್ರಾರಂಭದ , ಮುಸ್ಲಿಂ ಪೂರ್ವದ ಆಕ್ರಮಣಕಾರರು ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಅಲ್ಪ ಹೊಂದಾಣಿಕೆಯ ಮಾರ್ಪಾಡುಗಳೊಂದಿಗೆ ಅಪ್ಪಿಕೊಂಡರು. ಆದರೆ ಮುಸ್ಲಿಮರು ಕಟ್ಟಾ ಮತಾಂಧರು . ಇರುವುದನ್ನು ಎಳ್ಳಷ್ಟೂ ಒಪ್ಪದೆ, ತಮ್ಮ ಧರ್ಮ ಸಂಸ್ಕೃತಿಯ , ಧ್ವಜ ಏರಿಸಬಯಸಿದರು. ಹೀಗಾಗಿ , ಭಾರತೀಯ ಹಿಂದುಗಳು ಹಾಗೂ ಮುಸ್ಲಿಮರ ಮಧ್ಯೆ ವೈಮನಸ್ಯ ಮತ್ತು ದ್ವೇಷಗಳು ಬೆಳೆಯಹತ್ತಿದವು . ಮುಸಲಮಾನರ ಆಕ್ರಮಣ ಪೂರ್ವದಲ್ಲಿಯೇ ನಿಮ್ನ ವರ್ಗೀಯರಲ್ಲಿ ವಿದ್ರೋಹದ ಚಳವಳಿ ಆರಂಭಿಸಿತ್ತು. ಏಕೆಂದರೆ, ಬಿಹಾರದಲ್ಲಿ ಬೌದ್ಧ ಧರ್ಮದ ಪ್ರಭಾವವು ಕ್ಷೀಣಿಸುತ್ತಲೇ , ವಜ್ರಯಾನ ಸಂಪ್ರದಾಯದ ರೂಪದಲ್ಲಿ ಬೌದ್ಧ ಸಿದ್ಧರ ಪ್ರಭಾವ ಹೆಚ್ಚಿತು. ಈ ಸಿದ್ಧರಲ್ಲಿ ಹೆಚ್ಚಿನವರು, ಉಪೇಕ್ಷಿತ ಮತ್ತು ನಿಮ್ನ ಶ್ರೇಣಿ ವರ್ಗದ ಜನರಿಂದ ಬಂದವರಾಗಿದ್ದರು. ಮುಂದೆ ಬಂದ ನಾಥ ಸಂಪ್ರದಾಯವು ಈ ಸಿದ್ಧರ ವಿಕಸಿತ ರೂಪವೇ ಆಗಿದೆ. ಮಗಧ ಅರ್ಥಾತ್ ವೇದ ವಿರೋಧಿಗಳಾದ ಈ ಸಿದ್ಧ-ನಾಥರು, ಸ್ಮೃತಿಕಾರರ ಕೃತಿಗಳನ್ನಾಧರಿಸಿದ ಸ್ಮಾರ್ತ ಮತವನ್ನು ಖಂಡಿಸಿದರು ಮತ್ತು ಬ್ರಾಹ್ಮಣರ ತುತ್ತೂರಿಗಳಾದ ಪ್ರಸ್ಥಾನತ್ರಯಕ್ಕೆ ಮುಟ್ಟುಗೋಲು ಹಾಕಿದರು. ಇವರ ಮತದಲ್ಲಿ ವರ್ಣಾಶ್ರಮಕ್ಕಾವ ಮನ್ನಣೆ ಇರಲಿಲ್ಲ ; ಇದಲ್ಲದೆ ಯಜ್ಞ ಯಾಗಗಳನ್ನು ಇವರು ಧೂತ್ಕರಿಸಿದರು. ಇಷ್ಟರಲ್ಲಿ ದೂರ ದಕ್ಷಿಣದಲ್ಲಿ ಆಳ್ವಾರರ ಭಕ್ತಿ-ಧಾರೆಯಡಿ, ಭಾಗವತ ಧರ್ಮವು ಮೂಡಿ ಬಂದಿತು. ಕಬೀರರ ಗುರು ರಮಾನಂದರು ಉತ್ತರದಲ್ಲಿ ಈ ಪಂಥದ ಹರಿಕಾರರಾದರು. ಅಲ್ಲಿ ಜಾತೀಯ ಮೇಲು ಕೀಳು ಭಾವನೆಗೆ ಇಂಬು ಇರಲಿಲ್ಲ. ಮುಕ್ತಿ ಮಾರ್ಗದಲ್ಲಿ ಯಾರು ಬೇಕಾದರೂ ಸಾಗಬಹುದಿತ್ತು. ಅವರಿಗೆ ಸಮಾನ ಅಧಿಕಾರವೂ ಇತ್ತು. ಉಪನಯನ ಹಾಗೂ ಕರ್ಮ ಕಾಂಡದ ಗೊಡವೆಯಿಲ್ಲದ ಈ ಮತವು ಸ್ವೀಕಾರಾರ್ಹವೆನಿಸಿತು. ಮೇಲಾಗಿ , ಬುದ್ಧದೇವನನ್ನು ವಿಪ್ರರು ವಿಷ್ಣುವಿನ ಅವತಾರವೆಂದು ಪ್ರಚುರ ಪಡಿಸಿ, ತಾವೂ ಮಾಂಸ ಭಕ್ಷಣೆಯನ್ನು ತೊರೆದು, ಉಳಿದ ಬೌದ್ಧರನ್ನು ಹಿಂದೂ ಮತದ ಶೂದ್ರರನ್ನಾಗಿಸಿದರು.

ಕಬೀರರ ಸಮಯದಲ್ಲಿ ಭಾರತದಲ್ಲಿ ಧಾರ್ಮಿಕ ವಲಯದಲ್ಲಿ ಪ್ರಭಾವ ಬೀರಿದ ಇನ್ನೊಂದು ಸಂಪ್ರದಾಯವೇ ಸೂಫಿಗಳದು . ಪ್ರಪಂಚ-ವಿದೂರ ಏಕೇಶ್ವರವಾದದ ಇವರು ಇಸ್ಲಾಂ ಕಲ್ಪನೆಯೊಂದಿಗೆ ಪೂರ್ಣ ಸಮ್ಮತ ಹೊಂದಿರಲಿಲ್ಲ. ಈ ಜನರು ಕಟ್ಟಾ ಮುಸ್ಲಿಂ

ಅಂಧಾಭಿಮಾನಿಗಳೇನಲ್ಲ . ಮುಸ್ಲಿಮರ ಕರ್ಮಕಾಂಡ ( ಶರೀಯತ್ ) ದಲ್ಲಿ ಇವರು ವಿಶ್ವಾಸ ಹೊಂದಿರಲೂ ಇಲ್ಲ. ಹೀಗೆ ಕಬೀರರ ಸಮಯದಲ್ಲಿ , ಉತ್ತರದ ಧಾರ್ಮಿಕ ಜಗತ್ತಿನಲ್ಲಿ ಹರಿಯುತ್ತಿದ್ದ, ಸಿದ್ಧ-ಯೋಗಿಗಳ ವಿಚಾರ ಪ್ರಣಾಲಿ, ಭಾಗವತ ಧರ್ಮದ ವಿಚಾರ ಪ್ರಣಾಲಿ ಹಾಗೂ ಸೂಫಿಗಳ ವಿಚಾರ ಪ್ರಣಾಲಿಗಳೆಂಬ ತ್ರೀವೇಣಿ ಧಾರೆಗಳು ಹರಿಯುತ್ತಿದ್ದವು. ಅನಾಥನಾಗಿ ಹುಟ್ಟಿ, ಮುಸ್ಲಿಂ ಸಾಕು ತಾಯಿ-ತಂದೆಗಳ ಆಶ್ರಯದಲ್ಲಿ ಬೆಳೆದು, ಭಾಗವತ ಧರ್ಮಗುರು ರಮಾನಂದರ ಶಿಷ್ಯತ್ವ ವಹಿಸಿ, ಸೂಫಿಗಳ ಸತ್ಸಂಗದಲ್ಲಿ ಬೆಳೆದು , ಸುಲ್ತಾನ ಸಿಕಂದರ ಲೋದಿಯಿಂದ ಕಡು ಕಷ್ಟಗಳನ್ನು ಅನುಭವಿಸಿದ ಕಬೀರ, ಪ್ರಚಲಿತ ಮತ ಸಂಪ್ರದಾಯಗಳನ್ನೆಲ್ಲ ಅರಗಿಸಿಕೊಂಡು, ಸಮನ್ವಯ ಮಾರ್ಗವನ್ನು ತನ್ನ ಆತ್ಮ ಸಾಕ್ಷಿಗೊಳಪಟ್ಟು ಪ್ರಚುರಪಡಿಸಿದರು. ಅವರು ಹೀಗೆ ಹಾಡಿದರು.

**ಪೋಥೀ ಪಢಿ ಜಗ ಮುಆ ,**
**ಪಂಡಿತ ಭಯಾನ ಕೋಯ .**
**ಢಾಈ ಅಕ್ಷರ ಪ್ರೇಮ ಕೇ**
**ಪಢೇ ತೋ ಸೋ ಪಂಡಿತ ಹೋಯ .**

ಕಬೀರರು ಎದುರಿಸಿದ ಪರಿಸ್ಥಿತಿಯನ್ನು ಹಿಂದೀ ಸಾಹಿತ್ಯದ ಖ್ಯಾತ ಚರಿತ್ರಕಾರರಾದ ಡಾ. ಹರಿಪ್ರಸಾದರು ಈ ರೀತಿ ವಿವರಿಸಿದ್ದಾರೆ : " ಕಬೀರರು ನಿಂತ ದಾರಿ ಚೌಕದಲ್ಲಿ, ಒಂದೆಡೆಗೆ ಮುಸಲ್ಮಾನತ್ವವು ಹೊರಹೊಮ್ಮುತ್ತಿತ್ತು. ಒಂದೆಡೆ, ಜ್ಞಾನವು ಹೊರಹೊಮ್ಮುತ್ತಿದ್ದರೆ, ಇನ್ನೊಂದೆಡೆ ಅಶಿಕ್ಷೆಯು ಹೊರಹೊಮ್ಮುತ್ತಿತ್ತು. ಒಂದೆಡೆ ಭಕ್ತಿ ಮಾರ್ಗವು ಹೊರಹೊಮ್ಮುತ್ತಿದ್ದರೆ, ಇನ್ನೊಂದೆಡೆ ಯೋಗ ಮಾರ್ಗವು ಹೊರಹೊಮ್ಮುತ್ತಿತ್ತು. ಒಂದೆಡೆ ನಿರ್ಗುಣ ಭಾವನೆಯು ಹೊರಹೊಮ್ಮುತ್ತಿದ್ದರೆ, ಇನ್ನೊಂದೆಡೆ ಸಗುಣ ಸಾಧನೆಯು ಪ್ರಕಟವಾಗಿತ್ತು. ಅವರು ಉಭಯ ದಿಶೆಗಳಲ್ಲಿ ಕಣ್ಣಾಡಿಸಬಲ್ಲವರಾಗಿದ್ದರು. ಮತ್ತು ಅಲ್ಲಿನ ಗುಣ-ದೋಷಗಳೆಲ್ಲವನ್ನೂ ಸ್ಪಷ್ಟವಾಗಿ ಕಾಣಬಲ್ಲವರೂ ಆಗಿದ್ದರು. ಅದು ಮಹಾತ್ಮ ಕಬೀರರಿಗೆ ಪರಮಾತ್ಮನು ಕರುಣಿಸಿದ ಕೃಪೆಯೇ ಆಗಿದ್ದಿತು."

ಕಬೀರರು ತಮ್ಮ ಕಾವ್ಯದಲ್ಲಿ, ಜಾತಿ-ಪಾತಿ, ವಂಶ, ಮತ-ಕೋಮು, ಸಂಸ್ಕಾರ-ಶ್ರದ್ಧೆ ಮತ್ತು ಶಾಸ್ತ್ರಗಳ ರೂಢಿ-ಸಂಪ್ರದಾಯಗಳನ್ನು ಛಿನ್ನ-ವಿಛಿನ್ನ ಮಾಡಿದ್ದರು. ಅವರು ಒಂದೆಡೆಗೆ ಪಂಡಿತರಿಗೆ ಸತ್ಯ-ಸುಳ್ಳುಗಳ ದರ್ಶನ ಮಾಡಿಸುತ್ತಿದ್ದರು. ಇನ್ನೊಂದೆಡೆಗೆ ಮುಲ್ಲಾರಿಗೆ ಕಟು ವಿಮರ್ಶೆಯ ಖಾರ ತಿನ್ನಿಸುತ್ತಿದ್ದರು. ಒಂದೆಡೆ , ಮಂದಿರ ತೀರ್ಥಾಟನೆಗಳ ನಿಸ್ಸಾರತೆಯನ್ನು ತಿಳಿಸಿ ಹೇಳುತ್ತಿದ್ದರೆ, ಇನ್ನೊಂದೆಡೆ ಮಸೀದೆ, ಹಜ್ ಯಾತ್ರೆಗಳ ನಿರರ್ಥಕತೆಯನ್ನು ಬಿಂಬಿಸಿ ಹೇಳುತ್ತಿದ್ದರು. ಅವರು ಹೀಗೆ ಸಾರಿ ಹೇಳಿದರು.

**ಅರೇ ಇನ್ ದೋಉನ ರಾಹ ನ ಪಾಈ**
**ಹಿಂದು ನ ಕೀ ಹಿಂದು ಆಈ ದೇಖೀ**
**ತುರುಕನ ಕೀ ತುರಕಾಈ.**





ಕಬೀರರು ಇನ್ನಿತರ ಸಂತರಂತೆ ವರ್ಣಾಶ್ರಮ ಪದ್ಧತಿಯನ್ನು ಪೂತ್ಕರಿಸಿದ್ದಾರೆ. ಜಾತಿಯಾಧಾರದಿಂದ ಭೇದ ಕಲ್ಪಿಸಿ, ಜನರಲ್ಲಿ ಮೇಲು ಕೀಳು ಭಾವನೆಯನ್ನು ಕುದುರಿಸುವ ವಂಚಕ ವಿಪ್ರರ ಜಾಲವನ್ನು ಕಬೀರರು ಕೊಚ್ಚಿ ಹಾಕಿದ್ದಾರೆ.

**ನೀವು ಯಾವ ರೀತಿ ಬ್ರಾಹ್ಮಣರು ?**
**ನಾವು ಯಾವ ರೀತಿ ಶೂದ್ರರು ?**
**ನಾವು ಯಾವ ಪ್ರಕಾರ ಘೃಣಿತ ರಕ್ತದವರು ?**
**ನೀವು ಯಾವ ಪ್ರಕಾರ ಪವಿತ್ರ ಹಾಲು ?**

ವಾರಾಣಸಿಯ ಠಕ್ಕ ಸಂತರ ಹೂರಣವನ್ನು ಹೊರಹಾಕುತ್ತ ಕಬೀರ ಹೀಗೆ ನುಡಿದಿದ್ದಾರೆ.

**" ಮೂರುವರೆ ಮೊಳದ ಧೋತರವುಟ್ಟು, ಮೂರು ಮಡಿಕೆಯ ಮುಂಡಾಸ ಸುತ್ತಿ, ಕೊರಳಲಿ ಜಪಮಾಲೆ ಧರಿಸಿಕೊಂಡು, ಕೈಯಲಿ ಮಾಲೆಯ ಹಿಡಿದುಕೊಂಡು, ಅಲೆಯುವ ಈ ನಿರ್ಭಾಗ್ಯರನ್ನು ಸಂತರೆನಲು ಹೊಲ್ಲ . ಈ ಜನರು ವಾರಾಣಸಿಯ ವಂಚಕರಷ್ಟೇ. "**

ದಿಲ್ಲಿ ಸುಲ್ತಾನರು ವಿಧಿಸಿದ ಕಾಯದೆ ಕಟ್ಟಳೆಯ ವ್ಯವಸ್ಥೆಯನ್ನು ಕುರಿತು ಚುಚ್ಚಿ ಮಾತನಾಡುತ್ತ ಕಬೀರ ಹೀಗೆ ನುಡಿದಿದ್ದಾರೆ.

**"ಕಾಜೀ ! ನೀನು ಸರಿಯಾಗಿ ಮಾತನಾಡುತ್ತಿಲ್ಲ. ನಾವಾದರೋ, ನಿಸ್ಸಹಾಯಕ, ದೀನ ಈಶ್ವರನ ಸೇವಕರು. ನಿಮ್ಮ ಮನಸ್ಸಿಗೆ ಕೇವಲ ರಾಜಸೀ ಮಾತುಗಳೇ ಹೊಳೆಯುತ್ತವೆ. ಆದರೆ, ಇಷ್ಟು ಮಾತ್ರ ತಿಳಿದುಕೋ . ಏನೆಂದರೆ , ಧರ್ಮದ ಸ್ವಾಮಿಯಾದ ಈಶ್ವರನೆಂದೂ ಅತ್ಯಾಚಾರಗೆಯ್ಯುವ ಆಜ್ಞೆಯನ್ನು ನೀಡಲಾರನು"**

ಪ್ರಸಿದ್ಧ ಇತಿಹಾಸಕಾರ ಬಕಲೇ ಹೀಗೆ ಸಮಾರೋಪಿಸಿದ್ದಾರೆ :

**" ಜನತೆಯ ಧರ್ಮಾಂಧತೆ ಮತ್ತು ಶಾಸಕರ ನೀತಿಯ ಕಾರಣದಿಂದಾಗಿ, ಕಬೀರನ ಜನ್ಮ ಕಾಲದ ಸಮಯದಲ್ಲಿ, ಹಿಂದು ಮುಸಲ್ಮಾನರ ಪಾರಸ್ಪರಿಕ ವಿರೋಧವು ಬಹಳ ಹೆಚ್ಚಾಗಿತ್ತು. ಧರ್ಮದ ನಿಜವಾದ ಅನುಭವವನ್ನು ಮರೆತು, ಕೃತ್ರಿಮ ವಿಭೇದಗಳಿಂದ ಉತ್ತೇಜಿತರಾಗಿ, ಉಭಯ ಮತಗಳವರು ಧರ್ಮದ ಹೆಸರಿನಲ್ಲಿ ಅಧರ್ಮವನ್ನೇ ಆಚರಿಸುತ್ತಿದ್ದರು. ಇಂಥ ಪರಿಸ್ಥಿತಿಯಲ್ಲಿ ನೈಜ ಮಾರ್ಗ ದರ್ಶಕನ ಪಾತ್ರವು ಕಬೀರರದಾಗಿತ್ತು. ಆದರೂ ಸಹ ಕಬೀರರ ಉಪದೇಶವು ಧಾರ್ಮಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿತ್ತು . ಆದರೇನು ? ಭಾರತೀಯ ನವಯುಗದ ಸಮಾಜ ಸುಧಾರಕರಲ್ಲಿ ಕಬೀರರ ಸ್ಥಾನವು ಎಲ್ಲಕ್ಕಿಂತ ಮೊದಲಿನದಾಗಿದೆ. ಏಕೆಂದರೆ, ಭಾರತೀಯ ಧರ್ಮವು ಅಂತರ್ಗತ ದರ್ಶನ , ನೈತಿಕ ಆಚರಣೆ ಮತ್ತು ಕರ್ಮಕಾಂಡ ಎಂಬೀ ಮೂರರ ಸಮಾವೇಶವಾಗಿದೆ. "**

ಮಹಾತ್ಮ ಕಬೀರರು ತಮ್ಮ ಶತಮಾನದ ಸಂಕುಚಿತ ವೃತ್ತಿಯನ್ನು ತೊಡೆದು ಹಾಕಿ, ಶುದ್ಧಗೊಳಿಸಿ, ಸಮಾಜದ ಪ್ರತಿಯೊರ್ವ ವ್ಯಕ್ತಿಯನ್ನು ಉದಾರನನ್ನಾಗಿಸಿದರು. ಇಲ್ಲಿಯೇ ಅವರ ವಿಶೇಷತೆಯಿದೆ.

ಇತ್ತ , ಮಹಾಯೋಗಿ ವೇಮನರು ದಾರ್ಶನಿಕ, ಧಾರ್ಮಿಕ ಹಾಗೂ ಸಾಮಾಜಿಕ ದೃಷ್ಟಿಯಲ್ಲಿ ಹೊಸತನವನ್ನು ಮೂಡಿಸಿದ್ದರೂ ಸಹ ಮಹಾತ್ಮ ಕಬೀರರಷ್ಟು ಪ್ರಭಾವವನ್ನು ಬೀರಿದಂತೆ ಕಾಣಬರುವುದಿಲ್ಲ. ಹೀಗೆ ಹೇಳಿದ ಮಾತ್ರಕ್ಕೆ ಅವರ ವಿಚಾರದ ಪ್ರಖರತೆಯನ್ನಾಗಲಿ, ಪ್ರಭಾವವನ್ನಾಗಲಿ ಕುಂಠಿತಗೊಳಿಸುತ್ತೇವೆಂದು ಅರ್ಥವಲ್ಲ. ಯೋಗಿ ವೇಮನರು ಸಿದ್ಧ ನಾಥ ಯೋಗಿಯೊಬ್ಬರಿಂದ ದೀಕ್ಷೆ ಪಡೆದು , ಅವರ ಶಕ್ತಿ ಸಂಪಾತದ ವಿಶೇಷ ಅನುಗ್ರಹಕ್ಕೆ ಪಾತ್ರರಾದವರಾದುದರಿಂದ, ಅವರ ಅನುಭವ ಹಾಗೂ ಗುರು ಸಂಪ್ರದಾಯ ಮೂಲಕ ತಮ್ಮ ಸಮಕಾಲೀನ ಉತ್ತರ ಭಾರತೀಯ ಸಂತ ಕವಿ ಕಬೀರರಿಗಿಂತ ಭಿನ್ನವಾಗಿಯೇನೂ ಇಲ್ಲ. ಜಾತಿ, ವರ್ಣ, ಮೇಲು-ಕೀಳು ಭಾವನೆಗಳ ಬಗ್ಗೆ ಹಾಗೂ ಸಾಮಾಜಿಕ ಸಮತೆಯ ಬಗ್ಗೆ ಯೋಗಿವರ್ಯರು ಸಂತರಿಗೆ ಸಾದೃಶವಾದ ಭಾವನೆಗಳನ್ನೇ ಅಭಿವ್ಯಕ್ತಿಸಿದ್ದಾರೆ.

**ಜಾತಿ ಮತವ ತೊರೆದು ಯೋಗಿಯಾಗೆ ಮೇಲು ;**
**ಜಾತಿ ಮುಳುಗಿ ನೀತಿ ಹೇಳಲೇನು ?**
**ಮತವು ತಿಳಿಯೆ, ಜಾತಿ ಬಿಡಲಂಜ ಬೇಡ .**
**ವಿಶ್ವದಾಭಿರಾಮ ಕೇಳು ವೇಮ .**

**ಜಾತಿಯೊಳಗೆ ಮೇಲು ಜಾತಿ ಕೀಳು ಎಲ್ಲಿ ?**
**ನಿಜವರಿಯದೆ ತಿರುಗಲೇನು ಫಲವು ?**
**ಇದನರಿತ ಮನುಜನ ಕುಲವೆ ಮಿಗಿಲು ಕಣಾ .**
**ವಿಶ್ವದಾಭಿರಾಮ ಕೇಳು ವೇಮ .**

**ಬಹಳ ಹೀನ ಕರ್ಮ ಬೆನ್ನಿಗಿರಲು ಅವಗೆ ,**
**ಗರ್ವ ಬ್ರಾಹ್ಮಣೆಂದು , ಗೌರವಿಸದಿರು.**
**ಕುಲವು ಲೆಕ್ಕಕುಂಟೆ ? ಗುಣದ ಗಣನೆ ಲೇಸು .**
**ವಿಶ್ವದಾಭಿರಾಮ ಕೇಳು ವೇಮ.**

**ಶೂದ್ರ ಯುವತಿಗಿದೆ ಶುದ್ಧಾಂತರಂಗ ;**
**ವೇದ ವಿದ್ಯೆ ಮೂಲವರಿಯಲಾಗ .**
**ಬೊಮ್ಮ ಪದವಿ ಹೊಂದಿ ಬ್ರಾಹ್ಮಣನಾಗನೇನು ?**
**ವಿಶ್ವದಾಭಿರಾಮ ಕೇಳು ವೇಮ .**

**ತನ್ನ ತಾಯಿ ವೇಶ್ಯೆ ; ಮಡದಿ ಮಾದಿಗ ಕನ್ಯೆ .**
**ವಸಿಷ್ಠ ಮುನಿ ರಾಮ ವರನ ಗುರುವು .**
**ತಿಳಿಯೆ ತಪಸಿನಿಂದ ದ್ವಿಜನು ; ಜಾತಿಯೆಲ್ಲಿ ?**
**ವಿಶ್ವದಾಭಿರಾಮ ಕೇಳು ವೇಮ .**





**ಓದನೆಲ್ಲ ಓದಿ ಒಳ್ಳೆ ವಿವೇಕಿಯೆನೆ ,**
**ಕಪಟವರಿತು ಏನು ಕಾಣ ಮುಕ್ತಿ .**
**ತಿಪ್ಪೆ ಗುಂಡಿ ನಾಯಿ ತಳೆದ ಧ್ಯಾನದಂತೆ !**
**ವಿಶ್ವದಾಭಿರಾಮ ಕೇಳು ವೇಮ .**

**ಅಲ್ಪನಾದರೇನು ? ಅಧಿಕನಾದರೇನು ?**
**ಹೇಳುವಂಥ ರೀತಿ ಹೇಳುತಿಹನು .**
**ಹರನಿಗರಿಯದಂತೆ ಮರದೆಲೆಯು ಅಲುಗದು .**
**ವಿಶ್ವದಾಭಿರಾಮ ಕೇಳು ವೇಮ .**

**ಎಣಿಸುತೆಷ್ಟು ಪೂಜೆ ಎಷ್ಟು ಮಾಡಲೇನು ?**
**ಭಕ್ತಿ ಇರದ ಪೂಜೆ ಫಲವ ಕೊಡದು .**
**ಭಕ್ತಿಯಿರುವ ಪೂಜೆ ಮುಕ್ತಿ ಕಾರಣವದು .**
**ವಿಶ್ವದಾಭಿರಾಮ ಕೇಳು ವೇಮ .**

ಹೀಗೆ, ಯೋಗಿ ವೇಮನರು ಧರ್ಮ ಸುಧಾರಕರ ಇಲ್ಲವೆ ಕ್ರಾಂತಿ ವೀರರ ಹಾದಿಯಲ್ಲಿ, ಆಯಾ ದೇಶ ಕಾಲಗಳಿಗೆ ತಕ್ಕಂತೆ ಉಪದೇಶ ನೀಡುವಲ್ಲಿ , ಯಾರಿಗೂ ಎರಡನೆಯವರಾಗಿಲ್ಲವೆಂಬುದನ್ನು ಅವರ ಪದ್ಯಗಳು ಸಾರುತ್ತಿವೆ.

**ಸಾಮ್ಯ :-**

ಮಹಾತ್ಮ ಕಬೀರರು ಮತ್ತು ಮಹಾಯೋಗಿ ವೇಮನರು ಹದಿನೈದನೆಯ ಶತಕದ ದಾರ್ಶನಿಕ ಕವಿಗಳು. ಇಬ್ಬರೂ ಗುರು-ಸಂಪ್ರದಾಯದ ಎರಕದಲ್ಲಿ ಹಾಯ್ದು ಬಂದವರು. ತಮ್ಮ ಉಪದೇಶಕ್ಕಾಗಿ , ಜನರಿಗೆ ಅರ್ಥವಾಗದ ಭಾಷೆಗೆ ಮೊರೆ ಹೋಗದೆ, ಬುದ್ಧದೇವನಂತೆ ನಾಡಿಗರ ಭಾಷೆಯಲ್ಲಿಯೇ ಅಧ್ಯಾತ್ಮವನ್ನು ಬೋಧಿಸಿದವರು. ಈರ್ವರೂ ತಾವು ದೀಕ್ಷಿತರಾದ ಸಂಪ್ರದಾಯದಂತೆ ಜಾತಿಯ ಭೇದ-ಭಾವ ನೀಗಿ, ಯಜ್ಞ ಯಾಗಗಳ, ಮೂರ್ತಿ ಪೂಜೆಗಳ, ಬಾಹ್ಯ ವೇಷ ಭೂಷಣ, ವಿಧಿ ನಿಷೇಧಗಳ ಕಟ್ಟಿಗೊಳಗಾಗದೆ , ಒಳದನಿಯನ್ನೇ ಆಲಿಸಿದವರು ; ಆಚರಿಸಿದವರು. ಇಬ್ಬರೂ ರಾಜಾಶ್ರಯವನ್ನು ಕೋರದ, ಹಿಂಡನಗಲಿ ನಿಂತ , ಸಿದ್ಧ ಪುರುಷರು . ಇಬ್ಬರೂ ಪೂರ್ಣ ಸಾಕ್ಷಾತ್ಕಾರ ಪಡೆದ ಸಿದ್ಧ ಸಂಪನ್ನರಾದರೂ , ಪವಾಡಗಳನ್ನು ಮೆರೆಯುತ್ತ ಕೀರ್ತಿ ವಾರ್ತೆಗೆ ಹಂಬಲಿಸಿದವರಲ್ಲ. ಪ್ರತಿಯಾಗಿ , ಮಾಯಾಧೀಶರಾಗಿ, ಪವಾಡಗಳು ತಂತಾನೇ ಇವರ ಸುತ್ತು ಘಟಿಸುವಂತಾದ ಮಹಾ ವಿಭೂತಿ ಪುರುಷರು . ಉಭಯತರೂ ಪ್ರಪಂಚ ತೊರೆದು ಅಡವಿ ವಾಸಕ್ಕೆ ಶರಣು ಹೋಗುವ ಪಲಾಯನವಾದವನ್ನು ಖಂಡಿಸಿದವರು. ಇಬ್ಬರೂ ತಮ್ಮ ವಿಚಾರಗಳ ಪ್ರಖರತೆಯಿಂದ ಮುಂದಿನ ಸಾಧು ಸಂತರ ವಿಚಾರವನ್ನು ಹೆಚ್ಚಾಗಿ ಪ್ರಭಾವಿಸಿದವರು. ಉಭಯತರೂ ತತ್ಕಾಲೀನ ಸಾಹಿತ್ಯ ಚರಿತ್ರಕಾರರಿಂದ ಉಪೇಕ್ಷಿಸಲ್ಪಟ್ಟವರು.

**ವೈಷಮ್ಯ :-**

ಮಹಾತ್ಮ ಕಬೀರರು ವೈಷ್ಣವ ಸಂಪ್ರದಾಯಕ್ಕೆ ಸೇರಿ , ' ರಾಮ ' ನಾಮಕ್ಕೆ ಅಂಟಿಕೊಂಡಿದ್ದರೆ , ವೇಮನರು ಶೈವ ಸಂಪ್ರದಾಯದ ಲಂಬಿಕಾ ಯೋಗಿಯಿಂದ ದೀಕ್ಷೆ ಪಡೆದರು. ಕಬೀರರು ಭಕ್ತಿ ಮಾರ್ಗದ ಹರಿಕಾರರಾಗಿ, ಪ್ರೇಮ ಮಾರ್ಗದಿಂದ ರಹಸ್ಯಾನುಭೂತಿ ಪಡೆದಿದ್ದರೆ, ಮಹಾಯೋಗಿ ವೇಮನರು, ಧ್ಯಾನ ಮತ್ತು ಜ್ಞಾನ ಮಾರ್ಗಗಳಲ್ಲಿ ಸಾಗಿ, ಪರಾನುರಕ್ತಿಯ ನಿರ್ಗುಣೀ ಭಕ್ತಿಯಲ್ಲಿ ಬಂದು ನಿಂತವರು. ಕಬೀರರ ಉಪದೇಶ ಕ್ಷೇತ್ರವು ಉತ್ತರ ಭಾರತವಾದರೆ, ಮಹಾಯೋಗಿ ವೇಮನರು ದಕ್ಷಿಣ ಭಾರತದಲ್ಲಿ ವಿಂಧ್ಯಾದ್ರಿಯಿಂದ ಸೇತು ಬಂಧದ ನಡುವಿನ ನಾಡನ್ನು ಬೆಳಗಿದವರು. ಮಹಾತ್ಮ ಕಬೀರರ ಭಕ್ತಿ ಪದಗಳನ್ನು ಸಿಕ್ಕ ಗ್ರಂಥ ಸಾಹಿಬದಲ್ಲಿ ಗುರು ನಾನಕರು ಮೆಚ್ಚಿ ಸೇರಿಸಿಕೊಂಡಿದ್ದಾರೆ . ಕನ್ನಡದ ಉದಾತ್ತ ಕವಿ ಸರ್ವಜ್ಞರು ವೇಮನರ ವಿಚಾರ ಪ್ರಣಾಲಿಗೆ ಮೆಚ್ಚಿ, ಅವರ ಬಹು ಸಂಖ್ಯ ಪದ್ಯಗಳಿಗೆ, ಸಮಾನಾರ್ಥದ ಪದ್ಯಗಳನ್ನು ಕನ್ನಡ ಭಟ್ಟಿಗಿಳಿಸಿದ್ದಾರೆ. ಮಹಾತ್ಮ ಕಬೀರರ ಹುಟ್ಟು , ಸಂದಿಗ್ಧತೆಯ ಮಬ್ಬಿನಲ್ಲಿದ್ದರೆ, ಮಹಾಯೋಗಿ ವೇಮನರು ರಾಜವಂಶೀಯರಾಗುವ ಸುಕೃತ ಹೊಂದಿದ್ದಾರೆ. ಮಹಾತ್ಮ ಕಬೀರರ ತಾಯಿ ಅವರ ಸಾಧನ ಮಾರ್ಗಕ್ಕೆ ಹೊಂದಿಕೊಳ್ಳದೆ , ಛೀ ಥೂ ಎಂದರೆ, ವೇಮನರ ಅತ್ತಿಗೆ ನರಸಾಂಬೆ ಇವರನ್ನು ಅಡ್ಡದಾರಿಯಿಂದ ಸನ್ಮಾರ್ಗಕ್ಕೆ ತರುವಲ್ಲಿ ಮಹಾ ತ್ಯಾಗ ಮಾಡಿದ್ದಾರೆ.

ಮಹಾತ್ಮ ಕಬೀರರು ಮುಸಲ್ಮಾನ ಸುಲ್ತಾನರ ದದ್ದುಳಿತವನ್ನು , ಹಿಂದೂ ರಾಜರ ಸಂಘಟಿತ ಪ್ರತಿರೋಧವನ್ನು , ಕಣ್ಣಾರೆ ಕಂಡಿದ್ದರೆ, ಮಹಾಯೋಗಿ ವೇಮನರು, ರೆಡ್ಡಿ ರಾಜರು ಪರಸ್ಪರ ಅಧಿಕಾರಕ್ಕಾಗಿ ಕಚ್ಚಾಡುವುದನ್ನು, ಇನ್ನಿತರ ನೆರೆಯ ಹಿಂದುಗಳೊಂದಿಗೆ ಕಚ್ಚಾಡುವುದನ್ನು ಕಣ್ಣಾರೆ ಕಂಡಿದ್ದಾರೆ. ಕಬೀರರು ಆತ್ಮಾರಾಮನನ್ನು, ಪ್ರಕೃತಿಯ ರಮಣನಾದ ರಾಮನನ್ನು , ಪ್ರೇಮ ಮಾರ್ಗದಿಂದ ತನ್ನವನಾಗಿಸಿಕೊಂಡಿದ್ದರೆ, ಮಹಾಯೋಗಿ ವೇಮನರು ಸತ್ಯಂ ಶಿವಂ ಸುಂದರಂ ಆದ, ಮಂಗಳಮಯಿ ಶಿವನಲ್ಲಿ ಒಂದಾಗುವ ರಾಜಯೋಗ ಮೂಲಕ ಶಿವಯೋಗಿಯಾದವರು. ಒಬ್ಬರು ದುಂಡು ಮಲ್ಲಿಗೆಯಂತೆ ಅರಳಿ ಸುರಭಿ ಸೂಸಿದರೆ, ಇನ್ನೊಬ್ಬರು ಸೇವಂತಿಗೆಯಂತೆ ಅರಳಿ ಸುಗಂಧ ಬೀರಿದರು. ಸಾಧು ಸಜ್ಜನಿಕೆಯ ಉಪವನದಲ್ಲಿ ಬೆಳೆದು, ಅರಳಿದ, ಈ ಸಾದೃಶ ಸುರಭಿಯ ಪುಷ್ಪಗಳೆರಡೂ ಪರಮಾತ್ಮನ ಕರುಣೆಗೆ ಪಾತ್ರವಾಗಿ, ಇಹದ ಬಾಳನ್ನು ಬೆಳಗಿ ಅಂದಗೊಳಿಸಿವೆ.



# ಮಹಾಕವಿ ಸರ್ವಜ್ಞ

ಎಸ್. ಆರ್. ಪಾಟೀಲ

ನೈಜ ಅರಿವು ಮೂಡಿಸುವವನು ಜಾತಿ ಕುಲಗಳನ್ನು ಲೆಕ್ಕಿಸುವುದಿಲ್ಲ. ಇದನ್ನೇ ಋಷಿ ಮೂಲ ಮತ್ತು ನದೀ ಮೂಲಗಳನ್ನು ತಿಳಿಯಹೋಗಬಾರದು , ಎಂದು ನೀಡುವ ಉಪದೇಶ ವಾಕ್ಯದಲ್ಲಿ ಸೂಚಿಸಲಾಗಿದೆ. ಭಾರತೀಯ ಧರ್ಮದ ತಿರುಳು ಎಂದಿನಿದಲೂ, ವೇದಗಳಲ್ಲಿ ಮತ್ತು ಮಹಾಭಾರತದಲ್ಲಿ, ಹುದುಗಿದೆಯೆಂದು ವಿಪ್ರರೆಲ್ಲ ಘಂಟಾಘೋಷವಾಗಿ ಸಾರಿದ್ದಾರೆ. ಈ ವೇದಗಳೆಂಬ ಗೋವಿನಿಂದ ಉಪನಿಷತ್ತುಗಳೆಂಬ ಹಾಲು ಸಿಕ್ಕುತ್ತದೆ. ಈ ವೇದ ಸಾಹಿತ್ಯದ ಸಂಕಲನ ಕಾರನನ್ನು ವ್ಯಾಸ ಎನ್ನುತ್ತಾರೆ. ಅವನೇ ವೇದವ್ಯಾಸ. ಈ ವ್ಯಾಸನೇ ಮಹಾ ಭಾರತದ ಕೃತಿಕಾರ. ಅಷ್ಟೇ ಏಕೆ ? ತನ್ನ ತಾಯಿ ಮತ್ಸ್ಯಗಂಧಿಯ ( ಮುಂದೆ ಶಂತನು ಮಾಹಾರಾಜನ ಪತ್ನಿ ಸತ್ಯವತಿ ) ಬಿನ್ನಹ ಮನ್ನಿಸಿ, ಸೋದರನಾದ ವಿಚಿತ್ರವೀರ್ಯ ರಾಜನ ಹೆಂಡತಿಯರಾದ ಅಂಬೆ , ಅಂಬಾಲಿಕೆಯರೊಡನೆ ಮತ್ತು ರಾಣೀವಾಸದ ಹಿರಿಯ ದಾಸಿಯೊಡನೆ ಸಂಭೋಗ ಮಾಡಿ ಧೃತರಾಷ್ಟ್ರ, ಪಾಂಡು ಮತ್ತು ವಿದುರರನ್ನು ಕ್ರಮವಾಗಿ ಹುಟ್ಟಿಸಿದ ಮಹಾಜನಕನೀತ. ಇಂಥ ಮಹಾಪುರುಷನ ಅದ್ಭುತ ಕೃತಿಯೇ ಮಹಾಭಾರತದ ಅಂಗವಾದ ಭಗವದ್ಗೀತೆ. ಶ್ರೀಕೃಷ್ಣನ ಪಾತ್ರವು ವ್ಯಾಸನ ಪಾತ್ರ ಸೃಷ್ಟಿಯ ಹಿರಿಮೆಯನ್ನು ತೋರಿಸುತ್ತದೆ.

ಇಂಥ ವ್ಯಾಸ ಮಹರ್ಷಿಯೇ ನಮ್ಮ ಶ್ರೇಷ್ಠ ಆಚಾರ್ಯತ್ರಯರ ಮೂಲ ಗುರು ; ಆರಾಧ್ಯಮೂರ್ತಿ. ತಾವು ಏನೇ ಹೇಳಿರಲಿ, ವ್ಯಾಸನು ರಚಿಸಿದ ಕೃತಿಗಳಲ್ಲಿ ಸಮರ್ಥನೆ ಸಿಕ್ಕದಿದ್ದರೆ, ಅದನ್ನು ಪುರಸ್ಕರಿಸದ, ವ್ಯಾಸರ ಅನುಯಾಯಿಗಳೇ ಶ್ರೇಷ್ಠ ಆಚಾರ್ಯರು. ಶಂಕರ, ರಾಮಾನುಜ ಮತ್ತು ಮಧ್ವರು ವ್ಯಾಸ ಭಗವತ್ಪಾದನ ಅಡಿಯಾಳುಗಳು.

ಇಂಥ ಸರ್ವಮಾನ್ಯ ಪರಮಾಚಾರ್ಯನಾದ ವ್ಯಾಸ ಭಗವಾನನ ಜನ್ಮದ ಕತೆ ತುಂಬಾ ರೋಚಕವಾಗಿದೆ. ವೇಶ್ಯಾ ಪುತ್ರರಾದ ಪರಾಶರ ಮಹರ್ಷಿಗಳು ಒಂದು ಬಾರಿ ನದಿಯನ್ನು ದಾಟಲು ಹೊರಟಿದ್ದರು. ಸಂಜೆಯ ಸೂರ್ಯನು ಮುಳುಗುವುದರಲ್ಲಿದ್ದ. ಸಮುದ್ರ ಮಧ್ಯೆ ಸುಖಪ್ರಯಾಣ ! ದೋಣಿ ನಡೆಸುವವಳು ಓರ್ವ ಸ್ಫುರದ್ರೂಪಿ ಅಂಬಿಗ ಕನ್ನೆ. ಹೆಸರು ಮತ್ಸ್ಯಗಂಧಿ . ಋಷಿಗೆ ಆವೇಶ ಬಂದಿತು . ಆಕಾಶವಾಣಿಯಾದಂತೆ ಆಗಿ, ತಾನೀಗಲೇ ತನ್ನ ರೇತಸ್ಸನ್ನು ಸ್ತ್ರೀ ಯೋನಿಯಲ್ಲಿ ವಿಸರ್ಜಿಸಬೇಕು. ಈ ಶುಭ ಮುಹೂರ್ತದಲ್ಲಿ ಮಹಾಪುರುಷನ ಜನನವಾಗುತ್ತದೆ , ಎನಿಸಿತು. ತನ್ನ ಒಳದನಿಯನ್ನು ಬಳಿಯಲ್ಲಿದ್ದ ಆ ಸುಂದರ ಕನ್ನೆಗೆ ತಿಳಿಸಿದನು. ಅವಳು ಪ್ರಣಯದ ಕರೆಯನ್ನು ತಿರಸ್ಕರಿಸಲಿಲ್ಲವಾದರೂ , ಸುತ್ತಮುತ್ತ ನದೀ ದಡದಲ್ಲಿದ್ದ ಜನರು, ಋಷಿಮುನಿಗಳು , ಏನೆಂದುಕೊಂಡಾರೆಂದು ನಾಚಿದಳು. ಪರಾಶರ ಋಷಿಗೆ ಒಳದನಿಯ ಬೆಂಬಲವಿತ್ತು. ತನ್ನ ಯೋಗ ಶಕ್ತಿಯನ್ನು ಬಳಸಿ , ಸುತ್ತಲೂ ಮಬ್ಬು ಕವಿಯುವಂತೆ ಮಾಡಿ, ಆ ಸುಂದರಿಯೊಂದಿಗೆ ರತಿ ಕ್ರೀಡೆಗಿಳಿದನು. ಅದರ ಫಲವೇ ಮಹಾಪುರುಷ ವ್ಯಾಸನ ಜನನ !

ಈ ಕತೆಯು ಜನಮನದ ಮೇಲೆ, ಎಷ್ಟೊಂದು ಪ್ರಭಾವ ಬೀರಿದೆಯೆಂದರೆ , ಯಾವನಾದರೂ ಮೇಧಾವಿಯು ಜನಿಸಿದಾಗ, ಒಬ್ಬ ಬ್ರಾಹ್ಮಣನ ರೇತಸ್ಸು ಓರ್ವ ಶೂದ್ರ ಇಲ್ಲವೆ ಅತಿಶೂದ್ರ ಕನ್ನೆಯಲ್ಲಿ ಸೇರಿ ಗರ್ಭ ನಿಲ್ಲಿಸಿರಬಹುದೆಂದು ಗ್ರಹಿಸುತ್ತ ಬಂದರು. ಇಂಥವರಿಗೆ

ವಿಶೇಷ ಗೌರವವನ್ನೂ ನೀಡಲಾಯಿತು. ಇದನ್ನು ಹಳ್ಳಿಗರು ' ಸೂಳೀ ಮಗನು ಶ್ಯಾಣ್ಯಾ ಆಗ್ತಾನಪಾ' ಎಂದು ಹೇಳುತ್ತಾರೆ.

ಇಂಥವ್ಯಾಸಮಹರ್ಷಿಯ ರೀತಿಯಲ್ಲಿ ಜನ್ಮ ತಾಳಿದ ಅನೇಕ ಭಾರತೀಯ ಮೇಧಾವಿಗಳಲ್ಲಿ ಸರ್ವಜ್ಞ ಮೂರ್ತಿಯ ಹೆಸರೂ ಸೇರಿದೆ. ಸರ್ವಜ್ಞನು ವೇಮನರ ಪ್ರತಿರೂಪನೆಂದು ಹಲವು ತೆಲುಗು ವಿದ್ವಾಂಸರು ಬಣ್ಣಿಸುತ್ತಾರೆ. ಆದರೆ ಈರ್ವರ ಮಧ್ಯೆ ಸಾಕಷ್ಟು ಸಾಮ್ಯವೂ ಇದೆ; ವೈಷಮ್ಯವೂ ಇದೆ. ಖಚಿತವಾಗಿ ಹೇಳುವುದಾದರೆ, ಆಚಾರ್ಯತ್ರಯರಿಗೆ ಸರ್ವಜ್ಞ ಮೂರ್ತಿ ಎಷ್ಟು ದೂರವಿರುವನೋ, ವೇಮನರಿಗೆ ಅಷ್ಟು ಸಮೀಪದವನೆಂದು ಹೇಳಬಹುದು.

ವೇಮನರು ರಾಜ ವಂಶೀಯರೆಂದೂ,ಅವರ ತಂದೆ ಪದಚ್ಯುತ ಕೊಂಡವೀಡಿನ ರಾಜ ಕೊಮರುಗಿರಿ ರೆಡ್ಡಿಯೆಂದೂ , ತಾಯಿ ಮಲ್ಲಮ್ಮನೆಂದೂ ವಿದ್ವಾಂಸರು ತಿಳಿಸಿದ್ದಾರೆ. ಕ್ರಿ.ಶ.೧೪೧೨ ರಿಂದ ೧೪೮೦ ರ ವರೆಗೆ ಜೀವಿಸಿದ್ದರೆಂದು ತಿಳಿದು ಬಂದಿದೆ. ಇತ್ತ ಸರ್ವಜ್ಞ ಕವಿ, ಧಾರವಾಡ ಜಿಲ್ಲೆ ಹಿರೇಕೆರೂರು ತಾಲೂಕಿನ ಅಂಬಲೂರ ಗ್ರಾಮದವನೆಂದೂ, ತಾಯಿ ಕುಂಬಾರ ಮಾಳಿಯೆಂದೂ ತಂದೆ ವಿಪ್ರೋತ್ತಮ ಬಸವರಸನೆಂಬ ಆರಾಧ್ಯ ಬ್ರಾಹ್ಮಣನೆಂದೂ ತಿಳಿದಿದೆ . ಕಾಶಿಗೆ ಯಾತ್ರೆ ಹೋದ ಮಾಸೂರು ಹಳ್ಳಿಯ ಬಸವರಸನು, ವಿಶ್ವನಾಥನಿಂದ ಸಂತಾನ ಪ್ರಾಪ್ತಿಯ ವರ ಪಡೆದು ಊರಿಗೆ ಹಿಂತಿರುಗುತ್ತಿದ್ದನು. ಮಾರ್ಗ ಮಧ್ಯೆ ಅಂಬಲೂರಿನ ಕುಂಬಾರ ಸಾಲೆಯಲ್ಲಿ, ಮಳೆಯ ಕಾರಣ ನಿಂತಾಗ , ರಂಡೆ ಕುಂಬಾರ ಮಾಳಿಯ ಚೆಲುವಿಗೆ ಮಾರುಹೋದನು. ಕಾಮಾತುರತೆಯಲ್ಲಿ ಸಂಭೋಗಕ್ಕಿಳಿದೇ ಬಿಟ್ಟ. ವಿಶ್ವನಾಥನು ಕರುಣಿಸಿದ ಪ್ರಸಾದವು ಫಲಿಸಿತು. ಕುಂಬಾರ ಮಾಳಿಗೆ ಗರ್ಭ ನಿಂತಿತು. ಹತ್ತನೆಯ ತಿಂಗಳಿಗೆ ವರ ಪುತ್ರ ಜನಿಸಿದ. ಅವನೇ ಮುಂದೆ ಎಲ್ಲರಿಂದೊಂದು ನುಡಿಗಲಿತು ವಿದ್ಯೆಯಾ ಪರ್ವತವೇ ಆದ ' ಸರ್ವಜ್ಞ ' ನೆನಿಸಿದ.

ಸರ್ವಜ್ಞನು ಕವಿಯಾಗಿ ಬೆಳೆದ ಬಳಿಕ ಗುರೂಪದೇಶದಿಂದ, ವಿರಕ್ತಿ ಮಾರ್ಗ ಹಿಡಿದನು. ಲೌಕಿಕ ತಾಯಿ ತಂದೆಗಳ ಗೊಡವೆ ಬಿಟ್ಟನು. ಅವರೂ ಇವನನ್ನು ಹಚ್ಚಿಕೊಳ್ಳಲಿಲ್ಲ.

**ನೂಕಿದರು ಅವರಾಗ ಕುಹಕತನದೊಳು ;**
**ಲೋಕದೊಳಗೆಲ್ಲ ಕಂಡುದ-ನುಡಿದು ತಾ**
**ನೇಕವಾಗಿಹನು ಸರ್ವಜ್ಞ .**

ಹೀಗಾಗಿ, ತನ್ನನ್ನು ಶಿವನ ವರ ಪುತ್ರನೆಂದೇ ಜಗತ್ತಿಗೆ ಸಾರುತ್ತ ನಡೆದ .

**ತಂದೆ ವಿಪ್ರನು ಅಲ್ಲ ; ತಾಯಿ ಮಾಳಿಯು ಅಲ್ಲ ;**
**ಚಂದ್ರ ಶೇಖರನ ವರದಿಂದ ಹುಟ್ಟಿದ ,**
**ಕಂದ ತಾನೆಂದ ಸರ್ವಜ್ಞ .**

ಎಲ್ಲ ವಿರಕ್ತ ಪುರುಷರಂತೆ ವೇಮನ ಯೋಗಿಯೂ ಸಹ ತಾಯಿ-ತಂದೆಯ ಪ್ರಸ್ತಾಪ ಮಾಡದೆ,

**ತಾಯಿಯೇ ಪಾರ್ವತಿಯು , ತಂದೆಯೇ ವರ ಶಂಭುವು ,**
**ಪ್ರಮಥ ಗಣಗಳೆಲ್ಲ ಬಂಧು ಬಳಗ ;**





**ತಾನು ಹುಟ್ಟಿದ ಮನೆ ತನಗೆ ಕೈಲಾಸವೈ .**
**ವಿಶ್ವದಾಭಿರಾಮ ಕೇಳು ವೇಮ.**

ಸರ್ವಜ್ಞ ಕವಿಯ ಪದ್ಯಗಳನ್ನು ಕ್ರಿ. ಶ ೧೭೦೦ ನೇ ಇಸ್ವಿಯಲ್ಲಿ ಇದ್ದ ಸಿದ್ಧವೀರಣಾರ್ಯನು ಸಂಗ್ರಹಿಸಿರುವುದರಿಂದ , ಸರ್ವಜ್ಞ ಕವಿಯು ಅವನಿಗಿಂತ ಪೂರ್ವದವನೆಂದು ಸಿದ್ಧವಾಗಿದೆ. ತನ್ನ ಗುರುವಿನ ಹೆಸರನ್ನು ಸೋಮಶೇಖರನೆಂದು ಅವನು ಹೇಳಿಕೊಂಡಿರುವುದರಿಂದ ತೆಲುಗು ಕವಿ ಪೋತನ ಮತ್ತು ಯೋಗಿ ವೇಮನರ ಸಮಕಾಲೀನನಿರಬಹುದೆಂದು ಊಹಿಸಲಾಗಿದೆ. ಏಕೆಂದರೆ , ಇವರ ಗುರುವೂ ಸೋಮಶೇಖರರೇ. ಹೀಗಾಗಿ, ಇವನನ್ನು ಕ್ರಿ. ಶ. ೧೫ ಇಲ್ಲವೆ ಹದಿನಾರನೆಯ ಶತಕದ ಕಾಲದವನೆಂದು ಗುರುತಿಸಲಾಗಿದೆ.

## ಈಶ್ವರ ಜೀವ ಜಗತ್ :-

ದೇವರ ಅಸ್ತಿತ್ವದಲ್ಲಿ ವೇಮನನಂತೆ ಸರ್ವಜ್ಞನೂ ನಂಬುಗೆ ತಾಳಿದವ. ಏಕ ದೇವೋಪಾಸನೆಯಲ್ಲಿಯೇ ಇಬ್ಬರಿಗೂ ದೃಢ ವಿಶ್ವಾಸ. ಹಾಗಾಗಿ, ಅವರು ಒಂದೇ ಬಗೆಯಾಗಿ ಪದ ಹಾಡಿದ್ದಾರೆ.

ವೇಮನ :-

**ಧ್ವಜವನೆತ್ತಿ ಸಾರು ; ದೇವನೊಬ್ಬನೆಂದು .**
**ನಿಜವಿದಿಹುದು ಒಳಗೆ ನಿಂತಿರುವನು .**
**ಮೌನವಾಗಿರುವವ ಮಹಿಮೋತ್ತಮ ಕಣಾ !**
**ವಿಶ್ವದಾಭಿರಾಮ ಕೇಳು ವೇಮ .**

ಸರ್ವಜ್ಞ :-

**ಒಬ್ಬನಲ್ಲದೆ ಜಗಕೆ ಇಬ್ಬರುಂಟೆ ಮತ್ತೆ ?**
**ಒಬ್ಬ ಸರ್ವಜ್ಞ ಕರ್ತನೀ - ಜಗಕೆಲ್ಲ**
**ಒಬ್ಬನೇ ದೈವ ಸರ್ವಜ್ಞ .**

ವೇಮನ :-

**ಮೊಸರಿನಲ್ಲಿ ತುಪ್ಪ ; ಮರದ ಒಳಗೆ ಬೆಂಕಿ ;**
**ಸೌಮ್ಯ ಪುಷ್ಪಗಳಲಿ, ಸೌರಭಗಳು ;**
**ಎಳ್ಳಿನೆಣ್ಣೆಯಂತೆ ಹೊಳೆಯುವುದು ಚಿದಾತ್ಮ .**
**ವಿಶ್ವದಾಭಿರಾಮ ಕೇಳು ವೇಮ .**

ಸರ್ವಜ್ಞ :-

**ಕ್ಷೀರದಲ್ಲಿ ಘೃತ , ವಿಮಲ ನೀರಿನೊಳು ಶಿಖಿಯಿರ್ದು ,**
**ಆರಿಗೂ ತೋರದವನಂತೆ - ಎನ್ನೊಳಗೆ**

ಸಾರಿಹನು ಶಿವನು ಸರ್ವಜ್ಞ.

**ಜಗತ್ತು :-**

ಮೊದಲು ಏಕ ವಸ್ತುವಿತ್ತು . ಅದೇ ಪರಶಿವ. ಅದು ಪ್ರಕೃತಿಯ ಪ್ರಭಾವದಿಂದ ಮೂರಾಗಿ ತೋರಿತು. ಪ್ರಕೃತಿಯ ತ್ರಿಗುಣಗಳಾದ ಸತ್ವ, ರಜಸ್ಸು ಮತ್ತು ತಮಸ್ಸುಗಳ ಪ್ರಾತಿನಿಧಿಕ ಮುಖಗಳಾಗಿ, ಲಯ, ಸ್ಥಿತಿ, ಸೃಷ್ಟಿಗಳ ಹೊಣೆ ಹೊತ್ತ ರುದ್ರ, ವಿಷ್ಣು, ಬ್ರಹ್ಮ, ರೂಪಗಳಾದವು.

ವೇಮನ :-

ವಿಶ್ವೋತ್ಪತ್ತಿಗೆ ಅಜನೆನೆ,
ವಿಶ್ವವ ರಕ್ಷಿಸುವವ ವರ ವಿಷ್ಣುವೆ ಎನುತಾ ;
ವಿಶ್ವವ ಲಯಿಪನು ಹರನೆನೆ,
ವಿಶ್ವೇಶನಿಗಿಂಥ ನಾಮವಾದವು. ವೇಮಾ.

ಸರ್ವಜ್ಞ :-

ಉತ್ಪತ್ತಿಗೆ ಬ್ರಹ್ಮ ಗಡ, ಸ್ಥಿತಿಗೆ ತಾ ವಿಷ್ಣು ಗಡ,
ಹತವ ಗೈವುದಕೆ ರುದ್ರ ಗಡ–ಇವರುಗಳ
ಸ್ಥಿತಿಯನರಿಯೆಂದ ಸರ್ವಜ್ಞ.

ವೇಮನ :-

ಬೀಜವಿಲ್ಲದಂಥ ವೃಕ್ಷವೊಂದು ಹುಟ್ಟಿ,
ಫಲವು, ಹೂವು, ಮೊದಲು ಪತ್ರಿ ಇಲ್ಲ.
ಅದರ ಭಾವವೇನು ? ಅರುಹು ವೇಮ. ವಿಶ್ವ

ಮರವ ಸುಟ್ಟು ಹಾಕಿ, ಮಹಿಯೊಳೊಬ್ಬ ಜಾಣ ;
ಶ್ರಮಿಸಿ ತಿರುಗುತಿರುವ, ಶರೀರ ಹೊಂದಿ.
ಸುಟ್ಟು ಹೋದ ಮರವು ಸಲೆ ರಮ್ಯವಿಪ್ಪುದು. ವಿಶ್ವ

ಸರ್ವಜ್ಞ :-

ಹುಟ್ಟದಿಹ ತಾಯಿಯೊಳು ಹುಟ್ಟಿದನು ಮಗನೊಬ್ಬ ;
ಹುಟ್ಟಿಸಿದ ತಾಯ ತಾ ಕೊಂದು–ನಿರೆ ಸತ್ತು
ಹುಟ್ಟದೇ ಹೋದ ಸರ್ವಜ್ಞ.

ಹೀಗೆ, ಅನಾದಿಯಾದ ಪ್ರಕೃತಿ ಯೋನಿಯಲ್ಲಿ ಹುಟ್ಟಿದ ಜೀವನು, ಪ್ರಕೃತಿಯನ್ನೇ ನಾಶ ಮಾಡಿ ಅಂದರೆ ಗುಣಾತೀತನಾಗಿ, ಮರಳಿ ಈ ಭವಕ್ಕೆ ಬಾರದೆ ಅಭವನಾದನು, ಎಂಬ ಅರ್ಥವಿದೆ. ಅದೇ ರೀತಿ, ಬೀಜವಿಲ್ಲದ ಅಂದರೆ ಕಾರಣಾತೀತದಿಂದ ಜನಿಸಿದ ಸೃಷ್ಟಿಯು, ವೃಕ್ಷವಾಗಿ





ವ್ಯಾಪಿಸಿತು. ಇದನ್ನು ಸುಟ್ಟರೆ, ವೃಕ್ಷವು ಹಸಿರು ವೃಕ್ಷಕ್ಕಿಂಲೂ ರಮ್ಯವಾಗಿ ತೋರುತ್ತದೆ, ಎಂದು ವೇಮನರು ಹೇಳಿದ್ದಾರೆ.

ಈ ಜಗತ್ತು, ಜೀವ ಮತ್ತು ಈಶ್ವರ ಸಂಬಂಧವನ್ನು ಸಾಂಖ್ಯರು ಇಪ್ಪತ್ತೈದು ತತ್ತ್ವಗಳ ಮೂಲಕ ವಿವರಿಸಿದ್ದಾರೆ. ಇದನ್ನು ತಿಳಿದು, ಇವುಗಳ ಮೂಲವಾದ ತತ್ ಅನ್ನು ಹೊಂದುವುದೇ ಮುಕ್ತಿ.

ವೇಮನ :-

ಐದು, ಐದು, ಆರು, ಎಂಟು ಮತ್ತೆ ಒಂದು ;
ನಾವಿನೊಳಗೆ ಉಂಟು ಒರೆಯ ಕಂಭ.
ತಿರುಗಿ ನಾವನೇರೆ, ತಾನೆ ತತ್ತ್ವಕೊಡೆಯ.
ವಿಶ್ವದಾಭಿರಾಮ ಕೇಳು ವೇಮ.

ಪರಶಿವ ತತ್ತ್ವದಿಂದ ಶರೀರದ ವರೆಗೆ ಇಪ್ಪತ್ತುನಾಲ್ಕು ಅನಾತ್ಮ ತತ್ತ್ವಗಳೂ, ಒಂದು ಆತ್ಮ ತತ್ತ್ವವೂ ಸೇರಿ, ತತ್ತ್ವಸಂಖ್ಯೆಯು ಇಪತ್ತೈದಾಗುತ್ತದೆ. ಇದುವೇ ಪಂಚವಿಂಶತಿ ತತ್ತ್ವ. ಇದರಲ್ಲಿ, ಭೂತ ಪಂಚಕ, ತನ್ಮಾತ್ರ ಪಂಚಕ, ಚಿತ್ತದೊಡನೆ ಕರ್ಮೇಂದ್ರಿಯ ಪಂಚಕ, ಜ್ಞಾನೇಂದ್ರಿಯ ಪಂಚಕ ಮತ್ತು ಅಹಂ, ಬುದ್ಧಿ ಮತ್ತು ಮೂಲ ಪ್ರಕೃತಿ ಹಾಗೂ ಕೊನೆಗೆ ಆತ್ಮ ; ಹೀಗೆ ಪಂಚವಿಂಶತಿ ತತ್ತ್ವಗಳು.

ಸರ್ವಜ್ಞ :-

ಪಂಚವಿಂಶತಿ ತತ್ತ್ವ ಸಂಚಯದ ದೇಹವನು,
ಹಂಚಿಂದು ಕಾಣಲರಿಯದಿರೆ – ಭವ ಮುಂದೆ
ಗೊಂಚಲಾಗಿಹುದು ಸರ್ವಜ್ಞ.

**ಜೀವ :-**

ಜೇಡರ ಹುಳುವು ತನ್ನಿಂದ ಸ್ರವಿಸುವ ರಸದಿಂದ ಬಲೆ ಹೆಣೆದು, ತನಗೆ ಬೇಕಾದಾಗ ಅದನ್ನೇ ನುಂಗುವಂತೆ, ಏಕ ವಸ್ತುವು ತನ್ನ ಲೀಲೆಗಾಗಿ ಅನೇಕವಾಗಿ, ಮರಳಿ ಏಕದಲ್ಲಿ ಒಂದಾಗುತ್ತದೆ. ಈ ಅನೇಕದಲ್ಲಿ ಜೀವವೂ ಸೇರಿದೆ. ಹಾಗೆ ನೋಡಿದರೆ, ಏಕ ಭಾವವು ಆತ್ಮವೆನಿಸಿದರೆ, ಅನೇಕ ಭಾವವು ಜೀವವೆನಿಸುತ್ತದೆ. ಈ ಅನೇಕ ಭಾವವನ್ನೇ ಅವಿದ್ಯೆ, ಅಜ್ಞಾನವೆನ್ನುತ್ತಾರೆ. ಅಜ್ಞಾನ ತಿಳಿದರೆ ಜೀವನು ಶಿವನಾಗುತ್ತಾನೆ.

ವೇಮನ :-

ಜೀವ ಗುಣವು ಇಹುದು ಜೀವ ಬ್ರಹ್ಮ ಎಂದು,
ಸಾಟಿ ಎಂತು ಇಹುದು ? ಸರಿಯು ತಿಳಿಯೆ,

ಊರ ನಾಯಿ , ಸಿಂಹ ಒಂದೆ ಎನಿಸಬಹುದೆ ?
ವಿಶ್ವದಾಭಿರಾಮ ಕೇಳು ವೇಮ .

ಜೀವಮೆಂದು ನೀವು ಸಿಕ್ಕು ತೊಳಲುತಿಹಿರಿ .
ವಾಯುವಾಗಸಗಳು ಪಕ್ಕಕೂಡಿ ,
ದೇಹಿ ಎಂದು ಕೊಳುತ , ದೇಹ ಸೇರಿ ಇಹವು .
ವಿಶ್ವದಾಭಿರಾಮ ಕೇಳು ವೇಮ .

ಸರ್ವಜ್ಞ :-

ಅರಿವನರಿದೊಡೆ ಜೀವ ನೆರೆ ಸದಾಶಿವನಕ್ಕು ;
ಅರಿವಿನ ತೆರನರಿಯದೊಡೆ – ಹರಿ ಬೊಮ್ಮ
ರಿರವಿನಂತಕ್ಕು ಸರ್ವಜ್ಞ .

ಕಾಯವಿಂದ್ರಿಯದಿಂದ ಜೀವ ವಾಯುವಿನಿಂದ ,
ಕಾಯುವನು ಬ್ರಹ್ಮ ಸೃಷ್ಟಿಯೆಂಬುವನ
ಬಾಯ ನೋಡೆಂದ ಸರ್ವಜ್ಞ .

## ಸಾಧನ ಮಾರ್ಗ :-

ಶಿವನೇ ಪ್ರಕೃತಿಯ ಪ್ರಭಾವದಿಂದ ಜೀವನಾಗಿ ಪರಿಣಮಿಸಿದ್ದಾನೆ. ಬದ್ಧನಾಗಿದ್ದಾನೆ. ಜೀವ ಭಾವದಲ್ಲಿ ರಾಗ ದ್ವೇಷಗಳಿವೆ , ಅರಿಷಡ್ವರ್ಗಗಳಿವೆ ; ಅಷ್ಟ ಪಾಶಗಳಿವೆ. ಇವುಗಳೆಲ್ಲ ಅಜ್ಞಾನವೇ . ಈ ಅಜ್ಞಾನದ ಅಡವಿಯನ್ನು ಜ್ಞಾನ ಖಡ್ಗದಿಂದ ತರಿದು , ಶಿವನಲ್ಲಿ ಬೆರೆಯುವ ಹಾದಿ ಕಂಡುಕೊಳ್ಳುವುದೇ ಜ್ಞಾನ ಮಾರ್ಗ. ಧ್ಯಾನ ಯೋಗ ಮೂಲಕ ಇಂದ್ರಿಯಾದಿಗಳನ್ನು ಸಾಧುಗೊಳಿಸಿ, ಅಡ್ಡ ಹಾದಿಗಿಳಿಯದಂತೆ ನಿಗ್ರಹಿಸಿ, ಇದೇ ಗುರಿಯನ್ನು ತಲುಪಬಹುದಾದ್ದರಿಂದ ಈ ಹಾದಿಯ ಶೋಧಕ್ಕೆ ಸಾಧನೆಯೆನ್ನುತ್ತಾರೆ. ಇಂಥ ಜ್ಞಾನ ಸಾಧನೆಯನ್ನೂ, ಯೋಗ ಸಾಧನೆಯನ್ನೂ ಯೋಗಿ ವೇಮನರೂ ಅನುಸರಿಸಿದ್ದಾರೆ. ಸರ್ವಜ್ಞ ಕವಿಯೂ ಅತ್ತ ಹೆಜ್ಜೆಯಿಟ್ಟಿದ್ದಾನೆ.

ವೇಮನ :-

ದಾರಿ ತಿಳಿಯದಿರಲು ದೂರವೆನಿಸುತಿಹುದು .
ತಾಣ ತಿಳಿಯದಿರಲು ಕಾಣಲಾರ .
ಕೋಟೆ ತುದಿಯ ಮೇಲೆ ನೀಟ ದೃಷ್ಟಿಯಿರಿಸು .
ವಿಶ್ವದಾಭಿರಾಮ ಕೇಳು ವೇಮ .

ಕಿವಿಯೊಳಗೆ ಜನಿಸುವ ರವವೆ ಆಕಾಶವು .
ಕಣ್ಣಿಗೆ ಕಾಣುವುದೆ ಕಳೆಯ ಜ್ವಾಲೆ .





ಮೂಗಿನೊಳಗಿನ ಗಾಳಿ ಮುಕ್ತಿ ಪಥದ ದಾರಿ .
ವಿಶ್ವದಾಭಿರಾಮ ಕೇಳು ವೇಮ .

ತಾನು ಇಂದ್ರಿಯಗಳ ತೂಗಿ ಜಯಿಸಿ , ಮತ್ತೆ
ತತ್ತ್ವವರಸಿ ನೋಡೆ , ತಾನಾಗುವ ;
ರಾಜಯೋಗಿಯಂತೆ ರಾರಾಜಿಸುತಿಹನು .
ವಿಶ್ವದಾಭಿರಾಮ ಕೇಳು ವೇಮ .

ಕಾಯ ಹಣತೆ ಮಾಡಿ, ಗುಣವ ಬತ್ತಿ ಮಾಡಿ ,
ತಮ್ಮ ಕರ್ಮ ಕುಲವ ತೈಲ ಮಾಡಿ ;
ಮೂಲವೊಂದೆ ಜ್ಯೋತಿ ಮುಟ್ಟಿ ನೋಡಿದಾಗ .
ವಿಶ್ವದಾಭಿರಾಮ ಕೇಳು ವೇಮ .

ಸರ್ವಜ್ಞ :-

ಯೋಗದಲಿ ಮನ ನಿಲಿಸಿ , ಭೋಗವನು ಮರೆದಿಹರೆ ,
ಮಾಗಿಯಾ ಮಳೆಯು ಸುರಿವಂತೆ , ಆ ಯೋಗ
ಸಾಗುತ್ತಲಿಹುದು ಸರ್ವಜ್ಞ .

ವಿಷಯಕ್ಕೆ ಕುದಿಯದಿರು , ಅಶನಕ್ಕೆ ಹರಿಯದಿರು ,
ಅಸಮಾಕ್ಷನಡಿಯ ಬಿಡದಿರಲು– ಗುರುಕರುಣ
ವಶವರ್ತಿಯಹುದು ಸರ್ವಜ್ಞ .

ಇಂದ್ರಿಯದ ಆಶೆಗಳ ಬಂಧಿಸದೆ ಕೊಂದವನು ,
ಸುಂದರನು ಅಕ್ಕು ಸುಖಿಯಕ್ಕು –ಲೋಕಕ್ಕೆ
ಚಂದಿರನು ಅಕ್ಕು ಸರ್ವಜ್ಞ .

ಮನಸ್ಸಿನ ಶುದ್ಧಿಗಾಗಿ ಅಂದರೆ ಅನವಶ್ಯಕ ವಿಚಾರ–ವೃತ್ತಿಗಳನ್ನು ಮನಸ್ಸಿನಿಂದ ದೂರ ಮಾಡಲೋಸುಗ , ಮೂರ್ತಿಪೂಜೆಯನ್ನು ಯೋಗಿ ವೇಮನರು ಒಪ್ಪಿಲ್ಲವಷ್ಟೇ ಅಲ್ಲ , ಬಲವಾಗಿ ಖಂಡಿಸಿದ್ದಾರೆ. ಏಕೆಂದರೆ , ಮನಸ್ಸಿಗೆ ಧ್ಯಾನದ ಲಕ್ಷ್ಯವಾಗಿ ಜಡ ಮೂರ್ತಿಯನ್ನು ಗ್ರಹಿಸಿದರೆ, ಬರುಬರುತ್ತ ಮನವು ಜಡವಾಗುವುದೆಂದು ಮನಸ್ತಾತ್ವಿಕ ವಿಜ್ಞಾನವು ತಿಳಿಸುತ್ತದೆ.

ವೇಮನ :-

ಜೀವಲಿಂಗ ಪೂಜೆ ಜನರು ಮಾಡುತಿಹರು ;
ಶಿಲೆಯ ರೂಪ ಕುರಿತು ಚಿಂತೆಯೇಕೆ ?

ಶಿಹಿ ಮಧು ಸೇವಿಸಲು, ಕಹಿಯು ರುಚಿಸುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಚೆಚ್ಚಿ ಕಲ್ಲಿನಿಂದ ಬಯಕೆ ಕೋರಲೇಕೆ ?
ಕಟ್ಟಿದ ಗುಡಿಗಳಲಿ ಕರುಬಲೇಕೆ ?
ಬಿಡಲಾರದ ಶಿವನು ಪ್ರಾಣಿಗಳಲ್ಲಿಹನು.
ವಿಶ್ವದಾಭಿರಾಮ ಕೇಳು ವೇಮ.

ಸರ್ವಜ್ಞ ° -

ತನ್ನೊಳಿಹ ಲಿಂಗವನು ಮನ್ನಿಸಲಿಕರಿಯದೆ,
ಬಿನ್ನಾಣ ಕಡೆದ ಪ್ರತಿಮೆಗಳಿ-ಗೆರಗುವ
ನನ್ಯಾಯಕಾರಿ ಸರ್ವಜ್ಞ.

ನೆಟ್ಟಿರ್ದ ಕಲ್ಲಿಂಗೆ, ಒಟ್ಟಿರ್ದ ಮಣ್ಣಿಂಗೆ,
ಕಟ್ಟಿರ್ದ ಲಿಂಗವಡಿಯಾಗಿ-ಬೀಳುವನಿ
ಗಿಷ್ಟವೆಲ್ಲಿಯದು ? ಸರ್ವಜ್ಞ.

ಯೋಗಿ ವೇಮನರು ರಾಜಯೋಗಿಗಳು. ಸರ್ವಜ್ಞ ಕವಿ ಲಿಂಗ ಪೂಜಾ ಪೂರ್ವಕ ಶಿವಯೋಗ ಸಾಧಕರು. ಈರ್ವರಲ್ಲಿ ಸಾಮಾನ್ಯವಾದ ಯೋಗ-ತಂತ್ರ ಸಾಧನೆಯೊಂದಿದೆ. ಅದುವೇ ಕುಂಡಲಿನೀ ಯೋಗ. ಪೂರಕ, ಕುಂಭಕ, ರೇಚಕಗಳ ಮೂಲಕ ಪ್ರಾಣಾಯಾಮವನ್ನು ಅಭ್ಯಸಿಸಿ, ಇಡಾ, ಪಿಂಗಳಾ ಮೂಲಕ ನಡೆಯುವ ಪ್ರಾಣ ಶಕ್ತಿ ಚಲನೆಯಿಂದ ಮೂಲಾಧಾರದಲ್ಲಿ ಸುಪ್ತವಾಗಿದ್ದ ಕುಂಡಲಿನಿಯನ್ನು ಜಾಗ್ರತಗೊಳಿಸಿ ಸುಷುಮ್ನೆಯ ಮೂಲಕ, ಸಹಸ್ರಾರ ಚಕ್ರದತ್ತ, ಸಾಗುವಂತೆ ಮಾಡುವುದೇ ಈ ಕುಂಡಲಿನಿ ಯೋಗ.

ವೇಮನ :-

ಒಂಟಿ ಕಂಭದಲ್ಲಿ ಒಪ್ಪ ಅಂಕಣಹವು ;
ಆರು ಅಂಕಣಗಳ ಅಂದ ನಿಲಿಸಿ,
ಆಚೆ ನೀರ ನೋಡೆ, ಅಂಟುವನು ತತ್ತ್ವ.
ವಿಶ್ವದಾಭಿರಾಮ ಕೇಳು ವೇಮ.

ಕುದುರುತ ಗುದ, ಗುಹ್ಯಗಳು,
ಮೃದು ನಾಭಿಯು, ಹೃದಯ, ಕಂಠ ಮೇಲಿದೆ ಪರುಷೆ.
ಹದದಿಂದ ಬ್ರಹ್ಮ ರಂಧ್ರ
ಮುದದಿ ಮನದೊಳರಿಯುವಾತ ಪೂರ್ಣನು ವೇಮಾ.





ಕಂ: ಆಧಾರವೆಂಬವುಗಳಾರು
ಮೋದದಿ ಅರಳುತಿಹವು ; ಮುಖ್ಯವಾಗಿಹುದನೇ
ವಾದಿಸಲು ಏಕೆ ತಿಳಿಯದೆ ?
ಸಾಧಕನಾಗುತ ಕಂಡುಕೋ ಸಾಧಿಸಿ, ವೇಮಾ.

ಸರ್ವಜ್ಞ :-

ಅಷ್ಟದಳ ಕಮಲದಲಿ ಕಟ್ಟಿ ತಿರುಗುವ ಹಂಸ,
ಮೆಟ್ಟುನಾ ದಳದ ನಡುವಿನಲಿ-ರುವುದನು
ಮುಟ್ಟುವನೆ ಯೋಗಿ ಸರ್ವಜ್ಞ.

ಕುಂಡಲಿನಿಯ ಭೇದದಾ ಕಂದ ನಾಡಿಯ ನಡುವೆ,
ಮಂಡಿಸುತಿರ್ಪ ಹಂಸನ - ಹತ್ತಿರವೆ
ಕಂಡಿಹುದು ಸುಳುವು ಸರ್ವಜ್ಞ.
( ಕಂದನಾಡಿ= ಸುಷುಮ್ನ ನಾಳ )

ಕಟ್ಟಿ ಜಾಡನ ಉಂಕೆ ಮುಟ್ಟುವುದು ಮೂರೂರ ;
ಬಟ್ಟೆಯು ನಾಲ್ಕು, ಪಥ ಮೂರು - ಅವನೂರು
ಬೆಟ್ಟದ ಮೇಲೆ ಸರ್ವಜ್ಞ.

ಅಂದರೆ, ಜಾಡವನ್ನು ಕಟ್ಟಿದ ಉಂಕೆಯ ದಾರಗಳ ಹಾಗೆ, ಕಣ್ಣಿನ ರಂಧ್ರಗಳೆರಡು ಹಾಗೂ ಮೂಗಿನ ರಂಧ್ರಗಳೆರಡು - ಹೀಗೆ ನಾಲ್ಕು ದಾರಿಗಳಿಂದ ಇಡಾ, ಪಿಂಗಳಾ ಮತ್ತು ಸುಷುಮ್ನೆಗಳ ಮುಖಾಂತರ, ನಡು ನೆತ್ತಿಯಲ್ಲಿಯ ಬ್ರಹ್ಮ ರಂಧ್ರದಲ್ಲಿ, ಅಸ್ತಿತ್ವವು ನೆಲೆಸುವುದೇ ಪರಮ ಪದವಾಗಿದೆ.

**ಧರ್ಮ :-**

ಧೃ-ಧರ-ಧಾರಣಾತ್ ಧರ್ಮ ಇತ್ಯಾಹು : ಧರ್ಮೋ ಧಾರಯತಿ ಪ್ರಜಾನಾಮ್. ಅಂದರೆ ಜನರನ್ನು ಎತ್ತಿ ಹಿಡಿಯುವುದೇ ಧರ್ಮ. ಜನರು ಇಂದ್ರಿಯ ವಿಷಯಕ್ಕೆ ಮಾರು ಹೋಗಿ, ಅಲ್ಪ ಸುಖಕ್ಕಾಗಿ ಆಸೆ ಬಟ್ಟು ಗಂತವ್ಯವನ್ನು ಮರೆತು ಭ್ರಮಿತರಾಗುತ್ತಾರೆ. ಅವರಿಗೆ ಲಕ್ಷ್ಯದ ದಿಶೆ ತೋರಿಸುವ ದೇಶಿಕ ಗುರುವೂ ಬೇಕು; ನೀತಿ ಮಾರ್ಗವೂ ಬೇಕು. ದೇಶ, ಕಾಲ, ಪಾತ್ರಕ್ಕೆ, ತಕ್ಕಂತೆ; ಈ ಲಕ್ಷ್ಯದ ಗ್ರಹಿಕೆ, ಸಾಧನೆಯ ಮಾರ್ಗ ಹಾಗೂ ಅನುಸರಿಸಬೇಕಾದ ವಿಧಾನಗಳು ಭಿನ್ನವಿರುತ್ತವೆ. ಆದರೆ ಮೂಲದಲ್ಲಿ ಕೆಲವು ಸಾಮಾನ್ಯ ಸಾಧನೆಗಳೂ ಇವೆ. ಸತ್ಯ ಅಹಿಂಸೆಗಳಂಥ ಯಮ ಸಾಧನೆಗಳನ್ನು ವೇಮನಯೋಗಿ ಮತ್ತು ಸರ್ವಜ್ಞ ಮೂರ್ತಿಗಳಿಬ್ಬರೂ ಸಮಾನವಾಗಿ ಪುರಸ್ಕರಿಸುತ್ತಾರೆ. ಸತ್ಯ, ಅಹಿಂಸೆ, ಅಸ್ತೇಯ ಮತ್ತು ಬ್ರಹ್ಮಚರ್ಯಗಳ ಅನುಶಾಸನದಲ್ಲಿ ಈರ್ವರೂ ಸುಸ್ಪಷ್ಟ ನೀತಿಯನ್ನು ಜನರೆದುರು ಇರಿಸಿದ್ದಾರೆ. ಅಹಿಂಸೆಯ ವಿಷಯದಲ್ಲಂತೂ ತುಂಬಾ ನಿಷ್ಠುರ ಶಬ್ದಗಳಲ್ಲಿ,

ಯಜ್ಞದ ಹೆಸರಿನಲ್ಲಿ ನಡೆಯುತ್ತಿದ್ದ ಪ್ರಾಣಿ ಹಿಂಸೆಯನ್ನು ಖಂಡಿಸಿದ್ದಾರೆ.

ವೇಮನ :-

ಸೋಮಯಾಜಿಯೆಂಬ ಸೊಂಪಿನ ವೇಷದವ,
ಮಾಂಸ ರುಚಿಯ ಪಾಕ ಮಾಡಿ ತಿನುವ.
ಮತ್ತೆ ದ್ವಿಜನು ಎನುತ, ಮೆರೆಯಬಲ್ಲನೆಂತು ?
ವಿಶ್ವದಾಭಿರಾಮ ಕೇಳು ವೇಮ.

ಸರ್ವಜ್ಞ :-

ಯಾಗದ ನೆವದಿಂದ ತೂಗಿ ತಿಂಬರು ಆಡ ;
ಯಾಗದಲೊಂದು ದಿಟವಿರಲು-ಹೋತುಗಳ
ನಾಗಲಿಸುವರೆ ಸರ್ವಜ್ಞ.

ಆಡ ತಿಂಬಾ ಪಾಪ ಕಾಡದೇಕಿರ್ಪುದು ?
ನೋಡಿರೇ ದಕ್ಷನುರು ಮುಂಡ-ವಾ ತಲೆಯ-
ಲಾಡುತ್ತಲಿದೆ ಸರ್ವಜ್ಞ.

ಇಷ್ಟೆಕ್ಕೇ ಟೀಕಾಸ್ತ್ರವನ್ನು ನಿಲ್ಲಿಸದೆ,

ಕೊಂದು ತಿನ್ನದ ಭಾಷೆ ಸಂದಿತಾ ಹೊಲೆಯಂಗೆ ;
ಸಂದುದನಲ್ಲದವ ತಿನ್ನ-ಹಾರುವರು
ಕೊಂದು ತಿನುತಿಹರು ಸರ್ವಜ್ಞ.

ಧರ್ಮ ಸಾಧನೆಯಲ್ಲಿ ದಯೆ, ದಾನ, ತಪಸ್ಸುಗಳಿಗೆ ತುಂಬ ಮಹತ್ವದ ಸ್ಥಾನವಿದೆ. ವಿತ್ತ-ವಿತರಣಗಳನ್ನು ಸರಿದೂಗಿಸಿ ಸಮಾಜೀಕರಣ ಮಾಡುವಲ್ಲಿಯೂ ದಾತೃ ಬುದ್ಧಿಯ ಗಣನೀಯ ಪಾತ್ರವಿದೆ. ವೇಮನ ಯೋಗಿಯು ದಾನದ ಮಹಿಮೆಯನ್ನು ಚೆನ್ನಾಗಿ ಬಣ್ಣಿಸಿದ್ದಾರೆ. ಸರ್ವಜ್ಞ ಮೂರ್ತಿಯೂ ಸಹ ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ.

ವೇಮನ :-

ತಾವು ಗಳಿಸಿ ಇಟ್ಟ ಧನವು ತಮ್ಮದೆಂದು,
ನಂಬಿರುವರು ಹುಚ್ಚು ನರರು ಜಗದಿ ;
ತಾವು ಓರ್ವಗಿತ್ತ ದಾನ ತಮ್ಮದಿಹುದು.
ವಿಶ್ವದಾಭಿರಾಮ ಕೇಳು ವೇಮನ.

ಕೇಳದರ್ಥವೀವ ತಾನೆ ಬ್ರಹ್ಮ ಜ್ಞಾನಿ.





ಕೇಳಲರ್ಥವೀವ ತಾನೆ ತ್ಯಾಗಿ.
ಕೇಳಲೀಯದಾತ ಕೇಳು ಮಹಾ ಲೋಭಿ.
ವಿಶ್ವದಾಭಿರಾಮ ಕೇಳು ವೇಮ.

ಸರ್ವಜ್ಞ :-

ಅನ್ನವನಿಕ್ಕುವದು, ನನ್ನಿಯನು ನುಡಿಯುವದು,
ತನ್ನಂತೆ ಪರರ ಬಗೆಯುವದು- ಸ್ವರ್ಗಕ್ಕೆ
ಬಿನ್ನಾಣವಿತ್ತಂತೆ ಸರ್ವಜ್ಞ.

ಕೊಟ್ಟಿದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ
ಕೊಟ್ಟದ್ದು ಕೆಟ್ಟಿತೆನಬೇಡ- ಅದು ಮುಂದೆ
ಕಟ್ಟಿಹುದು ಬುತ್ತಿ ಸರ್ವಜ್ಞ.

ಲೋಭಿ ಗುಣವನ್ನು ಇಬ್ಬರೂ ಕಟು ಶಬ್ದಗಳಲ್ಲಿಯೇ ಖಂಡಿಸಿದ್ದಾರೆ.

ಸರ್ವಜ್ಞ :-

ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರೆವಾಲ,
ಪುಣ್ಯವ ಮಾಡನುಣಲೊಲ್ಲ-ದವನಿರವು
ಉಣ್ಣೆಗಿಂ ಕಷ್ಟ ಸರ್ವಜ್ಞ.

ಕೊಟ್ಟುಂಬ ಕಾಲದಲಿ ಕೊಟ್ಟುಣ್ಣಲೊಲ್ಲದವ,
ಹುಟ್ಟಿನ ಮೇಲೆ ಜೇನಿಟ್ಟು-ಪರರಿಂಗೆ
ಕೊಟ್ಟು ಹೋಹಂತೆ ಸರ್ವಜ್ಞ.

ಬೇಡದ ಮುನ್ನೀವ, ರೂಢಿಯೊಳಗುತ್ತಮನು.
ಬೇಡಿದಡೀವ ಮಧ್ಯಮನು-ಅಧಮ ತಾ
ಬೇಡಿಯೂ ಈಯ ಸರ್ವಜ್ಞ.

ಸರ್ವಜ್ಞ ಮೂರ್ತಿಯ ಪದ್ಯಗಳು ವೇಮನ ಯೋಗಿಯ ತೆಲುಗಿನ ಅನುವಾದಗಳೋ ಎಂಬಂತಿರುವುದನ್ನು ಓದುಗರು ಗಮನಿಸಬಹುದು. ( ತೆಲುಗು ಪದ್ಯಗಳ ಕನ್ನಡಾನುವಾದವನ್ನು ನಾವಿಲ್ಲಿ ನೀಡಿದ್ದೇವೆ )

ವೇಮನ :-

ತಾನು ತಿನ್ನಲಿಲ್ಲ ಧರ್ಮ ಮಾಡಲಿಲ್ಲ ; ಖ

ಸುತರಿಗಾಗಿ ಸೊತ್ತ ಶೇಖರಿಸುತ ;
ತಿಳಿಸಿ ಹೇಳದಂತೆ ತೀರಿ ಹೋದ ಮನುಜ .
ವಿಶ್ವದಾಭಿರಾಮ ಕೇಳು ವೇಮ.

ತೆಗೆದು ಮುಡಿಯಲಿಲ್ಲ ; ತೊಟ್ಟು ಉಣ್ಣಲಿಲ್ಲ ;
ಬೋಧಿಯಲ್ಲ ; ವಿದ್ಯೆ ಶೋಧಕಲ್ಲ .
ಕೂಡಿ ಹೋಗದವನು ಕಳೇವರದ ರೀತಿ .
ವಿಶ್ವದಾಭಿರಾಮ ಕೇಳು ವೇಮ.

ಧನವ ಕೂಡಿ ಹಾಕಿ , ಧರ್ಮವನು ಮಾಡದೆ,
ಹಿಗ್ಗಿ ತಿನದೆ ತಾನು ತಗ್ಗೊಳಿಡುವ .
ಜೇನು ನೊಣವು ಪರಗೆ ಜೇನನೀಯದೇನು ?
ವಿಶ್ವದಾಭಿರಾಮ ಕೇಳು ವೇಮ .

ತಾವೆ ತಂದು ಕೊಡಲು ತಮಗೆ ಆದುವೆ ಉಂಟು ;
ಕೇಳಲೀಯೆ , ತಮಗೆ ಕೇಳಿದಷ್ಟು .
ಕೇಳಲೀಯದಾತಗೆಂದು ಏನು ಇಲ್ಲ .
ವಿಶ್ವದಾಭಿರಾಮ ಕೇಳು ವೇಮ .

ವೇಮನ ಯೋಗಿಗಳಂತೆ ಸರ್ವಜ್ಞನೂ ಸಹ, ತೀರ್ಥ ಯಾತ್ರೆಗಳನ್ನು ಖಂಡಿಸಿದ್ದಾನೆ. ಕಂದಾಚಾರಗಳನ್ನೂ, ಮೂಢ ನಂಬುಗೆಗಳನ್ನೂ ಪೂತ್ಕರಿಸಿದ್ದಾನೆ. ಕುಲ ಭೇದವನ್ನೂ ಜಾತಿಯ ಮೇಲು ಕೀಳನ್ನೂ ತಾಜ್ಯವೆಂದು ಸಾರಿದ್ದಾನೆ.

ಯೋಗಿಯು ತಾನು ಗಳಿಸಿದ ಮನದ ಶಕ್ತಿಯನ್ನು ಬಳಸಿ ಮಹಿಮೆ ತೋರುವುದನ್ನು ವೇಮನರು ಖಂಡಿಸಿದ್ದರೆ, ಸರ್ವಜ್ಞ ಕವಿಯೂ ಅಂಥ ಕೀರ್ತಿವಾರ್ತೆಯ ಆಮಿಷವನ್ನು ನಿರುತ್ತೇಜಿಸಿದ್ದಾನೆ. ಕಣಿ ಹೇಳುವುದನ್ನೂ , ಪಂಚಾಂಗ ಹೇಳುವುದನ್ನೂ ಯೋಗಿ ವೇಮನರು ಖಡಾಖಂಡಿತವಾಗಿ ಖಂಡಿಸಿದ್ದಾರೆ. ಸರ್ವಜ್ಞ ಕವಿಯ ಹೆಸರಿನಲ್ಲಿ ಭೂತ-ಭವಿಷ್ಯದ ಮಹತ್ವದ ಘಟನೆಗಳನ್ನು ತಿಳಿಸುವ ಕಾಲಜ್ಞಾನದ ಪದ್ಯಗುಚ್ಛವೇ ಇದೆ. ಗೃಹಸ್ಥ ಧರ್ಮ ಕುರಿತು ಇಬ್ಬರ ವಿಚಾರ ಪ್ರಣಾಲಿಯಲ್ಲಿ ಅಂತರವೇನಿಲ್ಲ.

**ಅರ್ಥ :-**

ಅರ್ಥ ವಿಭಾಗದಲ್ಲಿ ಸಾಮಾಜಿಕ ವರ್ಗ ಭೇದ, ಸಂಪತ್ತಿನ ವಿತರಣೆ, ರಾಜ್ಯ ನೀತಿ ಹಾಗೂ ರಸವಾದಗಳು ಸಮಾವೇಶವಾಗುತ್ತವೆ.





ಅಧಿಕನಾದ ರಾಜ ಅಲ್ಪನ ಕೈ ಹಿಡಿಯೆ ,
ಅವನಿ ಸೈಗುಡುವುದು ಅವನ ನುಡಿಗೆ .
ಪ್ರಭುವು ಒಪ್ಪಿದೊಡನೆ ಕವಡೆ ನಾಣ್ಯವಹುದು .
ವಿಶ್ವದಾಭಿರಾಮ ಕೇಳು ವೇಮ .

ತನ್ನ ಒಡೆಯನೊಡನೆ , ಹರಿತಾಯುಧದೊಡನೆ ,
ಉರಿವ ಬೆಂಕಿ , ಪರರ ನಾರಿಯೊಡನೆ ,
ಗೇಲಿ ಮಾಡಲಾಗ ಕಾಲ ತೀರಿದಂತೆ .
ವಿಶ್ವದಾಭಿರಾಮ ಕೇಳು ವೇಮ .

ಭೂಪತಿ ಕೃಪೆ ನಂಬಿ ಭೂಮಿ ಕೆಡಿಸುವವನು ,
ಸೋಂಕಿ ಪ್ರಜೆಗಳುಸಿರು ಸತ್ತು ಹೋಹ .
ಎಸೆದ ಚಂಡದೆಷ್ಟು ಏರಿ ನಿಲ್ಲಬಹುದು ?
ವಿಶ್ವದಾಭಿರಾಮ ಕೇಳು ವೇಮ .

ಹೇಡಿ ಹುರಿದುಂಬಿಸಿ ಹೊಗಿಸಲು ರಣ ರಂಗ ,
ಬೆದರಿ ಓಡಿ ಕಾರ್ಯ ಭಂಗಗೊಳಿಪ ;
ಬಂಟ ಓಡಿ ಹೋಗೆ , ಬಾರನಾವುದಕೂ .
ವಿಶ್ವದಾಭಿರಾಮ ಕೇಳು ವೇಮ .

**ಸರ್ವಜ್ಞ :-**

ಅರಸೊಲಿದು ಕೂತಡೆ ಸಿರಿಯಕ್ಕು ; ದೆಸೆಯಕ್ಕು ;
ಕರಿ , ತುರಗ ಬಲವು ಹಿರಿದಕ್ಕು-ಮುನಿದರೆ
ಕರಿವಯಮಮಕ್ಕು ಸರ್ವಜ್ಞ .

ಎಂತರಸು ಮುನಿದರೂ ಮಂತ್ರಿಯು ಹಗೆ ಬೇಡ .
ಎಂತಕೆ ಅರಸು ಮುನಿದರೆ-ಆ ಮಂತ್ರಿ
ಅಂತಕನಕ್ಕು ಸರ್ವಜ್ಞ.

ಅಡಿಯ ಮುಂದಿಡೆ ಸ್ವರ್ಗ ; ಅಡಿಯ ಹಿಂದಿಡೆ ನರಕ ;
ಅಡಿಗಶ್ವಮೇಧ ಫಲ ಸ್ವಾಮಿ-ಕಾರ್ಯಕ್ಕೆ
ಮಡಿಯಲೇ ಬೇಕು ಸರ್ವಜ್ಞ .

**ಕಾಮ :-**

ಮಾನವ ಜೀವನದಲ್ಲಿ ಕಾಮವು ಮಹತ್ವದ ಪಾತ್ರವಹಿಸುತ್ತದೆ. ನಿಜವಾಗಿ ಕಾಮವು

ಒಂದು ಶಕ್ತಿಯೇ ಆಗಿದೆ. ಈ ಶಕ್ತಿಯನ್ನು ಅಧೋಮುಖವಾಗಿ ಬಳಸಿದರೆ , ಸಂತಾನ ಪ್ರಾಪ್ತಿಗೆ ಕಾರಣವಾಗುತ್ತದೆ. ಊರ್ಧ್ವಮುಖವಾಗಿ ಬಳಸಿದರೆ , ಮೋಕ್ಷ ಕಾಮನೆಯಾಗುತ್ತದೆ ; ಪರಾ ಪ್ರೇಮವಾಗುತ್ತದೆ. ಕಾಮ ಬೀಜವೇ ಇಲ್ಲದವನನ್ನು ಷಂಢ ಇಲ್ಲವೆ ಸುಗುಡಿ ಎನ್ನುತ್ತಾರೆ. ಕಾಮವು ದ್ರಾವಿಡ ಸಾಹಿತ್ಯದ ಕಾವ್ಯ ಲಕ್ಷಣಗಳಲ್ಲಿ ಒಂದಾಗಿದೆ. ತಮಿಳು ನಾಡಿನ ' ಸಂಗ ' ಕಾಲದ ಕಾವ್ಯಾವಲೋಕನದಿಂದ ಇದು ಸ್ಪಷ್ಟವಾಗುತ್ತದೆ.

ಇಲ್ಲಿ ಪ್ರಣಯವು ವಿವಾಹ ಪೂರ್ವದ್ದಿದ್ದರೆ ' ಕಳುವು ' ಎನ್ನಿಸುತ್ತದೆ. ವಿವಾಹಾನಂತರವಿದ್ದರೆ ' ಕರ್ಪು ' ಎನಿಸುತ್ತದೆ. ದಾರ್ಶನಿಕ ಕವಿಗಳೇ ಮಾನವ ಜೀವನದ ಸರ್ವ ರಂಗಗಳಲ್ಲಿ ಒಳ ತೂರಿ, ಅವನ ವೃತ್ತಿ ವ್ಯಾಪಾರವನ್ನು , ಮುಕ್ತಿ ಮಾರ್ಗದತ್ತ ತಿರುಗುವಂತೆ ಉಪದೇಶಿಸುವುದರಿಂದ, ಕಾಮ ಜೀವನ ಕುರಿತು ಕಣ್ಣು ಮುಚ್ಚಿಕೊಳ್ಳಲಾರರು . ಆದರೆ , ಅವರು ಲೌಕಿಕ ಕವಿಗಳಂತೆ ಮೋದ, ಪ್ರಮೋದಗಳಿಗಾಗಿ ಕಾಮ ಕ್ರೀಡೆಯ ಬಣ್ಣನೆಗಿಳಿಯದೆ ,ವೈರಾಗ್ಯ ವಿರಕ್ತಿ ಸಾಧಿಸಲು, ಆ ವಿಷಯವನ್ನು ವಿವೇಚಿಸುತ್ತಾರೆ. ಹೀಗಾಗಿ , ಅವರು ವಿವಾಹಿತರ ವ್ಯಭಿಚಾರವನ್ನು ಖಂಡಿಸುತ್ತಾರೆ. ಚಂಚಲ ಸ್ತ್ರೀ ಸ್ವಭಾವವನ್ನೂ, ಸಡಿಲು ಪುರುಷ ನಡತೆಯನ್ನೂ ಖಂಡಿಸುತ್ತಾರೆ. ವಿವಾಹ ಪೂರ್ವ ಪ್ರಣಯವಾಗಲಿ, ವೇಶ್ಯೆ ಗಮನವಾಗಲಿ, ಪರಪುರುಷ ಗಮನವಾಗಲಿ ಅವರ ದೃಷ್ಟಿಯಲ್ಲಿ ಪೂರ್ಣ ನಿಷಿದ್ಧ. ಈ ಬಗ್ಗೆ ವೇಮನ ಯೋಗಿ ಮತ್ತು ಸರ್ವಜ್ಞ ಮೂರ್ತಿಗಳು ಒಂದೇ ದಿಶೆಯಲ್ಲಿ ಸಾಗಿದ್ದಾರೆ. ವೇಮನಯೋಗಿ ತಮ್ಮ ಯುವಾವಸ್ಥೆಯ ಸ್ವಾನುಭವದಿಂದ, ಜೀವಂತ ಚಿತ್ರಗಳನ್ನು ನಿಲ್ಲಿಸಿದರೆ, ಸರ್ವಜ್ಞ ಮೂರ್ತಿ ಪುಸ್ತಕೀಯ ಮತ್ತು ವದಂತಿಗಳ ಮೇಲಿಂದ ವರ್ಣನೆಗಿಳಿಯುತ್ತಾರೆಂದು ಸ್ಪಷ್ಟಪಡಿಸಲು ಇಲ್ಲಿ ಕೆಲವೇ ಪದ್ಯಗಳನ್ನು ನಿದರ್ಶನವಾಗಿ ನೀಡಿದ್ದೇವೆ.

ವೇಮನ :-

ಮದನನಂಥ ಪತಿ ಮುದದ ಬಾಳಿರಲೇನು ?
ನೀತಿ ಗೇಡಿ , ಗುಣವ ನೀಗುತಿಹಳೆ ?
ಹಾಲು ಕುಡಿವ ನಾಯಿ ಹೇಸಿಗೆಗಾಸಿಸದೆ ?
ವಿಶ್ವದಾಭಿರಾಮ ಕೇಳು ವೇಮ .

ಚೊಕ್ಕ ಪರ ಪುರುಷನ ಅಕ್ಕರೆಯಿಂದ ನೋಡೆ ,
ತಕ್ಕನಲ್ಲವೆನಿಪ ತನ್ನ ಗಂಡ .
ಜಾರಬುದ್ಧಿಯಷ್ಟೆ; ಒರೆಯ ಬುದ್ಧಿಯಲ್ಲ .
ವಿಶ್ವದಾಭಿರಾಮ ಕೇಳು ವೇಮ .

ವಿಟನ ಕಂಡ ಕ್ಷಣವೆ ಮಾಟ ಮಾಯ ಮಾಡಿ ,
ಕಿಟಕಿ ಬಳಿಗೆ ಸಾರಿ ಕೇಕರಿಪಳು .
ಪಟುತ್ವಗೆಟುಕದಿಹ ಪತ್ನಿ ನೆಲೆಯನರಿಯ .
ವಿಶ್ವದಾಭಿರಾಮ ಕೇಳು ವೇಮ .





ಊರ ಹಂದಿಗಿರದು , ಉಚಿತ ಗಂಧದರಿವು .
ಭೂರಿ ನರಕ ತಿಂದು ತೇಗುತಿಹುದು .
ಸ್ವೈರಿಣಿ ಬಲ್ಲಳೆಂತು ಸಾಧ್ವಿ ಮಹಿಮೆಯನ್ನು ?
ವಿಶ್ವದಾಭಿರಾಮ ಕೇಳು ವೇಮ .

ಸರ್ವಜ್ಞ :-

ಹೆಣ್ಣಿನಿಂದಲೆ ಇಹವು ; ಹೆಣ್ಣಿನಿಂದಲೆ ಪರವು ;
ಹೆಣ್ಣಿನಿಂದಲೆ ಸಕಲ ಸಂಪದವು-ಹೆಣ್ಣೊಲ್ಲ
ದಣ್ಣಗಳು ಯಾರು ಸರ್ವಜ್ಞ ?

ಹೆಣ್ಣಿನ ಗುಣವರಿಯೆ , ಕಣ್ಣಿಗದು ಕಾಣುವುದೆ ?
ಸುಣ್ಣದಾ ಕಲ್ಲಿನೊಳಗಡಗಿ-ಸುಡುಗಿಚ್ಚು
ತಣ್ಣಗಿದ್ದಂತೆ ಸರ್ವಜ್ಞ .

ಕಾಮನಾ ಪುರದಿಪ್ಪ ಆ ಮಹಾ ಕೆರೆಯೊಳಗೆ ,
ಹೇಮ ಹೇಮಿಗಳು ಮುಳುಗಿರಲು-ಉಳಿದವರ
ನೇಮವೇನೆಂದ ಸರ್ವಜ್ಞ ?

ಕೊಂಕುಗುರುಳಿನ ರಂಭೆ ಕಂಕಣವು ಕಟಿ ಸೂತ್ರ ,
ಪಂಕಜ ಮುಖಿಯು ಎನಬೇಡ-ತಾನೊಲಿದ
ಮಂಕೆ ಮಾಣಿಕವು ಸರ್ವಜ್ಞ .

ಸೂಳೆಯನು ಹೋದವನು ಏನಾದ ? ಎಂತಾದ ?
ಹಾಳಾದ ; ಕೈಯ ಹಣ ತೀರೆ-ಮರು ದಿವಸ
ಮೂಳ ನಾಯಾದ ಸರ್ವಜ್ಞ .

ಮೋಕ್ಷ :-

ಶಿವತತ್ತ್ವ ಇಲ್ಲವೆ ಪರಬ್ರಹ್ಮ ಪದವು, ಜೀವಿಯು ತಲುಪಬೇಕಾದ ಗಂತವ್ಯ; ಪರಮಪದ. ಜ್ಞಾನ ಯೋಗದಿಂದಾಗಲಿ, ಧ್ಯಾನ ಯೋಗದಿಂದಾಗಲಿ ಇಲ್ಲವೆ ನಾದ ಯೋಗದಿಂದಾಗಲಿ, ಇಂದ್ರಿಯಗಳನ್ನು ಸಾಧುಗೊಳಿಸಿ, ಸಂಯಮ ಸಾಧಿಸಿ, ಮನಸ್ಸನ್ನು ಶುದ್ಧಗೊಳಿಸಿಕೊಂಡು ಸಗುಣ ಬ್ರಹ್ಮದಲ್ಲಿ ಲಯಿಸುವುದೇ ಮುಕ್ತಿ. ಇದನ್ನು ಸಾಧಿಸಿ, ಜೀವನದಲ್ಲಿ ಮುಂದುವರಿಯುವವನೇ ಜೀವನ್ಮುಕ್ತನು. ಇನ್ನು, ಸಾಧನೆಗೆ ನಿರ್ಗುಣವನ್ನೇ ಲಕ್ಷ್ಯವಾಗಿರಿಸಿಕೊಂಡು, ಸಗುಣದ ಚರಮ ಸೀಮೆಯಾದ ಜ್ಞಪ್ತಿಯಲ್ಲಿ ಆನಂದ ರತನಾಗದೆ, ಜ್ಞಾನ ದಾಹವನ್ನು ಇರಿಸಿಕೊಳ್ಳದೆ, ಸತ್ತ್ವಗುಣವನ್ನು ಹಿಂದುಳಿಸಿ, ನಿರ್ಗುಣ ಪದವಿಯತ್ತ ಸಾಗಿದ ಮಹಾಪುರುಷನು

ಮೋಕ್ಷ ಪದವಿ ಪಡೆಯುತ್ತಾನೆ. ಈ ಅವಸ್ಥೆಗೇರಿದ ಸ್ಥಿತಿಯನ್ನು ಯೋಗಿ ವೇಮನರು ಹೀಗೆ ಹಾಡಿದ್ದಾರೆ.

ವೇಮನ :-

ನೀನಾಡಲು ನಾನಾಡುವೆ ;
ನೀನಿದ್ದರೆ ನಾನಿಹೆ ; ನಿಷ್ಕಲಂಕನಿರುತಾ ;
ನೀನು ತಿಳಿದಂತೆ ತಿಳಿವೆನು ;
ನೀ ನಕ್ಕರೆ ನಾ ನಗುವೆನು , ನಿಜವಿದು ವೇಮಾ .

ಧ್ಯಾನಿಯಂತೆ ಉಂಟು ; ಮೌನಿಯಂತೆ ಉಂಟು ;
ಭೋಗಿಯಂತೆ ಉಂಟು , ರೋಗಿಯಂತೆ .
ಸಕಲವ ತಿಳಿದಿಪ್ಪ ಸರ್ವಜ್ಞನಾಗಿಯುಂಟು .
ಪರಮಯೋಗಿಯಂತೆ ಪೊಳೆಯೊ ವೇಮಾ

ಕರೆದೊಡೆ ಮಾತನಾಡದೆ , ಮರಳಿ ಕರೆಯೆ ಮೌನವಿರುವಂ.
ಅರಿತೊಡೆ ಯಾರೆ ಆಡಲೇನನು ಅಲ್ಲವೆಂದು ನಗುತಿಪ್ಪನ್,
ಪರ ತತ್ತ್ವವನಾತ್ಮದೊಳು ವಿಚಾರಿಸಿ , ನಿತ್ಯವು ತಾನೆಯಿಪ್ಪ ಸದಾ .
ಅರಿತಿಹ ಯೋಗಿ ವೇಮನ ಗತಿಯು ಶಿವರೂಪನೆ ಸರ್ವ ತಾಣದೋಳ್.

ಹಗಲು ಇರುಳು ಮರೆತು , ಭಾವವನ್ನೆ ಮರೆತು ,
ತಾನು ನಾನು ಎನುವ ತಿಳಿವು ಮೀರಿ ,
ಉಳ್ಳ ಮನುಜನೆ ತಿಳಿ ; ಉತ್ತಮ ಯೋಗಿಯವ .
ವಿಶ್ವದಾಭಿರಾಮ ಕೇಳು ವೇಮ .

ಸರ್ವಜ್ಞನು ಭಾವ ಲಿಂಗ ಪೂಜಿಸಿ, ಕುಂಡಲಿನಿ ಯೋಗ ಆಚರಿಸಿ, ಶಕ್ತಿಯನ್ನು ಮೂಲಾಧಾರ ಚಕ್ರದಿಂದ ಕಂದ ನಾಡಿಯ ಮೂಲಕ ಬ್ರಹ್ಮರಂಧ್ರ ದಾಟಿಸಿ , ಸಹಸ್ರಾರ ಚಕ್ರ ತಲುಪಿಸಿ, ಲಿಂಗೈಕ್ಯನಾಗುತ್ತಾನೆ. ಶಿವಯೋಗಿಯಾಗುತ್ತಾನೆ; ಮೋಕ್ಷ ಪಡೆಯುತ್ತಾನೆ. ಮರುಹುಟ್ಟು ನೀಗಿಕೊಳ್ಳುತ್ತಾನೆ. ಅವನು ಈ ಸ್ಥಿತಿಯನ್ನು ಹೀಗೆ ಬಣ್ಣಿಸಿದ್ದಾನೆ.

ಸರ್ವಜ್ಞ :-

ನಾನು ನೀನುಗಳಳಿದು , ತಾನು ಲಿಂಗದಿ ಉಳಿದು ,
ನಾನಾ ಭ್ರಮೆಗಳ ಪೆರೆ ಪಿಂಗಿ-ನಿಂದವನು
ತಾನೈಕ್ಯ ನೋಡು ಸರ್ವಜ್ಞ .





ಬಿಂದು ನಾದಗಳರಿತು, ಇಂದ್ರಿಯವನುಡುಗಿಸುತ್ತ ,
ನಿಂದಿರದ ಮನದ ನಿಜಗಂಡ-ಶಿವಯೋಗಿ
ಮುಂದೆ ಹುಟ್ಟುವನೆ ? ಸರ್ವಜ್ಞ .

ಬೊಮ್ಮವನು ಅರಿದಿಹರೆ ಸುಮ್ಮನೆ ಇರಬೇಕು ;
ಬೊಮ್ಮವನರಿದು ಉಸುರಿದರೆ, – ಕಳ ಹೋಗಿ ,
ಕೆಮ್ಮಿದಂತಕ್ಕು ಸರ್ವಜ್ಞ.

ಒಳಗಣ ಜ್ಯೋತಿಯ ಬೆಳಗನರಿದಾತಂಗೆ ,
ಬೆಳಗಾದುದೇಳು ಬೇಹಾರ-ಕೆಂದೆಂಬ
ಕಳವಳವದೇಕೆ ಸರ್ವಜ್ಞ ?

ಆಕಾಶ ಪಥ ಮೀರಿದೇಕಮಸ್ತುವ ತಿಳಿದು,
ಸಾಕಾರವಳಿದು ನಿಜವಾದ-ಐಕ್ಯಂಗೆ
ಏಕತ್ರ ನೋಡು ಸರ್ವಜ್ಞ .

ಕರ್ಪೂರದ ಸ್ತ್ರೀ ಅಗ್ನಿ ಪುರುಷನೊಳು ಬೆರೆದಂತೆ ;
ಪರಮನೊಳು ಪ್ರಾಣ ಬೆರೆದಿಪ್ಪ – ಐಕ್ಯಂಗೆ
ಚಿರಮುಕ್ತಿ ಇಹುದು ಸರ್ವಜ್ಞ .

ಅದ್ವೈತ ತಾನಾಗಿ , ಯುದ್ಧವಿನ್ನಾರೊಡನೆ ;
ಬುದ್ಧಿಯಿಂ ತನ್ನನರಿದಂಗೆ-ಲೋಕದ
ಗುದ್ದಾಟವಿಲ್ಲ ಸರ್ವಜ್ಞ .

ಸಾಮ್ಯಗಳು :-

ವೇಮನರು ಸಮಾಜವನ್ನು ತೆರೆದ ಕಣ್ಣಿನಿಂದ ನೋಡಿದವರು. ಏಕದೇವೋಪಾಸಕರು. ಎಲ್ಲ ತಾಂತ್ರಿಕ ಮತಗಳಂತೆ ಜಾತಿ ಕುಲಭೇದಗಳನ್ನು ಪರಿಗಣಿಸದವರು. ಗುರುವಿನ ಸ್ಥಾನವನ್ನು ಗ್ರಹಿಸಿದ್ದರೂ, ಕರ್ಮ-ವ್ರತಗಳನ್ನು ಕಟ್ಟುವ ಗುರುಗಳನ್ನು ತಿರಸ್ಕರಿಸುವವರು. ಬಾಹ್ಯ ಪೂಜೆಗೆ ಇಂಬುಗೊಡದವರು. ಸಜ್ಜನ ಸಂಗ, ದುರ್ಜನ ಸಂಗ ತ್ಯಾಗ, ಸತ್ಯ ಅಹಿಂಸೆಗಳಂಥ ಸಾಮಾನ್ಯ ನೀತಿ ನಿಯಮಗಳ ಉಗ್ರ ಪ್ರತಿಪಾದಕರು. ಮೂಢ ನಂಬುಗೆ-ಕಂದಾಚಾರಗಳನ್ನು ತಿರಸ್ಕರಿಸುವವರು. ತೀರ್ಥಕ್ಷೇತ್ರ ಯಾತ್ರೆಗಳಲ್ಲಿ ನಿರರ್ಥಕತೆಯನ್ನು ಸಾರುವವರು; ದಾನ ಧರ್ಮಗಳ ಪುರಸ್ಕರ್ತರು.

ಸರ್ವಜ್ಞನ ಜಾತಿ , ಮತ, ಕುಲಗಳನ್ನು ಕುರಿತು ವಿದ್ವಾಂಸ , ಕನ್ನಡ ಕವಿ ದ.ರಾ.ಬೇಂದ್ರೆ ಹೇಳಿದ ನುಡಿಗಳು ವೇಮನರಿಗೂ ಸಮಾನವಾಗಿ ಅನ್ವಯಿಸುತ್ತವೆ.

"ಅವನ ಜಾತಿ ಮಾನವ ಜಾತಿ ; ಅವನ ಮತ- ದೇವಮತ ; ಅವನ ಕಾಲ-ಸರ್ವಕಾಲ" ಇತ್ತ ಮಹಾಯೋಗಿ ವೇಮನರು ಜಾತ್ಯತೀತ ದೃಷ್ಟಿ ತಾಳಿದ ಮಹಿಮರು.

ವೇಮನ :-

ಜಾತಿ ಮತವ ತೊರೆದು ಯೋಗಿಯಾಗೆ ಮೇಲು ;
ಜಾತಿ ಮುಳುಗಿ ನೀತಿ ಹೇಳಲೇನು ?
ಮತವು ತಿಳಿಯೆ ಜಾತಿ ಬಿಡಲು ಅಂಜ ಬೇಡ .
ವಿಶ್ವದಾಭಿರಾಮ ಕೇಳು ವೇಮ .

ಆದರೆ , ವಿಪ್ರರು ನಡೆಸುತ್ತ ಬಂದ ಧಾರ್ಮಿಕ ಶೋಷಣೆಯನ್ನು ಖಂಡಿಸುವಲ್ಲಿ ಇಬ್ಬರದೂ ಅದೇ ಧ್ವನಿ ; ಅದೇ ಜೋರು . ಜಾತೀಯ ಮೇಲು - ಕೀಳನ್ನು ಹೀಗಳೆಯುವಲ್ಲಿ ಈರ್ವರೂ ಇನ್ನೊಬ್ಬರಿಗೆ ಎರಡನೆಯವರಾಗದಂತೆ ನೋಡಿಕೊಂಡಿದ್ದಾರೆ. ಅಜ್ಞಾನವೇ ಶೂದ್ರತ್ವವು; ಸುಜ್ಞಾನವೆ ಮುಕ್ತಿ ಪಥದ ದಾರಿ . ಶತ ಶತಮಾನಗಳಿಂದ ಬಹು ಸಂಖ್ಯಾತ ಜನರನ್ನು ಅಜ್ಞಾನ ಕತ್ತಲೆಯಲ್ಲಿ ನೂಕಿ, ತಮ್ಮ ಬೇಳೆ ಬೇಯಿಸಿಕೊಂಡ ಜನರಿಗೆ ವೇಮನ-ಸರ್ವಜ್ಞರು ಉತ್ತರದ ಸಂತರಂತೆಯೇ ಒಡೆಯಲಾರದ ಒಗಟಾಗಿ ನಿಂತರು. ಇದರಿಂದಾಗಿ , ಇವರ ಬೋಧೆಯನ್ನು ತಡೆಹಿಡಿಯಲು ಶೋಷಕರು ಪಡಬಾರದ ಕಷ್ಟಪಟ್ಟರು.

ಸರ್ವಜ್ಞ :-

ಅರ್ಥವಿಲ್ಲದ ಹಾಡು ವ್ಯರ್ಥ ಸಾಸಿರವಿದ್ದು,
ಅರ್ತಿಯಿಂ ಕತ್ತೆಯರಚ - ದದರಲ್ಲಿ
ಅರ್ಥವುಂಟೆಂದ ಸರ್ವಜ್ಞ .

ಅಹಿಂಸೆಯಲ್ಲಿ ಇಬ್ಬರಿಗೂ ಅಚಲ ನಿಷ್ಠೆಯುಂಟು. ಹೀಗಾಗಿ , ಪಶುಬಲಿ ನೀಡುವ ವೈದಿಕ ಯಜ್ಞಯಾಗಗಳ ಖಂಡನೆಯಲ್ಲಿ ಒಬ್ಬರು ಇನ್ನೊಬ್ಬರಿಗಿಂತ ಮುಂದಿದ್ದಾರೆ. ವೇಮನರು ಶೂದ್ರರೆಂಬ ಕಾರಣದಿಂದ ಅವರಿಗೆ ವೇದಾಧ್ಯಯನದ ಅಧಿಕಾರವಿಲ್ಲವಾದುದರಿಂದ , ಅವರ ಉಪದೇಶ ಸ್ವೀಕಾರಾರ್ಹವಲ್ಲವೆಂದು ಶೀಲವಂತ ಬ್ರಾಹ್ಮಣರ ವಾದವಿದ್ದುದರಿಂದ ವೇಮನರು ಶೂದ್ರರೆಂದರೆ ಯಾರು ? ಶೂದ್ರನು ಗುಣದಿಂದ , ತಪಸ್ಸಿನಿಂದ ಬ್ರಾಹ್ಮಣನಾಗುವ ಕ್ರಮವನ್ನು ವಿವರವಾಗಿ ತಿಳಿಸಿ ಹೇಳಿ, ಜಾತಿಯಿಂದ ಯಾರೂ ಬ್ರಾಹ್ಮಣರಲ್ಲ , ಎಂದು ತೀರ ಸುಸ್ಪಷ್ಟ ರೀತಿಯಲ್ಲಿ ತಿಳಿಸಿದ್ದರೆ , ಸರ್ವಜ್ಞ ಮೂರ್ತಿ , ಅಹಿಂಸೆ ಮತವನ್ನು ಎತ್ತಿ ಹಿಡಿಯಲು ಮತ್ತು ಜಾತಿಯ ಮೇಲು ಕೀಳು ಮನ್ನತೆಯನ್ನು ಕೊಚ್ಚಿಹಾಕಲು, ಹಾರುವರ ಟೀಕೆಗೆ ಮುಂದಾಗಿದ್ದಾರೆ .

ಯೋಗಿ ವೇಮನ ಮತ್ತು ಸರ್ವಜ್ಞ ಮೂರ್ತಿಗಳು ಸಮಕಾಲೀನರೆಂದು ಕನ್ನಡ ಪಂಡಿತರು ಗ್ರಹಿಸಿರುವುದರಿಂದ, ಅವರೀರ್ವರೂ ಭೆಟ್ಟಿಯಾಗಿ ಸಂವಾದಿಸಿರುವಂತೆ ಕಲ್ಪಿಸಿಕೊಂಡು , 'ವೇಮನ ಸರ್ವಜ್ಞ ಸಂವಾದ ' ಎಂಬ ಗ್ರಂಥವು ಶ್ರೀರಾಮಲಿಂಗ ಕವಿಗಳಿಂದ ಪರಿಶೋಧಿತವಾಗಿ , ಶ್ರೀ ವೆಂಕಟೇಶ್ವರ ಪ್ರೆಸ್, ಬೆಂಗಳೂರಿನಲ್ಲಿ ೧೯೧೭ ರಲ್ಲಿ ಮುದ್ರಿತವಾಗಿದೆ.





ವೇಮನ :-

ಬಂಡೆ ಹರಳು ತಂದು ಬಂಧಿಸಿ ಕಟ್ಟಲಿಕೆ ,
ಲಿಂಗವೇನು ಕಳ್ಳ ಲಂಪಟಾಯ್ತೆ ?
ಆತ್ಮಲಿಂಗವನ್ನು ಅರ್ಚಿಸಲೇಕರಿಯರೊ ?
ವಿಶ್ವದಾಭಿರಾಮ ಕೇಳು ವೇಮ ?

ಸರ್ವಜ್ಞ :-

ಕಟ್ಟಲೂ ಬಿಡಲು ಶಿವ ಬಟ್ಟಲವ ಕದ್ದನೆ ?
ಕಟ್ಟಲೂ ಬೇಡ ; ಬಿಡಬೇಡ-ಕಣ್ಮನವ
ಕಟ್ಟಿದರೆ ಸಾಕು ಸರ್ವಜ್ಞ .

ವೇಮನ :-

ಒಡಲು ಬಡವ ಮಾಡಿ , ಯೋಗವೆನ್ನುವವರು
ಮನದ ಕಲ್ಮಷ ದೂರ ಮಾಡರಲ್ಲ ?
ಹುತ್ತ ಮೇಲೆ ಹೊಡೆಯೆ , ಹಾವು ಸಾಯುವುದೇ ?
ವಿಶ್ವದಾಭಿರಾಮ ಕೇಳು ವೇಮ .

ಸರ್ವಜ್ಞ :-

ಒಡಲು ದಂಡಿಸಿ ಮುಕ್ತಿ ಪಡೆವೆನೆಂಬುವ ಹೆಡ್ಡ ;
ಬಡಿಗೆಯಲಿ ಹುತ್ತ ಹೊಡೆಯಲಡ-ಗಿಹ ಸರ್ಪ
ಮಡಿಯುವದೆ ಹೇಳು ? ಸರ್ವಜ್ಞ .

ವೇಮನ :-

ಧನವ ಕೂಡಿ ಹಾಕಿ, ಧರ್ಮವನು ಮಾಡದೆ ,
ಹಿಗ್ಗಿ ತಿನದೆ ತಾನು ತಗ್ಗೊಳಿಟ್ಟು ,
ಜೇನು ನೊಣವು ಪರಗೆ ಜೇನನೀಯದೇನು ?
ವಿಶ್ವದಾಭಿರಾಮ ಕೇಳು ವೇಮ .

ಸರ್ವಜ್ಞ :-

ಕೊಟ್ಟರ್ದ ಕಾಲದಲಿ ಅಟ್ಟುಣ್ಣಲರಿಯದೆ ,
ಹುಟ್ಟಿಕ್ಕಿ ಜೇನು ಅನುಮಾಡಿ-ಪರರಿಂಗೆ
ಕೊಟ್ಟು ಹೋದಂತೆ ಸರ್ವಜ್ಞ .

ವೇಮನ :-

ಉಪ್ಪು ಕಪ್ಪುರಕ್ಕೆ ಒಂದೆ ಹೋಲಿಕೆಯಿದೆ ;
ಮರಳಿ ನೋಡೆ , ರುಚಿಯ ಮೂಲ ಬೇರೆ .
ಪುರುಷರೊಳಗೆ ಪುಣ್ಯ ಪುರುಷ ಬೇರೆ ಇಹರು .
ವಿಶ್ವದಾಭಿರಾಮ ಕೇಳು ವೇಮ .

ಸರ್ವಜ್ಞ :-

ಕಲ್ಲುಪ್ಪು ಕರ್ಪುರವು ಸೊಲ್ಲೆರಡು ಧಾತೊಂದು .
ಖಿಲ್ಲನೊಳ್ಳಿದನ ರೂಪೊಂದು-ಗುಣದೊಳಗೆ
ಎಲ್ಲ ಅಂತರವು ; ಸರ್ವಜ್ಞ .

ಇದೇ ರೀತಿ , ಸರ್ವಜ್ಞನ ಹಲವು ಪದ್ಯಗಳು ಕನ್ನಡದ ವಚನಕಾರರ ವಚನಗಳಿಗೂ ಶಬ್ದಶಃ ಹೋಲಿಕೆ ಇರುವುದನ್ನು ಕಂಡು ಹಿಡಿದಿದ್ದಾರೆ. 'ಎಲ್ಲರಿಂದೊಂದು ನುಡಿಗಲಿತು, ವಿದ್ಯೆಯಾ ಪರ್ವತವೆ ಆದ ಸರ್ವಜ್ಞ' ಎಂದು ಹೇಳಿಕೊಂಡಿರುವ ಸರ್ವಜ್ಞನ ವಿನಮ್ರತೆಯೇ ಉಕ್ತ ಸಾಮ್ಯತೆಯನ್ನು ವಿವರಿಸುತ್ತದಲ್ಲವೇ ? ಇಲ್ಲವಾದರೆ , ಸಮಾನಾರ್ಥಕ ಸಂಸ್ಕೃತ ಸುಭಾಷಿತವನ್ನು ನೋಡಿ ಬರೆದಿರುವ ಸಂಭವವೂ ಇಲ್ಲದಿಲ್ಲ.

ವೇಷಮ್ಯಗಳು :-

ವೇಮನರು ತಮ್ಮದೇ ಆದ, ರಾಜಯೋಗ ಸಾಧನೆಗೂ ಮತ್ತು ಸಾಂಖ್ಯಯೋಗ ದರ್ಶನಕ್ಕೂ ಕಟ್ಟುಬಿದ್ದಿದ್ದಾರೆ. ಅದಕ್ಕೆ ಪೂರಕವಾದ ವೇದಾಂತ ವಾಕ್ಯಗಳನ್ನೂ , ಆಗಮಿಕ ಸೂಕ್ತಿಗಳನ್ನೂ ತಮ್ಮ ಪದ್ಯಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಅವರು ಈ ಯೋಗ ಸಾಧನೆಗೆ ವಿರೋಧಿಯಾದ ಇಲ್ಲವೆ ಅನವಶ್ಯಕವಾದ ಎಲ್ಲ ಕ್ರಿಯೆ-ಪ್ರಕ್ರಿಯೆಗಳನ್ನೂ , ಆಚಾರ, ವಿಧಿಗಳನ್ನೂ ತಿರಸ್ಕರಿಸಿದ್ದಾರೆ. ಹೀಗಾಗಿ, ಶೈವ , ವೈಷ್ಣವ , ಶಾಕ್ತರ ಬಾಹ್ಯ ಪೂಜೆ, ಮೂರ್ತಿ ಕಲ್ಪನೆ, ಅಂಧ ಶ್ರದ್ಧೆಗಳೆಲ್ಲ ಅವರಿಗೆ ವರ್ಜ್ಯ. ಆದರೆ ಸರ್ವಜ್ಞ ಮೂರ್ತಿ ತಮ್ಮ ಕಾಲದ ಪ್ರಚಲಿತ ಧರ್ಮಗಳಾದ ವೀರಶೈವ, ಜೈನ ಮತ್ತು ಬ್ರಾಹ್ಮಣ್ಯ ( ವೈದಿಕ-ಪೌರಾಣಿಕ ) ಮತಗಳನ್ನು ಕುರಿತು ವಿಮರ್ಶೆ ಮಾಡಿದ್ದಾರೆ. ವೀರಶೈವ ಕುರಿತು ಹೆಚ್ಚಿನ ಒಲವು ತೋರಿದ್ದರೂ ಸಹ, ಜೈನ ಧರ್ಮವನ್ನೂ ತಲೆಯ ಮೇಲಿರಿಸಿಕೊಂಡಿದ್ದಾನೆ. ಉತ್ತಮ ಬ್ರಾಹ್ಮಣರ ಬಗೆಗೂ ಗೌರವವಿರಿಸಿಕೊಂಡಿದ್ದಾನ. ವೀರಶೈವರ ೩೬ ಶುದ್ಧ , ಅಶುದ್ಧ ತತ್ತ್ವಗಳ ಜಾಗೆಯಲ್ಲಿ , ಸಾಂಖ್ಯರ ಇಪ್ಪತ್ತೈದು ತತ್ತ್ವಗಳನ್ನು ಒಪ್ಪಿದ್ದಾನೆ. ಲಿಂಗ ಧಾರಣೆಗೆ ಅವಾಸ್ತವ ಮಹತ್ವ ನೀಡದೆ , ಪ್ರಾಣಲಿಂಗ ಮತ್ತು ಭಾವಲಿಂಗ ಪೂಜೆಗೆ ಒತ್ತು ನೀಡಿದ್ದಾನೆ. ಲಿಂಗ ಪೂಜೆಯನ್ನು ಒಪ್ಪಿದುದಲ್ಲದೆ, ಭಸ್ಮ ರುದ್ರಾಕ್ಷಿಗಳನ್ನೂ ಪುರಸ್ಕರಿಸಿದ್ದಾನೆ. ಇವುಗಳೆಲ್ಲ ಬಾಹ್ಯ ಸಂಕೇತಗಳೇ ಆದುದರಿಂದ , ವೇಮನ ಯೋಗಿಗಳಿಗೆ ಇವು ಪೂರ್ಣ ತಾಜ್ಯವಾಗಿವೆ

ವೇಮನರು ಧ್ಯಾನಯೋಗ ಮಾರ್ಗದ ಸನಾತನ ಧರ್ಮದ ಹರಿಕಾರರೆನಿಸಿದರೆ, ಸರ್ವಜ್ಞ ಮೂರ್ತಿ ಪರಧರ್ಮ ಸಹಿಷ್ಣುತೆಯ ಉದಾರ ವೀರಶೈವದ ಪ್ರತಿಪಾದಕರಾಗಿದ್ದಾರೆ. ಸರ್ವಜ್ಞ ಕವಿ, ಕಾಲದ ರಾಜ ಧರ್ಮಗಳಾಗಿದ್ದ, ವೀರಶೈವ, ಜೈನ ಮತ್ತು ಬ್ರಾಹ್ಮಣ್ಯ ಧರ್ಮಗಳನ್ನು ವಿಮರ್ಶೆ ಮಾಡಿದ್ದಾನೆ. ಆಯಾ ಧರ್ಮಗಳಲ್ಲಿಯ ಒಳ್ಳೆಯ ಅಂಶಗಳನ್ನು ಎತ್ತಿ ಹಿಡಿದಿದ್ದಾನೆ. ಅವುಗಳಲ್ಲಿಯ ನ್ಯೂನತೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾನೆ. ವೇಮನರು ತಮ್ಮ ನಿಲುಮೆಯನ್ನು ಯಾವುದೇ ರಾಜಧರ್ಮಕ್ಕೆ ಅನುಗುಣವಾಗಿ ಮಾರ್ಪಡಿಸಲು ಸಿದ್ಧರಿಲ್ಲ. ಯಾವುದೇ ಮತಧರ್ಮವಿರಲಿ, ಬಾಹ್ಯ ಸಂಕೇತಗಳನ್ನೂ, ಆಡಂಬರದ ಬಾಹ್ಯ ಪೂಜೆಗಳನ್ನೂ, ವ್ರತಾಚಾರಗಳನ್ನೂ ಅವರು





ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ. ಆ ದೃಷ್ಟಿಯಿಂದ ವೈಷ್ಣವರ ತ್ರಿಪುಂಡ್ರದಷ್ಟೇ, ವೀರಶೈವರ ಭಸ್ಮ ಧಾರಣೆಯೂ ಅವರಿಗೆ ತ್ಯಾಜ್ಯವಾಗಿದೆ. ಅದೇ ರೀತಿ , ಮೂರ್ತಿ ಪೂಜೆಯಂತೆಯೇ, ಬಾಹ್ಯ ತ್ರಾಟಕದ ಇಷ್ಟಲಿಂಗ ಪೂಜೆಯನ್ನು ಅವರು ಖಂಡಿಸುತ್ತಾರೆ. ಆ ಮತ, ಈ ಮತ ಎಂಬ ದ್ವೇಷ ಅವರಿಗಿಲ್ಲ. ಸರ್ವರೂ ಏಕ ರೂಪವಾಗಿ ಹೊರಗೆ ಕಾಣಬೇಕು. ಅದ್ವೈತ ಭಾವವು ಅಂತರ್ಯದಲ್ಲಿ ಬಲಿಯಬೇಕು. ಇದುವೇ ಅವರ ದೃಢವಾದ, ಅಚಲವಾದ ನಿಲುಮೆ. ಇದರಿಂದ ಅವರು ಎಂದೂ ಕದಲಲಿಲ್ಲ. ತಮ್ಮ ಸ್ವಾನುಭವವೇ ಅವರ ಪ್ರಮಾಣ.

ಪ್ರಪಂಚದ ಅನುಭವವು ಇಬ್ಬರಿಗೂ ಸಾಕಷ್ಟು ಇದೆಯಾದರೂ, ತೌಲನಿಕವಾಗಿ ನೋಡಿದರೆ, ಮಹಾಯೋಗಿ ವೇಮನರು ಯೋಗಾಭಿಮುಖಿಯಾಗಿ ಮಾನವ ಮನವನ್ನು ತಿರುಗಿಸಲು ಯತ್ನಿಸಿದರೆ, ಸರ್ವಜ್ಞ ಕವಿ, ಲೋಕಾನುಭವಕ್ಕೂ ಅಷ್ಟೇ ಒತ್ತು ಕೊಟ್ಟಿದ್ದಾರೆ. ವೇಶ್ಯೆಯರನ್ನು ಕುರಿತು ಸರ್ವಜ್ಞನು ವಿಪುಲ ಸಾಹಿತ್ಯ ರಚಿಸಿ, ಗ್ರಂಥಸ್ಥವಾಗಿ ಅವರನ್ನು ವರ್ಗೀಕರಿಸಿದ್ದಾನೆ. ಅವನ ಪದ್ಯರಚನೆಗೂ, ಆಯ್ದ ವಿಷಯಗಳನ್ನು ಸೇರಿಸಿದಂತೆ ಕಂಡು ಬರುತ್ತದೆ. ಅದೇ ವೇಮನರ ಬಣ್ಣನೆಯಲ್ಲಿ ವಾಸ್ತವಿಕತೆಯಿದೆ ; ಸ್ವಾನುಭವದ ಮೆರುಗು ಇದೆ. ತನಗಾದ ಕೇಡು ಇನ್ನೋರ್ವನಿಗೆ ಆಗದಿರಲೆಂಬ ಕಳಕಳಿಯ ಕರೆಯಿದೆ. ಪ್ರಾಮಾಣಿಕ ಮಾರ್ಗದರ್ಶನವಿದೆ.

ಸಮಾಜ ಸುಧಾರಣೆಗಾಗಿ , ಅದೂ ಸಮಾಜವು ತೀರ ನೀತಿ ಭ್ರಷ್ಟವಾದಾಗ, ಕೇವಲ ಅಸಾಮಾನ್ಯ ಪ್ರಜ್ಞೆಯ ದೈವಾಂಶ ಸಂಭೂತನೇ ಜನ್ಮ ತಾಳಿ ಬರಬೇಕು. ಹೀಗೆ, ಜನ್ಮ ತಾಳಿ ಬಂದ 'ಕೃಷ್ಣ , ಬುದ್ಧ , ಬಸವ , ಕಬೀರರಂತೆ , ವೇಮನರು ಇಂದ್ರಿಯಾತೀತ ಸೀಮೆಯಿಂದ ಬ್ರಾಹ್ಮೀ ಪ್ರಜ್ಞೆ ಪಡೆದು ಉಪದೇಶ ಸಾರಿದ್ದರೆ, ಸರ್ವಜ್ಞ ಮಹಾಕವಿಯು, ತೀಕ್ಷ್ಣ ಬುದ್ಧಿಯ ಮೂಲಕ ಲೋಕ-ವಿಮರ್ಶೆಗಿಳಿದಿದ್ದಾನೆ.

ಸಂಗೀತಾಭಿರುಚಿಯಲ್ಲಿ ಇಬ್ಬರೂ ಸಮಾನರೇ. ವೇಮನರು ತಂತಿ-ವಾದ್ಯಪ್ರೇಮಿಗಳು. ತಮ್ಮ ಆಟವೆಲದಿಯೆಂಬ ಚಿಕ್ಕ ಛಂದಸ್ಸನ್ನು ಮತ್ತು ಕಂದ ಪದ್ಯಗಳನ್ನು ಬಳಸಿಕೊಂಡಿದ್ದಾರೆ. ತೋಡಿ ರಾಗವು ಇವರಿಗೆ ತುಂಬಾ ಮೆಚ್ಚುಗೆಯ ರಾಗ . ಸರ್ವಜ್ಞ ಮಹಾ ಕವಿಗೆ ವೀಣೆಯೇ ಮೆಚ್ಚುಗೆಯದು. ಅವರ ಕನ್ನಡ ತ್ರಿಪದಿ ತನ್ನ ಸ್ಥಿರ ಲಯ ಗತಿಯಿಂದಾಗಿ ಸಂಗೀತಕ್ಕೆ ಶ್ರುತಿ ಹೊಂದುವುದೇ ಹೊರತು , ಕಾವ್ಯಪಾಠಕ್ಕಲ್ಲ . ಅದರಿಂದಾಗಿಯೇ ಅವನು ಹೀಗೆ ಹಾಡಿದ್ದಾನೆ.

ಅರ್ಥವಿಲ್ಲದ ಹಾಡು ವ್ಯರ್ಥ ಸಾಸಿರವಿದ್ದು ,
ಅರ್ತಿಯಿಂ ಕತ್ತೆಯರಚಿ-ದದರಲ್ಲಿ
ಅರ್ಥ ಉಂಟೆಂದ ಸರ್ವಜ್ಞ .

ವೇಮನರು ಸತ್ತ್ವ ಗುಣವನ್ನು ಶಿವ ಎಂದೂ, ಗುಣಾತೀತವನ್ನು ಪರಶಿವ ಇಲ್ಲವೆ ಪರಬ್ರಹ್ಮ ಎಂದೂ ಗ್ರಹಿಸಿ, ದಾರ್ಶನಿಕ ತತ್ತ್ವ ಮಂಡಿಸಿದ್ದಾರಷ್ಟೇ. ಅದೇನೂ ಶೈವ ಮತಾಭಿಮಾನದಿಂದಲ್ಲ. ಈ ವಿಷಯದಲ್ಲಿ ಸರ್ವಜ್ಞನು ಸ್ವಲ್ಪ ಅಧಿಕ ಶೈವ ಪಕ್ಷಪಾತಿಯೇ ಆಗಿದ್ದಾನೆ .

**ಅಂತ್ಯ :-**

ಯೋಗಿ ವೇಮನರು ಕಡಪ್ಪಾ ಜಿಲ್ಲೆಯ ಕದಿರಿ ತಾಲೂಕಿನ ಕಟಾರ್ಲುಪಲ್ಲೆ ಗ್ರಾಮದಲ್ಲಿ ಕ್ರಿ. ಶ. ೧೪೪೦ ರಲ್ಲಿ ಚೈತ್ರ ಶುಕ್ಲ ಪಕ್ಷ ನವಮಿಯಂದು ಮಹಾನಿರ್ಯಾಣ ಹೊಂದಿದರೆಂದು ತಿಳಿದು ಬಂದಿದೆ. ಆ ಗ್ರಾಮದಲ್ಲಿ ಅವರ ಸಮಾಧಿಯೂ ಇದೆ. ಅಲ್ಲಿ ಪೂಜೆಯೂ ಆಗುತ್ತಿದೆ. ಆದರೆ ಸರ್ವಜ್ಞನು ಎಲ್ಲಿ ಐಕ್ಯನಾದನು ? ಹೇಗೆ ಐಕ್ಯವಾದನು ? ಎಂಬುದನ್ನು ತಿಳಿಸುವ ಬಾಹ್ಯ ಕುರುಹುಗಳೇನೂ ದೊರಕಿಲ್ಲ. ಆದರೆ, ಕನ್ನಡ ನಾಡಿನಲ್ಲಿ ಪ್ರಚಲಿತ ಒಂದು ಕತೆ ಹೀಗಿದೆ.

ಸರ್ವಜ್ಞನು ಒಂದಾವರ್ತಿ ತನ್ನ ಅಕ್ಕನ ಮನೆಯಲ್ಲಿ, ಅವಳು ಮಸಾಲೆ ಅರೆಯುತ್ತ ಕುಳಿತಾಗ , ಅವಳ ಮರ್ಮೇಂದ್ರಿಯ ಕಂಡು,

ಅಸಿಗಲ್ಲು ಅಡಿಯಾಗಿ, ಮಸಗಲ್ಲು ಮೇಲಾಗಿ,
ಗಸಗಸನೆ ಅರೆವ ಅಕ್ಕನ - ಮೋಣಾನ
ಕುಶಲವನು ನೋಡು, ಸರ್ವಜ್ಞ .

ಆಗ ಅವಳು ಎಚ್ಚತ್ತು , ಸರಿಯಾಗಿ ಕುಳಿತು ,

ಉಚ್ಚೆಯಾ ಬಚ್ಚಲವ ತುಚ್ಛವೆಂದನಬೇಡ ;
ಅಚ್ಯುತ ಬಿದ್ದ ; ಅಜ ಬಿದ್ದ-ದೇವೇಂದ್ರ
ನೆಚ್ಚತ್ತು ಬಿದ್ದ ಸರ್ವಜ್ಞ .

ಎಂದು ಉತ್ತರಿಸಿದಳಂತೆ.

ತನಗಿದಿರು ನುಡಿದಾಗ, ಅದೂ ತನ್ನ ದೋಷ ತೋರಿಸಿ ನುಡಿದಾಗ , ಸರ್ವಜ್ಞನಿಗೆ ಮರಣವಿದೆಯೆಂದು ಓರ್ವ ಸನ್ಯಾಸಿ ಹೇಳಿದ್ದನಂತೆ. ಹೀಗಾಗಿ, ಸರ್ವಜ್ಞನು ಪ್ರಾಣಬಿಟ್ಟನೆಂದು ಪ್ರತೀತಿ ಇದೆ. ಹಿಂದೆ ಋಷಿ ಮುನಿಗಳಿಗೆ ಇದಿರು ವಾದಿಸಿದಾಗ , ನಿನ್ನ ತಲೆ ಹೋದೀತು , ಎಂದು ಎಚ್ಚರಿಸುವ ಮಾತುಗಳು ಉಪನಿಷತ್ತಿನಲ್ಲಿ , ಯಾಜ್ಞವಲ್ಕ್ಯಾದಿಗಳ ಸಂವಾದದಲ್ಲಿ ಕಾಣ ಬರುತ್ತವೆ.



# ಸಂತ ತುಕಾರಾಮ

-ಎಸ್. ಆರ್. ಪಾಟೀಲ

ಹಿಂದು ಧರ್ಮವು ದಾರ್ಶನಿಕ, ಧಾರ್ಮಿಕ ಮತ್ತು ನೈತಿಕವೆಂದು ಮೂರು ಮುಖಗಳನ್ನು ಹೊಂದಿದೆ. ದಾರ್ಶನಿಕ ಮುಖವು ಬ್ರಹ್ಮ , ಜೀವ, ಮಾಯೆ, ಜಗತ್ತುಗಳನ್ನು ಕುರಿತು ಗ್ರಹಿಕೆಗಳನ್ನು ಒಳಗೊಳ್ಳುತ್ತದೆ. ಧಾರ್ಮಿಕ ಮುಖದಲ್ಲಿ , ವಿಧಿ ನಿಷೇಧಗಳು, ಕರ್ಮ ಕಾಂಡವು, ಗುರು ಮತ್ತು ನಾಮಸ್ಮರಣಾದಿಗಳು ಸೇರುತ್ತವೆ. ಇನ್ನು , ನೀತಿವಾದದಲ್ಲಿ ಗೃಹಸ್ಥ ಮತ್ತು ವಿರಕ್ತ ಜೀವನದಲ್ಲಿ ಅನುಸರಿಸಬೇಕಾದ ನೀತಿ ನಿಯಮಗಳು ಸಮಾವೇಶವಾಗುತ್ತವೆ

ಈ ದಾರ್ಶನಿಕ, ಧಾರ್ಮಿಕ ಮತ್ತು ನೈತಿಕ ರಂಗಗಳಲ್ಲಿ ಆಯಾ ಕಾಲದ ಹಾಗೂ ಆಯಾ ಮಹಾ ಪುರುಷರ ಅನುಭವಗಳಲ್ಲಿಯ ಭೇದಾನುಸಾರ , ವಿಭಿನ್ನ ಸಂಪ್ರದಾಯಗಳು ಬೆಳೆದು ಬರುತ್ತವೆ . ಹೀಗೆ ಬೆಳೆದು ಬಂದ ಸಂಪ್ರದಾಯಗಳಲ್ಲಿ , ಸಂತ ಸಂಪ್ರದಾಯವೂ ಒಂದು.

ಮಹಾರಾಷ್ಟ್ರದಲ್ಲಿ ಹನ್ನೆರಡನೆಯ ಮತ್ತು ಹದಿಮೂರನೆಯ ಶತಾಬ್ದಿಗಳಲ್ಲಿ ಮೂಡಿ ಬಂದ ಸಂಪ್ರದಾಯಗಳು ಎರಡು. ಒಂದನೆಯದು ಮಹಾನುಭಾವ ಸಂಪ್ರದಾಯ. ಎರಡನೆಯದು ವಾರಕರಿ ಸಂಪ್ರದಾಯ. ಇವುಗಳ ವಿಚಾರ ಧಾರೆ, ಸಾಧನಾ ಪದ್ಧತಿ ಹಾಗೂ ಅಭಿವ್ಯಕ್ತಿಯ ಶೈಲಿಗಳು ಸಂತ ಕಾವ್ಯದೊಂದಿಗೆ ಘನಿಷ್ಠ ಸಾದೃಶ್ಯ ಹೊಂದಿವೆ. ಹನ್ನೆರಡನೆಯ ಶತಾಬ್ದಿಯ ಶ್ರೀ ಚಕ್ರಧರ ಸ್ವಾಮಿಯು ಮಹಾನುಭಾವ ಸಂಪ್ರದಾಯವನ್ನು ಸ್ಥಾಪಿಸಿದನು. ಈ ಸಂಪ್ರದಾಯಾನುಸಾರ ದಾರ್ಶನಿಕವಾಗಿ ಜೀವ, ದೇವತಾ ಮತ್ತು ಪರಮೇಶ್ವರರನ್ನು ಅನಾದಿಯೆಂದು ಗ್ರಹಿಸಿದರು. ಜೊತೆಗೆ ಶ್ರೀ ಕೃಷ್ಣ ಭಕ್ತಿಯನ್ನೂ ಹಾಗೂ ಅದ್ವೈತವನ್ನೂ ಗ್ರಹಿಸಿದರು. ಮೋಕ್ಷ ಪ್ರಾಪ್ತಿಗಾಗಿ ಜ್ಞಾನಕ್ಕಿಂತ ಪ್ರೇಮವನ್ನು, ಅವಲಂಬಿಸಿದರು . ಇದೇ ಕಾಲಕ್ಕೆ , ನಾಮದೇವ ಮತ್ತು ಜ್ಞಾನೇಶ್ವರರು ವಾರಕರೀ ಸಂಪ್ರದಾಯವನ್ನು ಸ್ಥಾಪಿಸಿದರು.

ಜ್ಞಾನೇಶ್ವರನು ಅದ್ವೈತವಾದವನ್ನೂ, ಸಗುಣ ಮತವನ್ನೂ ಮತ್ತು ಭಕ್ತಿ ಭಾವನೆಯನ್ನೂ ಸಮನ್ವಯಗೊಳಿಸಿದನು. ಪ್ರಾರಂಭದಲ್ಲಿ ನಾಮದೇವನು ಇದೇ ನಿಲುಮೆ ತಾಳಿದ್ದನು. ಆದರೆ ಯಾವಾಗ ದಕ್ಷಿಣಕ್ಕೆ ಕಾಲು ಹಾಕಿದ ಅಲ್ಲಾಉದ್ದೀನ ಖಿಲಜಿಯು ಮೂರ್ತಿಯ ಭಂಗ ಮಾಡುತ್ತ ಸಾಗಿದನೋ , ಆಗ ನಾಮದೇವನು ಭ್ರಮ ನಿರಸನ ಹೊಂದಿ, ಸಗುಣ ಮತದಲ್ಲಿ ವಿಶ್ವಾಸವನ್ನು ಕಳೆದುಕೊಂಡನು. ಅಂತೂ, ಈ ಸಂತ ಕವಿಗಳು ಭಗವಂತನನ್ನು ಕುರಿತು, ದೃಢ ಅನುರಾಗವನ್ನೂ, ಮಿಲನದ ಆಕಾಂಕ್ಷೆಯನ್ನೂ , ಪ್ರಣಯ ನಿವೇದನವನ್ನೂ, ಅದ್ವೈತ ದರ್ಶನದ ಪತಿಪಾದನೆ ಮುಂತಾದವುಗಳನ್ನೂ, ತಮ್ಮ ಜೀವನದ ಧ್ಯೇಯವಾಗಿಸಿಕೊಂಡು ಸಾಗಿದರು. ಈ ಸಂತ ಮಾಲಿಕೆಯಲ್ಲಿ ಶೋಭಿಸುವ , ಒಂದು ಎದ್ದು ಕಾಣುವ , ಪುಷ್ಪವೇ ನಮ್ಮ ಸಂತ ತುಕಾರಾಮ.

**ಜನನ-ದೇಶ-ಕಾಲ :-**

ಇತ್ತೀಚಿನ ಸಂಶೋಧನೆಯ ಮೇರೆಗೆ , ಸಂತ ತುಕಾರಾಮ ಪುಣೆ ನಗರದ ಬಳಿ, ಇಂದ್ರಾಯಿಣಿ ನದೀ ತೀರದ ದೇಹು ಗ್ರಾಮದಲ್ಲಿ ಕ್ರಿ. ಶ. ೧೬೦೮ ರಲ್ಲಿ ಕುಣಬಿ ಜಾತಿಯಲ್ಲಿ

ಜನಿಸಿದರು. ಈ ಕುಣಬಿ ಜಾತಿಯು, ವರ್ಣಾಶ್ರಮದ ಶ್ರೇಣಿಯಲ್ಲಿ ಶೂದ್ರವೆನಿಸಿತ್ತು. ತುಕಾರಾಮನ ತಂದೆ ಬಲ್ಹೋಬಾ ; ತಾಯಿ ಕಂಕಾಯಿ. ಈ ದಂಪತಿಗೆ ಐದು ಜನ ಮಕ್ಕಳು. ಅವರಲ್ಲಿ ಮೂವರು ಗಂಡು ಮಕ್ಕಳಾಗಿದ್ದರು. ತುಕಾರಾಮನು ಎರಡನೆಯ ಮಗ.

ತುಕಾರಾಮನ ಜೀವನ ಕಾಲದಲ್ಲಿ ( ೧೬೦೮ - ೧೬೫೦ ) ದಕ್ಷಿಣ ಭಾರತವೆಲ್ಲ ರಣರಂಗವಾಗಿತ್ತು. ಜೀವನವೂ ಅಸ್ತವ್ಯಸ್ತವಿತ್ತು. ಉತ್ತರದ ಮೊಗಲ ಸಾಮ್ರಾಜ್ಯದ ವಿಸ್ತರಣೆಯು ದಕ್ಷಿಣದತ್ತ ಸಾಗಿತ್ತು. ಮೊಗಲರು ದಾಳಿಯಿಕ್ಕುತ್ತ ಮುಂದೆ ಸಾಗಿದಂತೆ, ದಕ್ಷಿಣದ ಅಹ್ಮದನಗರ, ವಿಜಾಪುರ, ಗೋವಳಕೊಂಡ, ಬೀದರ ಮತ್ತು ಬೆರಾರ ರಾಜ್ಯಗಳ ಬಹಮನಿ ಸುಲ್ತಾನರು ಮೊಗಲರನ್ನು ಪ್ರತಿರೋಧಿಸುತ್ತಿದ್ದರು. ಉಭಯ ಪಕ್ಷದವರೂ ಮುಸಲ್ಮಾನರೇ ಆದರೂ, ರಾಜ್ಯಮೋಹ ಅಡರಿತ್ತು. ಮೇಲಾಗಿ, ಮೊಗಲರು ಸುನ್ನೀ ಮುಸಲ್ಮಾನರಾದರೆ, ದಕ್ಷಿಣದವರು ಶಿಯಾ ಪಂಗಡಕ್ಕೆ ಸೇರಿದ್ದರು. ಈ ಬಹಮನಿ ಸುಲ್ತಾನರು ರಾಜ್ಯ ಲೋಭದಿಂದ ತಮ್ಮ ತಮ್ಮಲ್ಲಿಯೇ ಬಡಿದಾಡುತ್ತಿದ್ದರು. ಅಹ್ಮದನಗರ ಸುಲ್ತಾನ ಹಾಗೂ ಮೊಗಲರ ನಡುವಿನ ಹೋರಾಟ ಕಾಲಕ್ಕೆ ದೇಹು ಗ್ರಾಮದ ನೆರೆಹೊರೆಯ ಪ್ರದೇಶದಲ್ಲಿ ಕೊಲೆ ಸುಲಿಗೆಗಳು ದಿನದಿನದ ಮಾತಾಗಿತ್ತು. ತುಕಾರಾಮರ ಜನನ ಕಾಲಕ್ಕೆ ( ಕ್ರಿ. ಶ. ೧೬೦೮ ) ತಾಪೀ ನದೀ ತೀರದ ಉತ್ತರ ಭಾಗವೆಲ್ಲ ಮೊಗಲರ ಅಂಕಿತಕ್ಕೆ ಸೇರಿತ್ತು. ಬೀದರ ಬೆರಾರಗಳು, ಅಷ್ಟರಲ್ಲಿ ಮೊಗಲ ಸಾಮ್ರಾಜ್ಯಕ್ಕೆ ಸೇರಿದ್ದವು. ಮುಂದೆ, ಜಹಾಂಗೀರ ಹಾಗೂ ಶಾಹಜಹಾನರು ಕ್ರಿ.ಶ ೧೬೩೬ ರಲ್ಲಿ ಅಹ್ಮದನಗರ ರಾಜ್ಯವನ್ನೂ ಗೆದ್ದುಕೊಂಡರು. ಹೀಗಾಗಿ, ಆ ಕಾಲಕ್ಕೆ ಉತ್ತರ ಮಹಾರಾಷ್ಟ್ರದ ಶಾಂತಿಯೇ ಕದಡಿಹೋಗಿತ್ತು. ಮೊಗಲರಿಗೆ ಎದುರಾಳಿಗಳಾಗಿ ಉಳಿದವರೆಂದರೆ, ವಿಜಾಪುರದ ಆದಿಲಶಾಹಿ. ಉಭಯತರೂ ರಾಜೀ ಮಾಡಿಕೊಂಡು, ದಕ್ಷಿಣ ಮಹಾರಾಷ್ಟ್ರ ಪ್ರದೇಶವನ್ನು ಹಂಚಿಕೊಂಡರು. ಹೀಗಾಗಿ, ಪುಣೆಯ ಸುತ್ತಮುತ್ತಿನ ಭೀಮಾ ಹಾಗೂ ನೀರಾ ನದಿಗಳ ಮಧ್ಯಭಾಗವು ಅಂದರೆ ತುಕಾರಾಮನ ಜನ್ಮ ಪ್ರದೇಶವು ವಿಜಾಪುರ ಸುಲ್ತಾನರ ವಶಕ್ಕೆ ಬಂದಿತು. ಇಂಥ ಕ್ಷುಬ್ಧ ರಾಜಕೀಯ ಪರಿಸರದಲ್ಲಿ, ಸೃಜನಾತ್ಮಕ ಸಾಹಿತ್ಯವೇನೂ ಮಹಾರಾಷ್ಟ್ರದಲ್ಲಿ ಹುಟ್ಟಲಿಲ್ಲ. ಸಂತಕವಿ ಏಕನಾಥನನ್ನು ( ೧೫೪೮ - ೧೫೯೯ ) ಹೊರತು ಪಡಿಸಿದರೆ, ೧೪, ೧೫ ಮತ್ತು ೧೬ ನೇ ಶತಮಾನಗಳ ಬೇರಾರೂ, ಹೇಳಿಕೊಳ್ಳುವ ಸಾಹಿತ್ಯ ಸೃಷ್ಟಿ ಮಾಡಿಲ್ಲವೆಂದು ಇತಿಹಾಸಕಾರರು ತಿಳಿಸುತ್ತಾರೆ.

ಸಾಮಾಜಿಕ ಧರ್ಮ ಕುರಿತು ಹೇಳುವುದಾದರೆ, ವೈದಿಕ ಅನುಮೋದನೆಯ ಚಾತುರ್ವರ್ಣ್ಯದ ಸಾಮಾಜಿಕ ಪದ್ಧತಿಯ ಬದಲಾವಣೆಯು ಸರ್ವಥಾ ದುಸ್ಸಾಧ್ಯವಾಗಿತ್ತು. ಮುಸಲ್ಮಾನ ರಾಜರು ಸಹ ಜಾತಿ ಬಹಿಷ್ಕಾರ ಇತ್ಯಾದಿಗಳನ್ನೊಳಗೊಂಡ ವರ್ಣಭೇದಕ್ಕೆ ಸಮ್ಮತಿಸಿದ್ದರು. ಇದರಿಂದ ಅವಮಾನಿತ ಶೂದ್ರಾತಿಶೂದ್ರರನ್ನು ತಮ್ಮ ಧರ್ಮಕ್ಕೆ ಸೆಳೆಯುವುದಕ್ಕೆ ಅವರಿಗೆ ಹೆಚ್ಚು ಅನುಕೂಲವೇ ಆಗಿತ್ತು. ವೇದಾರ್ಥಗಳನ್ನು ತಿರುಚಿ ಹೇಳುತ್ತಿದ್ದರು. ಮೂಲ ಸಂಸ್ಕೃತ ಗ್ರಂಥಗಳು, ತಮ್ಮ ಹೊರತು ಇತರರಿಗೆ ಲಭ್ಯವಾಗದಂತೆ, ನೋಡಿಕೊಂಡಿದ್ದರು. 'ಗೋಬ್ರಾಹ್ಮಣೇಭ್ಯೋ ಶುಭಮಸ್ತು ನಿತ್ಯಂ' ಪಠಿಸುತ್ತ ಆದಿವಾಸಿಗಳನ್ನು, ಅವೈದಿಕರನ್ನು, ಹೀನಾಯವಾಗಿ ಕಾಣುತ್ತಿದ್ದರು. ತಮ್ಮ ನೆರೆಹೊರೆಯ ಮಾನವರನ್ನು ಪಶುಗಳಿಗಿಂತ ಕಡೆಯಾಗಿ ಕಂಡರು. ತಮಗೆ ಅನುಕೂಲವಾದುದನ್ನೇ ಧರ್ಮವೆಂದರು. ಆ ಧರ್ಮವು ಸಹಜವಾಗಿ ಅವರನ್ನು ರಕ್ಷಿಸಿತು. 'ಧರ್ಮೋ ರಕ್ಷತಿ ರಕ್ಷಿತಃ'. ನಾಡಿಗರು, ರೈತಾಪಿ ಜನರು, ವೈದಿಕ ಧರ್ಮದಿಂದ





ದೂರಾದರು. ಅವರು ಪಶುಬಲಿಯನ್ನೊಳಗೊಂಡ ಯಜ್ಞಯಾಗಗಳಿಗೆ ಹೇಸಿಗೊಂಡರು. ಇವರನ್ನು ತಮ್ಮ ಹಿಡಿತದಲ್ಲಿ ಇರಿಸಿಕೊಳ್ಳಲು ವಿಪ್ರರು ಗುಡಿಗಳನ್ನು, ಮೂರ್ತಿಪೂಜೆಯನ್ನು ಪ್ರೋತ್ಸಾಹಿಸಿದರು. ಆದರೆ, ಆ ಶಿಲಾಮೂರ್ತಿಗಳ ನಿಕಟದಲ್ಲಿ ಇತರರು ಕಾಲಿರಿಸದಂತೆ, ಪೂಜಾರಿ-ಪುರೋಹಿತರು ನೋಡಿಕೊಂಡರು. ದೇವರನ್ನು ಗುಡಿಯ ಗರ್ಭದಲ್ಲಿ ಇರಿಸಿ, ಭಕ್ತ ಜನರ ಬಳಿ ದಕ್ಷಿಣೆ ಕೇಳಲು ಆರತಿಯ ತಾಟನ್ನು ಮಾತ್ರ ಸುತ್ತಾಡಿಸಿದರು. ಹೀಗೆ ಪೂಜೆ, ಸೇವೆಯೆಲ್ಲ ಬರೀ ವ್ಯಾಪಾರವಾಗಿ ಉಳಿಯಿತು.

ಕಾಲ ಚಕ್ರ ಉರುಳಿತು. ಮರಾಠಾ ಸರದಾರನಾದ ಶಿವಾಜಿಯು ರಾಜಕೀಯ ರಂಗ ಪ್ರವೇಶಿಸಿದನು. ಸಂತ ರಾಮದಾಸರು ಶಿವಾಜಿಯ ಬೆನ್ನು ತಟ್ಟಿದರು. ಆ ಕಾಲದ ಪ್ರಭಾವೀ ಸಂತರಾದ ತುಕಾರಾಮರು ತಮ್ಮ ಕ್ರಾಂತಿಕಾರಕ ವಿಚಾರಗಳ ಮೂಲಕ ಸಾಮಾನ್ಯ ಜನತೆಯ ಮನವನ್ನು ಶೋಷಕರ ಪಾಶದಿಂದ ಮುಕ್ತಗೊಳಿಸಲು ಪಣ ತೊಟ್ಟಿದ್ದರು. ಸ್ವಾತಂತ್ರ್ಯ ಹೋರಾಟವು ಕೇವಲ ರಾಜಕೀಯ ವಲಯಕ್ಕೆ ಮಾತ್ರ ಸೀಮಿತವಾದ ವಿಷಯವೆನಿಸಿರಲಿಲ್ಲ. ಅದು ಧಾರ್ಮಿಕ ರಂಗದಲ್ಲಿಯೂ ಅಷ್ಟೇ ಅವಶ್ಯವಾಗಿತ್ತು. ಮರಾಠಾ ರಾಜ್ಯದ ಅರುಣೋದಯದ ಕಾಲದಲ್ಲಿ ಸಾಮಾಜಿಕ ರಂಗದಲ್ಲಿ ಸಾಧು ಸಂತರ ಸುಂದರ ಸಮೂಹವೇ ಗೋಚರವಾಗಿತ್ತು. ಅವರು ಜಾತಿ-ಮತ, ಮೇಲು-ಕೀಳು ವರ್ಗ ಇತ್ಯಾದಿ ಭಿನ್ನ ಭೇದವಿಲ್ಲದೆ ಬಂದವರಾಗಿದ್ದರು. ಇವರಲ್ಲಿ ಮರಾಠರು ( ಕುಣಬಿ ), ಸಿಂಪಿಗ, ತೋಟಿಗ, ಕುಂಬಾರ, ಪತ್ತಾರ, ಪಶ್ಚಾತ್ತಾಪಗೊಂಡ ವೇಶ್ಯೆಯರು, ಬಹಿಷ್ಕೃತ ಜಾತಿಗಳವರೂ ಸೇರಿದ್ದರು. ಪರಮಾತ್ಮನ ಲೀಲೆಯೇನೋ ಎಂಬಂತೆ, ಆತ್ಮಸ್ವರೂಪ ದರ್ಶನವು, ಯಾವುದೊಂದು ವಿಶೇಷ ಜಾತಿಗೆ ಮೀಸಲಾಗಿಲ್ಲ ; ಅದು ಸರ್ವ ಮಾನವರ, ಜನ್ಮಸಿದ್ಧ ಹಕ್ಕು ; ಎಂಬ ಸನಾತನ ಸತ್ಯವನ್ನು ಸಾರಿತು. ಪರಿಚಾರಿಕೆಯ ಮಗ ಸತ್ಯಕಾಮ ಜಾಬಾಲ, ಮಾದಿಗ ವಸಿಷ್ಠ ಮಹರ್ಷಿ, ಮದುವೆಯಾಗದ ಅಂಬಿಗ ಕನ್ಯೆಯ ಪುತ್ರವರ ವ್ಯಾಸ ಮಹರ್ಷಿಗಳು, ಅನಾರ್ಯ ಶಿವ, ಗೊಲ್ಲ ಕೃಷ್ಣ, ಕ್ಷತ್ರಿಯ ಬುದ್ಧದೇವ ಮೊದಲಾದ ವಿಭೂತಿ ಪುರುಷರ ನಿದರ್ಶನವನ್ನು, ಮತ್ತೆ ಸ್ಮರಣೆಗೆ ತರುವಂತೆ, ನಾಮದೇವ, ಜ್ಞಾನದೇವ, ಏಕನಾಥ, ರಮಾನಂದ, ಕಬೀರ, ವೇಮನ, ಚೈತನ್ಯ, ನರಸೀ ಮೆಹತಾ, ಚಂಡೀದಾಸ, ವಿದ್ಯಾಪತಿ, ಸೂರದಾಸ, ಮೀರಾ, ರವಿದಾಸ ಅಲ್ಲಮ, ಕನಕದಾಸ, ಗೋರಾ, ನರಹರಿ, ಮತ್ತು ತುಕಾರಾಮರು ಆತ್ಮ ಸಾಕ್ಷಾತ್ಕಾರದ ಸನಾತನ ತತ್ತ್ವಕ್ಕೆ ಉಜ್ವಲ ಉದಾಹರಣೆಯಾಗಿ ನಿಂತರು.

ಈ ಮುನ್ನ, ಶ್ರೀಕೃಷ್ಣನ ಪೂರ್ವ ಕಾಲದಿಂದಲೂ ವೈದಿಕ ವಾಙ್ಮಯದ ಅಧ್ಯಯನವು ಮುಕ್ತಿ ಇಲ್ಲವೆ ಮೋಕ್ಷಕ್ಕೆ ಅನಿವಾರ್ಯ ಅಗತ್ಯ ಎಂಬ ಕುಯುಕ್ತಿಯೂ ಸಹ ಇತ್ತು. ಅದೆಂದರೆ, ವೇದಾಧ್ಯಯನಕ್ಕೆ ಉಪನಯನ ಸಂಸ್ಕಾರ ಅಗತ್ಯ. ಉಪನಯನವು ತ್ರೈವರ್ಣಿಕರಿಗೆ ಮಾತ್ರ ಮೀಸಲು. ಜನಾಂಗದ ಬಹುಸಂಖ್ಯರಾದ ಶೂದ್ರಾತಿಶೂದ್ರರು ಆ ಅಧಿಕಾರದಿಂದ ವಂಚಿತರಾದರು. ಹೀಗಾಗಿ, 'ಶೂದ್ರನಿಗೆ ಎಲ್ಲಿಯ ಮೋಕ್ಷ ? ಅವನು ಉಪದೇಶ ನೀಡುವುದೆಂದರೇನು ?' ಎಂಬ ಭಾವವು ಗರ್ವಿಷ್ಠ ವಿಪ್ರರಲ್ಲಿ ಬೆಳೆಯಿತು. ಇದನ್ನು ಮಹಾಯೋಗಿ ವೇಮನರಿಗೂ ಅನ್ವಯಿಸಿದ್ದರು. ಮುಂದೆ ತುಕಾರಾಮರಿಗೂ ಅನ್ವಯಿಸಿದರು. ಆದರೆ, ಮಹಾತ್ಮರು ವಿಪ್ರ ಸ್ಮೃತಿಕಾರರ ಕಟ್ಟಿನಲ್ಲಿ ಕಾರ್ಯ ಮಾಡುವುದಿಲ್ಲ. ಅಲ್ಲಲ್ಲಿ, ಆಗೀಗ ಹುಟ್ಟಿದ ಮಹಾಪುರುಷರು ತಮ್ಮ ಪರಾ ವಾಣಿ ಕೇಳಿದರು. ಮಹಾತ್ಮರ ಕೃಪೆಯಿಂದ, ಭಗವಂತನ ಕೃಪಾ ಮಾತ್ರದಿಂದ, ಅವರು ಅಪರೋಕ್ಷ

ಅನುಭೂತಿ ಪಡೆದರು. ವೇದಸಾರವನ್ನು ಅವರು ಗ್ರಂಥ ಓದಿ, ಉಪನಯನ ಸಂಸ್ಕಾರ ಹೊಂದಿ ಪಡೆಯಬೇಕಾಗಿರಲಿಲ್ಲ. ಪ್ರತಿಯಾಗಿ, ಸಂತರ ಮಹಿಮೆಯಿಂದ ಕಾಡುಕೋಣವೂ ಸಹ ವೇದ ಪಠಿಸಬಹುದೆಂದು ತೋರಿದರು. ತಮ್ಮ ಸ್ವಾರ್ಥ ರಕ್ಷಣೆಗಾಗಿ ವೇದ ವಿದ್ಯೆಯನ್ನು ಸಂಸ್ಕೃತದ ಸಂದೂಕಿನಲ್ಲಿ ವಿಪ್ರರು ರಕ್ಷಿಸಿಕೊಂಡು ಬಂದಿದ್ದರು. ಆದರೆ ಸಂತರು ಭಗವಂತನ ಕೃಪೆಯಿಂದ , ಮೋಕ್ಷ ವಿದ್ಯೆಯ ಕೀಲಿ ಕೈ ತಮ್ಮ ವಶಕ್ಕೆ ತೆಗೆದುಕೊಂಡರು. ಜನರ ಮಾತೃ ಭಾಷೆಯಲ್ಲಿ ತಮ್ಮ ಅಪರೋಕ್ಷ ಅನುಭೂತಿಯನ್ನು ಅಭಿವ್ಯಕ್ತಿಸಿದರು. ಹಳ್ಳಿ ( ಪಾಲಿ ) ಭಾಷೆಯಲ್ಲಿ ಬುದ್ಧದೇವನು ಹೇಳಿದನು. ಸೌರಸೇನಿಯಲ್ಲಿ ಶ್ರೀಕೃಷ್ಣನು ಹೇಳಿದನು. ತಮಿಳಿನಲ್ಲಿ ತಿರುವಳ್ಳುವರ ಹೇಳಿದರು. ತೆಲುಗಿನಲ್ಲಿ ವೇಮನ ಯೋಗಿ ಹೇಳಿದರು ; ಕನ್ನಡದಲ್ಲಿ ಕನಕದಾಸ ಪುರಂಧರ , ಬಸವ, ಸರ್ವಜ್ಞರು ಹೇಳಿದರು. ಹಿಂದಿಯಲ್ಲಿ ಕಬೀರ , ಮೀರಾ ಬಾಯಿ ಹಾಡಿದರು. ಮರಾಠಿಯಲ್ಲಿನ ನಾಮದೇವ, ತುಕಾರಾಮಾದಿಗಳು ಹಾಡಿದರು. ಹೀಗೆ , ಸಂತವಾಣಿಗೆ ಮಾರು ಹೋದ ಸಾಧಕರು, ಕರ್ಮಕಾಂಡಿಗಳ ಗೊಡವೆ ಬಿಟ್ಟರು. ಪೂಜಾರಿ ಪುರೋಹಿತರ ಶೋಷಣೆಯಿಂದ ಮುಕ್ತರಾದರು. ಗುಡಿಯ ಅಂಗಳದ ಕಸ ಉಡುಗುವ ಕೆಲಸಕ್ಕಿಂತಲೂ ತಮ್ಮ ಮನವನ್ನು ಉಡುಗಿ ಸ್ವಚ್ಛ ಮಾಡಿಕೊಳ್ಳುವ ಸಾಧನ ಮಾರ್ಗಗಳತ್ತ ವಾಲಿದರು. ಹೀಗೆ , ಸಿದ್ಧ ಸಂಪ್ರದಾಯ, ನಾಥ ಸಂಪ್ರದಾಯ, ಭಾಗವತ ಸಂಪ್ರದಾಯ, ಸಂತ ಸಂಪ್ರದಾಯಗಳನ್ನು ಆರಂಭಿಸಿದರು ; ಅನುಸರಿಸಿದರು. ತಲೆ ಎತ್ತಿ ಸ್ವತಂತ್ರರಾಗಿ ನಿಂತರು.

### ೨. ಈಶ್ವರ-ಜೀವ-ಜಗತ್ತು :-

ಸಂತ ತುಕಾರಾಮರು ನಿರ್ಗುಣೋಪಾಸಕರು. ಅವರು ಇತರ ಸಂತರ ಜಾಡಿನಲ್ಲಿಯೇ ಮುಂದುವರಿದರು ಮತ್ತು ಅಪರೋಕ್ಷ ಅನುಭೂತಿ ಪಡೆದರು.

ತುಕಾರಾಮ :

‘ ನಾವು ಮನೆ ಕಟ್ಟಿದ್ದು ಬಯಲಲ್ಲಿ ;
ನಮ್ಮ ಶಾಶ್ವತ ವಾಸ ನಿರಾಕಾರದಲ್ಲಿ.
ಒಂದಾಗಿರುವೆವು ಸತ್ಯದೊಂದಿಗೆ .
ನಿರಂತರ ಐಕ್ಯ ಪಡೆದವರೆ ನಾವು .
ತುಕಾ ಹೇಳಿದ - ಅಹಂಕಾರ ಹಾರಿ ಹೋಗಿದೆ .
ನಾನೊಂದಾಗಿರುವೆ ಅನವರತ ಪವಿತ್ರದಲಿ . ”

ಮಹಾಯೋಗಿ ವೇಮನರೂ ನಿರ್ಗುಣೋಪಾಸಕರೇ .

ವೇಮನ :

“ ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ
ರೂಪವೇನು ಇರದ ರೀತಿಯಲ್ಲಿ ,
ಪರಮ ಯೋಗಿ ನೋಳ್ಪ ಪರಮಾತ್ಮನಿರವನು . ” ವಿಶ್ವ





“ ನಿಖಿಲಾಕಾರನು ಆತನು
ನಿಖಿಲಾತ್ಮನು ಸರ್ವಸಾಕ್ಷಿ , ನಿಜದಲಿ, ತಾನೈ .
ನಿಖಿಲದ ಒಳಗೇ ನೋಡಲು ,
ನಿಖಿಲಾಗಿ ಉಂಟು ತಾನೇ ನಿಜದಲಿ , ವೇಮಾ . ”

ಜೀವ :-

ಸಂತ ಸಂಪ್ರದಾಯಾನುಸಾರ ಬ್ರಹ್ಮ ಮತ್ತು ಜಗತ್ತುಗಳು ನೀರು ಮತ್ತು ತೆರೆಗಳಂತಿವೆ. ಹೇಳಲಿಕ್ಕೆ ಶಬ್ದಗಳು ಬೇರೆ ಬೇರೆ. ಆದರೆ ಮೂಲದಲ್ಲಿ ಏಕರೂಪವಾಗಿವೆ. ಮಾಯೆಯ ಮೂಲಕ ಅಂತರವು ಬರುತ್ತದೆ. ಆದರೆ ಮಾಯೆಯ ಆವರಣ ತೆರೆದಾಗ , ಜೀವ ಮತ್ತು ಬ್ರಹ್ಮವೆರಡೂ ಏಕವಾಗುತ್ತವೆ. ಈ ಅಜ್ಞಾನದ ನಿವಾರಣೆಯು ಗುರುವಿನಿಂದಾಗುತ್ತದೆ. ಜೀವನಿಗಾಗಿ ಆತ್ಮ ಬೋಧನವು ಸ್ವಲ್ಪ ಕಠಿಣವೆನಿಸುತ್ತದೆ. ಈ ಕಠಿಣತೆಯನ್ನು ದೂರೀಕರಿಸಲು, ಜೀವ ಬ್ರಹ್ಮದ ನಾನಾ ಪ್ರತೀಕಗಳನ್ನು ಮತ್ತು ಅವುಗಳ ಸಂಬಂಧಗಳನ್ನು ಕಲ್ಪಿಸುತ್ತಾರೆ. ಈ ಪ್ರತೀಕಗಳೆಂದರೆ ತಾಯಿ ತಂದೆ, ಸ್ವಾಮಿ , ಮಿತ್ರ ಇಲ್ಲವೆ ಪತಿಯ ಸಂಬಂಧಗಳೇ ಆಗಿವೆ. ಇವುಗಳಲ್ಲಿ ಪತಿ-ಪತ್ನಿಯ ಸಂಬಂಧವನ್ನು ಬಹುಜನರು ಭಾವಿಸಿಕೊಂಡಿದ್ದರೂ ಸಂತ ತುಕಾರಾಮರು ತಾಯಿ ಮಗನ ಸಂಬಂಧವನ್ನು ತಮ್ಮದಾಗಿಸಿಕೊಂಡಿದ್ದಾರೆ.

ತುಕಾರಾಮ :

‘ ನೀನು ತಾಯಿಗಿಂತ ದಯಾಳು ; ಚಂದ್ರನಿಗಿಂತ ತಂಪು .
ತಿಳಿವು ನೀರಿನಂತೆ ಪ್ರೇಮ ಸಾಗರ . ”

“ ದಣದಿರುವೆ ನಾನು ; ಓ ತಾಯೆ!
ನನ್ನನೆತ್ತಿಕೋ ! ಇನ್ನು ನಡೆಯಲಾರೆ .
ಪ್ರೀತಿ ದಯೆಯಿರಲಿ .
ಎದೆ ಹಾಲ ಉಣಿಸು ; ಹಸಿವ ತಣಿಸು . ”

“ ಅಮ್ಮನ ತಪ್ಪಿಸಿಕೊಂಡ ಮಗು ;
ಹುರು ಹುರು ನೋಡುವಂತೆ ,
ನೀರ ಬಿಟ್ಟು ಹೊರ ಬಂದ ಮೀನಿನಂತಾಗಿ ;
ತಳಮಳಿಸುತ್ತಿದ್ದಾನೆ ತುಕಾ . ”

ವೇಮನರು ತಾಳಿದ ದೃಷ್ಟಿ ಭಿನ್ನ ; ಅವರದು ಜ್ಞಾನ ಮತ್ತು ಧ್ಯಾನ ಮಾರ್ಗ. ತತ್ತ್ವಗಳ ಚಿಂತನೆಯಿಂದ ತತ್ ದರ್ಶನ ಪಡೆಯುವ ಯೋಗ ಸಾಧಕರವರು. ‘ ತಾಯಿಯೇ ಪಾರ್ವತಿಯು ; ತಂದೆಯೇ ವರಶಂಭು, ಅಖಿಲ ಪ್ರಥಮ ಗಣವು ಬಂಧು ಬಳಗ ’ ಎಂದು ಹಾಡಿದ್ದರೂ ದೇವರನ್ನು

ತಾಯಿಯೆಂದು ಭಾವಿಸದೆ, ಮಗುವಾಗಿರುವಾಗ ತಾಯಿಯನ್ನೇ ದೇವತೆಯಾಗಿ ಭಾವಿಸಿ ಮಾರ್ಗದರ್ಶನ ಪಡೆಯಲು ಸೂಚಿಸುತ್ತಾರೆ. ಅವರಲ್ಲಿ ದಾಸ ಭಾವನೆಯಾಗಲಿ, ಪತಿ ಪತ್ನಿಯರ ಪ್ರೇಮ ಭಾವನೆಯಾಗಲಿ ಕಾಣಬರುವುದಿಲ್ಲ. ಅವರದು ಪುರುಷ ಸಿಂಹದ ಮಾರ್ಗ . ಹೀಗಾಗಿ , ವೀರಶೈವರ ' ಶರಣ ಸತಿ, ಲಿಂಗ ಪತಿ ' ಭಾವವಾಗಲಿ, ಸಂತರ ' ಗೋಪೀ ಭಾವವಾಗಲಿ ' ಅವರ ಮಾರ್ಗದಲ್ಲಿ ಕಾಣಬರದು.

ಜಗತ್ತು :-

ಸಂತರ ಮತಾನುಸಾರ ದೃಶ್ಯಮಾನವಾದುದೇ ಜಗತ್ತು. ಅದು ಭ್ರಮಮಯವಾಗಿದೆ; ಚಂಚಲವಾಗಿದೆ ಮತ್ತು ನಶ್ವರವಾಗಿದೆ. ಜಗತ್ತು ನಾಲ್ಕು ದಿನದ ಬೆಳ್ದಿಂಗಳಿನಂತೆ. ಇದರ ಮೇಲೆ ವಿಶ್ವಾಸವಿರಿಸುವುದೆಂದರೆ ಆತ್ಮ ವಂಚನೆಯೇ ಸರಿ. ಧನ-ಕನಕ, ವೈಭವಾಡಂಬರಗಳು, ವಿಲಾಸ ವಿಭ್ರಮಗಳು, ಸುಖ-ದುಃಖಗಳೆಲ್ಲ ಜಗತ್ತಿನ ರೂಪಗಳೇ ಆಗಿವೆ. ಇಂಥ ಹುಸಿಯೆಂದು ಪ್ರಪಂಚವನ್ನು ಮನಗಾಣುವುದೇ ಸತ್ಯ ಸಾಕ್ಷಾತ್ಕಾರ. ಇದನ್ನು ಸಂತ ತುಕಾರಾಮರು ಹೀಗೆ ಬಣ್ಣಿಸಿಕೃದ್ದಾರೆ.

ತುಕಾರಾಮ :

" ಹುಸಿಯೆ ನಗು , ಹುಸಿಯೆ ಅಳು ;
ಹುಸಿಯೆ ಹುಸಿಯನೇರಿಸಿತು ;
ಹುಸಿಯೆ ನನ್ನದು , ಹುಸಿಯೆ ' ನಿನ್ನದು '.
ಹುಸಿಯು ಕಪಟ ತನದ ಭಾರವು .
ಹುಸಿಯು ಹಾಡು, ಹುಸಿಯು ನೆಲೆ ,
ಅಸತ್ಯವು ಅಸತ್ಯವನೆ ಅರಸುತಿದೆ ;
ಅಸತ್ಯವೆ ವಿರಕ್ತಿಯು ; ಅಸತ್ಯವು ಮಾಯೆ .
ಅಸತ್ಯವೆ ತುಕಾರಾಮ, ಅಸತ್ಯವು ಭಕ್ತಿ .
ಅಸತ್ಯ ಮಾತಾಡುವುದು - ಅಸತ್ಯ ಕೇಳುಗರಿಗೆ "

ಇತ್ತ ,ವೇಮನರು ಜಗತ್ತಿನ ಸೃಷ್ಟಿ ಕುರಿತು ಸಾಂಖ್ಯ ಯೋಗದರ್ಶನಾನುಸಾರ ತತ್ತ್ವ ಸಂಕುಲವನ್ನು ಒಪ್ಪಿದ್ದಾರೆ. ಅವರ ಮೇರೆಗೆ ಪರಮ ಶಿವ ಇಲ್ಲವೆ ಪರಬ್ರಹ್ಮನ ಮೇಲೆ ಪ್ರಕೃತಿಯ ಗುಣಗಳ ಪ್ರಭಾವದಿಂದ, ಮಹತ್, ಬುದ್ಧಿ ಮತ್ತು ಚಿತ್ತ ತತ್ತ್ವಗಳೂ ದಶೇಂದ್ರಿಯಗಳೂ ಉದ್ಭವಿಸುತ್ತವೆ. ಹೀಗೆ , ಪಂಚವಿಂಶತಿ ತತ್ತ್ವಗಳನ್ನು ಅರಿತು, ಆ ಮೂಲಕ ಇಪ್ಪತ್ತೈದನೆಯದಾದ ಆತ್ಮವನ್ನು ಅರಿತು ಒಂದಾಗುವುದೇ ಲಕ್ಷ್ಯ.

ವೇಮನ :

" ಬೀಜವಿಲ್ಲದಂಥ ವೃಕ್ಷವೊಂದು ಹುಟ್ಟಿ ,
ಫಲವು , ಹೂವು , ಮೊದಲು ಪತ್ರಿ ಇಲ್ಲ ;
ಆದರ ಭಾವವೇನು ? ಆರುಹು ವೇಮ . ವಿಶ್ವ





Vidyanagar Unkal Cross HUBLI-31

" ಮನದಲಿ ಬುದ್ಧಿಯು ತೋರ್ಪುದು ;
ಮನದೊಳಹಂಕಾರವಾಯ್ತು , ಮನದಲಿ ಚಿತ್ತಂ .
ಎನಿಪವು ನಾಲ್ಕು ವಿಧದೋಳ್
ತನ ತನುವ ತಾ ತಿಳಿಯ , ಕಂಡು ಕೇಳು , ವೇಮಾ .

" ಐದು , ಐದು , ಆರು , ಎಂಟು ಮತ್ತೆ ಒಂದು .
ನಾವಿನೊಳಗುಂಟು ಒರೆಯ ಕಂಭ .
ತಿರುಗಿ ನಾವನೇರಿ , ತಾನೆ ತತ್ತ್ವಕೊಡೆಯ . ವಿಶ್ವ

ಸಾಧನ ಮಾರ್ಗ :-

ಸಂತರ ಸಾಧನಾ ಮಾರ್ಗವು ಇಮ್ಮುಖದ್ದಾಗಿದೆ. ಒಂದು ಭಕ್ತಿ ಮಾರ್ಗ ; ಇನ್ನೊಂದು ಯೋಗ ಮಾರ್ಗ. ಭಕ್ತಿ ಮಾರ್ಗದಲ್ಲಿ ಅನುಭಾವವು ದಾರಿ ದೀಪವಾದರೆ, ಯೋಗ ಮಾರ್ಗದಲ್ಲಿ ಕುಂಡಲಿನಿ ಜಾಗೃತಿ ಹಾಗೂ ಶಕ್ತಿಯನ್ನು ಸುಷುಮ್ನೆಯ ಮೂಲಕ ಸಹಸ್ರಾರದ ವರೆಗೆ ಏರಿಸುವುದೇ ಮಾರ್ಗಸೂಚಿ ಆಗಿದೆ.

ಈ ಹಂತದಲ್ಲಿ ಮಾರ್ಗದರ್ಶಕ ಗುರುವಿನ ಆಗತ್ಯವನ್ನು ಸಂತ ತುಕಾರಾಮರೂ ಇತರರಂತೆ ಕಂಡುಕೊಂಡಿರುತ್ತಾರೆ. ಸಂತ ತುಕಾರಾಮರ ಗುರು ಬಾಬಾಜಿ ಚೈತನ್ಯರು. ತುಕಾರಾಮರ ಪರಮಗುರು ಕೇಶವ ಚೈತನ್ಯರು. ಇವರು ತುಕಾರಾಮರ ದೇಹೂ ಗ್ರಾಮದ ನೆರೆಯ ಓತೂರಲ್ಲಿ ಇರುತ್ತಿದ್ದರು. ಕೇಶವ ಚೈತನ್ಯರು, ಮೂಲ ಸಂಪ್ರದಾಯದ ಗುರುವಾದ ರಾಘವ ಚೈತನ್ಯರ ಶಿಷ್ಯರಾಗಿದ್ದರು. ರಾಘವ ಚೈತನ್ಯರು ಗಿರಿನಾರ ( ಸೌರಾಷ್ಟ್ರ ) ಪ್ರದೇಶದವರು. ಮುಂದೆ ಮಹಾರಾಷ್ಟ್ರಕ್ಕೆ ಬಂದು , ತೆಲಂಗಾಣದಲ್ಲಿ ನೆಲೆಸಿದ್ದರು. ಅನೇಕ ಸಂತರು ಬಾಬಾಜಿ ಚೈತನ್ಯರ ಶಿಷ್ಯರಾಗಿದ್ದರು.

ದೀಕ್ಷೆ :-

ಸಂತ ತುಕಾರಾಮರು ಒಂದು ಬಾರಿ ಲಾತೂರಿಗೆ ಹೋಗಿದ್ದರು. ಆಗ ಸಮಾಧಿಸ್ಥರಾದ ಬಾಬಾಜಿ ಮೌನ ವ್ಯಾಖ್ಯಾನ ಮೂಲಕ ಅನುಗ್ರಹಿಸಿದರು. ಅದರಿಂದ ಪಕ್ವವಾಗಿದ್ದ ತುಕಾರಾಮರ ಸ್ಥಿತಿಯೇ ಬದಲಾಯಿತು. ಈ ಅವಸ್ಥೆಯನ್ನು ಅವರು ಸುಂದರವಾಗಿ ಬಣ್ಣಿಸಿದ್ದಾರೆ.

" ಹಣೆಯ ಮೇಲಿಡೆ ತನ್ನ ಕೈಯ ,
ತೋರಿದ ಆತ್ಮಾನಂದವ ,
ಸಮಾಧಿ ಸ್ವರೂಪ ತೋರಿದನೆನಗೆ ,
ಕಂಡಿತೆಲ್ಲ ಮುಗಿಲು ಬಣ್ಣ .
ನಾನಾ ಪರಿಯ ಹಳದಿ, ನೀಲಿ ಮತ್ತೆ ಕಪ್ಪು !
ಬಣ್ಣಗಳುದುರಿ ಬಯಲಾಯಿತು ;

ಉಳಿಯಿತು ನಿರ್ಮಲ ಆತ್ಮ ತೇಜ !"

ತುಕಾ ಹೇಳಿದ : ಬಾಬಾಜಿ ಕೃಪೆದೋರಿ ,
ಅನವರತ ನನ್ನನಿಟ್ಟ ತನ್ನ ಪೀಠದಲಿ .

ಹೀಗೆ , ಯೋಗ ಸಮಾಧಿಯ ಬಣ್ಣನೆಯನ್ನು ಸಂತ ತುಕಾರಾಮರು ಮಾಡಿದ್ದಾರೆ, ಮತ್ತು ಗುರುವಿನ ಅನುಗ್ರಹದಿಂದ ತಾವೇ ಗುರು ಪೀಠಕ್ಕೇರಿದುದನ್ನೂ ಚಿತ್ರಿಸಿದ್ದಾರೆ.

ವೇಮನ ಯೋಗಿವರ್ಯರ ಅನುಭವವೂ ಇದೇ ರೀತಿಯಾಗಿದೆ :

ವೇಮನ :

ಕಾಗೆ ಗೂಡಿನಲ್ಲಿ ಕೋಗಿಲೆ ಇರುವಂತೆ ,
ಭ್ರಮರವಪ್ಪ ಹುಳದ ಬದುಕಿನಂತೆ .
ಗುರು ಧ್ಯಾನದ ಬಳಿಕ ಗುರುವೆ ತಾನಾಗುವ . ವಿಶ್ವ

ತಮ್ಮ ಸಮಾಧಿ ಸ್ಥಿತಿಯನ್ನು ವೇಮನಯೋಗಿ ಹೀಗೆ ಬಣ್ಣಿಸಿದ್ದಾರೆ.

"
..........................................................................
..........................................................................
ತೇಜ ಮೇಲ್ಗಡೆಯುಂಟು ; ದಿವ್ಯಕಾಂತಿ! ರತ್ನ ಮಹಾ ಮಂಟಪವು!
ಅದರ ಮೇಲ್ಗಡೆಯುಂಟು ಹವಳಗಳ ಛಾಯೆ!
ಅದರ ಮೆಲ್ಗಡೆಯುಂಟು ದೀಪ ಕಳೆಯು!
ದೀಪವು ಬೆಳಗುತಿದೆ , ಅಣಿ ಮುತ್ತಿನ ಮಾಲೆಯ ;
ಅಲ್ಲಿಂದ ಸುರಿಯುತಿದೆ , ಅಮೃತದ ಸೋನೆ!
ಆಗಲೇ ಸುರಿಯುವುದು , ಮಂಜು ಧಾರೆಯಂತೆ ಕರುಣೆ ;
ಕರಗಿ ಕರಗಿ ಸುತ್ತಲೂ ಬಟ್ಟಬಯಲು ; ನಟ್ಟ ನಡುವೆ ಕಪಾಲ ಬುಟ್ಟಿ ;
ಅಲ್ಲಿಯೇ ಉಂಟು, ಪಾಂಚ ಭೌತಿಕ ದೇಹ ಮೆಟ್ಟ , ಒಡಲೊಳು .
ವಿಶ್ವದಾಭಿರಾಮ ಕೇಳು ವೇಮ .

ಗುರುವು ತನ್ನಲ್ಲಿ ದೋಷಗಳನ್ನು ನಿವಾರಿಸಿ, ಕಟ್ಟುಪಾಡುಗಳನ್ನು ಕೊಚ್ಚಿ ಹಾಕುತ್ತಾನೆ

ಗುರುವು ಕಶಕ ಬೀಜ ಕುಂಭದಂತೆ ದೇಹ .
ಆತ್ಮ ಕಲುಷ ರಾಡಿ ಅಳಿಕಿಳಿಯೆ ,
ತಿಳಿದು ವಿಂಗಡಿಸಲು ದಿವ್ಯಾಮೃತದುದಯ . ವಿಶ್ವ





V.V.S. College of Business Administration
Vidyanagar
Unkal Cross
HUBLI-31

ತುಕಾರಾಮ :–

" ತುಕಾ ಹೇಳಿದ ; ಎನ್ನ ಕಟ್ಟು ಪಾಡುಗಳೆಲ್ಲ
ಹರಿದ್ಹೋದವು ; ಮಹಾಗುರು ಬಾಬಾಜಿಯಿಂದ ".

ದೇವರ ನಾಮ ಸ್ಮರಣೆಯೇ ಭಕ್ತನನ್ನು ಭವಸಾಗರದಿಂದ ಪಾರುಗಾಣಿಸುವ ನಾವೆ. ಎಲ್ಲವೂ ದೇವಮಯವಾಗಿದೆ. ಸಂತ ತುಕಾರಾಮನು ತನ್ನ ಒಂದು ಅಭಂಗದಲ್ಲಿ ಹೀಗೆ ಹಾಡಿದ್ದಾನೆ.

ನಿನ್ನ ನಾಮವೆನಗೆ ತಪಸ್ಸು , ದಕ್ಷಿಣೆ ;
ಯಾತ್ರೆ , ಆರಾಧನೆ ಮತ್ತೆ ಜಪವು .
ಅದುವೆ ನನ್ನ ಶಾಸ್ತ್ರ , ಸ್ನಾನವು , ಮುಡಿಪು ,
ಸತ್ಯ, ಧರ್ಮ, ಕರ್ಮ ಮತ್ತೆ ಅನುಷ್ಠಾನವು ;
ನಿನ್ನ ನಾಮವೆನಗೆ ಯೋಗ , ತ್ಯಾಗ , ಧ್ಯಾನ , ಕುಲಗೋತ್ರಗಳು ,
ನಿನ್ನ ನಾಮವೇ ಎನ್ನ ಚಿಂತನ , ಮಂಥನ , ನಿರ್ಧಾರ ಮತ್ತೆಲ್ಲ .
ತುಕಾ ಹೇಳಿದ ಮಾತಿದು , ನಿನ್ನ ನಾಮದಲ್ಲಿಯೇ ಇದೆಲ್ಲ .

ಇನ್ನೊಂದು ಅಭಂಗದಲ್ಲಿ ಅವನು ವಿಠ್ಠಲನಿಗೆ ಪ್ರೇಮ ಪತ್ರ ಬರೆದಂತೆ ಹಾಡಿದ್ದಾನೆ. ತನ್ನ ಪ್ರೇಮದ ಅಮಲಿನಲ್ಲಿ ಅವನ ಹಾಡು ಹೀಗೆ ಸಾಗುತ್ತದೆ.

" ನಾನೆಲ್ಲಿ ಹೋದರೂ ನೀ ನನ್ನ ಸಂಗಾತಿಯಾಗಿ ,
ಕೈಹಿಡಿದು ನಡೆಸುವಿ .
ನಡೆವಾಗಲೆನಗೆ ನೀನೆ ಆಧಾರ ;
ನಡೆವ ಭಾರವೆಲ್ಲ ನಿನ್ನ ಮೇಲೆ .
ತೊದಲಿದರೆ ನೀ ತಿದ್ದುವಿ ;
ಲಜ್ಜೆ ತೊಲಗಿಸಿ ಧೈರ್ಯ ತುಂಬಿದಿ ;
ಜನವೆಲ್ಲ ನನ್ನ ಸಂರಕ್ಷಕರಾದರು .
ಬಂಧು ಬಳಗವೆಲ್ಲ ಎನ್ನ ಪ್ರಾಣ ಸಖರು ;
ತುಕಾ ಹೇಳಿದ : ಒಳ ಹೊರಗೆಲ್ಲ ಬ್ರಹ್ಮಾನಂದ .

ಧರ್ಮ :–

ಇದು ವರೆಗೆ ನಾವು ದಾರ್ಶನಿಕ ವಿಷಯಗಳನ್ನು ಕುರಿತು ಚರ್ಚಿಸಿದೆವು. ಈಗ ಧಾರ್ಮಿಕ ವಿಷಯದತ್ತ ಹೊರಳುವಾ :

ಸಂತ ಸಾಧನೆಯು ವೈಯಕ್ತಿಕವೂ, ಆಧ್ಯಾತ್ಮಿಕವೂ ಆಗಿದೆಯೇನೋ ಸರಿ. ಆದರೆ ಅದು ಸಮಷ್ಟಿಪರವೂ ಆಗಿದೆ. ವ್ಯಕ್ತಿಯು ಸಮಾಜದ ಒಂದಂಗವೇ ಸರಿ. ಹೀಗಾಗಿ , ಸಮಾಜದ ಸಂಘಟನೆ

ಹಾಗೂ ಸಪ್ರಾಮಾಣಿಕತೆಯು ವ್ಯಕ್ತಿಗಳ ಗುಣಗಳಿಂದಲೂ ಮತ್ತು ಆಚರಣೆಗಳಿಂದಲೂ ನಿರ್ಣಯಿಸಲ್ಪಡುತ್ತವೆ. ಹೀಗಾಗಿ, ವಿಧಿ ನಿಷೇಧಗಳು ಜೀವನದಲ್ಲಿ ಪ್ರಧಾನವಾಗಿರುತ್ತವೆ. ದಾನ ಧರ್ಮ , ಕರ್ಮಾದಿಗಳಿಂದ ಮನಸ್ಸನ್ನು ಶುದ್ಧ ಮಾಡಿಕೊಳ್ಳಬೇಕು. ಶುದ್ಧ ಮನಸ್ಸನ್ನು ಪರಮನಲ್ಲಿ ಮಗ್ನಗೊಳಿಸಬೇಕು. ಆ ತಾಯಿಯ ಪ್ರೇಮದ ಅಪ್ಪುಗೆಗೆ ಕಾತರಿಸಬೇಕು. ಆ ಪ್ರಿಯತಮನಿಗಾಗಿ ವಿರಹ ವೇದನೆಯನ್ನು ಅನುಭವಿಸಬೇಕು. ಸತ್ಯ, ಅಹಿಂಸೆ , ಅಸ್ತೇಯ , ಅಪರಿಗ್ರಹಗಳನ್ನು ಪಾಲಿಸಬೇಕು. ಅರಿಷಡ್ವರ್ಗಗಳನ್ನು ನಿಗ್ರಹಿಸಬೇಕು.

ಹಣವನ್ನು ಸನ್ಮಾರ್ಗದಿಂದ ಗಳಿಸಬೇಕು. ಗಳಿಸಿದ ಹಣವನ್ನು ನಿಷ್ಪಕ್ಷಪಾತವಾಗಿ ವೆಚ್ಚ ಮಾಡಬೇಕು.

ತುಕಾರಾಮ :

" ಸನ್ಮಾರ್ಗದಲ್ಲಿ ಗಳಿಸಿದ ಹಣವನ್ನು
ನಿಷ್ಪಕ್ಷಪಾತವಾಗಿ ಖರ್ಚು ಮಾಡಿದವನ
ಬದುಕೆಲ್ಲ ಒಳ್ಳೆಯದೇ .

" ಉಪದೇಶ ಕೂಡ ಯೋಗ್ಯತೆಗನುಸಾರವಾಗಿರಬೇಕು.
ಅದರ ಭಾರವೂ ಅತಿಯಾಗಿರಬಾರದು .
ಶುದ್ಧ ಹೃದಯಕ್ಕೆ ಉಪದೇಶದ ಅವಶ್ಯಕತೆಯಿಲ್ಲ ".

ವೇಮನಯೋಗಿಗಳೂ ನೀತಿಯ ಮಹತ್ವವನ್ನು, ದಾನಾದಿ ಸದ್ಗುಣಗಳ ಮೇಲ್ಮೆಯನ್ನು ಕುರಿತು ಹಾಡಿದ್ದಾರೆ.

ವೇಮನ :

"ದಾನ , ಧರ್ಮವೆಲ್ಲ , ದಯೆಯು ಸತ್ಯ ನೀತಿ ,
ವಿನಯ , ಧೈರ್ಯ , ಶೀಲ , ವಿತರಣೆಗಳು ;
ರಾಜ ಪಾಲಿಗಿಹವು ; ರಾಜಯೋಗವಿದುವೆ. ವಿಶ್ವ

" ನೀತಿ ಜ್ಯೋತಿಯಿರದೆ ನಿರ್ಮಲವೆಂತಹುದು ?
ಎಲ್ಲಿ ಪರಮ ಪದವು ? ಎಂತು ಇಹುದು ?
ಧನ ತನಗಿರಲೇನು ? ದೈವ ಫಲ ದೊರೆವುದೆ ? ವಿಶ್ವ

ಸಾಮಾಜಿಕ :-

ಸಮಾಜವೆಂದರೆ ಸಮಾನ ಅವಕಾಶಗಳುಳ್ಳ ವ್ಯಕ್ತಿಗಳ ಸಮೂಹವಷ್ಟೇ. ಸಮಾ-ಜ. ಇದರ ಸ್ಥಾಪನೆ ಹೇಗೆ ಸಾಧ್ಯ ? ಈ ಸಮಾನ ಭಾವವನ್ನು ಕದಡುವ, ಮೇಲು ಕೀಳಿನ ತಾರತಮ್ಯ





ಕಲ್ಪಿಸುವ ಜಾತಿ , ವರ್ಣ, ಮತ್ತು ವರ್ಗಗಳ ಭೇದವು ಇಲ್ಲವಾಗಬೇಕು. ಇಲ್ಲವೆ ಇಲ್ಲವೆನಿಸುವಷ್ಟು ಗೌಣವಾಗಬೇಕು. ವ್ಯಕ್ತಿ ಶ್ರೇಷ್ಠತೆಯನ್ನು ಈ ಆಧಾರದಿಂದ ಗಣಿಸುವುದನ್ನು ಸಂತರು ಪೂರ್ಣ ವಿರೋಧಿಸಿದರು. ಸಂತ ತುಕಾರಾಮನು ಶೂದ್ರ ಜಾತಿಯಲ್ಲಿ ಅಂದರೆ ಮರಾಠಿ-ಕುಣಬಿ ಜಾತಿಯಲ್ಲಿ ಜನಿಸಿದ್ದನೆಂದು ವಿಪ್ರರು ಅವನನ್ನು ಅವಹೇಳನ ಮಾಡಿದರು. " ಶೂದ್ರಾಚಿ ಯಾ ಅಂತರಾ ಜ್ಞಾನ ಕೈಚೇ ? " ( ಅಂದರೆ ಶೂದ್ರನಿಗೆಂತು ಅಂತಜ್ಞಾನವಾಗಬಲ್ಲದು ? ) ದೇಹು ಊರಿನ ಬ್ರಾಹ್ಮಣ ಮಾಂಬಾಜಿಯ ಪ್ರಶ್ನೆ . ತುಕಾರಾಮನ ಕೀರ್ತನೆ ಕೇಳಲು ಹೋಗುವಳೆಂಬ ಕಾರಣದಿಂದ ಬ್ರಾಹ್ಮಣ ಸ್ತ್ರೀ ಬಹಿಣಾಬಾಯಿಯನ್ನು ಮಾಂಬಾಜಿ ತನ್ನ ಮನೆಯಿಂದ ಹೊರದೂಡಿದ. ಭಗವದ್ಗೀತೆಯ ಅನುವಾದವನ್ನು ಸಂತ ತುಕಾರಾಮ ಮರಾಠಿಯಲ್ಲಿ ಮಾಡಿದಾಗ ಭಗವದ್ಗೀತೆಯನ್ನೂ , ಶ್ರೀಕೃಷ್ಣನನ್ನೂ ಮೂಲೆಗೆ ತಳ್ಳಿದ ವಿಪ್ರ ಸಮಾಜ , ಆಗಿನ ಕಾಲದಲ್ಲಿತ್ತು. ಆ ಜನರನ್ನು ಎಚ್ಚರಿಸಲು ಸಂತ ತುಕಾರಾಮನು ಹೀಗೆ ಹಾಡಿದ್ದಾನೆ.

ತುಕಾರಾಮ :

" ನಾನು ಬುದ್ಧಿ ಮಾಂದ್ಯದ ಕೆಳಜಾತಿಯವನು ;
ಅಸಹಾಯಕನು ; ಬಡವನು ;
ಆದರೂ ವಿಠಲನು ನನ್ನನ್ನು ಒಪ್ಪಿಕೊಂಡನು .

" ನಾನು ಶೂದ್ರನಾಗಿ ಹುಟ್ಟಿದೆ ;
ಆದ್ದರಿಂದ ಕಪಟತನದಿಂದ ದೂರವಾಗಿ ಉಳಿದೆನು .
ಧರ್ಮ ಗ್ರಂಥಗಳನ್ನು ಓದುವ ಅಧಿಕಾರ ನನಗಿಲ್ಲ .
ನಾನು ಕೆಳ ಜಾತಿಯವನಾದುದರಿಂದ ,
ಎಲ್ಲದರಲ್ಲೂ ನಾನು ಅಸಹಾಯಕನಾಗಿದ್ದೇನೆ . "

ಹೀಗೆ , ಸಂತ ತುಕಾರಾಮರು ವ್ಯಂಗ್ಯವಾಗಿ , ಆದರೆ ಅಷ್ಟೇ ಹೃದಯಸ್ಪರ್ಶಿಯಾಗಿ, ತಮ್ಮ ವೇದನೆಯನ್ನು ಅಭಿವ್ಯಕ್ತಿಸಿದ್ದಾರೆ. ವಿಪ್ರರು ತಾಳಿದ ಜಾತೀಯ ಮೇಲರಿಮೆಯಿಂದ ವೇದಪಾಠವನ್ನು ಶೂದ್ರರಿಗೆ ನಿರಾಕರಿಸಿದರು. ಮನು ಸ್ಮೃತಿಯಲ್ಲಿ , ಬಹು ಮುಂದೆ ಹೋಗಿ, ವೇದವನ್ನು ಕದ್ದಾಗಲಿ ಕೇಳಿದ ಶೂದ್ರನ ಕಿವಿಗಳಲ್ಲಿ ಸೀಸ ಹೊಯ್ಯಬೇಕೆಂದೂ ವಿಧಿಸಲಾಗಿದೆ. ಈ ಶೂದ್ರರು ಭಾರತೀಯ ಸಮಾಜದ ಪ್ರತಿಶತ ೭೦ ರಿಂದ ೮೦ ರಷ್ಟಾಗಿದ್ದಾರೆ. ಕೆಲವೇ ಲಕ್ಷ ಸಂಖ್ಯೆಯಲ್ಲಿದ್ದ ಕುಟಿಲ ಆಂಗ್ಲರು ಕೋಟ್ಯಂತರ ಸಂಖ್ಯೆಯ ಮುಗ್ಧ ಭಾರತೀಯರನ್ನು ಆಳಿದಂತೆ, ಶೋಷಿಸಿದಂತೆ, ಜನಸಂಖ್ಯೆಯ ಮಾನದಿಂದ ಪ್ರತಿಶತ ಐದರರಷ್ಟಿದ್ದ ವಿಪ್ರರು , ಬಹು ಜನ ಸಮಾಜವನ್ನು ಧಾರ್ಮಿಕವಾಗಿ ಶೋಷಿಸಿದರು. ಸಂತ ತುಕಾರಾಮ ಹೀಗೆ ಹಾಡಿದ್ದಾರೆ.

" ಜಾತಿ ಹೀನ ನಯೆ ಐಕೋ ಜಯಾ ವೇದ।
ತಯಾ ದಿಲೆ ಪದ ವೈಕುಂಠೀಚೆ ॥

ಆತಾ ಮೀ ಸರ್ವಥಾ ನವ್ಹೆ ಗಾ ದುರ್ಬಳ !
ಜಾತಿ ಹೀನ ಕುಳ ದೈನ್ಯ ವಾಣಾ "

ಅಂದರೆ,

" ನಾ ಜಾತಿಹೀನ, ವೇದ ಕೇಳಲನರ್ಹ ;
ನೀನಿತ್ತೆ ವೈಕುಂಠ ಪದವಿ.
ಈಗ ನಾ ಸರ್ವಥಾ ಅಲ್ಲ ದುರ್ಬಲ ;
ಜಾತಿ ಹೀನ ಕುಲ ದೈನ್ಯವೂ ಇಲ್ಲ . "

ಕುಣಬಿ ಜಾತಿಯವರು ಶೂದ್ರರು ; ಆದರೆ ಅವರು ರೈತಾಪಿ ಜನರು ; ಶುದ್ಧ ನಿಷ್ಕಪಟಿಗಳು. ಪರೋಪಕಾರಿ ಜೀವಿಗಳು. ವಿಪ್ರರ ಕಪಟ ಬುದ್ಧಿ ಅವರಲ್ಲಿಲ್ಲ. ಆದ್ದರಿಂದ ಸಂತಕವಿ ಹೀಗೆ ಹಾಡಿದ್ದಾರೆ.

" ಒಳ್ಳೆಯದನ್ನೇ ಮಾಡಿದಿ , ಹೇ ದೇವಾ !
ನೀನು ನನ್ನನ್ನು ಕುಣಬಿಯಾಗಿ ಹುಟ್ಟಿಸಿದೆ .
ಇಲ್ಲವಾದಲ್ಲಿ ನಾನು ಕಪಟಿಗಳಿಂದ
ನಾಶವಾಗುತ್ತಿದ್ದೆ . "

" ನಾನು ಕಲಿತವನಾಗಿದ್ದರೆ ,
ಅದು ನನ್ನನ್ನು ಸಂಕಟಕ್ಕೀಡು ಮಾಡುತ್ತಿತ್ತು .
ನಾನು ಸೊಕ್ಕಿನಿಂದ ಗರ್ವಿಷ್ಠನಾಗುತ್ತಿದ್ದೆ .
ನಾನು ನರಕದ ದಾರಿ ಹಿಡಿಯುತ್ತಿದ್ದೆ.

" ತುಕಾ ಹೇಳಿದ : ನೀವೆಲ್ಲ
ವೇದದ ಗಿಳಿ ಪಾಠದಲ್ಲಿಯೇ ಹೋಗಿ ;
ನನ್ನ ದಾರಿಗೆ ಬರಬೇಡಿ. "

ವೇದಾಭ್ಯಾಸ ಹಾಗೂ ಮುಕ್ತಿಯ ಅಧಿಕಾರವನ್ನು ಶೂದ್ರ ಜನಾಂಗಕ್ಕೆ ನಿರಾಕರಿಸಿದ ವಿಪ್ರರು ವೈಕುಂಠದ ಬೀಗದ ಕೈ ತಮ್ಮ ಬಳಿಗೇ ಇದೆಯೆಂದು ತಿಳಿದಿದ್ದರು. ಗರ್ಭ ಗುಡಿಯಲ್ಲಿ ದೇವರನ್ನೇ ಕೀಲಿ ಜಡಿದು ಕೂಡಿಸಿದ್ದೇವೆಂದು ಭಾವಿಸಿದ್ದರು. ಆದರೆ, ಪರಮಾತ್ಮನಿಗೆ ಎಲ್ಲರೂ ಕಂದರೇ. ಅವರ ಪಾಲನೆ ಪೋಷಣೆಯ ಹೊಣೆ ಅವನದು. ಅವನಿಗೆ ಕುಟಿಲತನ, ಕುಹಕತನ ಮತ್ತು ಕಪಟತನಗಳೆಂದರೆ ಆಗದು . ಅವನಿಗೆ ಶುದ್ಧ ಮನಸ್ಸು, ಮುಗ್ಧ ಪ್ರೇಮ, ನಿಷ್ಕಾಮ ಸೇವೆಯೇ ಅತಿ ಮೆಚ್ಚು . ಭಗವಂತನ ಈ ಭಕ್ತ , ಗರ್ವಿಷ್ಠ ವಿಪ್ರರಿಗೆ ಹೀಗೆ ಹೇಳುತ್ತಾನೆ.

" ವೇದಗಳ ಅರ್ಥ ನಮಗಷ್ಟೇ ಗೊತ್ತು .
ಉಳಿದವರಿಗೆ ಅದರ ಭಾರ ಗೊತ್ತು .





ಉಂಡವರ ರುಚಿ ನೋಡಿದವನಿಗಿಲ್ಲ ;
ಅದು ಭಾರ ಹೊತ್ತ ಕೂಲಿಯವನಂತೆ .
ಜೀವ ಸೃಷ್ಟಿ-ಸ್ಥಿತಿ-ಲಯಗಳೆಲ್ಲ ದೇವ ಬಲ್ಲ ;
ಅದರ ಬೀಗ ಅವನ ಕೈಯಲಿ .
ತುಕಾ ಹೇಳಿದ : ಸಿಕ್ಕಿತೆಮಗೆ ದಾರಿ ;
ನಮ್ಮದೇ ಫಲ ಬಂದಿತು ಕೈಲಿ . "

ಧರ್ಮ ಶೋಷಣೆಯ ಪ್ರಾಚೀನ ಕಾಲದಲ್ಲಿ, ಹಳ್ಳಿಯ ಭಾಷೆಯಲ್ಲಿ, ಹಳ್ಳಿಗರಿಗೆ ಧರ್ಮ ಸ್ವಾತಂತ್ರ್ಯ ತಂದುಕೊಟ್ಟ ಬುದ್ಧದೇವನ ಧರ್ಮ ಪ್ರಬಲವಾಗಿತ್ತು. ವೇದದ ಗಿಳಿ ಪಾಠ ಹೇಳುವ ವಿಪ್ರರು, ತಮ್ಮ ಜಿಹ್ವ ಚಾಪಲ್ಯ ತೀರಿಸಿಕೊಳ್ಳಲು, ಸುರಾಪಾನಿಗಳಾಗಿ, ಪಶುಬಲಿ ನೀಡುವ ಯಜ್ಞ ಯಾಗಗಳಲ್ಲಿ ನಿರತರಾಗಿದ್ದರು. ಅವರಿಗೆ ಬುದ್ಧ ದೇವನ ಚಾಟಿ ಮಾತುಗಳು ಬರೆ ನೀಡಿದ್ದವು. ಮುಂದೆ , ಪುಂಡರ ಗೋಷ್ಠಿಯಂತಿರುವ ಪುರಾಣ ಕಥೆಗಳ ರಚನೆಯಿಂದ ವಿಪ್ರರು ಜನಮನವನ್ನು ಆಕರ್ಷಿಸಿದರು. ರಾಜರನ್ನು ಸ್ತುತಿಸಿ ತಮ್ಮೆಡೆಗೆ ಸೆಳೆದರು. ಬೌದ್ಧರನ್ನು ಉಚ್ಚಾಟಿಸಲು ಮತ್ತು ಆ ಮೂಲಕ ತಮ್ಮ ಆ ಪೂರ್ವದ ಅವಮಾನದ ಸೇಡು ತೀರಿಸಿಕೊಳ್ಳಲು ಮುಂದಾದರು. ಹಾಗಾಗಿ, ಅವರಿರುವ ನೆಲೆಯಾಚೆಗೆ ತಮ್ಮ ಬಿಡಾರ ಹೂಡಿದರು. ಅವರನ್ನೇ ' ಅಂತೇ ವಾಸಿ ' ಎಂದೂ 'ಅಂತ್ಯ-ಜ' ಎಂದೂ ಕರೆದರು. ವಿಶ್ವಾಸಬದ್ಧ ಶೂದ್ರರನ್ನು ' ಒಳಗೆ ಹಾಕಿಕೊಳ್ಳಲು ' ಅವರಿಗೆ ಗುಡಿ-ಗುಂಡಾರ ನಿರ್ಮಿಸಿ , ಪ್ರವೇಶದ ಅಧಿಕಾರ ನೀಡಿದರು. ಅವರನ್ನು ಸವರ್ಣೀಯರೆಂದು ಕರೆದು ಗೌರವ ತೋರಿಸಿದರು. ಏಕೆಂದರೆ , ಆ ಬಹು ಸಂಖ್ಯಾತರನ್ನು ಪ್ರಾಚೀನ ಬೌದ್ಧರಿಂದ, ಅಂತೇವಾಸಿಗಳಿಂದ ಬೇರ್ಪಡಿಸಬೇಕಿತ್ತು. ವಿಪ್ರರ ಕಾಲೊರೆಸುವ ಕೆಲಸ ತಮಗಿದ್ದರೂ ಸರಿಯೇ, ಇನ್ನುಳಿದವರಿಗಿಂತ 'ನಾವು ಮೇಲೆಂಬ' ಭಾವನೆಯಲ್ಲಿಯೇ ಈ ಶೂದ್ರರು ತೃಪ್ತರಾದರು. ಇನ್ನು, ಬಲಿಷ್ಠ ಕ್ಷತ್ರಿಯರ ಹಾಗೂ ವ್ಯಾಪಾರಿ ವೈಶ್ಯರ ಮಾತು, ಕೇಳುವುದೇ ಬೇಡ. ಈ ದುಷ್ಟಕೂಟ, ನಾಡಿನ ಆದಿವಾಸಿಗಳನ್ನು 'ಅಂತೇವಾಸಿ' ಗಳಾಗಿಸಿ, ಅಂತ್ಯಜರಾಗಿಸಿ, ಅಸ್ಪೃಶ್ಯರಾಗಿಸಿದರು. ಚಾತುರ್ವರ್ಣ್ಯಕ್ಕೆ ಸೇರದ ಪಂಚಮರೆಂದು ತಲೆಪಟ್ಟಿ ಕಟ್ಟಿದರು. ಹೆಂಗಸಿನ ಯೋನಿಯಲ್ಲಿ ಒಸರುವ ಹೊಲೆಯಿಂದಾಗಿ, ರಜ ಸ್ರಾವ ಕಾಲಕ್ಕೆ ಅವಳನ್ನು ಮುಟ್ಟಬಾರದೆನ್ನುವಂತೆ, ತಮ್ಮ ಸೋದರ-ಜನಾಂಗವನ್ನೇ ಹೊಲೆಯ , ಮಾದಿಗ , ಮಾಲ, ಎಂದೆಲ್ಲ ಕರೆದು ಮುಟ್ಟಬಾರದವರನ್ನಾಗಿಸಿದ್ದರು. ಸವರ್ಣೀಯರೆನಿಸಿದವರು ವಾಸಿಸುವ ಬಿಡಾರಗಳ ರಸ್ತೆಗಳಲ್ಲಿ ಅವರ ಅಲೆದಾಟವನ್ನು ನಿಷೇಧಿಸಲಾಯಿತು. ಇಂಥ ಅಸ್ಪೃಶ್ಯತೆಯನ್ನು ಕುರಿತು ಮಾತನಾಡುತ್ತಿದ್ದ ಬ್ರಾಹ್ಮಣನ ಬಗ್ಗೆ ಸಂತ ತುಕಾರಾಮರು ಹೀಗೆ ಹಾಡಿದ್ದಾರೆ.

" ಹೊಲೆಯನ ಮುಟ್ಟಿ ಕೋಪಿಸುವ ಬ್ರಾಹ್ಮಣ , ಬ್ರಾಹ್ಮಣನಲ್ಲ ;
ಇಂಥ ಬ್ರಾಹ್ಮಣರಿಗೆ ಆತ್ಮಹತ್ಯೆ ಹೊರತು ಅನ್ಯ ಪ್ರಾಯಶ್ಚಿತ್ತವಿಲ್ಲ ."

ಈ ಸ್ಪೃಶ್ಯ ಅಸ್ಪೃಶ್ಯ ಭೇದದಿಂದ ಬಹಳಷ್ಟು ಹಿಂದುಗಳು ಅನ್ಯ ಧರ್ಮಗಳಿಗೆ ಆಗಲೇ ನುಸುಳತೊಡಗಿದ್ದರು. ಆ ಕಾಲಕ್ಕೆ ಶಿವನ ತಂತ್ರ , ಆಗಮಾದಿಗಳಲ್ಲಿ , ಜಾತಿ ವರ್ಣಗಳ

ಪರಿಗಣನೆಯಿಂದ ನಾಯಕ-ನರಕವಾಗುವುದೆಂದು ಸಾರಿದ್ದರು. ಆದರೆ, ವೈಷ್ಣವ ಧರ್ಮದಲ್ಲಿ, ಶೋಷಣೆ ಮುಂದುವರಿದಿತ್ತು. ಗೌತಮ ಬುದ್ಧದೇವನನ್ನೇ ವಿಷ್ಣುವಿನ ಅವತಾರವನ್ನಾಗಿ ಮಾಡಿದ್ದರು. ಹೀಗಾಗಿ, ವಿಷ್ಣುವಿನ ಅವತಾರಗಳ ಬಾಯಿಯಿಂದ ಬಂದದ್ದೆಂದು ಸಾರಿ, ಅದನ್ನೇ ವಿಧಿಯಾಗಿಸಿ, ತಮ್ಮ ಕಾಯಕ ಮುಂದುವರಿಸಿದ್ದರು. ಆದರೆ, ಕೆಲವು ಸುಧಾರಕ ಪಂಥದವರಿಗೆ ವಿವೇಕ ಉದಿಸಿತು. ತಮ್ಮವರು ಮಾಡುವ ಮೋಸದ ಅರಿವಾಯಿತು. ಬದಿಯಲ್ಲಿ, ಜಾತಿ ಗಣಿಸದ ಶೈವ. ತಂತ್ರದ ಬೆಳವಣಿಗೆಯೂ ಅವರ ಕಣ್ಣು ತೆರೆಸಿತು. ಅವರೂ ಸಹ, ಜಾತಿ ಗಣನೆಯಿಲ್ಲದೆ ಶೂದ್ರಾದಿ ಸಾಧಕರಿಗೆ ಮೋಕ್ಷದ ಅಧಿಕಾರವಿದೆಯೆಂದೂ, ಪ್ರಪತ್ತಿ ಮಾರ್ಗದಿಂದ, ಪ್ರೇಮ ಮಾರ್ಗದಿಂದ, ವೇದ ಪಾಠದ ಗೊಡವೆಯಿಲ್ಲದೆ, ಮೋಕ್ಷ ಪಡೆಯಬಹುದೆಂದೂ ಸಾರಿದರು. ರಮಾನಂದರು, ಚೈತನ್ಯರು ಈ ಹಾದಿಯಲ್ಲಿ ನಡೆದರು. ಇದನ್ನು 'ಭಾಗವತ' ಧರ್ಮವೆಂದೂ ಕರೆದರು. ಹಾಗಾಗಿ, ಸಂತಕವಿ ತುಕಾರಾಮ ಹೀಗೆ ಹಾಡಿದರು.

"ವಿಷ್ಣು ಭಕ್ತ ಅಸ್ಪೃಶ್ಯನ ತಾಯಿ ಸುದೈವಿ.
ಉಭಯ ದಿಶೆಗಳಿಂದ ಆವನ ವಂಶ ಪಾರಂಪರ್ಯ ಪವಿತ್ರ.
ಕೆಳ ಜಾತಿಯವನಾಗಿದ್ದರೂ, ನಿಜವಾಗಿಯೂ ಆವನು ಬ್ರಾಹ್ಮಣ."

ಜಾತಿ ವರ್ಣಗಳ ಮಾತು ಕೇವಲ ಬ್ರಾಹ್ಮಣರ ಮನೆಯಲ್ಲಿತ್ತು. ಮತ್ತು ಮನದಲ್ಲಿ, ದೇವರ ರಾಜ್ಯದಲ್ಲಿ ಜಾತಿಗೆ ಮನ್ನಣೆಯಿಲ್ಲಿ ? ಗುಣ, ಕರ್ಮಗಳಿಗೆ ಅಲ್ಲಿ ಪರಿಗಣನೆ. ತನ್ನ ಕಾಲದ ಸ್ವಲ್ಪ ಮುನ್ನ, ಪರಮಾತ್ಮನ ಕೃಪಾ ವಿಶೇಷದಿಂದ ಪುನೀತರಾದ ಸಂತ ಶಿಖಾಮಣಿಗಳನ್ನು ತುಕಾರಾಮರು ಯಾದಿ ಮಾಡಿದ್ದಾರೆ.

"ದೈವ ಭಕ್ತರು ಹುಟ್ಟಿದ ಕುಟುಂಬ ಪವಿತ್ರ ; ದೇಶ ಪವಿತ್ರ.
ಜಾತಿಯಿಂದ ಶುದ್ಧನಾದ ವ್ಯಕ್ತಿಯ ಎನಗೆ ತೋರಿಸು.
ಭಕ್ತಿಯಿಂದಲೆ ಅಸ್ಪೃಶ್ಯರು ಸಂಸಾರ ದಾಟಿವರು.
ಪುರಾಣ ಕೂಡ ಹಾಡುತಿದೆ :
ಮೋಮಿನ ಕಬೀರ ; ಮುಸ್ಲಿಂ ಲತೀಫ ;
ಹಜಾಮ ಸೇನ, ಇವರೆಲ್ಲ ವಿಷ್ಣು ಭಕ್ತರು.
ಚಿತ್ರಗಾರ ಕನ್ಹೋಪಾತ್ರಾ, ಮಾದರ ಚೋಕಲಾಮೇಲಾ ಹಾಗೂ ವಂಶ.
ನಾಮದೇವನ ಸೇವಿಕೆ ಜಾನಿ.
ಮಹಾಭಕ್ತಳೆಂದೇ ಅವಳ ಜೊತೆ
ವಿಠ್ಠಲ ಊಟ ಮಾಡಿದ !
ವಿಷ್ಣು ಭಕ್ತರಿಗೆ ಜಾತಿ ಎಂಬುದೇ ಇಲ್ಲ ;
ವೇದಗಳು ಹೇಳುವುದೂ ಇದನ್ನೇ.

ಆದರೆ, ಇಂದು ಬ್ರಾಹ್ಮಣರೆಂದು ಬಡಿವಾರ ಕೊಚ್ಚಿಕೊಳ್ಳುವವರು ಮಾಡುವುದೇನು ?





"ಬ್ರಾಹ್ಮಣರೆಲ್ಲ ತಮ್ಮ ಕರ್ತವ್ಯ ತೊರೆದಿದ್ದಾರೆ.
ಆವರಾಡುವುದು ಹಸೀ ಸುಳ್ಳು."

ಗ್ರಹಣ ಕಾಲದಲ್ಲಿ ಮಾದರವಳೊಂದಿಗೆ ಲೈಂಗಿಕ ಸಂಬಂಧ ಮಾಡುವುದರಿಂದ ಬ್ರಾಹ್ಮಣನು ದಶಲಕ್ಷಾಧಿಪತಿಯಾಗುವನೆಂಬ ಮೂಢ ನಂಬುಗೆಯಿದೆ. ಹಾಗಾಗಿ, ತುಕಾರಾಮರು "ಮಾದರವಳೊಂದಿಗೆ ನಿತ್ಯ ಸಂಭೋಗ" ಎಂದು ಹೇಳಿದ್ದಾರೆ. ಬ್ರಾಹ್ಮಣರ ಹೀನ ಕರ್ಮಗಳ ಪಟ್ಟಿಯನ್ನೇ ತುಕಾರಾಮರು ನೀಡಿದ್ದಾರೆ.

( ೧ ) ಅವರು ಮೇಲಿನ ಸ್ಥಾನಗಳನ್ನೂ ಆಕ್ರಮಿಸಿ
ಅನವಶ್ಯಕವಾಗಿ ಉಳಿದವರಿಗೆ ಹಿಂಸೆ ಕೊಡುತ್ತಾರೆ.
( ೨ ) ಅವರು ಕ್ರೂರ ರಾಜರ ಗುಲಾಮರು.
ಯಾವ ತಪ್ಪಿಗೂ ಬಡಿಸಿಕೊಳ್ಳುವರು.
( ೩ ) ಸ್ನಾನ, ಜಪ, ತಪಗಳಂಥ ಪವಿತ್ರ
ಕರ್ಮಗಳನ್ನವರು ಮಾರುತರಿರುವರು.
( ೪ ) ದಂಧೆಗಳಲ್ಲೆಲ್ಲ ಹೊಲಸು ದಂಧೆ
ಲೇವಾದೇವಿಯದು ;
ಆದರೂ ಅದನ್ನು ಮಾಡುತಲಲಿಹರು
ಬ್ರಾಹ್ಮಣರು, ಈ ಕಲಿಯುಗದೊಳಗೆ.

ತುಕಾರಾಮರು ಕೇವಲ ಬ್ರಾಹ್ಮಣರ ದೋಷಗಳನ್ನಷ್ಟೇ ಏಕೆ ? ; ಢೋಂಗೀ ಸಂತರು, ಢೋಂಗೀ ಗುರುಗಳು, ಸನ್ಯಾಸಿ, ಬೈರಾಗಿ, ನಾಥ, ಜಂಗಮ, ಫಕೀರ ಹೀಗೆ ಯಾರಲ್ಲಿ ದೋಷ ಕಂಡು ಬರುವುದೋ, ಅವರನ್ನೆಲ್ಲ ಕಟುವಾಗಿ ಟೀಕಿಸಿದ್ದಾರೆ. ಏಕೆಂದರೆ, ಅವರದು ಸುದುದ್ದೇಶ. ಎಲ್ಲರನ್ನೂ ಸನ್ಮಾರ್ಗದತ್ತ ಕರೆದೊಯ್ಯುವುದೇ ಅವರ ಏಕಮೇವ ಗುರಿ.

"ಬಂದಿರುವೆ ಬೆಳಕು ನೀಡಲು ನಿಮ್ಮ ದಾರಿಗೆ ನಾನು ;
ಬಂದಿರುವೆ ನಿರ್ಣಯಕೆ ; ನಿಮ್ಮ ಸರಿ ತಪ್ಪುಗಳ."

"ಪರಸ್ಪರ ಸಹಾಯ ಸಲ್ಲಿಸೋಣ ;
ಸಾಗೋಣ ನಾವೆಲ್ಲ ಸರಿಯಾದ ದಾರಿಯಲಿ."

ಸಂತ ತುಕಾರಾಮರು ಬ್ರಾಹ್ಮಣ ದ್ವೇಷಿಯೆಂದು ಕೆಲವರು ಗುರುತಿಸಿದರು. ಅವರ ಖಾಸ ಶಿಷ್ಯೆಯೊಬ್ಬಳು ಬ್ರಾಹ್ಮಣ ಸಾಧ್ವಿಯಾಗಿದ್ದೊಂದು ಸೋಜಿಗ. ಅವಳೇ ಬಹಿಣಾ ಬಾಯಿ. ಅವರ ಕೀರ್ತನದಲ್ಲಿ ಪಾಲ್ಗೊಳ್ಳುವುದರಿಂದ ಆಗುವ ಉನ್ನತ ಆಧ್ಯಾತ್ಮಿಕ ಅನುಭವಗಳಿಗೆ ಅವಳು ಮಾರು ಹೋಗಿದ್ದಳು. ಅವಳೇ ಹೇಳಿದ ಹಲವು ಘಟನೆಗಳನ್ನಿಲ್ಲಿ ನೋಡುವಾ.

ಬ್ರಾಹ್ಮಣಳಾದ ಬಹಿಣಾಬಾಯಿಯು ಶೂದ್ರ ಗುರುವನ್ನು ಒಪ್ಪಿಕೊಂಡಿದ್ದಳು. ಇನ್ನೂ ಹಲವರು ಈ ದಾರಿ ಹಿಡಿದಿದ್ದರು. ಇದು ಬ್ರಾಹ್ಮಣರ ದೃಷ್ಟಿಯಲ್ಲಿ ದೈವ ದ್ರೋಹವಾಗಿತ್ತು. ಅದರ ತನಿಖೆ ನಡೆಸಲು ದೇಹು ಗ್ರಾಮದ ಮಾಂಬಾಜಿ, ಪುಣೆಯ ಬ್ರಾಹ್ಮಣರಲ್ಲಿ ಅರಿಕೆ ಮಾಡಿಕೊಂಡನು. ತುಕಾರಾಮನು ಭಗವದ್ಗೀತೆಯನ್ನು ಮರಾಠಿಯಲ್ಲಿ ಭಾಷಾಂತರಿಸಿ ಅದಕ್ಕೆ ‘ ಮಂತ್ರ ಗೀತೆ ’ ಎಂಬ ಶೀರ್ಷಿಕೆ ನೀಡಿದ್ದನು. ದೇವ ಭಾಷೆಯಿಂದ ನಾಡ ಭಾಷೆಗೆ ಅನುವಾದಿಸುವುದು ಆಗ ಅಪರಾಧವೆನಿಸಿತ್ತು. ರಾಮೇಶ್ವರ ಭಟ್ಟನೆಂಬ ಪುರೋಹಿತನು ತುಕಾರಾಮರ ವಿರುದ್ಧ ಪಕ್ಷದ ಮುಖ್ಯಸ್ಥನಾಗಿದ್ದನು. ಈ ಗುಂಪು ತುಕಾರಾಮರ ಹಸುವನ್ನು ಕೊಲ್ಲಿಸಿತು. ಅವರನ್ನು ವಿನಾ ಕಾರಣ ಹೊಡೆದರು. ಬಡಿದರು. ನಂತರ ದಂಡ ಕ್ರಮವಾಗಿ ಜಾತಿ ಬಾಹಿರನನ್ನಾಗಿಯೂ ಮಾಡಿದರು. ಕೊನೆಗೆ ಆ ಗ್ರಾಮದ ಗೌಡನ ಮೂಲಕ ತುಕಾರಾಮನ ವಿರುದ್ಧ ವ್ಯಾಜ್ಯ ಹೂಡಿಸಿದರು. ವ್ಯಾಜ್ಯ ಕಾಲಕ್ಕೆ ತುಕಾರಾಮನ ಸಮರ್ಥನೆಯೆಂದರೆ, “ ನನಗೆ ಬರೆಯಲು ದೇವರೇ ಆಜ್ಞೆ ಮಾಡಿದ್ದಾನೆ ” ; ಎಂದು.

“ ದೇವನೊಂದಿಗೆ ಬಂದ ನಾಮದೇವ
ಎಬ್ಬಿಸಿ ಹೇಳಿದ ಕನಸಿನಲಿ ;
ಪದ ಕಟ್ಟಿ ಹಾಡು.
ಅದುವೆ ನಿನ್ನ ಕೆಲಸ ಎಂದು . ”

ಆದರೆ, ತುಕಾರಾಮನ ವಾದಕ್ಕೆ ನ್ಯಾಯಾಧೀಶರು ಸಮ್ಮತಿಸಲಿಲ್ಲ. ಅವರಿಗೆ ಆ ಮುಂದೆ ಏನನ್ನೂ ಬರೆಯದಂತೆ ಆಜ್ಞೆ ವಿಧಿಸಲಾಯಿತು. ಸಾಲದೆ , ಅವರು ಇದು ವರೆಗೆ ಬರೆದ ಗ್ರಂಥಗಳನ್ನೆಲ್ಲ ಹೊಳೆಯಲ್ಲಿ ಚೆಲ್ಲಬೇಕೆಂಬ ಆದೇಶ ಹೊರಟಿತು. ಎಲ್ಲ ಬರೆಹಗಳ ಗಂಟನ್ನು ಚಂದ್ರಭಾಗ ನದಿಯಲ್ಲಿ ಚೆಲ್ಲಿದರು. ಈ ಘಟನೆ ನಡೆದದ್ದು ೧೬೪೫ ರಲ್ಲಿ. ಆಗ ತುಕಾರಾಮರು ಏರು ಜವ್ವನದ ೩೭ ವಯಸ್ಸಿನ ತರುಣ . ಹದಿಮೂರು ದಿನ ಉಪವಾಸ ಮಾಡಿ, ವಿಠ್ಠಲನನ್ನು ಪ್ರಾರ್ಥಿಸಿದರು.

“ ತುಕಾ ಹೇಳಿದ, ಇದು ನನ್ನ ಕೊನೆಯ ಪ್ರಯತ್ನ ;
ಈಗ ನಾನೇ ಚಂದ್ರಭಾಗೆಯಲಿ ಮುಳುಗಿ ಹೋಗುವೆ . ”

ಹದಿಮೂರನೆಯ ದಿನ ಪವಾಡ ಘಟಿಸಿತು ! ನದಿಯಲ್ಲಿ ಚೆಲ್ಲಿದ ಪೋಥಿ ಗಂಟು, ಮೇಲೆ ತೇಲಹತ್ತಿತ್ತು. ಸತ್ಯ ಘಟನೆ. ಸಂತ ತುಕಾರಾಮರ ಸಮಕಾಲೀನರೇ, ತಾವು ಕಣ್ಣಾರೆ ಕಂಡು ಬರೆದ ಘಟನೆಯಿದು. ಇದರಿಂದ ವಿರೋಧಿಗಳು ಕುಸಿದರು. ಸಂತ ತುಕಾರಾಮರು ಅತಿಮಾನವರೆನಿಸಿದರು. ಅವರ ಸಾಹಿತ್ಯಕ್ಕೆ ಅಗ್ರ ಪಟ್ಟ ಸಿಕ್ಕಿತು. ಭಕ್ತರು ಅವರ ಕೀರ್ತಿ ವಾರ್ತೆ ಹಾಡಲಾರಂಭಿಸಿದರು. ದೇವರೇ ಎಂದು ಸ್ತುತಿಸಿದರು.

“ ಜನ ಕರೆವರೆನ್ನ ‘ ದೇವ ’ ನೆಂದು ; ಇದು ಹೀನ ದಾರಿ ;
ನಾ ಬಲ್ಲೆ ; ಓ ದೇವ! ನನ್ನ ಪಾಪಗಳನು .
ಹೆಚ್ಚದಿರಲಿ ಈ ಹೊಗಳಿಕೆಯಿಂದ ನನ್ನ ವೃಥಾಭಿಮಾನ .
ತಪ್ಪದಿರಲಿ ನಿನ್ನ ಮೇಲಿನ ಅಭಿಮಾನ .
ಈ ದೊಡ್ಡಸ್ತಿಕೆ ನನ್ನ ದೇಹಕೊಂದು ಭಾರ .





ಜಾತಿ ಭೇದ, ಶೂದ್ರರ ಜಾಗ್ರತಿ ಮುಂತಾದ ವಿಷಯಗಳಲ್ಲಿ ವೇಮನ ಯೋಗಿವರ್ಯರ ವಿಚಾರಗಳು ಇದೇ ರೀತಿಯಾಗಿವೆ. ಅದರ ಸಮರ್ಥನೆಗಾಗಿ ೪-೫ ಪದ್ಯಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಿದರೆ ಸಾಕು.

ವೇಮನ :

ಬಯ್ದು ಹೊಡೆದರೆಂದು , ಬಳಿಕ ಮಾತು ತೊರೆದು ,
ಬಾಯಿ ಮುಚ್ಚಿ ಇರಲು ಭೂಮಿ ಮೇಲೆ ;
ಪರಮಾತ್ಮನಾಗುವ ; ಬಣ್ಣಿಸಲು ಶಕ್ಯವೇ ?
ವಿಶ್ವದಾಭಿರಾಮ ಕೇಳು ವೇಮ .

ಜಾತಿಯೊಳಗೆ ಮೇಲು ಜಾತಿ ಕೀಳು ಎಲ್ಲಿ ?
ನಿಜವರಿಯದೆ ತಿರುಗಲೇನು ಫಲವು ?
ಇದನರಿತ ಮನುಜನ ಕುಲವೆ ಮಿಗಿಲು ಕಣಾ !
ವಿಶ್ವದಾಭಿರಾಮ ಕೇಳು ವೇಮ .

ವಿಪ್ರವರರು ಎಂದು ವೇದ ಓದುತಿಪ್ಪ ,
ಪಾಕೃತರನು ಹಾಸ್ಯ ಗೈಯುತಿರುವ ,
ಧರಣಿ ಸುರರಿಗಿಂತ ದಾಸರ ಮತ ಒಪ್ಪ .
ವಿಶ್ವದಾಭಿರಾಮ ಕೇಳು ವೇಮ .

ಬಹಳ ಹೀನ ಕರ್ಮ ಬೆನ್ನಿಗಿರಲು ಅವಗೆ
ಗರ್ವ ಬ್ರಾಹ್ಮಣೆಂದು ; ಗೌರವಿಸದಿರು .
ಕುಲವು ಲೆಕ್ಕಕುಂಟೆ ? ಗುಣದ ಗಣನೆ ಲೇಸು .
ವಿಶ್ವದಾಭಿರಾಮ ಕೇಳು ವೇಮ .

ತನ್ನ ತಾಯಿ ವೇಶ್ಯೆ ; ಮಡದಿ ಮಾದಿಗ ಕನ್ನೆ ;
ವಸಿಷ್ಠ ಮುನಿ ರಾಮ ವರನ ಗುರುವು .
ತಿಳಿಯೆ , ತಪಸಿನಿಂದ ದ್ವಿಜನು ; ಜಾತಿಯೆಲ್ಲಿ ?
ವಿಶ್ವದಾಭಿರಾಮ ಕೇಳು ವೇಮ .

ಮೂಢ ಭಕ್ತಿ, ಕಂದಾಚಾರ, ಡಾಂಭಿಕತೆ, ತೀರ್ಥ , ಕ್ಷೇತ್ರ ಯಾತ್ರೆಗಳನ್ನು ವೇಮನ ಯೋಗಿಯಂತೆ , ಸಂತ ತುಕಾರಾಮರೂ ತಿರಸ್ಕರಿಸಿದ್ದಾರೆ .

ತುಕಾರಾಮ :

" ಹೊರಗಿನ ತ್ವಚೆ ತೊಳೆವುದರ ಹೊರತು ,
ಯಾತ್ರೆಗೆ ಹೋಗಿ ಏನು ಮಾಡಿದಿ ? "

" ಭೌತಿಕ ಸನ್ಯಾಸದಿಂದ ಆತ ಇಚ್ಛೆಗಳನ್ನು ಗೆಲ್ಲಲಾರ .
ತಲೆ ಬೋಳಿಸುವುದರಿಂದ ಭಕ್ತಿ ದೊರೆಯದು .
ಹೊರಗೆಲ್ಲ ಗೂಢಾರ್ಥಗಳ ಬೊಬ್ಬಾಟ !
ಒಳಗೆಲ್ಲ ಅಹಂಕಾರದ ಗುದುಗಾಟ!
ಇಂಥ ಮನುಷ್ಯನನ್ನು ತ್ಯಜಿಸಿ ;
ಅವನದೆಲ್ಲ ಬೂಟಾಟಿಕೆ .
ತುಕಾ ಹೇಳಿದ : ಇಂಥ ಸನ್ಯಾಸಿ
ಜನವಂಚಕನಷ್ಟೇ . "

ಈ ಕುರಿತು ವೇಮನ ಯೋಗಿಗಳು ನೂರಾರು ಪದ್ಯಗಳ ಮೂಲಕ ತಿಳಿಸಿ ಹೇಳಿದ್ದಾರೆ.

ವೇಮನ :

ಕಾಶಿಗೆ ಹೋಹೆನೆಂದು ಕೊನೆಗೆ ಹೆಣಗಲೇಕೆ ?
ತೀರ್ಥ ಕ್ಷೇತ್ರ ಕುರಿತು ಚಿಂತೆಯೇಕೆ ?
ದೋಷಕಾರಿಗೆಂತು ದೊರಕಬಹುದು ಕಾಶಿ ? ವಿಶ್ವ

ಜಪವ , ಬಾಹ್ಯ ಪೂಜೆ ಸಾಕೆನುವವರೆ ಮಾಡಿ ,
ಕಪಟ ಬಿಡದೆ ಇರಲು , ಕಷ್ಟ ಜನಕೆ ;
ಮುಕ್ತಿ ಹೊಂದದಿದ್ದು , ಮುಳುಗಿದರು ತಮದೊಳು . ವಿಶ್ವ

ಗೃಹಸ್ಥ ಧರ್ಮ :-

ಗೃಹಸ್ಥ ಜೀವನವನ್ನೇ ಸಂತರು ಮೆಚ್ಚಿದ್ದಾರೆ. ಮನೆಮಾರು ತೊರೆದು , ಅಡವಿ , ವಾಸವನ್ನು ಅವರು ಉಪದೇಶಿಸುವುದಿಲ್ಲ. ಸಂತ ತುಕಾರಾಮ ಹೀಗೆ ಸಾರಿದ್ದಾರೆ.

" ಎಷ್ಟೇ ಭಯವಾದರೂ .......
ಕಡೆಗಣಿಸಲಾಗದು ಸಂಸಾರವನು .

ಸಂಸಾರದ ಕರ್ತವ್ಯಗಳನ್ನು ಚೆನ್ನಾಗಿ ನಿರ್ವಹಿಸಿ ಅಧ್ಯಾತ್ಮ ಸಾಧನೆಯನ್ನು ಮಾಡುವುದು ಸಾಧ್ಯವಿದೆ , ಎಂದು ನಂಬುವವರಿಗೆ ಸಂತ ತುಕಾರಾಮನ ಜೀವನವು ಅನುಕರಣೀಯವಾಗಿದೆ.

ತುಕಾರಾಮನು ಕೇವಲ ಹದಿನೇಳು ವರ್ಷದವನಿದ್ದಾಗ , ಅವನ ತಾಯಿ-ತಂದೆ





ತೀರಿಕೊಂಡರು. ಎಳೆವಯದಲ್ಲಿ ' ರುಕ್ಮಾ ' ಎಂಬವಳೊಂದಿಗೆ ಅತನ ಮದುವೆಯಾಗಿತ್ತು. ಒಂದು ಗಂಡು ಮಗುವನ್ನೂ ಹಡೆದಳು ರುಕ್ಮಾ. ಆದರೆ ಉಬ್ಬಸ ರೋಗಿಯಾಗಿದ್ದಳು. ಜೀಜಾಬಾಯಿ ನಂತರದ ದ್ವಿತೀಯ ಪತ್ನಿ . ಆದರೆ ದಾಂಪತ್ಯ ಅಷ್ಟೊಂದು ಸಮರಸವಿರಲಿಲ್ಲ. ಇರುವ ಒಬ್ಬ ಅಣ್ಣ, ಮನೆ ಬಿಟ್ಟು , ಧರ್ಮ ಭಿಕ್ಷುವಾಗಿ ಹೊರಟು ಹೋಗಿದ್ದ . ಹೀಗಾಗಿ ಕುಟುಂಬ ನಿರ್ವಹಣೆಯ ಭಾರವು ಇವರ ಮೇಲೆಯೇ ಬಿದ್ದಿತ್ತು. ೧೬೨೯ ರ ವರೆಗೆ ಒಕ್ಕಲುತನ ಹಾಗೂ ಕಿರಾಣಿ ಅಂಗಡಿಗಳ ವ್ಯವಹಾರವನ್ನು ಹಾಗೂ ಹೀಗೂ ನಿಭಾಯಿಸಿದ. ಮುಂದೆ ಭೀಕರ ಬರಗಾಲ ಬಿತ್ತು. ಬೆಳೆ ಒಣಗಿದವು ; ನದಿ-ಕೆರೆಗಳು ಬತ್ತಿದವು. ಕಣಜದಲ್ಲಿದ್ದ ಕಾಳು ಕಡಿಯ ಸಂಗ್ರಹ ಕರಗಿತು. ಹೀಗಾಗಿ, ಹೊಟ್ಟೆ ಬರಿದೋ ಬರಿದಾಯಿತು. ಸಾವಿರಾರು ಜನರು ಹಸಿವೆಯಿಂದ ಕಂಗಾಲಾಗಿ ಅಸು ನೀಗಿದರು. ತುಕಾರಾಮನ ಮೊದಲಿನ ಹೆಂಡತಿ ರುಕ್ಮಾ ಸಹ , ಈ ದಾರುಣ ಪರಿಸ್ಥಿತಿಗೆ ಬಲಿಯಾದಳು. ಮುಂದೆ ಅವರ ಜ್ಯೇಷ್ಠ ಪುತ್ರ ' ಸಂತು ' ಸಹ ಪ್ರಾಣ ತೊರೆದನು. ಕಷ್ಟಗಳೇನು ಒಂಟಿಯಾಗಿ ಬರುವವೇ ? ತುಕಾರಾಮನ ಸಹನೆಯ ಕಟ್ಟು ಒಡೆಯಿತು.

" ದೇವರೇ! ಮನುಷ್ಯತ್ವ ಎಂಬುದೇ ಅದೃಶ್ಯವಾಗಿದೆ "

" ಈ ಗೋಳಾಟವನ್ನು ನೋಡುವುದು ನನ್ನಿಂದಾಗದು . ಅವರು ಅನುಭವಿಸುವುದನ್ನು ನೋಡಿ ನನ್ನ ಮನಸ್ಸು ಸಂಕಟ ಪಡುತ್ತಿದೆ. "

ಹೀಗೆ, ಪರಿಪರಿಯಾಗಿ ಪರಿತಪಿಸಿದ. ಅವನು, ವ್ಯಾಪಾರ ಕುದುರಿಸಲು, ಒಕ್ಕಲುತನವನ್ನು ಅಭಿವೃದ್ಧಿ ಪಡಿಸಲು , ಮಾಡಿದ ಪ್ರಯತ್ನಗಳಿಗೆ ಯಶ ದೊರೆಯಲಿಲ್ಲ. ವಿಧಿ ಅವನಿಗೆ ಅನುಕೂಲವಿರಲಿಲ್ಲ.

ಹೀಗಾಗಿ, ತನ್ನ ಧ್ಯಾನ, ಕೀರ್ತನೆಗಳಲ್ಲಿಯೇ ಹೆಚ್ಚು ಕಾಲ ಕಳೆಯತೊಡಗಿ, ಅಲ್ಲಿಯೇ ಸಮಾಧಾನ ಪಡೆದನು.

" ಸಂಸಾರಾಗ್ನಿಯಿಂದ ಕಮರಿದ್ದೇನೆ .
ನಾನೀ ಮನೆತನವ ನಡೆಸುವಾಗ ,
ನೆನೆವೆನಾದ್ದರಿಂದ ನಿನ್ನ ಪಾದಗಳನು .
ಹತ್ತಿರ ಬಾ ನನ್ನ ತಾಯಿ. "

ತುಕಾರಾಮರ ಈ ಮುಂದಿನ ಅಭಂಗವು ಅವರ ಜೀವನವನ್ನು ಬಿಡಿ ಬಿಡಿಯಾಗಿ ಚಿತ್ರಿಸುತ್ತದೆ.

ಶೂದ್ರನಾಗಿ ಹುಟ್ಟಿ, ಪಾಲಿಗೆ ಬಂದುದೆಲ್ಲವ ಅನುಭವಿಸಿದೆ .
ಆದಿನಾರಭ್ಯ ಮನೆಯಲಿ ಆರಾಧಿಸುವ
ವಿಠಲನ ನಾ ಪೂಜಿಸಿದೆ .
ತಂದೆ ತಾಯಿಗಳ ಕಳೆದುಕೊಂಡು ,
ನೊಂದೆ ನಾ ಸಂಸಾರ ಸಾಗರದಲಿ .

ಬರಗಾಲದಲಿ ಬಸಿದು ಹೋಯಿತು ಎನ್ನ ಸಂಪತ್ತು.
ಸತ್ತಳೆನ್ನ ಸತಿ, ' ಅನ್ನ ' ' ಅನ್ನ ' ಎನುತ ಮೃತ್ಯು ಶಯ್ಯೆಯಲಿ .
ಈ ದುಃಖ ಬಾಧೆಯಲಿ ಮುಖ ಭಂಗಿತನಾದೆ .
ವ್ಯಾಪಾರ ವ್ಯವಹಾರವೂ ಕುಂದಿತು.
ಪಾಳು ಬಿದ್ದ ವಿಠಲನ ಗುಡಿಯ ಕಟ್ಟಲೆಳಸಿದೆ.
ಮೊದ ಮೊದಲು ಏಕಾದಶಿಯ ದಿನವೊಂದೆ ಕೀರ್ತನ ಮಾಡಿದೆ.
ಆದರದು  ಹಿಡಿಸಲಿಲ್ಲ ಎನ್ನ ಮನಕೆ ;
ಅಂತೆ ಕಲಿತೆ, ಶ್ರದ್ಧೆಯಿಂದ, ಗೌರವದಿಂದ ಮನಸಾರೆ ,
ಸಂತರ ನುಡಿ ಮುತ್ತುಗಳ
ಭಕ್ತಿ ಭಾವದಿಂದ , ತುಂಬು ಹೃದಯದಿಂದ ;
ನಾ ಹಾಡಿದೆ ಆ ನುಡಿಗಳ ಕೀರ್ತನದಲಿ ;
ಸಂತರ ಪಾದೋದಕದಿಂದ ನಾ ಪುನೀತನಾದೆ .
ನಾಚಲಿಲ್ಲ ಆದ ತುಂಬಲು ನನ್ನ ಮನದಲಿ ;
ಪರರಿಗುಪಕಾರವನೆ ಮಾಡಿದೆ ಎನ್ನ ಕೈಲಾದಾಗ .
ಶರೀರ ಶ್ರಮವ-ಮರೆತು ;
ಮಿತ್ರರುಪದೇಶಕೆ ಮಣಿಯಲಿಲ್ಲ ;
ನಾನಾದೆ ಮನೋ ರೋಗಿ , ಈ ಜಗವ ಕುರಿತು ;
ಸತ್ಯಾಸತ್ಯಗಳ ಪಣಕೊಡ್ಡಿದೆ , ಎನ್ನ ಮನವ .
ಬಗ್ಗಲಿಲ್ಲ ಬಹುಮತಕೆ;
ನಾ ನಂಬಿದುದು ಒಂದೇ : ಕನಸಿನಲಿ , ಗುರು ಸೂಚನೆಯ .
ಅಂದಿನಿಂದಲೆ ನಾ ಮನ ಮಾಡಿದೆ  , ಪದ ಬರೆಯಲು ;
ನಂಬುಗೆಯನಿಟ್ಟು ವಿಟ್ಠಲನಲಿ .
ಆ ಮೇಲೆ ಬಂತು ಪ್ರಹಾರ , ಪದ ಬರೆಯ ಕೂಡದೆಂದು;
ಕ್ಷಣ ಕಾಲ ಚೈತನ್ಯ ಉಡುಗಿತು.
ನನ್ನ ಪದಗಳನೆಲ್ಲ ಮುಳುಗಿಸಿದರು ನದಿಯಲಿ ;
ನಾ  ಕುಳಿತೆ ಉಪವಾಸ ದೇವ ದ್ವಾರದಲಿ ;
ಕೊನೆಗೊಮ್ಮೆ ಆತ ನನ್ನನೆತ್ತಿ ಹಿಡಿದ;
ದೊಡ್ಡ ಕತೆಯದು; ನಾ ಸಣ್ಣದಾಗಿಸುವೆ .
ವರ್ತಮಾನವಿದು , ಭವಿಷ್ಯವನು ದೇವ ಬಲ್ಲ ;
ಆದರಿದು ಸತ್ಯ-ಆವನೆಂದೂ ಮರೆಯಲಾರ ತನ್ನ ಭಕ್ತನ .
ತುಂಬ ದಯಾಳು ; ಆದ ನಾನನುಭವಿಸಿರುವೆ .
ತುಕಾ ಹೇಳಿದ ಮಾತಿದು: ಇದುವೆ ನನ್ನ ಜೀವನದ
ಪರಮ ಗಳಿಗೆ ನಾ ನುಡಿವೆ; ವಿಠಲನಪ್ಪಣೆಯಲಿ .
ಮಡದಿ ಸತ್ತು ನಾ ಸ್ವತಂತ್ರನಾದೆ .





ಮತ್ತೆ ದೇವ , ಮಾಯೆಯಿಂದ ಮುಕ್ತ ಮಾಡಿದ ;
ಮಗ ಸತ್ತು, ಮಮತೆಯಿಂದ ಮುಕ್ತಗೊಳಿಸಿದ .
ತಾಯಿ ಸತ್ತಳು ಕಣ್ಣನಿಟ್ಟು ಎನ್ನ ಮೇಲೆಯೆ ,
ತುಕಾ ಹೇಳಿದ ಮಾತಿದು: ಎನ್ನ ಆತಂಕ ದೂರವಾಯಿತು .

ಜಗತ್ತು ಹುಸಿ; ತೋರಿಕೆಯ ಒಲುಮೆ, ಮಮತೆ, ಆಸಕ್ತಿಗಳು ಹುಸಿ. ಈ ಪ್ರಪಂಚ ಸಂಬಂಧಗಳು ಹುಸಿ ;ಎಂಬ ಮನವರಿಕೆ ಅಗಲು ವಿಳಂಬವಾಗಲಿಲ್ಲ. ಅವನು ಹೆಚ್ಚಿನ ಸಾಧನೆಗಾಗಿ ಪ್ರಶಾಂತ ತಾಣವಾದ ಭಾಮನಾಥಕ್ಕೆ ಹೋದನು. ಗುಡ್ಡದ ಮೇಲಿನ ಈ ಏಕಾಂತ ಸ್ಥಲದಲ್ಲಿ ಅನೇಕ ದಿನ ಧ್ಯಾನಮಗ್ನನಾಗಿ ಮನಸ್ಸನ್ನು ಶಾಂತಗೊಳಿಸಿಕೊಂಡನು. ಮನೆಯ ಹೆಂಡಿರುಮಕ್ಕಳ ಸಾವು; ತಾಯಿಯ ಅಗಲುವಿಕೆ; ಎರಡನೇ ಹೆಂಡತಿ ಜೀಜಾಬಾಯಿಯ ' ಗಯ್ಯಾಳಿತನ ' ಹಾಗೂ ಊರ ಜನರ ವಕ್ರ ದೃಷ್ಟಿಯಿಂದ ಬೆಂದ ಮನಸ್ಸು, ಭಾಮನಾಥದ ನಿಸರ್ಗದ ಮಡಿಲಲ್ಲಿ ನೆಮ್ಮದಿ ಪಡೆಯಿತು .

" ವೃಕ್ಷದಲ್ಲಿ ವನಚರರೆನಗೆ ನೆಂಟರು ;
ಪಕ್ಷಿಗಳುಲಿಯುತಿಹವು ಇಂಚರದಲಿ ;
ಈ ಸುಖದಿಂದ ಏಕಾಂತ ಪ್ರಿಯವಾಯಿತೆನಗೆ ;
ಗುಣ ದೋಷಗಳೊಂದೂ ಇಲ್ಲ ; ಇಲ್ಲಿ ಮನಸಿಗೆ .
ಆಕಾಶವೆ ಮಂಟಪ, ಪೃಥ್ವಿಯೆ ಆಸನ ;
ತಿರುಗುವೆ ಮನ ಬಂದಲ್ಲಿ .
.............................
.............................
ತುಕಾ ಹೇಳಿದ: ಆಗುವುದೆಲ್ಲ ಮನದೊಂದಿಗೆ ಸಂವಾದ ;
ತನ್ನೊಡನೆ ತಾ ಚರ್ಚಿಸಿ .

ಸಂತ ತುಕಾರಾಮನಿಗೆ ಈಶ ಕರುಣೆ ಲಭಿಸಿತು  . ಅವನ ಚೇತನವು ವಿಶ್ವ ನಿಕೇತನ ಹೊಂದಿತು .' ಅಣೋರಣೀಯಾನ್, ಮಹತೋ ಮಹೀಯಾನ್ .' ಅನುಭವ ಅವನಿಗಾಯಿತು.

" ಅಣುರೇಣುಗಿಂತ ಸೂಕ್ಷ್ಮನಾಗಿದ್ದರೂ ,
ನುಂಗಿ ಆಕಾಶದಷ್ಟಾಗಿದ್ದಾನೆ .
ನುಂಗಿ ಹೊರ ಚೆಲ್ಲಿದ್ದಾನೆ .
ಭವ ಮಾಲೆಯ, ಶವದ ಮೇಲೆ
ತ್ರಿಪುಟಿಯು ಬಿಟ್ಟು-ದೀಪ ಹತ್ತಿದೆ ಅಂತರ್ಯದಲ್ಲಿ .
ತುಕಾ ಹೇಳಿದ: ಉಳಿದದ್ದೀಗ ಉಪಕಾರಕ್ಕಾಗಿ ."

ಸಂತ ತುಕಾರಾಮನ  ಪರಮ ಪದದ ಅನುಭಾವವನ್ನು ಅವನ ಅಭಂಗಗಳೇ

ವಿಶದೀಕರಿಸುತ್ತಿವೆ.

"ನನಗೆ ಜನ್ಮ ಕೊಟ್ಟೆ ;
ಮತ್ತೆ ನನ್ನ ಗರ್ಭದಿಂದಲೇ ಹೊರಬಂದೆ."

"ದ್ವೈತ ಅದ್ವೈತದ ತಾರತಮ್ಯವೆಲ್ಲ ಕುಂದಿತು ;
ಆಕಾಶ, ವೇಳೆ, ವಸ್ತುಗಳೆಲ್ಲ ಅದೃಶ್ಯವಾದುವು"

"ಆತ್ಮ ವಿಶ್ವ ರೂಪ ಪಡೆಯಿತು.
ಇಲ್ಲೆನ್ನುವ ಶಬ್ದ ಕೇವಲ ಪರತತ್ತ್ವ, ಎಲ್ಲೆಲ್ಲೂ
ನಾನು-ನಾನೆಂಬ ಸಾಕ್ಷಾತ್ಕಾರವಾಯಿತು.
ಅದುವೆ ನೀನೆಂದು ಸಾರಿತು, ದಿವ್ಯ ಸುಖವು,
ಈಗ ಇದೆಲ್ಲ ಸಾಧಿಸಿತು, ತುಕಾನಿಗೆ ಆವನೊಳಗೇ.
ನನ್ನ ಸಾವೇ ಸತ್ತಿತ್ತು, ನಾನು ಶಾಶ್ವತನಾದೆ ;
ತುಕಾ ಹೇಳಿದ : ಅಸ್ತಿವಾರ ಪ್ರಕಟವಾಯಿತು."

ಅನೇಕ ಮಹಾತ್ಮರು ತಮ್ಮ ಸಾವಿನ ಚಿತ್ರವನ್ನು ತಾವು ಮುಂಗಾಣುತ್ತಾರೆ. ಇರುವಾಗ ಸಾಯುವುದು, ಜ್ಞಾನಿಗಳ ಲಕ್ಷಣ. ನಿಮಿಷ ನಿಮಿಷಕ್ಕೂ ಸಾಯುವುದೇ ಜ್ಞಾನ ವೈರಾಗ್ಯ ; ಚಿರ ನೂತನತೆ. ಸಂತ ತುಕಾರಾಮನಿಗೂ ಇಂಥ ಅನುಭವವಾಯಿತು.

"ಈ ಜೀವ ದೇಹ ಸತ್ತಂತೆ.
ಹೊತ್ತರು ಮಸಣಕೆ..........
ಗರಗರ ತಿರುಗಿ ತುಂಡಾಯಿತು ಪಾದಗಳಲಿ ;
ಆಹೋ ರಾತ್ರಿ ಅಳುತಲಿಹರು ; ಹೆಂಗಳೆಯರು ಮೋಹದಿಂದ,
ಅಯ್ಯೋ ಸಾವು ! ಸಾವು !
ನಿರ್ಮೋಹದ ಕುಳ್ಳು ಕಟ್ಟಿಗೆಗಳಿಂದ ದೇಹವ ಮುಚ್ಚಿದರು,
ಧ್ಯಾನದ ಬೆಂಕಿ ಹಚ್ಚಿದರು, ನಿರಂಕುಶ ಪ್ರಾಣಕೆ.
ಸಾವ ಕೂಗಿನ ಗುಡುಗು ವ್ಯಾಪಿಸಿತು ;
ಮನೆ, ಹೆಸರು ದೆಸೆಗಳೆಲ್ಲ ಸುಟ್ಟು ಹೋದವು.
ಮತ್ತೆ ದೇಹವನಿತ್ತರು ಸಂಬಂಧಿಸಿದವರಿಗೆ."

ಇನ್ನೊಂದು ಅಭಂಗದಲ್ಲಿ ಸಾವಿನ ಕಾಲದಲ್ಲಿ ಆತ್ಮನು ಅನುಭವಿಸುವ ಆನಂದದ ಬಗ್ಗೆಯ ಬಣ್ಣನೆಯಿದೆ.

"ಎನ್ನ ಅಂತ್ಯ ಕಂಡೆ ಕಣ್ಣಾರೆ.





ಅದೊಂದು ಅನುಪಮ ಹಬ್ಬವಾಯಿತು ;
ತ್ರಿಭುವನದಲ್ಲೆಲ್ಲ ಆನಂದವೆ ಆನಂದ."
ಭೋಗಿಸಿದೆ ನಾ ಸರ್ವಾತ್ಮದಲಿ ;
ಏಕ ದೇಶೀಯನಾಗಿದ್ದೆ ಮಮಕಾರದಲಿ ;
ಅದು ಕಳೆಚಿತು; ಇದು ಸಕಾಲ ;
ಜನನ ಮರಣದ ಸೂತಕ ಕಿತ್ತಿತು.
ಬಿಡುಗಡೆಯಾದೆ ; ನಾ ನನ್ನ ಸಂಕೋಚದಿಂದ.

ಸಂತ ತುಕಾರಾಮ ಅಪ್ತಕಾಮರಾಗಿದ್ದರು. ಅವರು ಸಾವಿನಲ್ಲಿ ನಿಶ್ಚಿಂತರಾಗಿದ್ದರು. ತೃಪ್ತಕಾಮರಾಗಿದ್ದರು.

"ಇದಕಾಗಿಯೆ ಮಾಡಿತು ಅಟ್ಟಹಾಸ ;
ಸಿಹಿಯಾಗಿರಲಿ ಕೊನೆಯ ದಿನ.
ವಿಶ್ರಮಿಸುವೆ ಚಿಂತೆಯಿಂದೀಗ
ನಿಂತಿತು ಬಯಕೆಯ ಓಟ."

"ನಾವು ಮನೆ ಕಟ್ಟಿದ್ದು ಬಯಲಲ್ಲಿ ;
ನಮ್ಮ ಶಾಶ್ವತ ವಾಸ ನಿರಾಕಾರದಲ್ಲಿ.
ಒಂದಾಗಿರುವೆವು ಸತ್ಯದೊಂದಿಗೆ ;
ನಿರಂತರ ಐಕ್ಯ ಪಡೆದವರು ನಾವು.
ತುಕಾ ಹೇಳಿದ-ಅಹಂಕಾರ ಹಾರಿ ಹೋಗಿದೆ.
ನಾನೊಂದಾಗಿರುವೆ ಅನವರತ ಪವಿತ್ರದಲಿ.
ಓಂ ಶಾಂತಿ : ಓಂ ಶಾಂತಿ : ಓಂ ಶಾಂತಿ :"

ಸಾಮ್ಯ :-

ಸಂತ ತುಕಾರಮರು ಮಹಾರಾಷ್ಟ್ರದಲ್ಲಿ ಶೂದ್ರವರ್ಣದ ಕುಣಬಿ-ರೈತ ಜಾತಿಯಲ್ಲಿ ಜನಿಸಿದರು. ವೇಮನ ಯೋಗಿ ನೆರೆಯ ಆಂಧ್ರದಲ್ಲಿ ಶೂದ್ರ ವರ್ಣದ ರೆಡ್ಡಿ - ಕಾಪು ಜಾತಿಯಲ್ಲಿ ಜನಿಸಿದರು. ಈರ್ವರೂ ಆಧ್ಯಾತ್ಮಿಕ ಸಾಧನೆಯ ಜೊತೆಗೆ ಸಾಮಾಜಿಕ ಬೋಧನೆಗೆ ಇಳಿದರು. ಅವರಿಬ್ಬರ ಕಾಲಮಾನದ ಮಧ್ಯೆ ಎರಡು ಶತಕಗಳ ಅಂತರವಿದ್ದರೂ ಸಾಮಾಜಿಕ ಪರಿಸ್ಥಿತಿ ಭಿನ್ನವಿರಲಿಲ್ಲ. ವಿಪ್ರರು, ಶೂದ್ರ ಮಹಾತ್ಮರಿಗೆ ಎಲ್ಲಿಲ್ಲದ ಕಿರುಕಳ ಕೊಟ್ಟರು. ಏಕೆಂದರೆ, ವಿಪ್ರರು ಪಟ್ಟಭದ್ರ ಹಿತಾಸಕ್ತರೂ, ಸಮಾಜ ಶೋಷಕರೂ ಆಗಿದ್ದರು. ವೇಮನರು ಬಹುಶ: ಸಿದ್ಧ ಇಲ್ಲವೆ ನಾಥ ಪಂಥಕ್ಕೆ ಸೇರಿದ, ಲಂಬಿಕಾ ಯೋಗಿ ಗುರು ಕೃಪೆಗೆ ಪಾತ್ರವಾದರೆ, ತುಕಾರಾಮರೂ ಸಹ ಅವೈದಿಕರಾದ ಬಾಬಾಜಿ ಚೈತನ್ಯರ ಕೃಪಾ ಪಾತ್ರರಾದರು. ಸಮಾಜವು ಇಬ್ಬರನ್ನೂ ಹಿಂಸಿಸಿತು. ಅವರ ತತ್ತ್ವಗಳನ್ನು ಅರಿಯಲಿಲ್ಲ. ಕೂಳು ಇಡುವವನನ್ನೇ ಗೂಳಿಯು ತಿವಿಯುವಂತೆ, ತಮ್ಮ

ಹಿತಕ್ಕಾಗಿ ಉಪದೇಶಿಸಿದ ಉಭಯ ಮಹಾತ್ಮರನ್ನು, ಸಮಾಜದ ಪ್ರತಿಷ್ಠಿತರು ವಿಪ್ರರ ಚಿತಾವಣೆಯಿಂದ ಪೀಡಿಸಿದರು. ಇಬ್ಬರೂ ಸಹಜವಾಗಿ ಸಿದ್ಧಿ ಪಡೆದವರು. ಕೊನೆಗೆ ಸಗುಣದಿಂದ ನಿರ್ಗುಣೋಪಾಸನೆಗೆ ತೊಡಗಿ ಪರಮ ಪದ ತಲುಪಿದರು. ಇಬ್ಬರೂ ತಮ್ಮ ಪ್ರದೇಶಗಳಲ್ಲಿ ಅತ್ಯಂತ ಜನಪ್ರಿಯ ಕವಿಗಳು. ಸಾಮಾನ್ಯರ ತುಟಿಯ ಮೇಲೆ ಅವರ ತತ್ತ್ವ ಪದಗಳು ಸದಾ ನಲಿಯುತ್ತವೆ.

## ವೈಷಮ್ಯ :-

ವೇಮನರು ರಾಜವಂಶೀಯರು. ಅವರ ಪದ್ಯಗಳಲ್ಲಿ ಸಮೀಚೀನ ಸ್ವಾದಿಷ್ಟ ಅಡುಗೆಯ ಬಣ್ಣನೆ ಇದೆ. ಇತ್ತ ತುಕಾರಾಮರು ಹಾಸುಗೆಯಿದ್ದಷ್ಟು ಕಾಲು ಚಾಚಬೇಕಾದ ಸಾಮಾನ್ಯ ಕುಟುಂಬದವರು. ಸಾಲದ್ದಕ್ಕೆ ಬರಗಾಲ ಬಿತ್ತು. ಮನೆಯ ಬಹು ಜನ ಸಾವನ್ನಪ್ಪಿದರು. ಇರುವ ಎರಡನೇ ಹೆಂಡತಿ ಗಯ್ಯಾಳಿ. ಊರಿನ ವಿಪ್ರರೆಲ್ಲ ಕಡುವಿರೋಧಿಗಳು. ಒಟ್ಟಾರೆ ಪಡಬಾರದ ಕಷ್ಟ ಪಾಲಿಗೆ ಬಂದಿತು. ವೇಮನರು ಸಗುಣೋಪಾಸನೆಯೆಂದರೆ, ಧ್ಯಾನಕ್ಕಾಗಿ ಸೂರ್ಯ-ಚಂದ್ರ, ಅಗ್ನಿಗಳನ್ನು ತ್ರಿನೇತ್ರವಾಗಿಸಿಕೊಂಡ ಸಗುಣ ಬ್ರಹ್ಮನ ಧ್ಯಾನವನ್ನು ಒಪ್ಪಿರುವವರೇ ಹೊರತು, ಬೇರಾವ ಮೂರ್ತಿ ಕಲ್ಪನೆಯನ್ನು ಒಪ್ಪಿಲ್ಲ. ಅದೇ ರೀತಿ, ಮನಸ್ಸಿನ ಅಂತರಿಕ ಹಾಗೂ ಊರ್ಧ್ವ ಗತಿಯ ಸಾಧನೆಯನ್ನು ಅನುಸರಿಸಿ ಬೋಧಿಸಿದರು. ಹಾಗಾಗಿ ಯಾವುದೇ ಬಾಹ್ಯ ವೇಷ-ಭೂಷಣಗಳಾಗಲಿ, ಸಂಕೇತಗಳಾಗಲಿ, ತೋರಿಕೆಯ ವ್ರತ ಆಚಾರಗಳಾಗಲಿ ಅವರ ಮನದಲ್ಲಿ ಸುಳಿಯವು. ಪ್ರತಿಯಾಗಿ, ತಮ್ಮ ಮತವನ್ನು ಒಪ್ಪುವವರಿಗೆ, ಇತರ ಎಲ್ಲ ಬಾಹ್ಯ ಸಂಕೇತ, ವ್ರತಾಚಾರಗಳನ್ನು ತ್ಯಜಿಸಲು ಬೋಧಿಸುತ್ತಾರೆ. ಆದರೆ ಸಂತ ತುಕಾರಾಮರು, ಸಂತ ಸಂಪ್ರದಾಯಕ್ಕೆ ಸಮ್ಮತವಾದ, ವಿಠಲನ ಪೂಜೆ, ಪಂಢರಪುರಕ್ಕೆ ವಾರಕರಿ ಯಾತ್ರೆ, ಭಜನೆ ಸಂಕೀರ್ತನೆಗಳನ್ನು ಬಿಟ್ಟು ಇತರ ವ್ರತಾಚಾರಗಳನ್ನೂ, ಅನ್ಯ ಮೂರ್ತಿ ಗ್ರಹಿಕೆಯನ್ನೂ ಟೀಕಿಸಿದ್ದಾರೆ.

ಸಂತ ತುಕಾರಾಮರು ತಮ್ಮ ಹಿಂದೆ ಶಿಷ್ಯ ಗಣವನ್ನು ಬಿಟ್ಟು ಹೋಗಿದ್ದಾರೆ. ಅವರು ಜಾತಿ ಭೇದವನ್ನು ತೊರೆದವರು. ಅವರಲ್ಲಿ ಬಹಿಣಾಬಾಯಿ, ಕಾಚೇಶ್ವರ ಬ್ರಹ್ಮ, ನಿಲೋಬಾ, ರಾಮೇಶ್ವರ ಭಟ್ಟ ಮತ್ತು ಮಾಂಬಾಜಿಯವರೆಲ್ಲ ಬ್ರಾಹ್ಮಣರು. ಕೊನೆಯ ಈರ್ವರೂ ಮೊದಲು ಕಟ್ಟಾ ವಿರೋಧಿಗಳು ; ನಂತರ ಶರಣಾದ ಶಿಷ್ಯರು. ತೇಲಿ, ಸಂತಾಜ ಮತ್ತು ಸದೋಬಾ ಪವಾರರು ಶೂದ್ರರು. ಶೇಖ ಮಹಮ್ಮದರು ಮುಸಲ್ಮಾನರು. ಸಂತ ತುಕಾರಾಮರ ಅಭಂಗಗಳು ಕಿವಿಯಿಂದ ಕಿವಿಗೆ ಪ್ರಸಾರವಾಗುತ್ತ ಬಂದಿವೆ. ದೇಶೀಯ, ವಿದೇಶೀಯ ಭಾಷೆಗೆ ಅನುವಾದಗೊಂಡಿವೆ. ವ್ಯಾಖ್ಯಾನ, ಟೀಕೆ, ಟಿಪ್ಪಣಿ, ಉಗ್ಗಡಣೆಗೆ ವಿಷಯವಾಗಿವೆ